ಬುಧವಾರ, ಜೂನ್ 9, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 160 | ಪುಟ 12

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ತಂತ್ರಜ್ಞಾನ

'ಆಕ್ಸಿಜನ್ ಕಾನ್‌ಸನ್‌ಟ್ರೇಟರ್'ಗಳು ಆಮ್ಲಜನಕ ಪೂರೈಕೆಯ ಯಂತ್ರಗಳು. ಕೆಲವು ಸರಳ ನಿಯಮಗಳನ್ನು ಅನುಸರಿಸುವುದರ ಮೂಲಕ, ವೈದ್ಯರ ಸಲಹೆಯಂತೆ, ಮನೆಯಲ್ಲೇ ಇದರಿಂದ ಅಗತ್ಯ ಪ್ರಮಾಣದ ಆಮ್ಲಜನಕವನ್ನು ರೋಗಿಗೆ ಒದಗಿಸಬಹುದು.

ಇಸ್ರೇಲ್: ಪ್ರಧಾನಿ ನೇತನ್ಯಾಹು ಅಧಿಕಾರದ ಅಂತ್ಯ ಸನ್ನಿಹಿತ? 9

ಆಳ-ಅಗಲ
ವೃದ್ಧಾಪ್ಯದತ್ತ ಜಗತ್ತು

ಆಶಾ ಕಾರ್ಯಕರ್ತೆಯರ ಜತೆ ಬಿಎಸ್‌ವೈ ಸಂವಾದ 8

ಸೆನ್ಸೆಕ್ಸ್	ನಿಫ್ಟಿ	₹/$
52,275	15,740	72.89

ಖಾಸಗಿ ಆಸ್ಪತ್ರೆ: ಕೇಂದ್ರದಿಂದ ಲಸಿಕೆಗೆ ಗರಿಷ್ಠ ಬೆಲೆ ನಿಗದಿ

ನವದೆಹಲಿ (ಪಿಟಿಐ): ದೇಶದಲ್ಲಿ ಲಭ್ಯವಿರುವ ಮೂರು ಕೋವಿಡ್ ಲಸಿಕೆಗಳಿಗೆ ಖಾಸಗಿ ಆಸ್ಪತ್ರೆಗಳಲ್ಲಿ ವಿಧಿಸಬಹುದಾದ ಗರಿಷ್ಠ ಬೆಲೆಯನ್ನು ಕೇಂದ್ರ ಸರ್ಕಾರ ಮಂಗಳವಾರ ನಿಗದಿಪಡಿಸಿದೆ.

ಕೋವಿಶೀಲ್ಡ್ ಪ್ರತಿ ಡೋಸ್‌ಗೆ ₹780, ಕೋವ್ಯಾಕ್ಸಿನ್ ₹1,410 ಮತ್ತು ಸ್ಪುಟ್ನಿಕ್-ವಿ ಡೋಸ್‌ಗೆ ₹ 1,145 ಗರಿಷ್ಠ ಬೆಲೆ ನಿಗದಿಪಡಿಸಲಾಗಿದೆ.

ಈ ಬಗ್ಗೆ ಕೇಂದ್ರ ಆರೋಗ್ಯ ಸಚಿವಾಲಯವು ಎಲ್ಲ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಸರ್ಕಾರಗಳಿಗೆ ಪತ್ರ ಬರೆದಿದೆ.

ಶಾಸಕ ಉದಾಸಿ ನಿಧನ

ಹಾವೇರಿ: ಮಾಜಿ ಸಚಿವ, ಹಾನಗಲ್ ಕ್ಷೇತ್ರದ ಬಿಜೆಪಿ ಶಾಸಕ ಸಿ.ಎಂ. ಉದಾಸಿ (85) ಅವರು ಅನಾರೋಗ್ಯದಿಂದ ಮಂಗಳವಾರ ಬೆಂಗಳೂರಿನಲ್ಲಿ ನಿಧನರಾದರು.

ವಯೋಸಹಜ ಕಾಯಿಲೆ, ಕಿಡ್ನಿ ಸಮಸ್ಯೆ ಹಾಗೂ ಹೃದಯ ಸಂಬಂಧಿ ಕಾಯಿಲೆಗೆ 15 ದಿನಗಳಿಂದ ಬೆಂಗಳೂರಿನ ನಾರಾಯಣ ಹೃದಯಾಲಯದಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ವಾರದ ಹಿಂದೆ ಅವರ ಆರೋಗ್ಯದಲ್ಲಿ ಚೇತರಿಕೆ ಕಂಡುಬಂದಿತ್ತು. ಮಂಗಳವಾರ ಬೆಳಿಗ್ಗೆ ಆರೋಗ್ಯದಲ್ಲಿ ಏರುಪೇರಾಗಿ, ಚಿಕಿತ್ಸೆಗೆ ಸ್ಪಂದಿಸದೇ ಮೃತಪಟ್ಟರು.

ಅವರಿಗೆ ಪತ್ನಿ ನೀಲಮ್ಮ, ಪುತ್ರ ಸಂಸದ ಶಿವಕುಮಾರ ಉದಾಸಿ, ಪುತ್ರಿ ಜಯಶ್ರೀ ಇದ್ದಾರೆ.

ರಾಜಕೀಯ ಜೀವನ: ಹಾನಗಲ್ ವಿಧಾನಸಭಾ ಕ್ಷೇತ್ರದಿಂದ 1983ರಿಂದ ನಿರಂತರವಾಗಿ 9 ಬಾರಿ ಸ್ಪರ್ಧಿಸಿದ್ದ ಉದಾಸಿ 6 ಬಾರಿ ಜಯಗಳಿಸಿದ್ದರು. ಮೊದಲ ಬಾರಿಗೆ ಪಕ್ಷೇತರ ಅಭ್ಯರ್ಥಿಯಾಗಿ, ನಂತರ ಮೂರು ಬಾರಿ ಜನತಾದಳ, ಒಂದು ಬಾರಿ ಜೆಡಿಯು, ಒಂದು ಬಾರಿ ಕೆಜೆಪಿ ಹಾಗೂ ಮೂರು ಬಾರಿ ಬಿಜೆಪಿಯಿಂದ ಸ್ಪರ್ಧಿಸಿದ್ದರು.

ಹಾನಗಲ್ ಪುರಸಭೆ ಅಧ್ಯಕ್ಷರಾಗಿ ರಾಜಕೀಯ ಜೀವನ ಆರಂಭಿಸಿದ್ದರು. ನಂತರ ಅರಣ್ಯ ಕೈಗಾರಿಕಾ ನಿಗಮದ ಅಧ್ಯಕ್ಷರಾಗಿದ್ದರು. ಆನಂತರ ಲೋಕೋಪಯೋಗಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್, ಸಣ್ಣ ನೀರಾವರಿ ಹಾಗೂ ಜವಳಿ ಖಾತೆಗಳನ್ನು ನಿಭಾಯಿಸಿದ್ದರು. ಮುಖ್ಯಮಂತ್ರಿಗಳಾಗಿದ್ದ ರಾಮಕೃಷ್ಣ ಹೆಗಡೆ, ಜೆ.ಎಚ್. ಪಟೇಲ್, ಬಿ.ಎಸ್. ಯಡಿಯೂರಪ್ಪ ಅವರ ಸಂಪುಟದಲ್ಲಿ ಸಚಿವರಾಗಿ ಕಾರ್ಯನಿರ್ವಹಿಸಿದ್ದರು.

ಒಳ ಪುಟಗಳು

ಹೆಚ್ಚುವರಿ ಸಾಲಿಸಿಟರ್ ಜನರಲ್ ಕೃಷಿ ಪ್ರೀತಿ 8

ಸಿಡಿ ಪ್ರಕರಣ: ಎಸ್‌ಐಟಿ ರದ್ದು ಕೋರಿ ಸಂತ್ರಸ್ತೆ ಅರ್ಜಿ 3A

ಇಂದಿನ ಪಾಡ್‌ಕಾಸ್ಟ್ ವಿಶೇಷ

ಝಣ ಝಣ ಕಾಂಚಾಣ

ಪ್ರತೀ ದಿನ: ದಿನದ ಸೂಕ್ತಿ, ವಚನವಾಣಿ ಸಂಪಾದಕೀಯ, ಪ್ರಚಲಿತ

Prajavani.net/podcast

ಚಿನಕುರಳಿ

ಪ್ರಕಾಶ್ ಶೆಟ್ಟಿ

ಕೋವಿಡ್ ಲಸಿಕೆಯ ಹೊಸ ನೀತಿ: ಮಾರ್ಗಸೂಚಿ ಪ್ರಕಟಿಸಿದ ಕೇಂದ್ರ ಸರ್ಕಾರ

ಪೋಲಾದರೆ ಸಿಗದು ಪೂರ್ಣ ಪಾಲು

ಪ್ರಜಾವಾಣಿ ವಾರ್ತೆ

ನವದೆಹಲಿ: ಹೊಸ ಲಸಿಕೆ ನೀತಿಯ ಅನ್ವಯ ರಾಜ್ಯಗಳಿಗೆ ಲಸಿಕೆ ಹಂಚಿಕೆ ಮಾಡುವಾಗ 'ಲಸಿಕೆ ಪೋಲು' ಅಂಶವನ್ನು ಗಣನೆಗೆ ತೆಗೆದುಕೊಳ್ಳಲಾಗುವುದು ಎಂದು ಪರಿಷ್ಕೃತ ಮಾರ್ಗಸೂಚಿಯಲ್ಲಿ ಹೇಳಲಾಗಿದೆ. ಮಾರ್ಗಸೂಚಿಯನ್ನು ಕೇಂದ್ರವು ಮಂಗಳವಾರ ಪ್ರಕಟಿಸಿದೆ.

ಜನಸಂಖ್ಯೆ, ಕೋವಿಡ್ ಪ್ರಮಾಣ ಮತ್ತು ಲಸಿಕೆ ಅಭಿಯಾನದ ಪ್ರಗತಿಯಂತಹ ಅಂಶಗಳನ್ನು ಗಣನೆಗೆ ತೆಗೆದುಕೊಂಡು ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಲಸಿಕೆ ಹಂಚಿಕೆ ಮಾಡಲಾಗುವುದು. ಲಸಿಕೆ ಪೋಲನ್ನು ಕೂಡ ಒಂದು ಅಂಶವಾಗಿ ಪರಿಗಣಿಸಲಾಗುವುದು. ಪೋಲು ಪ್ರಮಾಣವು ಹಂಚಿಕೆಯ ಮೇಲೆ ನಕಾರಾತ್ಮಕ ಪರಿಣಾಮ ಬೀರಲಿದೆ ಎಂದು ಹೊಸ ಮಾರ್ಗಸೂಚಿಯಲ್ಲಿ ಹೇಳಲಾಗಿದೆ.

ರಾಜ್ಯಗಳಿಗೆ ಕೇಂದ್ರವು ಉಚಿತವಾಗಿ ಲಸಿಕೆ ಪೂರೈಸುವ ಹೊಸ ಲಸಿಕೆ ನೀತಿಯು ಇದೇ 21ರಿಂದ ಜಾರಿಗೆ ಬರಲಿದೆ. ಕೇಂದ್ರ ಆರೋಗ್ಯ ಸಚಿವಾಲಯವು ಮೇ 26ರಂದು ಪ್ರಕಟಿಸಿದ ಮಾಹಿತಿಯ ಪ್ರಕಾರ, ಛತ್ತೀಸಗಡ (ಶೇ 7.47), ಜಾರ್ಖಂಡ್ (ಶೇ 6.44) ಮತ್ತು ತಮಿಳುನಾಡು (ಶೇ 4.55) ಅತಿ ಹೆಚ್ಚು ಲಸಿಕೆ ಪೋಲು ಆಗಿರುವ ರಾಜ್ಯಗಳಾಗಿವೆ. ರಾಷ್ಟ್ರೀಯ ಸರಾಸರಿಯು ಶೇ 1ಕ್ಕಿಂತ ಕಡಿಮೆ ಇದೆ. ಕೆಲವು ಜಿಲ್ಲೆಗಳಲ್ಲಿ ಭಾರಿ ಪ್ರಮಾಣದಲ್ಲಿ ಲಸಿಕೆ ಪೋಲಾಗುತ್ತಿದೆ ಎಂದು ಕೇಂದ್ರ ಆರೋಗ್ಯ ಸಚಿವ ಹರ್ಷ ವರ್ಧನ್ ಅವರು ರಾಜಸ್ಥಾನ ಆರೋಗ್ಯ ಸಚಿವರಿಗೆ ಪತ್ರವನ್ನೂ ಬರೆದಿದ್ದರು.

ಪ್ರಧಾನಿ ನರೇಂದ್ರ ಮೋದಿ ಅವರು ಕೇಂದ್ರದ ಹೊಸ ಲಸಿಕೆ ನೀತಿಯನ್ನು ಸೋಮವಾರ ಪ್ರಕಟಿಸಿದ್ದರು. ಕೇಂದ್ರವೇ ಲಸಿಕೆ ಖರೀದಿಸಿ ರಾಜ್ಯಗಳಿಗೆ ವಿತರಿಸಬೇಕು ಎಂದು ಕೋವಿಡ್‌ನಿಂದ ತೀವ್ರವಾಗಿ ಬಾಧಿತವಾಗಿದ್ದ ಮಹಾರಾಷ್ಟ್ರ ಸೇರಿ 13 ರಾಜ್ಯಗಳು ಕೇಂದ್ರವನ್ನು ಕೋರಿದ್ದವು ಎಂದು ನೀತಿ ಆಯೋಗದ ಸದಸ್ಯ (ಆರೋಗ್ಯ) ವಿನೋದ್ ಪಾಲ್ ಹೇಳಿದ್ದಾರೆ. ಪಂಜಾಬ್, ಕೇರಳ, ಜಾರ್ಖಂಡ್, ರಾಜಸ್ಥಾನ, ಆಂಧ್ರ ಪ್ರದೇಶ, ಒಡಿಶಾ, ಮಿಜೋರಾಂ, ಮೇಘಾಲಯ ಮತ್ತು ತ್ರಿಪುರ ಇತರ ರಾಜ್ಯಗಳು.

'ಸುಪ್ರೀಂ ಕೋರ್ಟ್ ಕಾರಣವಲ್ಲ': ಲಸಿಕೆ ನೀತಿಯು 'ಸ್ವೇಚ್ಛೆಯದ್ದಾಗಿದ್ದು, ಅತಾರ್ಕಿಕ' ಎಂದು ಕೇಂದ್ರ ಸರ್ಕಾರವನ್ನು ಸುಪ್ರೀಂ ಕೋರ್ಟ್ ತರಾಟೆಗೆ ತೆಗೆದುಕೊಂಡಿತ್ತು. ನ್ಯಾಯಾಲಯವು ಹಲವು ಪ್ರಶ್ನೆಗಳನ್ನು ಕೇಳಿತ್ತು. ಈ ಎಲ್ಲ ಪ್ರಶ್ನೆಗಳಿಗೆ ಉತ್ತರ ನೀಡಬೇಕು ಮತ್ತು ನೀತಿಯನ್ನು ಪರಾಮರ್ಶಿಸಬೇಕು ಎಂದು ಸೂಚಿಸಿತ್ತು. ಲಸಿಕೆಯ ವಿಚಾರದಲ್ಲಿ ರಾಜ್ಯಗಳನ್ನು ಕೈಬಿಡದೆ, ಕೇಂದ್ರವೇ ಖರೀದಿಸಿ ಎಲ್ಲ ರಾಜ್ಯಗಳಿಗೆ ಹಂಚಬೇಕು ಎಂಬುದು ಅಮಿಕಸ್ ಕ್ಯೂರಿ ಅವರು ಎತ್ತಿದ ಮುಖ್ಯ ವಿಚಾರವಾಗಿತ್ತು.

ಆದರೆ, ಲಸಿಕೆ ನೀತಿಯ ಬಗ್ಗೆ ಸುಪ್ರೀಂ ಕೋರ್ಟ್ ವ್ಯಕ್ತಪಡಿಸಿದ ಅಭಿಪ್ರಾಯಕ್ಕೂ ನೀತಿಯಲ್ಲಿನ ಬದಲಾವಣೆಗೂ ಸಂಬಂಧ ಇಲ್ಲ ಎಂದು ಪಾಲ್ ಹೇಳಿದ್ದಾರೆ. ಲಸಿಕೆ ನೀತಿಯ ಬಗ್ಗೆ ಮೇ 1ರಿಂದಲೇ ಮೌಲ್ಯಮಾಪನ ಆರಂಭವಾಗಿತ್ತು. ಲಸಿಕೆ ಬಗೆಗಿನ ಚರ್ಚೆಗಳು ಮತ್ತು ರಾಜ್ಯಗಳು ಎದುರಿಸಿದ ಸಮಸ್ಯೆಗಳ ಬಗ್ಗೆ ಕೇಂದ್ರಕ್ಕೆ ಅರಿವಿತ್ತು ಎಂದೂ ಅವರು ಹೇಳಿದ್ದಾರೆ.

44 ಕೋಟಿ ಡೋಸ್‌ಗೆ ಬೇಡಿಕೆ: ಕೋವಿಡ್ ಲಸಿಕೆಗಳಾದ ಕೋವಿಶೀಲ್ಡ್ ಮತ್ತು ಕೋವ್ಯಾಕ್ಸಿನ್‌ನ 44 ಕೋಟಿ ಡೋಸ್‌ಗಳಿಗೆ ಕೇಂದ್ರ ಸರ್ಕಾರವು ಮಂಗಳವಾರ ಬೇಡಿಕೆ ಸಲ್ಲಿಸಿದೆ. ಕೋವಿಶೀಲ್ಡ್‌ನ 25 ಕೋಟಿ ಮತ್ತು ಕೋವ್ಯಾಕ್ಸಿನ್‌ನ 19 ಕೋಟಿ ಡೋಸ್‌ಗಳು ಆಗಸ್ಟ್ ಮತ್ತು ಡಿಸೆಂಬರ್ ನಡುವೆ ಪೂರೈಕೆ ಆಗಲಿವೆ.

ಮಾರ್ಗಸೂಚಿಯಲ್ಲಿ ಏನಿದೆ?

- ಖಾಸಗಿ ಆಸ್ಪತ್ರೆಗಳಿಗೆ ವಿತರಿಸುವ ಲಸಿಕೆಯು ದೊಡ್ಡ ನಗರಗಳ ಕೆಲವೇ ಆಸ್ಪತ್ರೆಗಳಿಗೆ ಮಾತ್ರ ಸಿಗದೇ, ಎಲ್ಲ ಆಸ್ಪತ್ರೆಗಳಿಗೆ ಸಮಾನವಾಗಿ ಹಂಚಿಕೆ ಆಗುವಂತೆ ರಾಜ್ಯಗಳು ನೋಡಿಕೊಳ್ಳಬೇಕು
- ಆರ್ಥಿಕವಾಗಿ ಹಿಂದುಳಿದ ವ್ಯಕ್ತಿಗಳಿಗಾಗಿ ಖಾಸಗಿ ಆಸ್ಪತ್ರೆಯಲ್ಲಿ ಲಸಿಕೆ ಪ್ರಾಯೋಜಿಸಲು ಅವಕಾಶ ಇದೆ. ಇದಕ್ಕಾಗಿ ವರ್ಗಾವಣೆ ಸಾಧ್ಯವಿಲ್ಲದ ಇ-ವೋಚರ್‌ಗಳನ್ನು ಬಳಸಲಾಗುವುದು
- 18 ವರ್ಷಕ್ಕಿಂತ ಮೇಲಿನವರಲ್ಲಿ ಯಾವ ವರ್ಗಕ್ಕೆ ಆದ್ಯತೆ ನೀಡಬಹುದು ಎಂಬುದನ್ನು ರಾಜ್ಯಗಳು ನಿರ್ಧರಿಸಬಹುದು
- ಖಾಸಗಿ ಮತ್ತು ಸರ್ಕಾರಿ ಲಸಿಕೆ ಕೇಂದ್ರಗಳಲ್ಲಿ ಸ್ಥಳದಲ್ಲಿಯೇ ವೈಯಕ್ತಿಕ ಮತ್ತು ಗುಂಪು ನೋಂದಣಿಗೆ ಅವಕಾಶ ಇದೆ
- ಲಸಿಕೆ ತಯಾರಕರು ನೇರವಾಗಿ ಖಾಸಗಿ ಆಸ್ಪತ್ರೆಗಳಿಗೆ ಮಾರಾಟ ಮಾಡಲು ಅವಕಾಶ ಇದೆ. ಆದರೆ, ಇದು ಒಟ್ಟು ತಯಾರಿಕೆಯ ಶೇ 25ರಷ್ಟನ್ನು ಮೀರಬಾರದು. ಲಸಿಕೆ ತಯಾರಕರು ಮತ್ತು ಹೊಸ ಲಸಿಕೆ ಸಂಶೋಧನೆಗೆ ಉತ್ತೇಜನಕ್ಕಾಗಿ ಈ ಕ್ರಮ

ಅಣಕು ಕಾರ್ಯಾಚರಣೆಗೆ 22 ರೋಗಿಗಳ ಬಲಿ?

ಲಖನೌ: ಉತ್ತರ ಪ್ರದೇಶದ ಆಗ್ರಾದಲ್ಲಿನ ಆಸ್ಪತ್ರೆ ಒಂದರಲ್ಲಿ 'ಆಮ್ಲಜನಕ ಕೊರತೆಯ ಅಣಕು ಕಾರ್ಯಾಚರಣೆ'ಯ ಕಾರಣ 22 ಕೋವಿಡ್ ರೋಗಿಗಳು ಮೃತಪಟ್ಟಿರುವ ಸಾಧ್ಯತೆ ಇದೆ ಎಂಬುದರ ಬಗ್ಗೆ ಸಾಮಾಜಿಕ ಜಾಲತಾಣಗಳಲ್ಲಿ ಚರ್ಚೆಯಾಗುತ್ತಿದೆ.'ಆಮ್ಲಜನಕ ಪೂರೈಕೆಯನ್ನು ನಿಲ್ಲಿಸಿದೆವು, 22 ರೋಗಿಗಳು ನೀಲಿ ಬಣ್ಣಕ್ಕೆ ತಿರುಗಿದರು' ಎಂದು ಆಸ್ಪತ್ರೆಯ ಮಾಲೀಕ ಹೇಳುತ್ತಿರುವ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ. ವಿಡಿಯೊದಲ್ಲಿರುವ ಮಾಹಿತಿ ಬಗ್ಗೆ ತನಿಖೆ ನಡೆಸಲು ಉತ್ತರ ಪ್ರದೇಶ ಸರ್ಕಾರ ಆದೇಶಿಸಿದೆ. 9

ಪ್ರಜಾವಾಣಿ DH DECCAN HERALD
ಡಿಎಚ್-ಪಿವಿ ಕೋವಿಡ್-19 ಪರಿಹಾರ ಟ್ರಸ್ಟ್

ಲಾಭದ ಉದ್ದೇಶವಿಲ್ಲದ ಸಂಸ್ಥೆಗಳಲ್ಲಿ ಮನವಿ

ಕೋವಿಡ್ ಸಾಂಕ್ರಾಮಿಕದಿಂದ ಮುರಿದ ಬದುಕನ್ನು ಮತ್ತೆ ಕಟ್ಟಬೇಕಾಗಿರುವ ಕಾಲಘಟ್ಟ ಇದು. 'ಡೆಕ್ಕನ್ ಹೆರಾಲ್ಡ್-ಪ್ರಜಾವಾಣಿ ಪರಿಹಾರ ಟ್ರಸ್ಟ್' ಸಹ ಈ ನಿಟ್ಟಿನಲ್ಲಿ ನಮ್ಮ ಗೌರವಾನ್ವಿತ ಓದುಗರಿಂದ ದೇಣಿಗೆ ಸಂಗ್ರಹಿಸಿದೆ. ಈ ದೇಣಿಗೆಯನ್ನು ಪರಿಣಾಮಕಾರಿಯಾಗಿ ಬಳಕೆ ಮಾಡಲು, ಕೋವಿಡ್-19 ಪರಿಹಾರ ಕಾರ್ಯಗಳಲ್ಲಿ ತೊಡಗಿಸಿಕೊಂಡಿರುವ, ಅಸಹಾಯಕರಿಗೆ ಜೀವನೋಪಾಯದ ದಾರಿ ತೋರುವ ಕೆಲಸದಲ್ಲಿ ನಿರತವಾಗಿರುವ ಹಾಗೂ ಲಾಭದ ಉದ್ದೇಶವಿಲ್ಲದಂತಹ ಸಂಸ್ಥೆಗಳು ಮುಂದೆ ಬರಬೇಕು ಎಂದು ಮನವಿ ಮಾಡುತ್ತಿದ್ದೇವೆ. ಅಗತ್ಯ ಇರುವವರಿಗೆ ಹಣಕಾಸಿನ ಸಹಾಯ ನೀಡುವುದು, ನೆರವಿನಹಸ್ತವನ್ನು ಚಾಚುವುದು ಮತ್ತು/ಅಥವಾ ಕೋವಿಡ್‌ನಿಂದಾಗಿ ತೊಂದರೆಗೆ ಒಳಗಾದವರಿಗೆ ಆಸ್ಪತ್ರೆ, ತುರ್ತು ಶಿಬಿರ ಸ್ಥಾಪಿಸುವುದು ಇಲ್ಲವೆ ಆರೋಗ್ಯ ಸೇವೆಯನ್ನು ಒದಗಿಸುವುದು – ಇಂತಹ ಉದ್ದೇಶಗಳನ್ನು ಈ ಸಂಸ್ಥೆಗಳು ಹೊಂದಿರಬೇಕು. ಅಲ್ಲದೆ, ಆದಾಯ ತೆರಿಗೆ ಕಾಯ್ದೆ-1961ರ ಸೆಕ್ಷನ್ 80 ಜಿ ಅಡಿಯಲ್ಲಿ ಮಾನ್ಯತೆಯನ್ನೂ ಪಡೆದಿರಬೇಕು.

ನಿಮ್ಮ ಸಂಸ್ಥೆಯು ಈ ಬಗೆಯದಾಗಿದ್ದರೆ, ***dept.finc@printersmysore.co.in*** ಈ ಇ-ಮೇಲ್ ವಿಳಾಸವನ್ನು ಸಂಪರ್ಕಿಸಬಹುದು. ಸಂಸ್ಥೆಯ ಉದ್ದೇಶ ಪರಿಶೀಲಿಸಲು ಹಾಗೂ ನಮ್ಮ ಗೌರವಾನ್ವಿತ ಓದುಗರಿಂದ ಸಂಗ್ರಹಿಸಲಾಗಿರುವ ಹಣವನ್ನು ವರ್ಗಾವಣೆ ಮಾಡಲು ಅನುವಾಗಲು, 80 ಜಿ ಅಡಿಯಲ್ಲಿ ನಿಮ್ಮ ಸಂಸ್ಥೆಗೆ ಇರುವ ವಿನಾಯಿತಿಗೆ ಸಂಬಂಧಿಸಿದ ದಾಖಲೆ, ಟ್ರಸ್ಟ್ ಡೀಡ್/ಎಂಒಎ ಪ್ರತಿಗಳನ್ನು ಮೇಲ್ ಜೊತೆ ಕಳುಹಿಸಲು ಮನವಿ.

ಕೋವಿಡ್-19 ಪರಿಹಾರ ಹಾಗೂ ಜೀವನೋಪಾಯ ಕಟ್ಟಿಕೊಡಲು ಕೆಲಸ ಮಾಡುವ ಸಂಸ್ಥೆಗಳಿಗೆ ಹಣ ನೀಡುವ ವಿಚಾರದಲ್ಲಿ 'ಡೆಕ್ಕನ್ ಹೆರಾಲ್ಡ್-ಪ್ರಜಾವಾಣಿ ಪರಿಹಾರ ಟ್ರಸ್ಟ್'ನ ತೀರ್ಮಾನವೇ ಅಂತಿಮ.

ವೃತ್ತಿಪರ ಕೋರ್ಸ್: ಸಿಇಟಿ ಅಂಕ ಅಂತಿಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯನ್ನು ರದ್ದುಪಡಿಸಿರುವುದರಿಂದ ಎಂಜಿನಿಯರಿಂಗ್ ಸೇರಿದಂತೆ ಎಲ್ಲ ವೃತ್ತಿಪರ ಕೋರ್ಸುಗಳ ಪ್ರವೇಶಕ್ಕೆ ಸಾಮಾನ್ಯ ಪ್ರವೇಶ ಪರೀಕ್ಷೆಯ (ಸಿಇಟಿ) ಅಂಕಗಳನ್ನು ಮಾತ್ರ ಪರಿಗಣಿಸಲು ನಿರ್ಧರಿಸಲಾಗಿದೆ' ಎಂದು ಉನ್ನತ ಶಿಕ್ಷಣ ಸಚಿವರೂ ಆಗಿರುವ ಉಪ ಮುಖ್ಯಮಂತ್ರಿ ಡಾ.ಸಿ.ಎನ್. ಅಶ್ವತ್ಥನಾರಾಯಣ ತಿಳಿಸಿದರು.

ಇಲಾಖೆಯ ಉನ್ನತ ಅಧಿಕಾರಿಗಳ ಜತೆ ಮಂಗಳವಾರ ಚರ್ಚಿಸಿದ ನಂತರ ಮಾತನಾಡಿದ ಅವರು, 'ಇದೇ 15ರಿಂದಲೇ ಆನ್‌ಲೈನ್ ನೋಂದಣಿ ಆರಂಭವಾಗಲಿದೆ. ಆಗಸ್ಟ್ 28, 29 ಸಿಇಟಿ, 30ರಂದು ಕನ್ನಡ ಪರೀಕ್ಷೆ (ಹೊರನಾಡು ಮತ್ತು ಗಡಿನಾಡು ಕನ್ನಡಿಗ ಅಭ್ಯರ್ಥಿಗಳಿಗೆ) ನಡೆಯಲಿದೆ. ದ್ವಿತೀಯ ಪಿಯು (ವಿಜ್ಞಾನ) ಪಾಸಾದ ಎಲ್ಲ ವಿದ್ಯಾರ್ಥಿಗಳೂ ಸಿಇಟಿ ಬರೆಯಲು ಅವಕಾಶವಿದೆ' ಎಂದರು.

'ಸಿಇಟಿ, ನೀಟ್ (ರಾಷ್ಟ್ರೀಯ ಅರ್ಹತಾ ಪರೀಕ್ಷೆ) ಸೇರಿ ರಾಜ್ಯದಲ್ಲಿ ನಡೆಯುವ ಎಲ್ಲ ವೃತ್ತಿಪರ ಕೋರ್ಸ್‌ಗಳಿಗೆ ಪಿಯುಸಿ ಪರೀಕ್ಷೆಯಲ್ಲಿನ ಅಂಕಗಳನ್ನು ಪರಿಗಣಿಸದಂತೆ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಎಸ್. ಸುರೇಶ್ ಕುಮಾರ್ ಸಲಹೆ ನೀಡಿದ್ದರು. 2021-22ನೇ ಸಾಲಿನ ಶೈಕ್ಷಣಿಕ ವರ್ಷಕ್ಕೆ ಮಾತ್ರ ಈ ಬದಲಾವಣೆ ಅನ್ವಯ' ಎಂದು ಸ್ಪಷ್ಟಪಡಿಸಿದರು

'ಸಿಇಟಿಯಲ್ಲಿ ಎಂಜಿನಿಯರಿಂಗ್, ಪಶುವೈದ್ಯ, ಕೃಷಿ ವಿಜ್ಞಾನ, ಆರ್ಕಿಟೆಕ್ಟ್, ಫಾರ್ಮಸಿ ಪ್ರವೇಶ ಪರೀಕ್ಷೆಗೆ ಇದ್ದ ಅರ್ಹ ಅಂಕಗಳ ಷರತ್ತು ತೆಗೆದುಹಾಕಲಾಗಿದೆ. ಸಿಇಟಿ ಅಂಕ ಆಧರಿಸಿ ರ‍್ಯಾಂಕ್ ನೀಡಲಾಗುವುದು. ಸಿಇಟಿ ಬರೆಯಲು ಭೌತವಿಜ್ಞಾನ, ರಸಾಯನ ವಿಜ್ಞಾನ ಮತ್ತು ಗಣಿತ ವಿಷಯಗಳಲ್ಲಿ ಸಾಮಾನ್ಯ ಅಭ್ಯರ್ಥಿಗಳು ಕನಿಷ್ಠ ಶೇ 45 ಹಾಗೂ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗದ ಅಭ್ಯರ್ಥಿಗಳು ಶೇ 40ರಷ್ಟು ಅಂಕ ಗಳಿಸಬೇಕೆಂಬ ಷರತ್ತು ಇತ್ತು. ಆದರೆ ಈಗ ಬದಲಿಸಿದ್ದು, ಪಿಸಿಎಂ ಹಾಗೂ ನಿಗದಿತ ಐಚ್ಛಿಕ ವಿಷಯಗಳಲ್ಲಿ ಉತ್ತೀರ್ಣರಾಗಿರುವ ಎಲ್ಲರೂ ಸಿಇಟಿ ಬರೆಯಬಹುದು. ಅಂಕಗಳ ಮಿತಿ ಸಡಿಲಿಕೆ ಮಾಡಿರುವ ಬಗ್ಗೆ ಎಲ್ಲ ಸಂಬಂಧಿತ ಪರೀಕ್ಷಾ ಮಂಡಳಿಗಳಿಗೆ ಪತ್ರ ಬರೆಯಲಾಗುವುದು' ಎಂದರು.

ಪ್ರಥಮ ಪಿಯು: ಅಸೈನ್‌ಮೆಂಟ್ ಗೆ ಅಂಕ

ಬೆಂಗಳೂರು: ಪ್ರಥಮ ಪಿಯುಸಿ ಪರೀಕ್ಷೆಗಳನ್ನು ರದ್ದುಪಡಿಸಿರುವುದರಿಂದ, ಈ ವಿದ್ಯಾರ್ಥಿಗಳಿಗೆ ಅಸೈನ್‌ಮೆಂಟ್‌ಗಳನ್ನು ನೀಡಿ, ಮೌಲ್ಯಮಾಪನ ಮಾಡಿ ಎಸ್‌ಎಟಿಎಸ್ (ವಿದ್ಯಾರ್ಥಿಗಳ ಸಾಧನೆ ಟ್ರ್ಯಾಕಿಂಗ್ ವ್ಯವಸ್ಥೆ) ಪೋರ್ಟಲ್‌ನಲ್ಲಿ ಅಳವಡಿಸಲು ಪದವಿ ಪೂರ್ವ ಶಿಕ್ಷಣ ಇಲಾಖೆ ನಿರ್ಧರಿಸಿದೆ.

ಎಲ್ಲ ಕಾಲೇಜುಗಳ ಪ್ರಾಚಾರ್ಯರು ಇಲಾಖೆಯ ಜಾಲತಾಣದಲ್ಲಿ ನೀಡಿದ ಎರಡು ಪ್ರಶ್ನೆ ಪತ್ರಿಕೆಗಳಿಗೆ ಹಾಳೆಗಳಲ್ಲಿ ಉತ್ತರಿಸಿ ಸ್ಕ್ಯಾನ್, ವಾಟ್ಸ್‌ಆ್ಯಪ್, ಇ-ಮೇಲ್ ಅಥವಾ ಅಂಚೆ ಮೂಲಕ ಸಂಬಂಧಿಸಿದ ಉಪನ್ಯಾಸಕರಿಗೆ ಸಲ್ಲಿಸುವಂತೆ ವಿದ್ಯಾರ್ಥಿಗಳಿಗೆ ತಿಳಿಸಬೇಕು. ಎರಡೂ ಅಸೈನ್‌ಮೆಂಟ್‌ಗಳನ್ನು ಆಯಾ ವಿಷಯದ ಉಪನ್ಯಾಸಕರು ಮಾಲ್ಯಮಾಪನ ಮಾಡಿ ಅಂಕಗಳನ್ನು ಪೋರ್ಟಲ್‌ನಲ್ಲಿ ನಮೂದಿಸುವಂತೆ ಸೂಚಿಸಲಾಗಿದೆ.

ಮಾದರಿ ಪ್ರಶ್ನೆ ಪತ್ರಿಕೆಗಳ ಲಿಂಕ್ ಅನ್ನು ವಿದ್ಯಾರ್ಥಿಗಳ ಮೊಬೈಲ್ ಸಂಖ್ಯೆಗೆ ಕಳುಹಿಸಬೇಕು. ಪ್ರಾಯೋಗಿಕ ವಿಷಯಕ್ಕೆ ಸಂಬಂಧಿಸಿದಂತೆ ಆಯಾ ವಿಷಯಗಳ ಉಪನ್ಯಾಸಕರು ಈ ಹಿಂದೆ ನಡೆಸಿದ ಪ್ರಾಯೋಗಿಕ ತರಗತಿಗಳ ಆಧಾರದಲ್ಲಿ ನಿಷ್ಪಕ್ಷಪಾತವಾಗಿ ಅಂಕಗಳನ್ನು ನೀಡಬೇಕು ಎಂದೂ ಸೂಚನೆ ನೀಡಲಾಗಿದೆ.

ಮೊದಲ ಅಸೈನ್‌ಮೆಂಟ್‌ನ್ನು ಇದೇ 10ರಿಂದ 20ರೊಳಗೆ ವಿದ್ಯಾರ್ಥಿಗಳು ಕಳುಹಿಸಬೇಕು. ಎರಡನೇ ಅಸೈನ್‌ಮೆಂಟ್ ಅನ್ನು 26ರಿಂದ ಜುಲೈ 5ರೊಳಗೆ ವಿದ್ಯಾರ್ಥಿಗಳು ಸಲ್ಲಿಸಬೇಕು.

ನೀಟ್‌ನಂತೆ ಅಂಕ ಮಿತಿ?

'ನೀಟ್‌ನಲ್ಲಿ ಇಂತಿಷ್ಟು ಅಂಕ ಗಳಿಸಿದರೆ ಮಾತ್ರ ವೈದ್ಯ ಕೋರ್ಸ್‌ಗಳಿಗೆ ಪ್ರವೇಶ ಇದೆ. ಅದೇ ಪದ್ಧತಿಯನ್ನು ಸಿಇಟಿಯಲ್ಲೂ ತರುವ ಬಗ್ಗೆ ಪರಿಶೀಲನೆ ನಡೆಸಲಾಗುತ್ತಿದೆ' ಎಂದು ಅಶ್ವತ್ಥನಾರಾಯಣ ಹೇಳಿದರು. 'ವಿಜ್ಞಾನ ಪದವಿ ಕೋರ್ಸ್‌ಗಳಿಗೆ ಸಿಇಟಿ ಅಂಕ ಆಧರಿಸಿಯೇ ಪ್ರವೇಶ ನೀಡುವ ಯೋಚನೆ ಮಾಡಲಾಗುತ್ತಿದೆ. ಈ ಬಗ್ಗೆಯೂ ವಿಸ್ತೃತವಾಗಿ ಯೋಚಿಸಲಾಗುತ್ತಿದೆ' ಎಂದೂ ಅವರು ಹೇಳಿದರು.

ಪ್ರತ್ಯೇಕ ಸಭೆ ಕರೆಯುವಂತೆ ಸುನಿಲ್ ಕುಮಾರ್ ಟ್ವೀಟ್

ಮದ್ದಿಲ್ಲದ ಬಿಜೆಪಿ 'ಅಂತರ್ಯುದ್ಧ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸರ್ಕಾರದ ನಾಯಕತ್ವ ಬದಲಾವಣೆ ಕುರಿತ ಹೇಳಿಕೆಗಳ ಮಹಾಪೂರ ಮುಗಿಯಿತು ಎನ್ನುವಾಗಲೇ, 'ಎಲ್ಲ ಶಾಸಕರ ಅಭಿಪ್ರಾಯ ಆಲಿಸಲು ಪ್ರತ್ಯೇಕ ಸಭೆ ನಡೆಸಬೇಕು' ಎಂದು ಆಡಳಿತ ಪಕ್ಷದ ಮುಖ್ಯ ಸಚೇತಕ ವಿ. ಸುನಿಲ್‌ಕುಮಾರ್ ಒತ್ತಾಯಿಸುವ ಮೂಲಕ ಬಿಜೆಪಿ ಆಂತರಿಕ ಸಂಘರ್ಷಕ್ಕೆ ಹೊಸ ತಿರುವು ನೀಡಿದ್ದಾರೆ.

'ಪಕ್ಷದೊಳಗೆ ಏನೂ ನಡೆಯುತ್ತಿಲ್ಲ; ಯಡಿಯೂರಪ್ಪ ಬದಲಾವಣೆಯ ಪ್ರಶ್ನೆಯೇ ಇಲ್ಲ' ಎಂದು ಬಿಜೆಪಿಯ ಎಲ್ಲ ನಾಯಕರು ಬಹಿರಂಗವಾಗಿ ಉದ್ಘೋಷ ಮಾಡುತ್ತಿದ್ದರೂ ಒಳಗಡೆ 'ತುಮುಲ-ಅಸಹನೆ'ಯ ಕುದಿ ತಣ್ಣಗಾಗಿಲ್ಲ ಎಂಬುದಕ್ಕೆ ಈ ಹೊಸ ಬೆಳವಣಿಗೆ ಸಾಕ್ಷಿ ಒದಗಿಸುತ್ತದೆ. ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ, 'ವಿಜಯನಗರ ಸಾಮ್ರಾಜ್ಯ ಪತನ'ದ ಕತೆಯನ್ನು ಫೇಸ್‌ಬುಕ್‌ನಲ್ಲಿ ಬರೆದುಕೊಂಡಿದ್ದರು. ಈ ಬೆನ್ನಲ್ಲೇ ಸುನಿಲ್‌ಕುಮಾರ್ ಟ್ವೀಟ್ ಮಾಡಿರುವುದು ಪಕ್ಷದೊಳಗೆ ನಾನಾ ವಿಧದ ಚರ್ಚೆಯನ್ನು ಹುಟ್ಟುಹಾಕಿದೆ.

'ಯಾರೂ ಕೂಡ ಯಡಿಯೂರಪ್ಪ ಪರ-ವಿರುದ್ಧ ಸಹಿ ಸಂಗ್ರಹ ಮಾಡುವುದಾಗಲಿ, ಹೇಳಿಕೆ ನೀಡುವುದಾಗಿ ಮಾಡಬಾರದು' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಕಟ್ಟುನಿಟ್ಟಾಗಿ ಹೇಳಿದ್ದರು. ಯಡಿಯೂರಪ್ಪ ಕೂಡ ಅದನ್ನೇ ಪ್ರತಿಪಾದಿಸಿದ್ದರು. 'ಪಕ್ಷದ ವರ್ಚಸ್ಸಿಗೆ ಧಕ್ಕೆಯಾಗುವ ಹೇಳಿಕೆ ನೀಡಬಾರದು ಎಂದು ವರಿಷ್ಠರು ಎಚ್ಚರಿಕೆ ನೀಡಿದ್ದಾರೆ' ಎಂದು ಕೆಲವು ನಾಯಕರು ಹೇಳಿಕೊಂಡಿದ್ದರು. ಇದರ ಬೆನ್ನಲ್ಲೇ ಕಾರ್ಕಳದ ಶಾಸಕರೂ ಆಗಿರುವ ಸುನಿಲ್ ಮಂಗಳವಾರ ಮಾಡಿರುವ ಟ್ವೀಟ್ ಮಹತ್ವ ಪಡೆದಿದೆ.

9ನೇ ಪುಟ ನೋಡಿ

ಬೆಂಗಳೂರಿನಲ್ಲಿ ಮಂಗಳವಾರ ಪ್ರಮಾಣವಚನ ಸ್ವೀಕರಿಸುವ ಮುನ್ನ ಬಸವಕಲ್ಯಾಣ ಶಾಸಕ ಶರಣು ಸಲಗರ ಅವರು ಮುಖ್ಯಮಂತ್ರಿ ಬಿ.ಎಸ್‌.ಯಡಿಯೂರಪ್ಪ ಅವರ ಕಾಲಿಗೆ ಬಿದ್ದು ನಮಸ್ಕರಿಸಿದರು

'ರಾಜೀನಾಮೆ ಕೊಡ್ತೇನೆ ಎಂದದ್ದು ಆದರ್ಶ ಕಾರ್ಯಕರ್ತರ ಲಕ್ಷಣ'

ಬಾಗಲಕೋಟೆ: 'ಹೈಕಮಾಂಡ್ ಹೇಳಿದರೆ ರಾಜೀನಾಮೆ ಕೊಡುತ್ತೇನೆ ಎಂದು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ನೀಡಿರುವ ಹೇಳಿಕೆ ಪಕ್ಷದ ಆದರ್ಶ ಕಾರ್ಯಕರ್ತರ ಲಕ್ಷಣ. ಬೇರೆಯವರಿಗೂ ಪ್ರೇರಣೆಯಾಗಲು ಆ ರೀತಿ ಹೇಳಿಕೆ ನೀಡಿದ್ದಾರೆ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್‌ಕುಮಾರ ಕಟೀಲ್ ಮಾರ್ಮಿಕವಾಗಿ ಹೇಳಿದರು.

ಸುದ್ದಿಗಾರರ ಜತೆ ಮಂಗಳವಾರ ಮಾತನಾಡಿದ ಅವರು, 'ರಾಜ್ಯದಲ್ಲಿ ನಾಯಕತ್ವ ಬದಲಾವಣೆ ಪರ-ವಿರುದ್ಧ ಮಾತನಾಡುವರ ಬಗ್ಗೆ ಕ್ರಮ ಕೈಗೊಳ್ಳಲು ಪಕ್ಷದ ಶಿಸ್ತು ಸಮಿತಿ ಈಗಾಗಲೇ ಕಾರ್ಯೋನ್ಮುಖವಾಗಿದೆ. ನಮ್ಮಲ್ಲಿ ಸಹಿ ಸಂಗ್ರಹ, ಒತ್ತಡ, ಒತ್ತಾಯದ ಪದ್ಧತಿ ಇಲ್ಲ' ಎಂದರು. 'ಶಿಸ್ತು ಉಲ್ಲಂಘಿಸಿದ ಕೆಲವರಿಗೆ ಈಗಾಗಲೇ ಮೊದಲ ನೋಟಿಸ್ ನೀಡಲಾಗಿದೆ. ಮೂರು ನೋಟಿಸ್ ನಂತರ ಕ್ರಮ ಕೈಗೊಳ್ಳುವ ಪರಿಪಾಟವಿದೆ. ಎಲ್ಲ ಬೆಳವಣಿಗೆ ನೋಡಿಕೊಂಡು ನಿರ್ಧಾರ ತೆಗೆದುಕೊಳ್ಳುವುದಾಗಿ ವರಿಷ್ಠರು ಹೇಳಿದ್ದಾರೆ' ಎಂದರು. 'ಪಕ್ಷ ಅಧಿಕಾರದಲ್ಲಿ ಇದ್ದಾಗ ಇವೆಲ್ಲಾ ಸಹಜ. ಕೆಲವರು ನೋವು, ಭಾವನೆಗಳನ್ನು ಹಂಚಿಕೊಳ್ಳುವುದು ಇದ್ದದ್ದೇ. ಪಕ್ಷದಲ್ಲಿನ ಆಂತರಿಕ ಪ್ರಜಾಪ್ರಭುತ್ವದ ಲಕ್ಷಣವೂ ಹೌದು' ಎಂದರು.

ಉಡುಪಿ ಉದ್ಯಮಿ ಭಾಸ್ಕರ್ ಶೆಟ್ಟಿ ಕೊಲೆ ಪ್ರಕರಣ

ಪತ್ನಿ, ಪುತ್ರ ಸೇರಿ ಮೂವರಿಗೆ ಜೀವಾವಧಿ ಶಿಕ್ಷೆ

ಪ್ರಜಾವಾಣಿ ವಾರ್ತೆ

ಉಡುಪಿ: ಇಲ್ಲಿನ ಇಂದ್ರಾಳಿಯ ಉದ್ಯಮಿ ಭಾಸ್ಕರ್ ಶೆಟ್ಟಿ ಕೊಲೆ ಪ್ರಕರಣಕ್ಕೆ ಸಂಬಂಧಿಸಿ ಅವರ ಪತ್ನಿ, ಪುತ್ರ ಸೇರಿದಂತೆ ಮೂವರು ಆರೋಪಿಗಳಿಗೆ ಇಲ್ಲಿನ ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ ಜೀವಾವಧಿ ಶಿಕ್ಷೆ ವಿಧಿಸಿದೆ.

ಭಾಸ್ಕರ್ ಶೆಟ್ಟಿ ಅವರ ಪತ್ನಿ ರಾಜೇಶ್ವರಿ ಶೆಟ್ಟಿ, ಪುತ್ರ ನವನೀತ್ ಶೆಟ್ಟಿ ಹಾಗೂ ನಂದಳಿಕೆಯ ಜ್ಯೋತಿಷಿ ನಿರಂಜನ್ ಭಟ್ ಶಿಕ್ಷೆಗೊಳಗಾದ ಅಪರಾಧಿಗಳು. ಸಾಕ್ಷ್ಯನಾಶದ ಆರೋಪ ಎದುರಿಸುತ್ತಿದ್ದ ರಾಘವೇಂದ್ರನನ್ನು ನ್ಯಾಯಾಲಯ ಖುಲಾಸೆಗೊಳಿಸಿದೆ. ಇನ್ನೊಬ್ಬ ಆರೋಪಿಯಾಗಿದ್ದ ನಿರಂಜನ್ ಭಟ್ ತಂದೆ ಶ್ರೀನಿವಾಸ ಭಟ್, ವಿಚಾರಣೆ ಮಧ್ಯೆ ಅನಾರೋಗ್ಯದಿಂದ ಮೃತಪಟ್ಟಿದ್ದರು.

ಭಾಸ್ಕರ್ ಶೆಟ್ಟಿ

ನ್ಯಾಯಾಧೀಶ ಸುಬ್ರಹ್ಮಣ್ಯ ಜೆ.ಎನ್. ಅವರು ಮಂಗಳವಾರ ಮಧ್ಯಾಹ್ನ ಶಿಕ್ಷೆ ಪ್ರಕಟಿಸಿದರು. ಪ್ರಾಸಿಕ್ಯೂಷನ್ ಪರವಾಗಿ ವಿಶೇಷ ಸರ್ಕಾರಿ ಅಭಿಯೋಜಕ ಶಾಂತರಾಮ್ ಶೆಟ್ಟಿ ವಾದ ಮಂಡಿಸಿದ್ದರು.

ಪ್ರಕರಣದ ವಿವರ: ಆರೋಪಿಗಳು 2016ರ ಜುಲೈ 28ರಂದು ಮಧ್ಯಾಹ್ನ ಇಂದ್ರಾಳಿಯ ಮನೆಯಲ್ಲಿ ಭಾಸ್ಕರ್ ಶೆಟ್ಟಿ ಅವರನ್ನು ಕೊಲೆ ಮಾಡಿದ್ದರು. ಬಳಿಕ ನಂದಳಿಕೆಯಲ್ಲಿರುವ ನಿರಂಜನ ಭಟ್ ಮನೆಯ ಹೋಮ ಕುಂಡದಲ್ಲಿ ಮೃತದೇಹವನ್ನು ಸುಟ್ಟು ಹಾಕಿದ್ದರು.

ಜುಲೈ 31ರಂದು ಭಾಸ್ಕರ್ ಶೆಟ್ಟಿ ಅವರ ತಾಯಿ, ತನ್ನ ಮಗ ನಾಪತ್ತೆಯಾಗಿರುವುದಾಗಿ ಮಣಿಪಾಲ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದರು. ತನಿಖೆ ಆರಂಭಿಸಿದ ಪೊಲೀಸರು, ಆಗಸ್ಟ್ 7 ರಂದು ಪತ್ನಿ ರಾಜೇಶ್ವರಿ ಹಾಗೂ ಪುತ್ರ ನವನೀತ್‌ನನ್ನು ಮತ್ತು ಆಗಸ್ಟ್ 8 ರಂದು ನಿರಂಜನ್ ಭಟ್‌ನನ್ನು ಬಂಧಿಸಿದ್ದರು.

10 ಸಾವಿರಕ್ಕಿಂತ ಕಡಿಮೆ ಕೋವಿಡ್ ಪ್ರಕರಣ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಹೊಸ ಪ್ರಕರಣಗಳ ಸಂಖ್ಯೆ ಇಳಿಮುಖ ಮಾಡಿದ್ದು, ಕಳೆದ 55 ದಿನಗಳಲ್ಲಿ ಇದೇ ಮೊದಲ ಬಾರಿಗೆ 24 ಗಂಟೆಗಳ ಅವಧಿಯಲ್ಲಿ 10 ಸಾವಿರಕ್ಕಿಂತ (9,808) ಕಡಿಮೆ ಸಂಖ್ಯೆಯ ಪ್ರಕರಣ ಮಂಗಳವಾರ ವರದಿಯಾಗಿದೆ.

ಕಳೆದ ಏ.14ರಂದು ಪ್ರಕರಣ ಗಳ ಸಂಖ್ಯೆ 10 ಸಾವಿರದ ಗಡಿ ದಾಟಿತ್ತು. ಬಳಿಕ ಏರುಗತಿ ಪಡೆದು, 50 ಸಾವಿರದ ಗಡಿಯ ಆಸುಪಾಸಿಗೆ ಏರಿಕೆ ಕಂಡಿತ್ತು. ಈಗ ಎರಡು ವಾರಗಳಿಂದ ಇಳಿಮುಖ ಕಂಡಿದ್ದು, ಸೋಂಕು ದೃಢ ಪ್ರಮಾಣವು ಶೇ 7.53 ರಷ್ಟು ವರದಿಯಾಗಿದೆ. ಈವರೆಗೆ ಸೋಂಕಿತರಾದವರ ಒಟ್ಟು ಸಂಖ್ಯೆ 27.17 ಲಕ್ಷ ದಾಟಿದೆ.

ರಾಜ್ಯದಲ್ಲಿ ಕೋವಿಡ್ ಮೃತರ ಸಂಖ್ಯೆ ದಿಢೀರ್ ಇಳಿಕೆ ಕಂಡಿದೆ. ಮಂಗಳವಾರ 179 ಮಂದಿ ಮೃತಪಟ್ಟಿದ್ದು, ಮರಣ ಪ್ರಮಾಣ ದರ ಶೇ 1.85ಕ್ಕೆ ಕುಸಿದಿದೆ. ಸಕ್ರಿಯ ಪ್ರಕರಣಗಳ ಸಂಖ್ಯೆ 2.25 ಲಕ್ಷಕ್ಕೆ ಇಳಿದಿದೆ.

ಕೋವಿಡ್ ಹೊಸ ಪ್ರಕರಣಗಳ ಸಂಖ್ಯೆ ಬಹುತೇಕ ಜಿಲ್ಲೆಗಳಲ್ಲಿ ಇಳಿಮುಖ ಕಂಡಿದೆ. ಬೆಂಗಳೂರಿನಲ್ಲಿ ಹೊಸದಾಗಿ 2,028 ಮಂದಿ ಸೋಂಕಿತರಾಗಿದ್ದಾರೆ. ಮೈಸೂರು (974), ಶಿವಮೊಗ್ಗ (703) ಹಾಗೂ ತುಮಕೂರಿನಲ್ಲೂ (589) ಸೋಂಕು ನಿಯಂತ್ರಣಕ್ಕೆ ಬರುತ್ತಿದೆ. ಏಳು ಜಿಲ್ಲೆಗಳಲ್ಲಿ ಸೋಂಕಿತರ ಸಂಖ್ಯೆ ಎರಡಂಕಿಗೆ ಇಳಿದಿದೆ.

ಬೆಂಗಳೂರಿನಲ್ಲಿ 44 ಮಂದಿ ಮೃತಪಟ್ಟಿದ್ದಾರೆ. ಸೋಮವಾರಕ್ಕೆ (199) ಹೋಲಿಸಿದರೆ ಇದು ನಾಲ್ಕು ಪಟ್ಟು ಕಡಿಮೆ.

ರಾಜ್ಯ ಕೋವಿಡ್ ಅಂಕಿ-ಅಂಶ

27,17,289	ಒಟ್ಟು ಸೋಂಕಿತರು (27,07,481 ನಿನ್ನೆಯ ವಿವರ)
2,25,004	ಸಕ್ರಿಯ ಪ್ರಕರಣಗಳು
24,60,165	ಗುಣಮುಖರಾದವರು
32,099	ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ	9,808
ಗುಣಮುಖ	23,449
ಸಾವು	179

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

18 ದಾಟಿದ ಶೇ 6.2 ಮಂದಿಗೆ ಇದುವರೆಗೆ ಮೊದಲ ಡೋಸ್

45 ವರ್ಷ ದಾಟಿದ ಶೇ 13 ಜನರಿಗಷ್ಟೇ ಲಸಿಕೆ

• ರಾಜೇಶ್ ರೈ ಚಟ್ಲ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಲಸಿಕೆ ಎರಡೂ ಡೋಸ್ ಹಾಕಿಸಿಕೊಂಡ 45 ವರ್ಷ ದಾಟಿದವರ (60 ವರ್ಷ ದಾಟಿದವರೂ ಸೇರಿ) ಪ್ರಮಾಣ ಈವರೆಗೆ ಶೇ 13 ರಷ್ಟು ಮಾತ್ರ. 18ರಿಂದ 44 ವರ್ಷ ವಯೋಮಾನದವರು ಮೊದಲ ಡೋಸ್ ಹಾಕಿಸಿಕೊಂಡ ಪ್ರಮಾಣ ಅದರ ಅರ್ಧದಷ್ಟು (ಶೇ 6.2) ಮಾತ್ರ!

ಆರೋಗ್ಯ ಇಲಾಖೆಯ ಮಾಹಿತಿ ಪ್ರಕಾರ, ವೈದ್ಯರು, ಅರೆವೈದ್ಯಕೀಯ ಸಿಬ್ಬಂದಿ ಸೇರಿದಂತೆ ಆಸ್ಪತ್ರೆ, ಕೋವಿಡ್ ಆರೈಕೆ ಕೇಂದ್ರಗಳಲ್ಲಿ (ಹೆಲ್ತ್ ಕೇರ್ ವರ್ಕರ್ಸ್) ಕೆಲಸ ಮಾಡುವವರ ಪೈಕಿ, ಈವರೆಗೆ ಶೇ 53ರಷ್ಟು ಮಂದಿ ಎರಡೂ ಡೋಸ್ ಹಾಕಿಸಿಕೊಂಡಿದ್ದಾರೆ. ಆದರೆ, ಮುಂಚೂಣಿ ಕಾರ್ಯಕರ್ತರೆಂದು (ಫ್ರಂಟ್‌ಲೈನ್ ವರ್ಕರ್ಸ್) ಗುರುತಿಸಿದ ವರ್ಗದಲ್ಲಿ ಶೇ 29ರಷ್ಟು ಮಂದಿ ಮಾತ್ರ ಎರಡೂ ಡೋಸ್ ಲಸಿಕೆ ಹಾಕಿಸಿಕೊಂಡಿದ್ದಾರೆ. ಆದರೆ, ಈ ಎರಡೂ ವರ್ಗದ ಕಾರ್ಯಕರ್ತರಲ್ಲಿ ಶೇ 80ಕ್ಕೂ ಹೆಚ್ಚು ಮಂದಿ ಮೊದಲ ಡೋಸ್ ಹಾಕಿಸಿಕೊಂಡಿದ್ದಾರೆ. 45 ವರ್ಷ ದಾಟಿದವರ (60 ವರ್ಷ ದಾಟಿದವರೂ ಸೇರಿದಂತೆ) ಪೈಕಿ, ಈವರೆಗೆ ಶೇ 52 ಮಂದಿ ಮೊದಲ ಡೋಸ್ ಹಾಕಿಸಿಕೊಂಡಿದ್ದಾರೆ. ಬೆಂಗಳೂರು ನಗರ (ಶೇ 20) ಕೊಡಗು ಮತ್ತು ಬಿಬಿಎಂಪಿ (ಶೇ 17) ಗದಗ (ಶೇ 16) ಎರಡೂ ಡೋಸ್ ಹಾಕಿಸಿಕೊಂಡ ಈ ವಯೋಮಾನದವರ ಜಿಲ್ಲೆಗಳ ಪಟ್ಟಿಯಲ್ಲಿ ಮುಂಚೂಣಿಯಲ್ಲಿವೆ. ಹಾವೇರಿ (ಶೇ 6) ಕಲಬುರ್ಗಿ ಮತ್ತು ಬೆಳಗಾವಿ (ಶೇ 7) ವಿಜಯಪುರ (ಶೇ 9) ಈ ಪಟ್ಟಿಯಲ್ಲಿ ಕೆಳಗಿನ ಸ್ಥಾನದಲ್ಲಿದೆ.

18ರಿಂದ 44 ವಯೋಮಾನದವರಿಗೆ ಲಸಿಕೆ ಹಾಕುವ ಅಭಿಯಾನಕ್ಕೆ ಮೇ 1ರಂದು ಚಾಲನೆ ನೀಡಲಾಗಿದೆ. ಈ ವಯೋಮಾನದವರು ಲಸಿಕೆ ಹಾಕಿಸಿಕೊಳ್ಳಲು ಆಸಕ್ತಿ ಹೊಂದಿದ್ದರೂ, ಲಸಿಕೆ ಲಭ್ಯತೆ ಇಲ್ಲ. ಕೋಲಾರ ಜಿಲ್ಲೆಯಲ್ಲಿ (ಶೇ 17.7) ಅತೀ ಹೆಚ್ಚಿನ ಸಂಖ್ಯೆಯಲ್ಲಿ ಈ ವಯೋಮಾನದವರು ಲಸಿಕೆ ಹಾಕಿಸಿಕೊಂಡಿದ್ದಾರೆ. ಬೆಂಗಳೂರು ನಗರ (13.5), ಬಿಬಿಎಂಪಿ (13.5), ಬೀದರ್ (ಶೇ 7), ಕೊಡಗು (ಶೇ 6.6), ರಾಮನಗರ (ಶೇ 6.9) ನಂತರದ ಸ್ಥಾನದಲ್ಲಿವೆ. ಅತೀ ಕಡಿಮೆ ವಿಜಯಪುರ (ಶೇ 1), ಬೆಳಗಾವಿ (ಶೇ 1.4), ಹಾವೇರಿ (ಶೇ 1.7), ಚಿತ್ರದುರ್ಗ (ಶೇ 1.8) ಇದೆ.

ಪ್ರಜಾವಾಣಿ ವಿಶೇಷ

8ನೇ ಪುಟ ನೋಡಿ

ರಾಜ್ಯಕ್ಕೆ ಹಂತ ಹಂತವಾಗಿ ಕೋವಿಡ್ ಲಸಿಕೆ ಪೂರೈಕೆ ಆಗುತ್ತಿದೆ. ಈ ತಿಂಗಳಲ್ಲಿ ಕೇಂದ್ರದಿಂದ ಹೆಚ್ಚಿನ ಪ್ರಮಾಣದಲ್ಲಿ ಪೂರೈಕೆಯಾಗುವ ವಿಶ್ವಾಸವಿದೆ

ಕೆ.ವಿ. ತ್ರಿಲೋಕಚಂದ್ರ
ಆಯುಕ್ತರು, ಆರೋಗ್ಯ ಇಲಾಖೆ

ಈ ತಿಂಗಳಲ್ಲಿ ಕೇಂದ್ರದ 58 ಲಕ್ಷ, ಖಾಸಗಿ ಕ್ಷೇತ್ರದಿಂದ 20 ಲಕ್ಷ ಡೋಸ್ ಲಸಿಕೆ ಲಭ್ಯವಾಗಲಿದೆ. ಜೂನ್ ತಿಂಗಳಲ್ಲಿ ರಾಜ್ಯಕ್ಕೆ 80 ಲಕ್ಷ ಡೋಸ್ ಲಸಿಕೆ ಸಿಗಲಿದೆ

ಡಾ.ಸಿ.ಎನ್. ಅಶ್ವತ್ಥನಾರಾಯಣ
ಕೋವಿಡ್ ಕಾರ್ಯಪಡೆ ಅಧ್ಯಕ್ಷ

'ಸೋಂಕಿತರು ಸಾಕು ಪ್ರಾಣಿಗಳಿಂದ ದೂರವಿರಿ'

ಬೆಂಗಳೂರು: ಕೋವಿಡ್‌ನಿಂದ ಸೋಂಕಿತರಾಗಿ ಮನೆಯಲ್ಲಿ ಪ್ರತ್ಯೇಕ ವಾಸ ಇರುವವರು ಹತ್ತು ದಿನಗಳ ಕಾಲ ಸಾಕು ಪ್ರಾಣಿಗಳಿಂದ ದೂರವಿರಬೇಕು ಎಂದು 'ಅಸೋಸಿಯೇಷನ್ ಫಾರ್ ಪ್ರಿವೆನ್ಷನ್ ಅಂಡ್ ಕಂಟ್ರೋಲ್ ಆಫ್ ರೇಬೀಸ್ ಇನ್ ಇಂಡಿಯಾ' (ಎಪಿಸಿಆರ್‌ಐ) ಹೇಳಿದೆ.

ನಾಯಿ ಮತ್ತು ಬೆಕ್ಕುಗಳೂ ಕೂಡ ಕೋವಿಡ್‌ನಿಂದ ಸೋಂಕಿಗೆ ಒಳಗಾಗುವ ಸಾಧ್ಯತೆ ಇದೆ. ವಿದೇಶದಲ್ಲಿ ಈ ಅಂಶ ಸಾಬೀತಾಗಿದೆ. ಆದರೆ, ಭಾರತದಲ್ಲಿ ಇದಕ್ಕೆ ಪುರಾವೆ ಸಿಕ್ಕಿಲ್ಲ ಎಂದು ಎಪಿಸಿಆರ್‌ಐ ಅಧ್ಯಕ್ಷ ಡಾ.ಡಿ.ಎಚ್.ಅಶ್ವತ್ಥನಾರಾಯಣ 'ಪ್ರಜಾವಾಣಿ'ಗೆ ತಿಳಿಸಿದರು.

ಕೋವಿಡ್ ರೋಗಿಗಳಲ್ಲಿರುವ ವೈರಾಣುಗಳು ಸಾಕು ಪ್ರಾಣಿಗಳಿಗೂ ದಾಟುತ್ತವೆ. ಆದರೆ, ಪ್ರಾಣಿಗಳಿಂದ ಮನುಷ್ಯರಿಗೆ ವೈರಾಣುಗಳು ಬರುತ್ತಿರುವುದಕ್ಕೆ ಯಾವುದೇ ಸಾಕ್ಷ್ಯ ಲಭ್ಯವಾಗಿಲ್ಲ ಎಂದಿದ್ದಾರೆ.

ಲಸಿಕೆ ಪಡೆದ ವ್ಯಕ್ತಿಗೆ ಬೀದಿ ನಾಯಿ ಅಥವಾ ಇತರ ಪ್ರಾಣಿಗಳು ಕಚ್ಚಿದರೆ ರೇಬೀಸ್ ನಿರೋಧಕ ಲಸಿಕೆ ಮತ್ತು ರೇಬಿಸ್ ಇಮ್ಯುನೊಗ್ಲೋಬಿನ್ ಪಡೆಯಬೇಕು. ಸಾಕು ಪ್ರಾಣಿಗಳು ಸೇರಿದಂತೆ ಯಾವುದೇ ಪ್ರಾಣಿಗಳ ಕಡಿತಕ್ಕೆ ಅದರಲ್ಲೂ ಪೋಸ್ ಎಕ್ಸ್‌ಪೋಶರ್ ಪ್ರೊಫಿಲಾಕ್ಸಿಸ್ (ಪಿಇಪಿ) ಜೀವ ರಕ್ಷಕವಾಗಿದ್ದು, ಕೋವಿಡ್ ಲಸಿಕೆ ಪಡೆದಿದ್ದರೂ ಕೂಡ ಪಿಇಪಿ ಪಡೆಯಲೇಬೇಕು ಎಂದರು.

8ನೇ ಪುಟ ನೋಡಿ

ಹೊರಗೆ ಹೋಗುವಾಗ ಮಾಸ್ಕ್ ಧರಿಸಿ

ನೈಋತ್ಯ ರೈಲ್ವೆ

E-Tender Notice No. Y/E.29/2021-22/03 Dated: 01.06.2021

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕ್ರ	ಕಾಮಗಾರಿಗಳ ಹೆಸರು	ಅಂದಾಜು ಮೌಲ್ಯ
1	(1) ಅರಸಿಕೆರೆ ರೈಲ್ವೆ ನಿಲ್ದಾಣದಲ್ಲಿ ಪಿಎಫ್ ಮೇಲ್ಛಾವಣಿ ಸುಧಾರಣೆ – 631 ಮೀಟರ್ X 2 (ಪಿಎಫ್ 1 ಮತ್ತು 2) – ವಿದ್ಯುತ್ ವ್ಯವಸ್ಥೆ ಮತ್ತು (2) ಅರಸಿಕೆರೆಯಲ್ಲಿ ಪಿಟ್‌ಲೈನ್ ಪಿಟ್‌ನಲ್ಲಿ ವಿದ್ಯುತ್ ಬೆಳಕಿನ ವ್ಯವಸ್ಥೆ.	Rs. 13,63,640/-
2	02 ವರ್ಷಗಳ ಅವಧಿಗೆ ಮೈಸೂರು ರೈಲ್ವೆ ನಿಲ್ದಾಣದಲ್ಲಿ ಪಿಎಫ್–1 ಮತ್ತು ಪಿಎಫ್–6 ನಲ್ಲಿ ಎಸ್ಕಲೇಟರ್‌ಗಳಿಗಾಗಿ ಸಮಗ್ರ ವಾರ್ಷಿಕ ನಿರ್ವಹಣೆ ಒಪ್ಪಂದ (ಎಎಂಸಿ)	Rs. 12,18,194/-
3	(1) ಎಸ್‌ಎಸ್‌ಇ / ಪಿ.ವೇ / ಮೈಸೂರು – ಗ್ಯಾಂಗ್ ಟೂಲ್ ಕಮ್ ರೆಸ್ಟ್ ರೂಮ್ ನಿರ್ಮಾಣ–13 ಸಂಖ್ಯೆಗಳು – ವಿದ್ಯುತ್ ವ್ಯವಸ್ಥೆ. (2) ಪಿಎಫ್ ಸಂಖ್ಯೆ 2ರಲ್ಲಿ ಪ್ಲಾಟ್‌ಫಾರ್ಮ್ ಶೆಲ್ಟರ್ ಒದಗಿಸುವುದು 192 ಮೀಟರ್ (12 ಬೇಜ್) ಐಆರ್‌ಎಸ್ ಮಾದರಿ–ವಿದ್ಯುತ್ ವ್ಯವಸ್ಥೆಗಳಲ್ಲಿ ಪ್ಲಾಟ್‌ಫಾರ್ಮ್ ಆಶ್ರಯ ಒದಗಿಸುವುದು.	Rs. 21,61,529/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 24–06–2021, 11:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ವಿಭಾಗೀಯ ರೈಲ್ವೆ ವ್ಯವಸ್ಥಾಪಕರು (ಎಲೆಕ್ಟ್ರಿಕಲ್) ಮೈಸೂರು

PUB/65/AAV/PRB/SWR/2021-22

ಟೆಂಡರ್ ಕರೆದು ಶೀಘ್ರವೇ ಅನುಷ್ಠಾನ– ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ

ಹೊರವರ್ತುಲ ರಸ್ತೆ: ಟರ್ಕಿ, ಇಸ್ರೇಲ್ ಕಂಪನಿ ಆಸಕ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಪೆರಿಫೆರಲ್ ರಿಂಗ್ ರಸ್ತೆ ಯೋಜನೆ ಅನುಷ್ಠಾನಕ್ಕೆ ಟರ್ಕಿ, ಇಸ್ರೇಲ್ ಮತ್ತು ಸ್ವಿಸ್ ದೇಶಗಳ ಕಂಪನಿಗಳು ಆಸಕ್ತಿ ತೋರಿಸಿದ್ದು, ಶೀಘ್ರವೇ ಈ ಯೋಜನೆಯ ಟೆಂಡರ್ ಅಂತಿಮಗೊಳಿಸಲಾಗುವುದು ಎಂದು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಹೇಳಿದರು.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಪ್ರಗತಿ ಪರಿಶೀಲನಾ ಸಭೆಯ ಬಳಿಕ ಬಿಡುಗಡೆ ಮಾಡಿದ ಹೇಳಿಕೆಯಲ್ಲಿ ಅವರು ಈ ವಿಷಯ ತಿಳಿಸಿದ್ದಾರೆ.

'ಈ ಯೋಜನೆಗೆ ಸಚಿವ ಸಂಪುಟ ಸಭೆಯಲ್ಲಿ ಅನುಮೋದನೆ ಪಡೆದು ಭೂಸ್ವಾಧೀನ ಪ್ರಕ್ರಿಯೆ ಚುರುಕುಗೊಳಿಸಲಾಗುವುದು' ಎಂದು ಹೇಳಿದರು.

ಪ್ರಾಧಿಕಾರದ ಆದಾಯ ಹೆಚ್ಚಿಸಬೇಕಾಗಿರುವ ಕಾರಣ ಖಾಲಿ ನಿವೇಶನಗಳು, ಫ್ಲ್ಯಾಟ್‌ಗಳು, ಮೂಲೆ ನಿವೇಶನಗಳ ಹರಾಜು ಪ್ರಕ್ರಿಯೆ ಚುರುಕುಗೊಳಿಸಬೇಕು. ಬಿಡಿಎ ಕಳೆದ ಸಾಲಿನಲ್ಲಿ ₹2,066.72 ಕೋಟಿ ವರಮಾನ ಗಳಿಸಿದ್ದು, ₹1,322.44 ಕೋಟಿ ವೆಚ್ಚ ಮಾಡಿದೆ. ಈ ವರ್ಷ ₹9,530 ಕೋಟಿ ವರಮಾನ ಗಳಿಕೆಯನ್ನು ನಿರೀಕ್ಷಿಸಿದೆ ಎಂದರು.

ಅಲ್ಲದೆ, ಬಿಡಿಎಗೆ ಸೇರಿದ ವಾಣಿಜ್ಯ ಸಂಕೀರ್ಣಗಳನ್ನು ಪಿಪಿಪಿ ಮಾದರಿಯಲ್ಲಿ ಅಭಿವೃದ್ಧಿಪಡಿಸುವ ಕುರಿತು ಪರಿಶೀಲಿಸಬೇಕು. ನಾಡಪ್ರಭು ಕೆಂಪೇಗೌಡ ಬಡಾವಣೆ ಮತ್ತು ಡಾ.ಕೆ. ಶಿವರಾಮ ಕಾರಂತ ಬಡಾವಣೆಗಳಲ್ಲಿ ಮೂಲ ಸೌಲಭ್ಯಗಳ ಒದಗಿಸುವುದು, ವಿದ್ಯುತ್ ಸಂಪರ್ಕ ರಸ್ತೆ ಮುಂತಾದ ಅಭಿವೃದ್ಧಿ ಕಾರ್ಯಕ್ಕೆ ವೇಗ ನೀಡುವಂತೆ ಸೂಚಿಸಿದರು.

ಮಳೆಗಾಲ ಆರಂಭವಾಗುವುದರಿಂದ ಬೆಳ್ಳಂದೂರು ಮತ್ತು ವರ್ತೂರು ಕೆರೆಗಳ ಹೂಳೆತ್ತುವ ವಿಲೇವಾರಿ ಮಾಡುವ ಕಾರ್ಯವನ್ನು ಶೀಘ್ರವಾಗಿ ಪೂರ್ಣಗೊಳಿಸಬೇಕು. ಚಿಕ್ಕಬಾಣಾವರ, ಕೊಮ್ಮಘಟ್ಟ ಮತ್ತು ರಾಮಸಂದ್ರ ಕೆರೆಗಳ ಅಭಿವೃದ್ಧಿಗೂ ಆದ್ಯತೆ ನೀಡುವಂತೆ ಮುಖ್ಯಮಂತ್ರಿ ಸಲಹೆ ನೀಡಿದರು.

ಪ್ರಾಧಿಕಾರದ ವತಿಯಿಂದ ಕೈಗೊಂಡಿರುವ ಲ್ಯಾಂಡ್ ಆಡಿಟ್ ಸಮೀಕ್ಷೆಯ ವರದಿಯಂತೆ ಪ್ರಾಧಿಕಾರಕ್ಕೆ ಲಭ್ಯವಿರುವ ಒಟ್ಟು ಆಸ್ತಿಯ ಮಾಹಿತಿಯನ್ನು ಒದಗಿಸುವಂತೆ ಯಡಿಯೂರಪ್ಪ ಅಧಿಕಾರಿಗಳಿಗೆ ಸೂಚಿಸಿದರು.

ಸಭೆಯಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಎಸ್.ಆರ್. ವಿಶ್ವನಾಥ್, ಸರ್ಕಾರದ ಮುಖ್ಯ ಕಾರ್ಯದರ್ಶಿ ಪಿ.ರವಿಕುಮಾರ್ ಮತ್ತು ಇತರ ಅಧಿಕಾರಿಗಳು ಇದ್ದರು.

ಮುಖ್ಯಾಂಶಗಳು

- ಸಚಿವ ಸಂಪುಟ ಸಭೆ ಅನುಮೋದನೆ ಬಳಿಕ ಭೂಸ್ವಾಧೀನ ಚುರುಕು
- ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಸಭೆಯಲ್ಲಿ ಪಾಲ್ಗೊಂಡ ಸಿ.ಎಂ

'ಕಾನೂನು ವಿಭಾಗ ಬಲಪಡಿಸಿ'

ಪ್ರಾಧಿಕಾರಕ್ಕೆ ಸಂಬಂಧಿಸಿದಂತೆ 6,431 ಪ್ರಕರಣಗಳು ವಿವಿಧ ನ್ಯಾಯಾಲಯಗಳಲ್ಲಿ ಬಾಕಿ ಇರುವುದರಿಂದ ಕಾನೂನು ವಿಭಾಗವನ್ನು ಬಲಪಡಿಸಲು ಉತ್ತಮ ವಕೀಲರನ್ನು ನೇಮಿಸಿಕೊಳ್ಳಬೇಕು. ಪ್ರಾಧಿಕಾರ ಪಾರದರ್ಶಕವಾಗಿ ಕಾರ್ಯನಿರ್ವಹಿಸಲು ಕೈಗೆತ್ತಿಕೊಳ್ಳಲಾಗಿರುವ ಗಣಕೀಕರಣ ಕಾರ್ಯವನ್ನು ಶೀಘ್ರವಾಗಿ ಪೂರ್ಣಗೊಳಿಸಲು ಮುಖ್ಯಮಂತ್ರಿ ಸೂಚಿಸಿದರು.



ಯಡಿಯೂರಪ್ಪ

ಸುದ್ದಿ 2 ನಿಮಿಷ

ಮಂಗಳ ಉಪಟಳ ನಿಭಾಯಿಸಲು ಸೂಚನೆ

ಬೆಂಗಳೂರು: ವಸತಿ ಪ್ರದೇಶಗಳಲ್ಲಿ ಮಂಗಗಳ ಸ್ವೈರವಿಹಾರ ಸಮಸ್ಯೆ ನಿಭಾಯಿಸುವ ಸಂಬಂಧ ಯೋಜನೆ ರೂಪಿಸಲು ಅರಣ್ಯ ಇಲಾಖೆ ಮತ್ತು ಬಿಬಿಎಂಪಿ ಹಿರಿಯ ಅಧಿಕಾರಿಗಳ ಸಭೆ ನಡೆಸುವಂತೆ ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ನಿರ್ದೇಶನ ನೀಡಿದೆ.

ವಕೀಲ ಬಿ.ಎಸ್. ರಾಧಾನಂದನ್ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠ, 'ಮಂಗಗಳ ಉಪಟಳದಿಂದ ಜನರನ್ನು ಕಾಪಾಡುವುದು ಮತ್ತು ಮಂಗಗಳ ಜೀವ ರಕ್ಷಿಸುವುದು ಎರಡೂ ಸರ್ಕಾರದ ಜವಾಬ್ದಾರಿ' ಎಂದು ಹೇಳಿತು.

'ಕೋತಿಗಳ ಉಪಟಳದ ಬಗ್ಗೆ ದೂರು ಸ್ವೀಕರಿಸಲು ವ್ಯವಸ್ಥೆಯೊಂದನ್ನು ರೂಪಿಸಲು ನಿರ್ದೇಶನ ನೀಡಬೇಕು' ಎಂದು ಅರ್ಜಿದಾರರು ಮನವಿ ಮಾಡಿದರು.

'ದೆಹಲಿ ಹೈಕೋರ್ಟ್ ಹೊರಡಿಸಿದ ಮಾರ್ಗಸೂಚಿಗಳ ಪ್ರಕಾರ ಸಮಸ್ಯೆ ನಿಭಾಯಿಸುವ ಯೋಜನೆ ರೂಪಿಸಬಹುದಾಗಿದೆ. ಮಂಗಗಳನ್ನು ಸುರಕ್ಷಿತವಾಗಿ ಹಿಡಿದು ನೈಸರ್ಗಿಕ ಆವಾಸಸ್ಥಾನಕ್ಕೆ ಸ್ಥಳಾಂತರಿಸಬೇಕಾಗುತ್ತದೆ. ಈ ಸಂಬಂಧ ಜು.12ರೊಳಗೆ ಅನುಸರಣೆ ವರದಿ ಸಲ್ಲಿಸಬೇಕು' ಎಂದು ಪೀಠ ತಿಳಿಸಿತು.



ಬಿಎಂಟಿಸಿ ಪ್ರಯಾಣ ದರ ಹೆಚ್ಚಳ ಇಲ್ಲ: ಸಾರಿಗೆ ಸಚಿವ ಲಕ್ಷ್ಮಣ ಸವದಿ

ಬೆಂಗಳೂರು: 'ಸದ್ಯಕ್ಕೆ ಬಿಎಂಟಿಸಿ ಬಸ್ ಪ್ರಯಾಣ ದರ ಹೆಚ್ಚಿಸುವುದಿಲ್ಲ' ಎಂದು ಸಾರಿಗೆ ಸಚಿವ ಲಕ್ಷ್ಮಣ ಸವದಿ ತಿಳಿಸಿದರು.

ಸುದ್ದಿಗಾರರ ಜೊತೆ ಮಂಗಳವಾರ ಮಾತನಾಡಿದ ಅವರು, 'ಪ್ರಯಾಣ ದರ ಹೆಚ್ಚಿಸುವಂತೆ ಅಧಿಕಾರಿಗಳು ಪ್ರಸ್ತಾವನೆ ಸಲ್ಲಿಸಿದ್ದಾರೆ. ಈಗಾಗಲೇ ಬಡವರು ಕಷ್ಟದಲ್ಲಿ ಓಡಾಡುತ್ತಿದ್ದಾರೆ. ಅವರಿಗೆ ಮತ್ತೆ ಕಷ್ಟ ಕೊಡಲು ಹೋಗುವುದಿಲ್ಲ' ಎಂದರು.

'ಇದೇ 14ರ ನಂತರ ಲಾಕ್‌ಡೌನ್ ನಿರ್ಬಂಧಗಳು ಸಡಿಲವಾದರೆ ಹಂತ ಹಂತವಾಗಿ ಸಾರಿಗೆ ಸೇವೆ ಆರಂಭಿಸಲಾಗುವುದು. ಕೊರೊನಾ ನಿಯಮ ಪಾಲನೆ ಬಹಳ ಮುಖ್ಯ. ಹೀಗಾಗಿ, ಪ್ರಯಾಣಿಕರು ಅಂತರ ಕಾಯ್ದುಕೊಳ್ಳಬೇಕು. ಅವರಿಗೆ ಸ್ಯಾನಿಟೈಸರ್, ಮಾಸ್ಕ್ ಎಲ್ಲವನ್ನೂ ಸಂಸ್ಥೆಯ ವತಿಯಿಂದಲೇ ನೀಡಲಾಗುವುದು' ಎಂದರು.

'ಕೋವಿಡ್ ಎರಡು ಡೋಸ್ ಆಗುವವರೆಗೂ ಕರ್ತವ್ಯಕ್ಕೆ ಹಾಜರಾಗುವಂತೆ ನೌಕರರಿಗೆ ಒತ್ತಡ ಹಾಕುವುದಿಲ್ಲ. ಎರಡನೇ ಡೋಸ್ ತೆಗೆದುಕೊಂಡವರಿಗೆ ರಕ್ಷಣೆ ಕೊಟ್ಟು ಸಾರಿಗೆ ಸೌಲಭ್ಯ ಆರಂಭಿಸಲಾಗುವುದು' ಎಂದೂ ಅವರು ಹೇಳಿದರು.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ:

080 - 45557160 /161/ 162/ 163/ 164

9845114560 / 9731810277/ 9886213331

JOB OPPORTUNITIES

Teachers/ Professors

REQUIRED

Trained Teachers for Primary & High School, Minimum Qualifications : Graduation / Post Graduation with B.Ed and Having 5 + years experience. Required for Social Science, Science, English, Hindi, Kannada subjects with Good Communication Skills. Contact:

LALITH CASTLE INTERNATIONAL SCHOOL (CBSE CAMPUS)

Rajarajeshwari Nagar, Bengaluru - 560 098.

9620464800 / 9663871771

lcis.rrnagar@gmail.com

Admission open 2021-2022 Nursery to Grade- X

REQUIRED TRAINED Graduate to teach Mathematics & Social Science for Primary in a reputed ICSE school in KalyanNagar. Contact: 9972705902.

Medical Transcriptionist

UDHBHAVA HOSPITAL, We are Looking for well Experienced (Minimum 2 Years) ICU Staff for our Hospital. @ No. 114, 100 ft Ring Road, Banashankari 3rd Stage. Bangalore-560085. Contact: Harish-9900230585

General

WANTED OFFICE ASSISTANTS (Male) H.S.R. Layout (Bangalore) Call: 9344168305 Email: starsilks@gmail.com

CAREER OPPORTUNITY for Unemployed Techies, Teachers, Retired Bankers, Homemakers on Fixed Income with Huge Incentives. Dial:9341838235

Engg/ Production Technical

ELCITA

ELECTRONICS CITY INDUSTRIAL TOWNSHIP AUTHORITY

No. 7 (P), West Phase, Electronics City, Bangalore : 560 100

Website : www.elcita.in

Phone : 080-4660 2222

Position : Electrical Engineer

ELCITA invites applications from suitable candidates for the position of Electrical Engineer. Candidate should be BE (Electrical), with 10 to 12 years of experience in independently planning and executing electrical and mechanical works. Experience in working in townships/local bodies would be an added advantage

Knowledge of Kannada is preferred.

For details refer to: www.elcita.in

Last date for receipt of applications with CV and supporting documents : 24-06-2021 before 5 PM

e-mail id : cso@elcita.in

Part-Time Jobs

PANDEMIC SITUATION lost job. will provide work from home earn Rs. 35K- 40K Call: 7019215243/ 9886641282

Hospital & Medical Jobs

REQUIRED FOR upcoming CV.HOSPITAL at Chetana Vihara-143B Bommasandra-IA, Bangalore. MEDICAL CONSULTANTS, DUTY - DOCTORS, NURSES, RADIOGRAPHERS, LAB TECHNICIANS and PHARMACISTS. Contact: 080-41511104, Mail:cvhospital.in@gmail.com

Receptionist/ Secretary

REQUIRED FRESHER female Administrative/ personal assistant for Kenmore school, basavanagudi opp M N Krishna rao park near Lalbagh west gate. Candidate should have good computer knowledge, good communication skills and should have flexibility and adaptability in work, send in your resume to kenmoreschool@gmail.com or whatsapp to 9901501185.

Accounts & Finance

GRADUATES WITH Commerce/ Science background with computer skill below 32 years. Freshers can apply. 9900263508.

Multiple Vacancy

OPPORTUNITY FOR Retd Officials, Bankers, VRS,NRI, Teachers, Professionals, CAs. Earn Salary +Incentives. CT: 8095301555

REAL ESTATE BUYING

Sites

Banashankari

BDA SITES Wanted. Banashankari 6th Stage, Anjanapura, Vishweshwaraiah Layout, Any Block, Immediate Settlement Contact: 9845444588

REAL ESTATE SELLING

Commercial Building

Mysore

BOOK PENTHOUSE Apartment on Top Floor of Commercial Building near to Mysore, and Get Rent of 1500 SQUARE FEET Area in Commercial Floor as additional income Rs.60000/- every month as Promoter PARTNER, very good Location and easy Drive distance to Mysore Ring Road. Contact Land Owner and Promoter 7676770503

PERSONAL

Change of Name

I,MUKUNDA C.C S/o Chandrappa C.P residing at No.540, 2nd Cross, 5th Main, Venkataswamy Garden, JagaJeevanRam Nagar, Ambedkar Bhavan, Bangalore South, Bangalore-Government Electric Factory, Bangalore-560026 have changed my name to MOHAMMED MUZAMMIL C.C vide affidavit dated 07.06.2021 sworn before notary L.Shankaranarayana, Bangalore-50.

14815294N, HAV/MT, Desai Chandrakant Vishnu 1ATC, father name service record VISHNU CHANDRAKANT DESAI instead of VISHNU CHANDRU DESAI notary KV Mani, Bangalore.

14815294N, HAV/MT, Desai Chandrakant Vishnu 1ATC, mother name service record ANJAANA VISHNU DESAI instead of ANJANA VISHNU DESAI notary KV Mani, Bangalore.

DH Classifieds

BOOK YOUR AD FOR SATURDAY & GET 50% OFF ON SUNDAY AD

For more information contact:

9880856233

9731810277 | 9901641752

9845114560 | 9886213331

*condition apply

CAUTION NOTICE

Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.

GM-Advertisement

ಪೆಟ್ರೋಲಿಯಂ ಉತ್ಪನ್ನಗಳ ದರ ಏರಿಕೆಗೆ ವಿರೋಧ

ವಿವಿಧೆಡೆ ಸಿಐಟಿಯು ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪೆಟ್ರೋಲಿಯಂ ಉತ್ಪನ್ನಗಳ ದರ ಏರಿಕೆ ವಿರೋಧಿಸಿ ಸಿಐಟಿಯು ಕಾರ್ಯಕರ್ತರು ನಗರದ ವಿವಿಧೆಡೆ ಮಂಗಳವಾರ ಪ್ರತಿಭಟನೆ ನಡೆಸಿದರು.

ಅಖಿಲ ಭಾರತ ರಸ್ತೆ ಸಾರಿಗೆ ಕಾರ್ಮಿಕರ ಒಕ್ಕೂಟ ನೀಡಿದ್ದ ರಾಷ್ಟ್ರವ್ಯಾಪಿ ಪ್ರತಿಭಟನೆಯ ಕರೆಯ ಅಂಗವಾಗಿ ಈ ಚಳವಳಿ ಹಮ್ಮಿಕೊಳ್ಳಲಾಗಿತ್ತು. ಬಸವನಗುಡಿ, ಕುಮಾರಸ್ವಾಮಿ ಬಡಾವಣೆ, ಬನಶಂಕರಿ, ತ್ಯಾಗರಾಜನಗರ, ರಾಜಾಜಿನಗರ, ಉದಯನಗರ, ಕೆ.ಆರ್.ಪುರ, ಕೂಡ್ಲು ಗೇಟ್, ಯಶವಂತಪುರ, ಬಸವೇಶ್ವರನಗರ, ಕಮಲಾನಗರ, ಶ್ರೀರಾಂಪುರ, ಕಾವೇರಿ ನಗರ, ಹೆಗ್ಗನಹಳ್ಳಿಸೇರಿದಂತೆ ಹಲವು ಸ್ಥಳಗಳಲ್ಲಿ ಸಿಐಟಿಯು ಸದಸ್ಯರು ಪ್ರತಿಭಟನೆ ನಡೆಸಿದರು.

ಪೆಟ್ರೋಲಿಯಂ ಉತ್ಪನ್ನಗಳ ಮೇಲಿನ ಅಬಕಾರಿ ಸುಂಕವನ್ನು ಕೋವಿಡ್ ಪೂರ್ವ ಸ್ಥಿತಿಗೆ ಹಿಂಪಡೆಯಬೇಕು, ಪೆಟ್ರೋಲಿಯಂ ಉತ್ಪನ್ನಗಳನ್ನು ಸರಕು ಮತ್ತು ಸೇವಾ ತೆರಿಗೆ ವ್ಯಾಪ್ತಿಗೆ ತಂದು, ರಾಜ್ಯಗಳ ಪಾಲನ್ನು ನೀಡಬೇಕು ಮತ್ತು ಆಡಳಿತಾತ್ಮಕ ಬೆಲೆ ನಿಯಂತ್ರಣ ವ್ಯವಸ್ಥೆಯನ್ನು ಜಾರಿಗೆ ತರಬೇಕು ಎಂಬ ಬೇಡಿಕೆಗಳನ್ನು ಮುಂದಿಟ್ಟು ಈ ಪ್ರತಿಭಟನೆ ನಡೆಸಲಾಯಿತು.

ಬಸವನಗುಡಿಯಲ್ಲಿರುವ ಸಿಐಟಿಯು ಕಚೇರಿ ಜ್ಯೋತಿ ಬಸು ಭವನದ ಬಳಿ ನಡೆದ ಪ್ರತಿಭಟನೆಯಲ್ಲಿ ಸಿಐಟಿಯು ರಾಜ್ಯ ಸಮಿತಿ ಉಪಾಧ್ಯಕ್ಷ ಡಾ. ಪ್ರಕಾಶ್ ಕೆ., ಆಟೊ ರಿಕ್ಷಾ ಚಾಲಕರ ಯೂನಿಯನ್ ಮುಖಂಡರಾದ ಬಸವರಾಜು, ಎನ್. ಶ್ರೀನಿವಾಸ್, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ನೌಕರರ ಫೆಡರೇಷನ್ ಮುಖಂಡರಾದ ವೇಣುಗೋಪಾಲ್ ಆರ್., ಸಂತೋಷ್ ಪಾಲ್ಗೊಂಡಿದ್ದರು.

ಪೆಟ್ರೋಲಿಯಂ ಉತ್ಪನ್ನಗಳ ದರ ಏರಿಕೆ ವಿರೋಧಿಸಿ ಬಸವನಗುಡಿಯ ಜ್ಯೋತಿ ಬಸು ಭವನದ ಬಳಿ ಸಿಐಟಿಯು ಕಾರ್ಯಕರ್ತರು ಮಂಗಳವಾರ ಪ್ರತಿಭಟನೆ ನಡೆಸಿದರು– ಪ್ರಜಾವಾಣಿ ಚಿತ್ರ

ಬಿಜೆಪಿಯ ಬೆಳವಣಿಗೆ ಬೃಹನ್ನಾಟಕ: ಸಿದ್ದರಾಮಯ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯ ಬಿಜೆಪಿಯಲ್ಲಿ ನಡೆಯುತ್ತಿರುವ ಬೆಳವಣಿಗೆಗಳೆಲ್ಲವೂ ಬೃಹನ್ನಾಟಕ. ನೀನು ಚಿವುಟಿದಂತೆ ಮಾಡು, ನಾನು ಅತ್ತಂತೆ ಮಾಡುವೆ ಎನ್ನುವಂತಿದೆ' ಎಂದು ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಲೇವಡಿ ಮಾಡಿದರು.

ಸುದ್ದಿಗಾರರ ಜೊತೆ ಮಂಗಳವಾರ ಮಾತನಾಡಿದ ಅವರು, 'ಯಡಿಯೂರಪ್ಪ ಕಳಪೆ ಮುಖ್ಯಮಂತ್ರಿ. ಅವರ ಪದಚ್ಯುತಿ ಕುರಿತು ಮೊದಲಿನಿಂದಲೂ ಬಿಜೆಪಿಯಲ್ಲಿ ಚರ್ಚೆ ನಡೆಯುತ್ತಿದೆ. ಕೊರೊನಾ ಸಂದರ್ಭದಲ್ಲಿ ಅವರನ್ನು ಕೆಳಗಿಳಿಸಿದರೆ, ಯಾರನ್ನು ಮಾಡಬೇಕು ಎಂಬ ಸಂಶಯ ಆ ಪಕ್ಷದ ವರಿಷ್ಠರನ್ನು ಕಾಡುತ್ತಿದೆ' ಎಂದರು.

ಸಿದ್ದರಾಮಯ್ಯ

'ವರಿಷ್ಠರು ಹೇಳಿದ ತಕ್ಷಣ ರಾಜೀನಾಮೆ ನೀಡುತ್ತೇನೆ ಎಂದು ಯಡಿಯೂರಪ್ಪ ಹೇಳಿರುವುದು ತಂತ್ರಗಾರಿಕೆಯ ಭಾಗ. ಮತ್ತೊಂದೆಡೆ ರೇಣುಕಾಚಾರ್ಯ ಮೂಲಕ ಅವರೇ ಶಾಸಕರ ಸಹಿ ಸಂಗ್ರಹ ಮಾಡಿಸುತ್ತಿದ್ದಾರೆ. ಒಂದು ಕಡೆ ಬೆದರಿಸುವ ಮತ್ತು ನನಗೆ ಶಕ್ತಿ ಇದೆ ಎಂದು ತೋರಿಸಲು ಹೊರಟಿದ್ದಾರೆ. ಇದು ಸ್ವಾಭಾವಿಕವಾದ ರಾಜಕೀಯ ಬೆಳವಣಿಗೆ ಅಲ್ಲ' ಎಂದು ಅಭಿಪ್ರಾಯಪಟ್ಟರು.

ಚುನಾವಣೆಯಾದರೆ ನಮ್ಮದೇ ಗೆಲುವು: 'ರಾಜ್ಯದಲ್ಲಿ ವಿಧಾನಸಭೆ ಚುನಾವಣೆ ನಡೆದರೆ ಕಾಂಗ್ರೆಸ್ ಅಧಿಕಾರದ ಚುಕ್ಕಾಣಿ ಹಿಡಿಯುವ ವಾತಾವರಣ ನಿರ್ಮಾಣವಾಗಿದೆ. ಬಿಜೆಪಿ ಸರ್ಕಾರ ಎಲ್ಲ ರಂಗಗಳಲ್ಲಿಯೂ ವಿಫಲವಾಗಿದೆ' ಎಂದು ಟೀಕಿಸಿದರು.

ಎಸಿಬಿ ನಿಷ್ಕ್ರಿಯ: 'ಹಲವು ಸಚಿವರ ವಿರುದ್ಧ ಭ್ರಷ್ಟಾಚಾರದ ದೂರುಗಳನ್ನು ನೀಡಿದರೂ ತನಿಖಾ ಸಂಸ್ಥೆಗಳು ಕ್ರಮ ಕೈಗೊಳ್ಳುತ್ತಿಲ್ಲ. ಎಸಿಬಿಯಂತೂ ನಿಷ್ಕ್ರಿಯವಾಗಿದೆ. ಎಸಿಬಿಯ ಅಸ್ತಿತ್ವವನ್ನೇ ಇಲ್ಲವಾಗಿಸುವ ಪ್ರಯತ್ನವನ್ನು ಬಿಜೆಪಿಯವರು ಮಾಡುತ್ತಿದ್ದಾರೆ' ಎಂದು ಸಿದ್ದರಾಮಯ್ಯ ಅವರು ದೂರಿದರು.

'ಕಾಂಗ್ರೆಸ್‌ಗೆ ಸಿದ್ದರಾಮಯ್ಯ ಒಲ್ಲದ ಕೂಸು'

ಬೆಂಗಳೂರು: 'ಡಿ.ಕೆ.ಶಿವಕುಮಾರ್ ಕೆಪಿಸಿಸಿ ಅಧ್ಯಕ್ಷರಾದ ಮೇಲೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರು ಹೈಕಮಾಂಡ್‌ಗೆ ಬೇಡದ ಕೂಸಾಗಿದ್ದಾರೆ' ಎಂದು ಬಿಜೆಪಿ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ಎನ್.ರವಿಕುಮಾರ್ ಲೇವಡಿ ಮಾಡಿದ್ದಾರೆ.

'ಮೂಲೆಗುಂಪಾಗಿರುವ ಸಿದ್ದರಾಮಯ್ಯ ಅವರು ಎಐಸಿಸಿ ಮಾಜಿ ಅಧ್ಯಕ್ಷರಂತೆ ಹಗಲಿನಲ್ಲಿ ಒಂದು ರೀತಿ, ರಾತ್ರಿ ಮತ್ತೊಂದು ರೀತಿ ಮಾತನಾಡುತ್ತಾರೆ. ಕೋವಿಡ್ ಸಂದರ್ಭದಲ್ಲಿ ಕೀಳುಮಟ್ಟದ ರಾಜಕೀಯ ಮಾಡುತ್ತಿದ್ದಾರೆ' ಎಂದು ಅವರು ದೂರಿದ್ದಾರೆ.

'ಮೊದಲು ಕೋವಿಡ್ ಲಸಿಕೆ ಬಗ್ಗೆ ಜನರಲ್ಲಿ ಭಯ, ಗೊಂದಲ ಹುಟ್ಟಿಸಿದ ಕಾಂಗ್ರೆಸ್ ನಾಯಕರು ಈಗ ಲಸಿಕೆ ಪಡೆಯಲು ಸಾಲಿನಲ್ಲಿ ನಿಲ್ಲುತ್ತಿದ್ದಾರೆ. ಸಿದ್ದರಾಮಯ್ಯ ಮೇಸ್ಟ್ರು ನಮಗೆ ಬೋಧನೆ ಮಾಡುವ ಬದಲು ರಾಜಸ್ಥಾನ ಮತ್ತು ಪಂಜಾಬ್ ಸರ್ಕಾರಗಳಿಗೆ ಲಸಿಕೆ ಹೇಗೆ ಬಳಸಬೇಕು ಮತ್ತು ಬಡವರಿಗೆ ಉಚಿತವಾಗಿ ಹೇಗೆ ನೀಡಬೇಕು ಎಂಬುದರ ಪಾಠ ಮಾಡಲಿ' ಎಂದು ಹೇಳಿದ್ದಾರೆ.

ನಾಳೆ ಸೂರ್ಯಗ್ರಹಣ

ಕೋಲ್ಕತ್ತ (ಪಿಟಿಐ): ಜೂನ್ 10ರಂದು ಸೂರ್ಯಗ್ರಹಣ ಸಂಭವಿಸಲಿದೆ. ಆದರೆ, ಅರುಣಾಚಲ ಮತ್ತು ಲಡಾಖ್‌ನ ಕೆಲವು ಭಾಗಗಳನ್ನು ಹೊರತುಪಡಿಸಿದರೆ ಭಾರತದ ಉಳಿದೆಡೆ ಕಾಣಿಸುವುದಿಲ್ಲ.

'ಅರುಣಾಚಲ ಪ್ರದೇಶದಲ್ಲಿಯೂ ಸೂರ್ಯ ಮುಳುಗುವ ಕೆಲ ಕ್ಷಣಗಳ ಮುನ್ನ ಕಾಣಿಸಬಹುದು. ಬಹುಶಃ 3-4 ನಿಮಿಷಗಳ ಕಾಲ ಗೋಚರವಾಗಬಹುದು. ಸಂಜೆ 5.52ಕ್ಕೆ ಗ್ರಹಣ ನೋಡಬಹುದು.ಲಡಾಖ್‌ನಲ್ಲಿ ಸಂಜೆ 6ಕ್ಕೆ ನೋಡಬಹುದು. ' ಎಂದು ಎಂ.ಪಿ. ಬಿರ್ಲಾ ತಾರಾಲಯದ ನಿರ್ದೇಶಕ ದೇವಿಪ್ರಸಾದ್ ದೌರಿ ತಿಳಿಸಿದ್ದಾರೆ.

ಚುನಾವಣಾ ಆಯುಕ್ತರಾಗಿ ನೇಮಕ

ನವದೆಹಲಿ (ಪಿಟಿಐ): ಉತ್ತರ ಪ್ರದೇಶ ಮಾಜಿ ಐಎಎಸ್ ಅಧಿಕಾರಿ ಅನುಪ್ ಚಂದ್ರ ಪಾಂಡೆ ಅವರನ್ನು ಮಂಗಳವಾರ ಚುನಾವಣಾ ಆಯುಕ್ತರನ್ನಾಗಿ ಕೇಂದ್ರ ಸರ್ಕಾರ ನೇಮಿಸಿದೆ. ಅವರು 1984ರ ಬ್ಯಾಚ್‌ನ ಐಎಎಸ್ ಅಧಿಕಾರಿ.

ಪ್ರಸ್ತುತ ಸುಶೀಲ್ ಚಂದ್ರ ಅವರು ಮುಖ್ಯ ಚುನಾವಣಾ ಆಯುಕ್ತರಾಗಿದ್ದರೆ (ಸಿಇಸಿ), ರಾಜೀವ್ ಕುಮಾರ್ ಇತರ ಚುನಾವಣಾ ಆಯುಕ್ತರಾಗಿದ್ದಾರೆ.

ಗುಟೆರೆಸ್ ಮುಂದುವರಿಸಲು ಶಿಫಾರಸು

ವಿಶ್ವಸಂಸ್ಥೆ (ಪಿಟಿಐ): ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಅಂಟೊನಿಯೊ ಗುಟೆರೆಸ್ ಅವರನ್ನು ಎರಡನೇ ಅವಧಿಗೂ (2022ರ ಜನವರಿ 1ರಿಂದ) ಮುಂದುವರಿಸುವಂತೆ ವಿಶ್ವಸಂಸ್ಥೆಯ ಭದ್ರತಾ ಮಂಡಳಿ ಮಂಗಳವಾರ ಶಿಫಾರಸು ಮಾಡಿದೆ.

193 ರಾಷ್ಟ್ರಗಳ ಸದಸ್ಯರ ಸಾಮಾನ್ಯ ಸಭೆಗೆ ಎರಡನೇ ಬಾರಿಗೆ ಗುಟೆರೆಸ್ ಅವರನ್ನು ಪ್ರಧಾನ ಕಾರ್ಯದರ್ಶಿಯಾಗಿ ಮಾಡುವ ಶಿಫಾರಸಿನ ನಿರ್ಣಯವನ್ನು ಭದ್ರತಾ ಮಂಡಳಿ ಸರ್ವಾನುಮತದಿಂದ ಅಂಗೀಕರಿಸಿದೆ.

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಆಗಾಗ ಸಾಬೂನಿನಿಂದ ಕೈ ತೊಳೆಯುತ್ತಿರಿ

YADAV School of Chess

ಆನ್‌ಲೈನ್ ಚೆಸ್ ತರಬೇತಿ

ಜೂನ್ 14 ರಿಂದ 26ರವರೆಗೆ

ಪ್ರಾಥಮಿಕ, ಮಾಧ್ಯಮಿಕ ಮತ್ತು ಪ್ರೌಢಶಾಲಾ ವಿದ್ಯಾರ್ಥಿಗಳಿಗಾಗಿ ಪ್ರತ್ಯೇಕ ತಂಡದಲ್ಲಿ 12 ದಿನಗಳ ತರಬೇತಿ ZOOM APP ಮೂಲಕ. ಪ್ರತಿ ತಂಡದಲ್ಲಿ 20 ಮಕ್ಕಳಿಗೆ ಮಾತ್ರ ಅವಕಾಶ.

ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿರಿ:

ಪ್ರಾಣೇಶ್ ಯಾದವ್

ಅಂತರಾಷ್ಟ್ರೀಯ ಚೆಸ್ ತೀರ್ಪುಗಾರರು

9242401702, 8618108601, 9743819678

'ಪ್ರಧಾನಿ ಪಟ್ಟ ಪಣಕ್ಕಿಟ್ಟು ಆಲಮಟ್ಟಿ ನಿರ್ಮಾಣ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಎಚ್.ಡಿ. ದೇವೇಗೌಡರು ಪ್ರಧಾನಿಯಾಗಿದ್ದ ಅವಧಿಯಲ್ಲಿ ತೆಲುಗು ದೇಶಂ ಪಕ್ಷದ ನಾಯಕ ಎನ್. ಚಂದ್ರಬಾಬು ನಾಯ್ಡು ಅವರ ಬೆಂಬಲ ಹಿಂಪಡೆವ ಬೆದರಿಕೆಯನ್ನು ಲೆಕ್ಕಿಸದೆ ಪ್ರಧಾನಿ ಪಟ್ಟವನ್ನೇ ಪಣಕ್ಕಿಟ್ಟು ಆಲಮಟ್ಟಿ ಅಣೆಕಟ್ಟೆ ನಿರ್ಮಾಣಕ್ಕೆ ಒಪ್ಪಿಗೆ ನೀಡಿದ್ದರು' ಎಂದು ದೇವೇಗೌಡರ ಸಂಪುಟದಲ್ಲಿ ಸಚಿವರಾಗಿದ್ದ, ಈಗ ಕಾಂಗ್ರೆಸ್‌ನಲ್ಲಿರುವ ಸಿ.ಎಂ. ಇಬ್ರಾಹಿಂ ಹೇಳಿದ್ದಾರೆ.

ಸಿ.ಎಂ. ಇಬ್ರಾಹಿಂ

ದೇವೇಗೌಡರು ಪ್ರಧಾನಿ ಹುದ್ದೆಗೇರಿ 25 ವರ್ಷಗಳಾದ ಪ್ರಯುಕ್ತ ಜೆಡಿಎಸ್ ಹಮ್ಮಿಕೊಂಡಿರುವ ಸಾಧನೆಗಳ ಸ್ಮರಣೆ ಅಭಿಯಾನದಲ್ಲಿ ಮಂಗಳವಾರ ಮಾತನಾಡಿದ ಅವರು, 'ರಾಜ್ಯದ ಹಿತರಕ್ಷಣೆಗಾಗಿ ಪ್ರಧಾನಿ ಹುದ್ದೆಯನ್ನೂ ತ್ಯಜಿಸಲು ಸಿದ್ಧ ಎಂಬ ದಿಟ್ಟ ನಿಲುವನ್ನು ಆಗ ಗೌಡರು ಪ್ರದರ್ಶಿಸಿದ್ದರು' ಎಂದರು.

ಪ್ರಧಾನಿಯಾಗಿದ್ದ ಅವಧಿಯಲ್ಲಿ ಗೌಡರು ಒಂದು ತಪ್ಪು ನಿರ್ಧಾರ ಕೂಡ ಕೈಗೊಳ್ಳಲಿಲ್ಲ. ಯಾವ ಸಚಿವರೂ ತಪ್ಪು ಮಾಡಲು ಅವಕಾಶ ನೀಡಲಿಲ್ಲ. ಲಾಲು ಪ್ರಸಾದ್, ಶರದ್ ಯಾದವ್, ರಾಮ್ ವಿಲಾಸ್ ಪಾಸ್ವಾನ್, ಮಮತಾ ಬ್ಯಾನರ್ಜಿ ಸೇರಿದಂತೆ ಘಟಾನುಘಟಿ ನಾಯಕರ ಜತೆ ಒಗ್ಗಟ್ಟಿನಿಂದ ಸರ್ಕಾರ ಮುನ್ನಡೆಸಿದ್ದು ಗೌಡರ ಹೆಗ್ಗಳಿಕೆ ಎಂದರು.

ಕಾಶ್ಮೀರಕ್ಕೆ ಭೇಟಿನೀಡುವುದು ಬೇಡ ಎಂಬ ಭದ್ರತಾ ಅಧಿಕಾರಿಗಳ ಎಚ್ಚರಿಕೆ ಬದಿಗಿಟ್ಟು ಗೌಡರು ಅಲ್ಲಿಗೆ ಹೋಗಿದ್ದರು. ಅವರ ಮಾರ್ಗದರ್ಶನದಲ್ಲಿ ರಕ್ತರಹಿತ ಚುನಾವಣಾ ಪ್ರಕ್ರಿಯೆ ನಡೆಯಿತು. ಕಾಶ್ಮೀರದ ನೆಲ ಮಾತ್ರವಲ್ಲ; ಅಲ್ಲಿನ ಜನರ ಮೇಲೂ ತಮಗೆ ಪ್ರೀತಿ ಇದೆ ಎಂಬುದನ್ನು ಜನಪರ ಯೋಜನೆಗಳ ಮೂಲಕ ಅವರು ಸಾಬೀತುಪಡಿಸಿದ್ದರು ಎಂದು ನೆನಪಿಸಿಕೊಂಡರು.

'ಗೌಡರು ಪ್ರಧಾನಿ ಹುದ್ದೆಗೇರಿ 25 ವರ್ಷಗಳಾಯಿತು. ಅವರ ಒಂದೇ ಒಂದು ತಪ್ಪನ್ನು ಹುಡುಕಲು ಈವರೆಗೆ ಸಾಧ್ಯವಾಗಿಲ್ಲ. ನಾನೂ ಸೇರಿದಂತೆ ಎಲ್ಲ ಸಚಿವರಿಗೂ ಮುಕ್ತ ಸ್ವಾತಂತ್ರ್ಯ ನೀಡಿದ್ದರು. ದೇಶದ ರೈತರನ್ನು ಜತನದಿಂದ ಕಾಯುವುದಕ್ಕೆ ಅವರು ಅಧಿಕಾರವನ್ನು ಸಮರ್ಥವಾಗಿ ಬಳಸಿಕೊಂಡಿದ್ದರು' ಎಂದು ಇಬ್ರಾಹಿಂ ತಿಳಿಸಿದರು.

ಕುಟುಂಬ ರಾಜಕಾರಣ ತಪ್ಪಲ್ಲ

'ದೇವೇಗೌಡರು ಕುಟುಂಬ ರಾಜಕಾರಣ ಮಾಡುತ್ತಾರೆ ಎಂದು ಎಲ್ಲರೂ ಟೀಕಿಸುತ್ತಾರೆ. ಮಕ್ಕಳನ್ನು ರಾಜಕೀಯಕ್ಕೆ ತರುವುದರಲ್ಲಿ ಯಾರು ಹೊರತಾಗಿದ್ದಾರೆ. ಗೌಡರ ಮಕ್ಕಳು ರಾಜಕೀಯದಲ್ಲಿರುವುದು ತಪ್ಪೇನೂ ಅಲ್ಲ' ಎಂದು ಸಿ.ಎಂ. ಇಬ್ರಾಹಿಂ ಹೇಳಿದ್ದಾರೆ.

ಜವಾಹರಲಾಲ್ ನೆಹರೂ ನಂತರ ಇಂದಿರಾ ಗಾಂಧಿ ಬಂದರು. ನಂತರ ರಾಜೀವ್ ಗಾಂಧಿ, ಈಗ ರಾಹುಲ್ ಗಾಂಧಿ ಬಂದಿದ್ದಾರೆ. ಹಾಗೆಯೇ ದೇವೇಗೌಡರ ಕುಟುಂಬದಲ್ಲಿ ಎಚ್.ಡಿ. ಕುಮಾರಸ್ವಾಮಿ, ಎಚ್.ಡಿ. ರೇವಣ್ಣ, ನಿಖಿಲ್ ಎಲ್ಲರೂ ಇದ್ದಾರೆ. ಅವರಿಗೆ ಯಶಸ್ಸು ಸಿಗಲಿ ಎಂದು ವಿಡಿಯೊದಲ್ಲಿ ಹಾರೈಸಿದ್ದಾರೆ.

ಸಾರ್ವಜನಿಕ ತಿಳುವಳಿಕೆ ನೋಟೀಸ್

ಕೆ.ಸಿ. ರುದ್ರೇಶ ಅಣ್ಣಾಪುರ ವಕೀಲರು ಆದ ನಾನು ಸಾರ್ವಜನಿಕರಿಗೆ ಈ ಪತ್ರಿಕಾ ಪ್ರಕಟಣೆ ಮೂಲಕ ತಿಳಿಯಪಡಿಸುವುದೇನೆಂದರೆ ನನ್ನ ಕಕ್ಷಿಗಾರರಾದ ಶ್ರೀ **ಉದಯ್‌ಶಿವಕುಮಾರ್ ಬಿನ್ ರಾಜಣ್ಣ,** ದಾವಣಗೆರೆ ಪ್ರಥಮ ದರ್ಜೆ ಗುತ್ತಿಗೆದಾರರು ಇವರ ಗುತ್ತಿಗೆ ಪರವಾನಿಗೆಯನ್ನು ಮುಖ್ಯ ಇಂಜಿನಿಯರ್ ಸಂಪರ್ಕ ಮತ್ತು ಕಟ್ಟಡಗಳು (ದಕ್ಷಿಣ) ಬೆಂಗಳೂರು, ಇವರು **ದಿನಾಂಕ 27–05–2019** ರಂದು ಕಪ್ಪು ಪಟ್ಟಿಗೆ ಸೇರಿಸುವಂತೆ ಆದೇಶ ಮಾಡಿದ್ದು ಸರಿಯಷ್ಟೆ. ಆದರೆ ನಮ್ಮ ಕಕ್ಷಿಗಾರರು ಸದರಿ ಆದೇಶವನ್ನು ಪ್ರಶ್ನಿಸಿ ಆದೇಶ ರದ್ದು ಮಾಡುವಂತೆ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ರಿಟ್ (**ರಿಟ್ ಅರ್ಜಿ ಸಂಖ್ಯೆ 23229/2019**) ಅರ್ಜಿಯನ್ನು ಸಲ್ಲಿಸಿದ್ದು ಅದರಂತೆ ಮಾನ್ಯ ಉಚ್ಚ ನ್ಯಾಯಾಲಯ ದಿನಾಂಕ: 07–09–2019 ರಂದು ಕಪ್ಪು ಪಟ್ಟಿಗೆ ಸೇರಿಸಿರುವುದನ್ನು ರದ್ದು ಮಾಡಿ ಅಂತಿಮ ಆದೇಶ ಮಾಡಿರುತ್ತದೆ.

ಅಲ್ಲದೆ ಮುಖ್ಯ ಇಂಜಿನಿಯರ್ ಸಂಪರ್ಕ ಮತ್ತು ಕಟ್ಟಡಗಳು (ದಕ್ಷಿಣ) ಬೆಂಗಳೂರು, ಇವರು ಸದರಿ ಆದೇಶದ ನಂತರ ನಮ್ಮ ಕಕ್ಷಿಗಾರರ ಗುತ್ತಿಗೆ ಪರವಾನಿಗೆಯನ್ನು ದಿನಾಂಕ: 19–10–2020 ರಂದು ನವೀಕರಣ ಸಹಾ ಮಾಡಿರುತ್ತಾರೆ.

ಆದ್ದರಿಂದ ನಮ್ಮ ಕಕ್ಷಿಗಾರರು ಈಗ ಯಾವುದೇ ಕಪ್ಪು ಪಟ್ಟಿಯಲ್ಲಿ ಸೇರಿರುವುದಿಲ್ಲ. ಹಾಗೇನಾದರೂ ಯಾರಾದರೂ ಸುಳ್ಳು ಹೇಳಿಕೆ ನೀಡಿದಲ್ಲಿ ಅದು ನ್ಯಾಯಾಂಗ ನಿಂದನೆ ಆರೋಪವಾಗುತ್ತದೆ. ನಮ್ಮ ಕಕ್ಷಿಗಾರರ ಬೆಳವಣಿಗೆಯನ್ನು ಸಹಿಸದ ಕೆಲವು ವ್ಯಕ್ತಿಗಳು ಅವರ ವಿರುದ್ಧ ಸುಳ್ಳು, ಅಪಪ್ರಚಾರ ಮಾಡುತ್ತಿದ್ದು ಮತ್ತು ಅವರ ಹೆಸರಿಗೆ ಕಳಂಕ ಹಚ್ಚುವ ಕೆಲಸ ಮಾಡುತ್ತಿದ್ದಾರೆ. ಆದ್ದರಿಂದ ಸಾರ್ವಜನಿಕರು ಇದಕ್ಕೆ ಕಿವಿಗೊಡಬಾರದೆಂದು ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುತ್ತಿದ್ದೇನೆ.

ಸಹಿ/– ಕೆ.ಸಿ. ರುದ್ರೇಶ ಬಿ.ಎ.ಎಲ್.ಎಲ್.ಬಿ.

ವಕೀಲರು

ಹಣ ವರ್ಗಾವಣೆ ಕಾರ್ಯಕ್ರಮಕ್ಕೆ ಮುಖ್ಯಮಂತ್ರಿ ಬಿಎಸ್‌ವೈ ಚಾಲನೆ

1.91 ಲಕ್ಷ ಬೀದಿಬದಿ ವ್ಯಾಪಾರಿಗಳ ಖಾತೆಗೆ ಹಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬ್ಯಾಂಕ್ ಖಾತೆಯ ಜೊತೆ ಆಧಾರ ಜೋಡಣೆಯಾಗಿರುವ 1,91,684 ಬೀದಿಬದಿ ವ್ಯಾಪಾರಿಗಳ ಖಾತೆಗೆ ತಲಾ ₹ 2 ಸಾವಿರದಂತೆ ಒಟ್ಟು ₹ 38.33 ಕೋಟಿ ವರ್ಗಾವಣೆ ಮಾಡುವ ಕಾರ್ಯಕ್ರಮಕ್ಕೆ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಮಂಗಳವಾರ ಚಾಲನೆ ನೀಡಿದರು.

ಕೋವಿಡ್ ಎರಡನೇ ಅಲೆಯ ಆರ್ಥಿಕ ಪ್ಯಾಕೇಜ್‌ನಡಿ ಬೀದಿಬದಿ ವ್ಯಾಪಾರಿಗಳಿಗೆ ಸಹಾಯಧನ ಘೋಷಿಸಲಾಗಿದ್ದು, ಕೌಶಲಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ಅಡಿಯಲ್ಲಿ ದೀನದಯಾಳ್ ಅಂತ್ಯೋದಯ ಯೋಜನೆ-ರಾಷ್ಟ್ರೀಯ ನಗರ ಜೀವನೋಪಾಯ ಅಭಿಯಾನದಡಿ ನೋಂದಾಯಿಸಿರುವ ಬೀದಿಬದಿ ವ್ಯಾಪಾರಿಗಳಿಗೆ ಈ ನೆರವು ಸಿಗಲಿದೆ.

ಬಳಿಕ ಮಾತನಾಡಿದ ಮುಖ್ಯಮಂತ್ರಿ, 'ನಗರ ಸ್ಥಳೀಯಸಂಸ್ಥೆಗಳಿಂದ ನಡೆಸಿದ ಸಮೀಕ್ಷೆಯಲ್ಲಿ 2,16,439 ಬೀದಿಬದಿ ವ್ಯಾಪಾರಿಗಳನ್ನು ಗುರುತಿಸಲಾಗಿದೆ. ಅವರಿಗೆ ಗುರುತಿನ ಚೀಟಿ ಮತ್ತು ಮಾರಾಟ ಪ್ರಮಾಣಪತ್ರ ವಿತರಿಸಿ, ವ್ಯಾಪಾರಕ್ಕೆ ಮೂಲಸೌಕರ್ಯ ಕಲ್ಪಿಸಲಾಗಿದೆ. ಅಲ್ಲದೆ, ಸಾಮಾಜಿಕ ಭದ್ರತಾ ಯೋಜನೆಗಳ ಸೌಲಭ್ಯ ಪಡೆಯಲು ವ್ಯವಸ್ಥೆ ಕಲ್ಪಿಸಲಾಗುತ್ತಿದೆ. ಈ ಫಲಾನುಭವಿಗಳಿಗೆ ಸಹಾಯಧನ ನೀಡಲಾಗುವುದು' ಎಂದರು.

ಸಾಂದರ್ಭಿಕ ಚಿತ್ರ

'ಬ್ಯಾಂಕ್ ಖಾತೆಗೆ ಆಧಾರ ಜೋಡಿಸದ ಫಲಾನುಭವಿಗಳಿಗೆ ಆಧಾರ್ ಜೋಡಣೆ ಮಾಡಿದ ನಂತರ ಸಹಾಯಧನ ಬಿಡುಗಡೆ ಮಾಡಲಾಗುವುದು. ಈಗಾಗಲೇ ನೋಂದಾಯಿಸಿರುವ ಬೀದಿಬದಿ ವ್ಯಾಪಾರಿಗಳು ಈ ಸಹಾಯಧನ ಪಡೆಯಲು ಪ್ರತ್ಯೇಕವಾಗಿ ಅರ್ಜಿ ಸಲ್ಲಿಸುವ ಅವಶ್ಯಕತೆ ಅಗತ್ಯ ಇಲ್ಲ. ಈ ಪ್ಯಾಕೇಜ್‌ನಡಿ ಬಿಡುಗಡೆ ಮಾಡಿರುವ ಸಹಾಯಧನವನ್ನು ಬೀದಿಬದಿ ವ್ಯಾಪಾರಿಗಳ ಯಾವುದೇ ಸಾಲಕ್ಕೆ ಸರಿ ಹೊಂದಿಸಬಾರದೆಂದು ಸಂಬಂಧಿಸಿದ ಬ್ಯಾಂಕಿನವರಿಗೆ ಸೂಚನೆ ನೀಡಲಾಗಿದೆ' ಎಂದರು.

ಉಪ ಮುಖ್ಯಮಂತ್ರಿ ಡಾ. ಸಿ.ಎನ್. ಅಶ್ವತ್ಥನಾರಾಯಣ್ ಮಾತನಾಡಿ, 'ಫಲಾನುಭವಿಗಳಾದ ನಂಜಪ್ಪ ಹಾಗೂ ಲಕ್ಷ್ಮಮ್ಮ ಅವರು ಪಿ.ಎಂ. ಸ್ವನಿಧಿ ಅಡಿ ₹ 10 ಸಾವಿರ ಸಾಲ ಸೌಲಭ್ಯ ಮತ್ತು ಎರಡನೇ ಅಲೆ ಸಂದರ್ಭದಲ್ಲಿ ನೀಡುತ್ತಿರುವ ₹ 2 ಸಾವಿರ ನೆರವಿನಿಂದ ಅನುಕೂಲವಾಗಿದೆ' ಎಂದರು.

ಗೋವಿಂದರಾಜನಗರ ವಿಧಾನಸಭಾ ಕ್ಷೇತ್ರದಲ್ಲಿ ಸೋಂಕಿತರಿಗಾಗಿ ಸುಸಜ್ಜಿತ ಕೋವಿಡ್ ಆಸ್ಪತ್ರೆ

ಟೆಲಿ ಐಸಿಯು ಆಸ್ಪತ್ರೆಗೆ ಅಂತಿಮ ಸ್ಪರ್ಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಸೋಂಕಿತರ ಚಿಕಿತ್ಸೆಗಾಗಿ ಗೋವಿಂದರಾಜನಗರ ವಿಧಾನಸಭಾ ಕ್ಷೇತ್ರದಲ್ಲಿ ಸುಸಜ್ಜಿತ ಕೋವಿಡ್ ಆಸ್ಪತ್ರೆಯೊಂದು ನಿರ್ಮಾಣವಾಗುತ್ತಿದ್ದು, ಸದ್ಯದಲ್ಲೇ ಸಾರ್ವಜನಿಕ ಸೇವೆಗೆ ಲಭ್ಯವಾಗಲಿದೆ. ಟೆಲಿ ಐಸಿಯು ಸೌಲಭ್ಯವನ್ನು ಈ ಸರ್ಕಾರಿ ಆಸ್ಪತ್ರೆ ಒಳಗೊಳ್ಳುತ್ತಿದೆ.

ಬಡವರಿಗೆ ಉಚಿತವಾಗಿ ಡಯಾಲಿಸ್ ಸೌಲಭ್ಯ ದೊರಕಿಸಬೇಕು ಎಂಬ ಕಾರಣಕ್ಕೆ ಕ್ಷೇತ್ರದ ಮಾರುತಿ ಮಂದಿ ವಾರ್ಡ್‌ನಲ್ಲಿ ಸಂಗೊಳ್ಳಿ ರಾಯಣ್ಣ ಡಯಾಲಿಸಿಸ್ ಸೌಲಭ್ಯದ ಆಸ್ಪತ್ರೆ ನಿರ್ಮಾಣಕ್ಕೆ ಎರಡು ವರ್ಷಗಳ ಹಿಂದೆ ಸಚಿವ ವಿ.ಸೋಮಣ್ಣ ಅವರು ಶಂಕುಸ್ಥಾಪನೆ ನೆರವೇರಿಸಿದ್ದರು. ಒಟ್ಟು 7,260 ಚದರ ಅಡಿ ವಿಸ್ತೀರ್ಣದ ಮೂರು ಅಂತಸ್ತಿನ ಕಟ್ಟಡ ಇದಾಗಿದೆ.


ಆಸ್ಪತ್ರೆಯ ಕಾಮಗಾರಿ ಪರಿಶೀಲಿಸಿದ ಸಚಿವ ವಿ. ಸೋಮಣ್ಣ

58 ಹಾಸಿಗೆಗಳ ಡಯಾಲಿಸಿಸ್ ಕೇಂದ್ರ ನಿರ್ಮಾಣವಾಗುತ್ತಿದೆ.

ಕೋವಿಡ್ ತುರ್ತು ಸಂದರ್ಭದಲ್ಲಿ ಈ ಕಟ್ಟಡದ ಕೆಲವು ಮಹಡಿಗಳನ್ನು ಕೋವಿಡ್ ಆಸ್ಪತ್ರೆಯಾಗಿ ಪರಿವರ್ತಿಸಲಾಗುತ್ತಿದೆ. ಕೆಳ ಮಹಡಿಯಲ್ಲಿ 9 ಹಾಸಿಗೆಗಳ ಸಾಮರ್ಥ್ಯದ ವೆಂಟಿಲೇಟರ್ ಸಹಿತ ಐಸಿಯು ಹಾಸಿಗೆಗಳು, ಮೊದಲ ಮಹಡಿಯಲ್ಲಿ 15 ಐಸಿಯು ಹಾಸಿಗೆ, ಎರಡನೇ ಮಹಡಿಯಲ್ಲಿ 40 ಎಚ್‌ಡಿಯು ಸೌಲಭ್ಯದ ಹಾಸಿಗೆಗಳನ್ನು ಅಳವಡಿಸಲಾಗುತ್ತಿದೆ.

ಕಾಮಗಾರಿ ಅಂತಿಮ ಹಂತದಲ್ಲಿದ್ದು, ಅತ್ಯಾಧುನಿಕ ವೈದ್ಯಕೀಯ ಸಲಕರಣೆ, ಹವಾನಿಯಂತ್ರಿತ ವ್ಯವಸ್ಥೆ, ದಿನದ 24 ಗಂಟೆಯೂ ಜನರೇಟರ್ ಸೌಲಭ್ಯ, ವಾಹನ ನಿಲುಗಡೆಗೆ ಉತ್ತಮ ಪಾರ್ಕಿಂಗ್ ವ್ಯವಸ್ಥೆ, ವೈದ್ಯಕೀಯ ಸಿಬ್ಬಂದಿ ವಿಶ್ರಾಂತಿಗೆ ಸುಸಜ್ಜಿತ ಕೊಠಡಿಗಳು ನಿರ್ಮಾಣವಾಗುತ್ತಿವೆ ಎಂದು ವಸತಿ ಸಚಿವ ವಿ. ಸೋಮಣ್ಣ ತಿಳಿಸಿದರು.

ಟೆಲಿ ಐಸಿಯು ಎಂದರೇನು?

ಟೆಲಿ ಐಸಿಯು ಎಂದರೆ ಸಂಪೂರ್ಣವಾಗಿ ವಿಡಿಯೊ ಸಂವಾದದ ಮೂಲಕ ರೋಗಿಯ ಸ್ಥಿತಿಗತಿಯನ್ನು ಹೊರಗಿನಿಂದಲೇ ತಿಳಿದುಕೊಳ್ಳುವ ತಂತ್ರಜ್ಞಾನ ಆಧರಿತ ವಿಧಾನ.

‘ದೇಶದಲ್ಲೇ ಮೊದಲ ಬಾರಿಗೆ ಟೆಲಿ ಐಸಿಯು (ಸಂಪೂರ್ಣ ದೂರದರ್ಶಿತ ತೀವ್ರ ನಿಗಾ ಘಟಕ) ವ್ಯವಸ್ಥೆಯನ್ನು ಸರ್ಕಾರಿ ಆಸ್ಪತ್ರೆಯಲ್ಲಿ ಅಳವಡಿಸಲಾಗಿದೆ. ತೀವ್ರ ನಿಗಾ ಘಟಕದ ಪ್ರತಿ ಹಾಸಿಗೆಗೂ ಆಡಿಯೊ ಮತ್ತು ವಿಡಿಯೊ ಸಂಪರ್ಕ ಕಲ್ಪಿಸಲಾಗುತ್ತಿದೆ. ವೈದ್ಯರಾಗಲಿ, ವೈದ್ಯಕೀಯ ಸಿಬ್ಬಂದಿಯಾಗಲಿ ಐಸಿಯು ಒಳಗೆ ಹೋಗದೆ ರೋಗಿಯ ಸ್ಥಿತಿಗತಿ ಮೇಲೆ ನಿಗಾ ವಹಿಸಬಹುದಾದ ವ್ಯವಸ್ಥೆ ಕಲ್ಪಿಸಲಾಗುತ್ತಿದೆ’ ಎಂದು ವಸತಿ ಸಚಿವ ವಿ.ಸೋಮಣ್ಣ ತಿಳಿಸಿದರು.

‘ರೋಗಿ ಕೂಡ ತಾನು ಪಡೆಯುತ್ತಿರುವ ಚಿಕಿತ್ಸೆಯ ಬಗ್ಗೆ ಮಾಹಿತಿ ಪಡೆದುಕೊಳ್ಳಬಹುದು. ರೋಗಿಯ ಸಂಬಂಧಿಕರು ಕೂಡ ಅವರ ಸ್ಥಿತಿಗತಿಯನ್ನು ನೇರವಾಗಿ ಅರಿಯಬಹುದು. ರೋಗಿಯು ಕ್ಷಿಪ್ರವಾಗಿ ಗುಣಮುಖರಾಗಲು ಇದು ಸಹಕಾರಿ ಆಗಲಿದೆ. ಬೇರೆಲ್ಲಾ ಆಸ್ಪತ್ರೆಗಳಿಗೆ ಈ ಸರ್ಕಾರಿ ಆಸ್ಪತ್ರೆ ಮಾದರಿಯಾಗಲಿದೆ’ ಎಂದು ಅವರು ಹೇಳಿದರು.

ರೋಗಿಯ ಸ್ಥಿತಿಗತಿ ಅರಿಯಲು ವೈದ್ಯರು ಮತ್ತು ನರ್ಸ್‌ಗಳು ಪ್ರತಿಬಾರಿ ಪಿಪಿಇ ಕಿಟ್ ಧರಿಸಿಕೊಂಡು ಹೋಗುವುದು ಹಾಗೂ ಅಪಾಯಕ್ಕೆ ತಮ್ಮನ್ನು ಒಡ್ಡಿಕೊಳ್ಳುವುದು ಇದರಿಂದ ತಪ್ಪಲಿದೆ ಎಂದು ಸೋಮಣ್ಣ ವಿವರಿಸಿದರು.



ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ಪ್ರತಿಪಾದನೆ

ಲಾಕ್‌ಡೌನ್ ತೆರವು– ಬೆಂಗಳೂರಿಗೆ ಪ್ರತ್ಯೇಕ ಮಾದರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ನಿಯಂತ್ರಣಕ್ಕಾಗಿ ಜಾರಿಗೊಳಿಸಿರುವ ಲಾಕ್‌ಡೌನ್ ತೆರವುಗೊಳಿಸುವ ವೇಳೆ ಬಿಬಿಎಂಪಿಗೆ ಪ್ರತ್ಯೇಕ ಯೋಜನೆ ರೂಪಿಸಬೇಕು ಎಂದು ಬಿಬಿಎಂಪಿಯು ಸರ್ಕಾರವನ್ನು ಒತ್ತಾಯಿಸಿದೆ.

ಸುದ್ದಿಗಾರರ ಜೊತೆ ಮಂಗಳವಾರ ಮಾತನಾಡಿದ ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ, ‘ಲಾಕ್‌ಡೌನ್ ತೆರವಿನ ಸಂದರ್ಭದಲ್ಲಿ ಬೆಂಗಳೂರಿಗೆ ಬೇರೆಯೇ ಮಾದರಿ ಅನುಸರಿಸುವ ಅಗತ್ಯವಿದೆ. ಇಲ್ಲಿನ ಸಂಸ್ಕೃತಿ, ಜನರ ನಡವಳಿಕೆ ಆಧರಿಸಿ ಹಂತ ಹಂತವಾಗಿ ಲಾಕ್‌ಡೌನ್ ತೆರವುಗೊಳಿಸುವಂತೆ ಸರ್ಕಾರಕ್ಕೆ ಸಲಹೆ ನೀಡಿದ್ದೇವೆ’ ಎಂದರು.

‘ಲಾಕ್‌ಡೌನ್‌ನಿಂದಾಗಿ ಬಹಳಷ್ಟು ಜನರಿಗೆ ಕೆಲಸ ಇಲ್ಲದಂತಾಗಿದೆ. ಲಾಕ್‌ಡೌನ್ ಜಾರಿ ಹಾಗೂ ತೆರವು ಗೊಳಿಸುವ ತೀರ್ಮಾನವನ್ನು ಸರ್ಕಾರವೇ ತೆಗೆದುಕೊಳ್ಳುತ್ತದೆ. ಯಾವೆಲ್ಲ ಉದ್ದಿಮೆಗಳ ಕಾರ್ಯಾಚರಣೆಗೆ ಅವಕಾಶ ಕಲ್ಪಿಸಬೇಕು ಎಂದು ಸರ್ಕಾರದ ಮಟ್ಟದಲ್ಲಿ ತೀರ್ಮಾನ ಕೈಗೊಳ್ಳಲಾಗುತ್ತದೆ. ತೆರವಿನ ವೇಳೆ ನಗರಕ್ಕೆ ಹಾಗೂ ರಾಜ್ಯದ ಇತರ ಪ್ರದೇಶಗಳಿಗೆ ಬೇರೆಯೇ ಮಾದರಿಗಳನ್ನು ಸಿದ್ಧಪಡಿಸಲಾಗಿದೆ. ರಫ್ತು ಆಧರಿತ ಕೈಗಾರಿಕೆಗಳಿಗೆ ಹಾಗೂ ಸಣ್ಣ ಕೈಗಾರಿಕೆಗಳಿಗೆ ಮೊದಲ ಹಂತದಲ್ಲಿ, ವಾಣಿಜ್ಯ ಉದ್ಯಮಗಳಿಗೆ ಎರಡನೇ ಹಂತದಲ್ಲಿ, ಬಾರ್ ಮತ್ತು ರೆಸ್ಟೋರೆಂಟ್‌ಗಳ ಕಾರ್ಯಾಚರಣೆಗೆ ಮೂರನೇ ಹಂತದಲ್ಲಿ ಅವಕಾಶ ನೀಡುವ ಸಾಧ್ಯತೆ ಇದೆ’ ಎಂದರು.

‘ಈ ತಿಂಗಳಲ್ಲಿ ನಗರದಲ್ಲಿ ಸೋಂಕು ಪತ್ತೆ ದರ ಬಹಳ ಕಡಿಮೆಯಾಗಿದೆ. ಸರ್ಕಾರವು ಸಕಾಲದಲ್ಲಿ ಸರಿಯಾದ ಕ್ರಮಗಳನ್ನು ಕೈಗೊಂಡಿದ್ದು ಕೂಡಾ ಇದಕ್ಕೆ ಕಾರಣ. ವೈದ್ಯರು, ಶುಶ್ರೂಷಕಿಯರು ಸೇರಿದಂತೆ ಆರೋಗ್ಯ ಸೇವೆಯ ಸಿಬ್ಬಂದಿಗಳ ಎಲ್ಲರ ಪರಿಶ್ರಮದಿಂದಾಗಿ ಇದು ಸಾಧ್ಯವಾಗಿದೆ’ ಎಂದರು.

‘ಲಾಕ್‌ಡೌನ್ ತೆರವುಗೊಂಡ ಬಳಿಕ ಬೇರೆ ಪ್ರದೇಶಗಳಿಂದ ಜನ ಇಲ್ಲಿಗೆ ಬರುತ್ತಾರೆ. ಆಗ ಮತ್ತೆ ಸೋಂಕು ಹರಡುವ ಅಪಾಯವಿದೆ. ಹಾಗಾಗಿ ಇನ್ನು ಮುಂದೆಯೂ ಸಾರ್ವಜನಿಕ ಸ್ಥಳಗಳಲ್ಲಿ ಕಡ್ಡಾಯವಾಗಿ ಮಾಸ್ಕ್ ಧರಿಸಬೇಕು. ಎಲ್ಲ ರೀತಿಯ ಸುರಕ್ಷತಾ ಕ್ರಮಗಳನ್ನು ಅನುಸರಿಸಬೇಕು’ ಎಂದರು.

ಚಿತ್ರರಂಗದವರಿಗೆ ಕೋವಿಡ್ ಲಸಿಕೆ

ಚಿತ್ರೋದ್ಯಮದ ಕಲಾವಿದರು, ಕಾರ್ಮಿಕರು ಹಾಗೂ ತಂತ್ರಜ್ಞರಿಗೆ ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಕಚೇರಿಯಲ್ಲಿ ಕೋವಿಡ್ ಲಸಿಕೆ ನೀಡುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. 10 ಸಾವಿರಕ್ಕೂ ಅಧಿಕ ಮಂದಿಗೆ ಲಸಿಕೆ ನೀಡುವ ಈ ಕಾರ್ಯಕ್ರಮಕ್ಕೆ ಮಂಗಳವಾರ ಚಾಲನೆ ನೀಡಲಾಯಿತು.

ಗೌರವ್ ಗುಪ್ತ, ‘ಕಾರ್ಮಿಕರು ಇರುವ ಸ್ಥಳಕ್ಕೇ ತೆರಳಿ ಕೋವಿಡ್ ಲಸಿಕೆ ಹಾಕಲು ಸರ್ಕಾರ ಅವಕಾಶ ಕಲ್ಪಿಸಿದೆ. ಚಿತ್ರರಂಗದವರಿಗೆ ಲಸಿಕೆ ಹಾಕಿದ ರೀತಿಯಲ್ಲೇ ಬೆಸ್ಕಾಂ ಲೈನ್‌ಮ್ಯಾನ್‌ಗಳು, ಜಲಮಂಡಳಿಯ ವಾಲ್ವ್‌ಮ್ಯಾನ್‌ಗಳು, ಬಿಬಿಎಂಪಿಯ ಸ್ಮಶಾನಗಳ ಕಾರ್ಮಿಕರು ಹಾಗೂ ಕಟ್ಟಡ ನಿರ್ಮಾಣ ಕಾರ್ಮಿಕರಿಗೆ ಪಾಲಿಕೆ ವತಿಯಿಂದ ವಿಶೇಷ ಲಸಿಕೆ ಶಿಬಿರಗಳನ್ನು ಹಮ್ಮಿಕೊಳ್ಳಲಾಗುತ್ತದೆ. ಇದಕ್ಕಾಗಿ ನೋಡಲ್ ಅಧಿಕಾರಿಗಳನ್ನು ನೇಮಿಸಿದ್ದೇವೆ. ಅವರು ಆಯಾ ಸಂಘದವರ ಜೊತೆ ಸಮಾಲೋಚನೆ ಮಾಡಿ ಲಸಿಕೆ ಶಿಬಿರಗಳ ರೂಪರೇಷೆ ಸಿದ್ಧಪಡಿಸುತ್ತಾರೆ’ ಎಂದು ತಿಳಿಸಿದರು.

‘ಜನರು ಕೋವಿಡ್‌ನಿಂದ ರಕ್ಷಣೆ ಪಡೆಯಲು ಲಸಿಕೆ ಹಾಕಿಸಿಕೊಳ್ಳುವುದು ತೀರಾ ಅಗತ್ಯ. ಇನ್ನು 30 ದಿನಗಳಲ್ಲಿ ಬಿಬಿಎಂಪಿಗೆ ಪೂರೈಕೆ ಆಗುವ ಲಸಿಕೆಗಳ ಪ್ರಮಾಣ ಹೆಚ್ಚಾಗಲಿದೆ. ಮುಂಬರುವ ದಿನಗಳಲ್ಲಿ ಹಂತ ಹಂತವಾಗಿ ಎಲ್ಲರಿಗೂ ಲಸಿಕೆ ಕೊಡುತ್ತೇವೆ’ ಎಂದರು.

ಬೆಂಗಳೂರು ನಗರದ ಕೋವಿಡ್ ಅಂಕಿ–ಅಂಶ

11,87,146 ಒಟ್ಟು ಸೋಂಕಿತರು
(11,85,118 ನಿನ್ನೆಯ ವಿವರ)

1,01,965	10,70,062	15,118
ಸಕ್ರಿಯ ಪ್ರಕರಣ	ಗುಣಮುಖ ಆದವರು	ಒಟ್ಟು ಸಾವು

ಮಂಗಳವಾರದ ಏರಿಕೆ

ಹೊಸ ಪ್ರಕರಣ	2,028
ಗುಣಮುಖ	7,664
ಸಾವು	44

ಆಧಾರ: ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಉತ್ತರ ಪ್ರದೇಶ: ಭೀಕರ ಅಪಘಾತ 16 ಮಂದಿ ಸಾವು

ಕಾನ್ಪುರ (ಪಿಟಿಐ): ಇಲ್ಲಿನ ಸಚೆಂಡಿ ಪ್ರದೇಶದಲ್ಲಿ ಮಂಗಳವಾರ ರಾತ್ರಿ ಸಂಭವಿಸಿದ ಭೀಕರ ರಸ್ತೆ ಅಪಘಾತದಲ್ಲಿ ಬಸ್‌ನಲ್ಲಿದ್ದ 16 ಜನರು ಮೃತಪಟ್ಟಿದ್ದು, 6 ಮಂದಿ ಗಾಯಗೊಂಡಿದ್ದಾರೆ. ಗಾಯಗೊಂಡವರಲ್ಲಿ ಇಬ್ಬರ ಸ್ಥಿತಿ ಗಂಭೀರವಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ವೇಗವಾಗಿ ಬರುತ್ತಿದ್ದ ಬಸ್, ಜೆಸಿಬಿಗೆ ಡಿಕ್ಕಿ ಹೊಡೆದ ಪರಿಣಾಮ ಹೆದ್ದಾರಿಯ ಇನ್ನೊಂದು ಬದಿಗೆ ಪಲ್ಟಿ ಹೊಡೆದು ಕಂದಕಕ್ಕೆ ಬಿದ್ದಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಘಟನೆಗೆ ಸಂಬಂಧಿಸಿದಂತೆ ತನಿಖೆಗೆ ಆದೇಶಿಸಲಾಗಿದೆ.

ಮನೆಗೆಲಸ ಕಾರ್ಮಿಕರಿಗೆ ಪರಿಹಾರ ತಲುಪಿಸಲು ಹೈಕೋರ್ಟ್ ನಿರ್ದೇಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಲಾಕ್‌ಡೌನ್ ಸಂದರ್ಭದಲ್ಲಿ ಮನೆ ಕೆಲಸ ಮಾಡುವವರಿಗೂ ಒಂದು ಬಾರಿಯ ಪರಿಹಾರ ಯೋಜನೆಯ ಲಾಭ ದೊರಕುವಂತೆ ಸರ್ಕಾರ ನೋಡಿಕೊಳ್ಳಬೇಕು ಎಂದು ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ನಿರ್ದೇಶನ ನೀಡಿದೆ.

ವಿವಿಧ ವರ್ಗಗಳ ಕಾರ್ಮಿಕರಿಗೆ ಸರ್ಕಾರ ಪ್ಯಾಕೇಜ್ ಘೋಷಣೆ ಮಾಡಿದೆ. ಸೇವಾ ಸಿಂಧು ಪೋರ್ಟಲ್‌ನಲ್ಲಿ ನೊಂದಾಯಿಸಿಕೊಂಡವರಿಗೆ ₹2 ಸಾವಿರ ಪರಿಹಾರ ಮೊತ್ತ ಪಾವತಿಸಲಾಗುತ್ತದೆ. ಮನೆ ಕೆಲಸ ಮಾಡುವವರಿಗೆ ಡಿಜಿಟಲ್ ತಂತ್ರಜ್ಞಾನ ಬಳಕೆ ಜ್ಞಾನ ಇಲ್ಲದ ಕಾರಣ ಅವರು ಪೋರ್ಟಲ್‌ನಲ್ಲಿ ನೊಂದಾಯಿಸಿಕೊಳ್ಳಲು ಕಷ್ಟವಾಗಲಿದೆ ಎಂದು ಮನೆಗೆಲಸ ಕಾರ್ಮಿಕರ ಹಕ್ಕುಗಳ ಒಕ್ಕೂಟ ತಿಳಿಸಿದೆ.

ಒಕ್ಕೂಟ ಸಲ್ಲಿಸಿರುವ ಅರ್ಜಿ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠ, ಅರ್ಜಿದಾರರ ವಾದ ಸರಿಯಾಗಿದೆ. ಮನೆ ಕೆಲಸ ಮಾಡುವವರು ಸೇವಾ ಸಿಂಧು ಪೋರ್ಟಲ್‌ನಲ್ಲಿ ನೋಂದಣಿ ಮಾಡಿಸುವುದು ಕಷ್ಟವಾಗಲಿದೆ ಎಂದು ಅಭಿಪ್ರಾಯಪಟ್ಟಿತು. ಎಲ್ಲಾ ಅರ್ಹರಿಗೂ ಈ ಪರಿಹಾರದ ಲಾಭ ತಲುಪಿಸುವ ಕೆಲಸವನ್ನು ಸರ್ಕಾರ ಮಾಡಬೇಕು ಎಂದು ತಿಳಿಸಿದ ಪೀಠ, ವಿಚಾರಣೆಯನ್ನು ಜೂನ್ 14ಕ್ಕೆ ಮುಂದೂಡಿತು.

‘ವಿದೇಶದಲ್ಲಿ ಓದುವವರಿಗೆ 11ರವರೆಗೂ ಲಸಿಕೆ’

‘ವ್ಯಾಸಂಗ ಹಾಗೂ ಉದ್ಯೋಗದ ನಿಮಿತ್ತ ವಿದೇಶಗಳಿಗೆ ತೆರಳಲಿರುವ ರಾಜ್ಯದ ನಾಗರಿಕರಿಗಾಗಿ ಸೆಂಟ್ರಲ್ ಕಾಲೇಜು ಆವರಣದಲ್ಲಿ ಲಸಿಕಾ ಅಭಿಯಾನ ಹಮ್ಮಿಕೊಳ್ಳಲಾಗಿದ್ದು, ಇದನ್ನು ಇದೇ 11ರವರೆಗೂ ವಿಸ್ತರಿಸಲಾಗಿದೆ’ ಎಂದು ಕೋವಿಡ್ ಕಾರ್ಯಪಡೆಯ ಅಧ್ಯಕ್ಷರೂ ಆಗಿರುವ ಉಪಮುಖ್ಯಮಂತ್ರಿ ಡಾ.ಸಿ.ಎನ್.ಅಶ್ವತ್ಥನಾರಾಯಣ ತಿಳಿಸಿದರು.

‘ಕಳೆದ ಮಂಗಳವಾರದಿಂದ ಈವರೆಗೆ ಒಟ್ಟು 1,200 ಜನರಿಗೆ ಕೋವಿಶೀಲ್ಡ್ ಲಸಿಕೆ ನೀಡಲಾಗಿದೆ. ವಿದೇಶಕ್ಕೆ ಹೋಗುವವರಿದ್ದರೆ ಸೆಂಟ್ರಲ್ ಕಾಲೇಜು ಆವರಣಕ್ಕೆ ಬಂದು ಲಸಿಕೆ ಪಡೆದುಕೊಳ್ಳಬಹುದು. ಆದ್ಯತಾ ಗುಂಪಿನ ಕೋಟಾದಲ್ಲಿ ಇವರೆಲ್ಲರಿಗೂ ಲಸಿಕೆ ಕೊಡಲಾಗಿದೆ. ಇತರ ಜಿಲ್ಲೆಗಳಿಗೂ ಇದನ್ನು ವಿಸ್ತರಿಸಲಾಗುತ್ತದೆ’ ಎಂದರು.

‘ಎರಡನೇ ಡೋಸ್ ಅವಧಿಯನ್ನು 4 ರಿಂದ 6 ವಾರಗಳಿಗೆ ತಗ್ಗಿಸುವಂತೆ ರಾಜ್ಯ ಸರ್ಕಾರವು ಪತ್ರ ಬರೆದಿತ್ತು. ಇದಕ್ಕೆ ಕೇಂದ್ರ ಸರ್ಕಾರ ಒಪ್ಪಿಗೆ ಸೂಚಿಸಿದೆ’ ಎಂದೂ ತಿಳಿಸಿದರು.

ತರಕಾರಿ–ಹಣ್ಣುಗಳ ದರಗಳಲ್ಲಿ ಏರುಪೇರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇತ್ತೀಚೆಗೆ ಸುರಿದ ಪೂರ್ವ ಮುಂಗಾರು ಮಳೆಯ ಪರಿಣಾಮ ತರಕಾರಿ ಹಾಗೂ ಹಣ್ಣಿನ ದರಗಳು ತುಸು ಏರಿಕೆಯಾಗಿವೆ. ಕೆಲ ತರಕಾರಿಗಳು ದಿಢೀರ್ ದುಬಾರಿಯಾಗಿವೆ.

ವಾರದ ಹಿಂದೆ ಪ್ರತಿ ಕೆ.ಜಿ.ಗೆ ₹50ರಿಂದ ₹60ರವರೆಗಿದ್ದ ಬೀನ್ಸ್ ಬೆಲೆ ದಿಢೀರ್ ಏರಿಕೆ ಕಂಡಿದ್ದು ಸದ್ಯ ಕೆ.ಜಿ.ಗೆ ₹80ರಂತೆ ಮಾರಾಟವಾಗುತ್ತಿದೆ. ಬೆಳ್ಳುಳ್ಳಿ, ಬೆಂಡೆಕಾಯಿ, ಶುಂಠಿ, ಕ್ಯಾರೆಟ್ ದರಗಳೂ ಸ್ವಲ್ಪ ಏರಿಕೆಯಾಗಿವೆ.

ತರಕಾರಿಗಳ ಪೈಕಿ ಟೊಮೆಟೊ ದರ ಇನ್ನಷ್ಟು ಕುಸಿದಿದ್ದು, ಕೆ.ಜಿ.ಗೆ ಗರಿಷ್ಠ ₹10ರಂತೆ ಮಾರಾಟವಾಗುತ್ತಿದೆ. ಈರುಳ್ಳಿ, ಆಲೂಗಡ್ಡೆ, ಮೂಲಂಗಿ, ಬದನೆ, ಹೂಕೋಸು ಹಾಗೂ ಎಲೆಕೋಸು ಸೇರಿದಂತೆ ಇತರ ತರಕಾರಿ ದರಗಳು ಕಡಿಮೆ ಇವೆ.

‘ತರಕಾರಿಗಳಿಗೆ ಲಾಕ್‌ಡೌನ್‌ನಿಂದಾಗಿ ಸೂಕ್ತ ಮಾರುಕಟ್ಟೆ ವ್ಯವಸ್ಥೆ ಇಲ್ಲದಿರುವುದು ಹಾಗೂ ವಾರದಿಂದ ಸುರಿದ ಭಾರಿ ಮಳೆಯ ಕಾರಣದಿಂದ ತರಕಾರಿ ದರಗಳು ಹೆಚ್ಚಾಗಿವೆ. ಸಾಮಾನ್ಯವಾಗಿ ಬೀನ್ಸ್ ದರ ಈ ಅವಧಿಯಲ್ಲಿ ಏರಿಕೆ ಕಾಣುತ್ತಿತ್ತು. ಮಳೆಯಿಂದ ಹಾನಿಗೆ ತುತ್ತಾಗಿದ್ದರಿಂದ ಬೀನ್ಸ್ ದರ ದಿಢೀರ್ ಏರಿದೆ’ ಎಂದು ತರಕಾರಿ ವ್ಯಾಪಾರಿ ಕುಮಾರ್ ವಿವರಿಸಿದರು.

‘ಟೊಮೆಟೊ ದರ ಒಂದು ತಿಂಗಳಿನಿಂದ ನೆಲಕಚ್ಚಿದೆ. ಹೊರ ರಾಜ್ಯಗಳಿಗೆ ಮೊದಲಿನಂತೆ ಟೊಮೆಟೊ ಸರಬರಾಜು ಆಗುತ್ತಿಲ್ಲ. ಇಲ್ಲಿನ ಮಾರುಕಟ್ಟೆಗಳೂ ಮುಚ್ಚಿವೆ. ಟನ್‌ಗಟ್ಟಲೆ ಟೊಮೆಟೊಗೆ ಈಗಿರುವ ಬೆಲೆ ಅದರ ಖರ್ಚನ್ನೂ ಸರಿದೂಗುವುದಿಲ್ಲ. ಈಗಿನ ಪರಿಸ್ಥಿತಿಯಲ್ಲಿ ಟೊಮೊಟೊ ದರ ಏರುವ ಲಕ್ಷಣಗಳೇ ಇಲ್ಲ’ ಎಂದರು.

ಮಾವು ಖರೀದಿಗೆ ಆನ್‌ಲೈನ್ ಮೊರೆ: ‘ಮಾರುಕಟ್ಟೆ ಇದ್ದಾಗ ಎಲ್ಲ ರೀತಿಯ ಮಾವು ಒಂದೇ ಸೂರಿನಲ್ಲಿ ಮಾರಾಟವಾಗುತ್ತಿತ್ತು. ಲಾಕ್‌ಡೌನ್ ಕಾರಣ ಮಾರುಕಟ್ಟೆಗಳನ್ನು ಮುಚ್ಚಲಾಗಿದೆ. ತಳ್ಳುವ ಗಾಡಿಗಳಲ್ಲಿ ಮಾವು ಖರೀದಿಸುವವರು ವಿರಳ. ಮನೆಯಲ್ಲೇ ಇರುವುದರಿಂದ ಬಹು ತೇಕರು ಆನ್‌ಲೈನ್ ಮೂಲಕವೇ ಮಾವು ತರಿಸಿಕೊಳ್ಳುತ್ತಿದ್ದಾರೆ. ಹಾಗಾಗಿ, ವ್ಯಾಪಾರ ಸರಿಯಾಗಿ ನಡೆ ಯುತ್ತಿಲ್ಲ’ ಎನ್ನುತ್ತಾರೆ ಮಾವು ವ್ಯಾಪಾರಿ ಹನುಮೇಶ್.

ಈ ಹಿಂದೆ ಎಲ್ಲ ಸೊಪ್ಪಿನ ದರ ಪ್ರತಿ ಕಟ್ಟಿಗೆ ₹10ರ ಒಳಗಿತ್ತು. ಈಗ ಸೊಪ್ಪಿನ ದರಗಳು ಸ್ವಲ್ಪ ಏರಿಕೆಯಾಗಿವೆ.

ಕಲಾಸಿಪಾಳ್ಯ ಮಾರುಕಟ್ಟೆ (ಸಾಂದರ್ಭಿಕ ಚಿತ್ರ)

ದರ ಪಟ್ಟಿ (ಪ್ರತಿ ಕೆ.ಜಿ.ಗೆ ₹ಗಳಲ್ಲಿ)

ತರಕಾರಿ	ಚಿಲ್ಲರೆ ದರ	ಹಾಪ್‌ಕಾಮ್ಸ್ ದರ
ಬೀನ್ಸ್	80	82
ಬೆಳ್ಳುಳ್ಳಿ	80	155
ಬೆಂಡೆಕಾಯಿ	50	45
ಶುಂಠಿ	50	40
ಕ್ಯಾರೆಟ್	30	40
ಈರುಳ್ಳಿ	25	36
ಆಲೂಗಡ್ಡೆ	30	32
ಮೂಲಂಗಿ	20	36
ಬದನೆ	30	50
ಹೂಕೋಸು	20	35
ಎಲೆಕೋಸು	15	19
ಟೊಮೆಟೊ	10	11

ಹಣ್ಣುಗಳು	ಚಿಲ್ಲರೆ ದರ	ಹಾಪ್‌ಕಾಮ್ಸ್ ದರ
ಸೇಬು	160	180
ಮೂಸಂಬಿ	130	155
ಕಿತ್ತಳೆ	140	130
ದ್ರಾಕ್ಷಿ	100	144
ಮಾವು	80	68
ಸಪೋಟ	50	58
ಪಪ್ಪಾಯ	30	40
ಕಲ್ಲಂಗಡಿ	15	19

ಸೊಪ್ಪು	ಚಿಲ್ಲರೆ (ಕಟ್ಟಿಗೆ)	ಹಾಪ್‌ಕಾಮ್ಸ್ (ಕೆ.ಜಿ.ಗೆ)
ಸಬ್ಬಕ್ಕಿ	18	76
ಕೊತ್ತಂಬರಿ	15	60
ಮೆಂತ್ಯೆ	12	56
ದಂಟು	10	38
ಪಾಲಕ್	10	42

ಆನ್‌ಲೈನ್ ತರಗತಿ: ಶಾಲೆಗೆ ನೋಟಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶೈಕ್ಷಣಿಕ ವರ್ಷ ಆರಂಭಕ್ಕೂ ಮೊದಲೇ ನಂದಿನಿ ಲೇಔಟ್‌ನಲ್ಲಿರುವ ಪ್ರೆಸಿಡೆನ್ಸಿ ಶಾಲೆಯವರು ಶುಲ್ಕ ಪಾವತಿಸಲು ಒತ್ತಡ ಹಾಕುತ್ತಿದ್ದಾರೆ ಎಂದು ಆರೋಪಿಸಿ ಮಕ್ಕಳ ಪೋಷಕರು ಮಂಗಳವಾರ ಪ್ರತಿಭಟನೆ ನಡೆಸಿದರು. ಹೀಗಾಗಿ, ಕಾರಣ ಕೇಳಿ ಶಾಲೆಗೆ ಸಾರ್ವಜನಿಕ ಶಿಕ್ಷಣ ಇಲಾಖೆ ನೋಟಿಸ್ ನೀಡಿದೆ.

ಇಲಾಖೆಯ ಅನುಮತಿ ಇಲ್ಲದೇ ಆನ್‌ಲೈನ್ ತರಗತಿ ಆರಂಭಿಸಿ, ಹಿಂದಿನ ವರ್ಷದ ಶುಲ್ಕ ಪಾವತಿಸದ ಮಕ್ಕಳ ಆನ್‌ಲೈನ್ ತರಗತಿ ತಡೆಹಿಡಿದು ವಿದ್ಯಾರ್ಥಿಗಳಿಗೆ ತೊಂದರೆ, ತಾರತಮ್ಯ ಎಸಗುತ್ತಿರುವ ಕುರಿತು ನೋಟಿಸ್‌ನಲ್ಲಿ ಉಲ್ಲೇಖಿಸಲಾಗಿದೆ.

ಪ್ರವೇಶ ಪಟ್ಟಿಯ ಮಾಹಿತಿ ಹಾಗೂ ತರಗತಿವಾರು ಪಾವತಿಸಬೇಕಾದ ಶುಲ್ಕದ ವಿವರವನ್ನು ಶಾಲೆಯ ಸೂಚನಾ ಫಲಕದಲ್ಲಿ ಪ್ರಕಟಿಸಬೇಕು. ದಾಖಲಾತಿ ಪ್ರಕ್ರಿಯೆ ಇದೇ 15ಕ್ಕೆ ಆರಂಭಿಸಿ ಆಗಸ್ಟ್ 31ರ ಒಳಗೆ ಮುಕ್ತಾಯಗೊಳಿಸಲು ತಿಳಿಸಲಾಗಿದೆ. ಆದರೆ, ಮಗುವಿನ ಶೈಕ್ಷಣಿಕ ಮೂಲಭೂತ ಹಕ್ಕು ಕಸಿದುಕೊಂಡು ಮಗುವಿಗೆ ದೈಹಿಕ ಹಾಗೂ ಮಾನಸಿಕ ತೊಂದರೆ ನೀಡಲಾಗುತ್ತಿದೆ. ಹೀಗಾಗಿ, ಮಗುವಿನ ದಾಖಲಾತಿಗೆ ಅವಕಾಶ ಮಾಡಿಕೊಡಬೇಕು ಮತ್ತು ಆರ್‌ಟಿಇ ನಿಯಮಗಳಿಗೆ ವಿರುದ್ಧವಾಗಿ ತೊಂದರೆ ನೀಡುತ್ತಿರುವ ಶಿಕ್ಷಣ ಸಂಸ್ಥೆಯ ವಿರುದ್ಧ ಶಿಕ್ಷಣ ಹಕ್ಕು ಕಾಯ್ದೆಯನ್ವಯ ಕ್ರಮ ಕೈಗೊಳ್ಳುವಂತೆ ಸ್ಥಳೀಯ ಪೊಲೀಸ್ ಠಾಣೆಗೆ ಪೋಷಕರು ದೂರು ನೀಡಿದ್ದಾರೆ.

ಶುಲ್ಕ ವಸೂಲಾತಿಗೆ ಸಂಬಂಧಿಸಿದಂತೆ ಪ್ರಕರಣ ಬಾಕಿ ಇದೆ. ಹೀಗಿರುವಾಗ, ಇಲಾಖೆಯ ಸುತ್ತೋಲೆಗಳಿಗೆ ವಿರುದ್ಧವಾಗಿ ಆನ್‌ಲೈನ್ ತರಗತಿ ಆರಂಭಿಸಲಾಗಿದೆ. ದೂರು ನೀಡಿರುವ ಪೋಷಕರ ಮಕ್ಕಳ ಆನ್‌ಲೈನ್ ತರಗತಿ ಸ್ಥಗಿತಗೊಳಿಸಲಾಗಿದೆ. ಇದು ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣ ಹಕ್ಕು ಕಾಯ್ದೆಯ ಉಲ್ಲಂಘನೆ. ಅಲ್ಲದೆ, ರಾಷ್ಟ್ರೀಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ನೀತಿಗೆ ವಿರುದ್ಧವಾಗಿದೆ. ಹೀಗಾಗಿ ಮೂರು ದಿನದೊಳಗೆ ನೋಟಿಸ್‌ಗೆ ಉತ್ತರಿಸಬೇಕು. ಉತ್ತರಿಸದೇ ಇದ್ದರೆ ಶಿಸ್ತುಕ್ರಮಕ್ಕೆ ಮೇಲಾಧಿಕಾರಿಗಳಿಗೆ ವರದಿ ಸಲ್ಲಿಸಲಾಗುವುದು ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ವಿ.ರಮೇಶ್ ಎಚ್ಚರಿಕೆ ನೀಡಿದ್ದಾರೆ.

ಆಕ್ರೋಶ: ‘ಕಾರ್ಪೊರೇಟ್ ಖಾಸಗಿ ಶಾಲೆಗಳು ಮನಸೋ ಇಚ್ಛೆ ಶುಲ್ಕ ಹೆಚ್ಚಿಸಿ, ಬೋಧನಾ ಶುಲ್ಕದೊಂದಿಗೆ ವಿಲೀನ ಮಾಡುತ್ತಿವೆ. ಪೋಷಕರ ಕಷ್ಟಕ್ಕೆ ಸ್ಪಂದಿಸಬೇಕಾಗಿದ್ದ ಶಿಕ್ಷಣ ಸಚಿವರು ಮತ್ತು ಇಲಾಖೆಯ ಅಧಿಕಾರಿಗಳು ಕಣ್ಣು ಮುಚ್ಚಿ ಕುಳಿತಿರುವುದು ಖಂಡನೀಯ’ ಎಂದು ಕರ್ನಾಟಕ ಖಾಸಗಿ ಶಾಲಾ ಪೋಷಕರ ಸಂಘಟನೆಗಳ ಸಮಿತಿಯ ಬಿ.ಎನ್. ಯೋಗಾನಂದ ಆಕ್ರೋಶ ವ್ಯಕ್ತಪಡಿಸಿದರು.

ರೋಟರಿ ಜೊತೆ ಕೈಜೋಡಿಸಿದ ಕ್ಯೂನೆಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಾಂಕಾಂಗ್‌ನ ಇ–ವಾಣಿಜ್ಯ ಕಂಪನಿ ಕ್ಯೂನೆಟ್, ಬೆಂಗಳೂರಿನ ರೋಟರಿ ಡಿಸ್ಟ್ರಿಕ್ಟ್ 3190 ಜೊತೆ ಒಪ್ಪಂದ ಮಾಡಿಕೊಂಡಿದೆ.

ಈ ಒಪ್ಪಂದದ ಪ್ರಕಾರ ಕ್ಯೂನೆಟ್ ಕಂಪನಿಯು ರೋಟರಿ ಡಿಸ್ಟ್ರಿಕ್ಟ್ 3190ಗೆ ಒಟ್ಟು 500 ಆಮ್ಲಜನಕ ಸಾಂದ್ರಕಗಳನ್ನು ಒದಗಿಸಲಿದ್ದು ಇವುಗಳನ್ನು ರೋಟರಿ ಸಂಸ್ಥೆಯು ದೇಶದ ವಿವಿಧ ಭಾಗಗಳಿಗೆ ರವಾನಿಸಲಿದೆ.

ಸೋಮವಾರ ಆನ್‌ಲೈನ್ ಮೂಲಕ ನಡೆದ ಕಾರ್ಯಕ್ರಮದಲ್ಲಿ ಕ್ಯೂನೆಟ್‌ನ ಕಾರ್ಯನಿರ್ವಾಹಕ ಮುಖ್ಯಸ್ಥ ರಿಚರ್ಡ್ ಜೆಂಕಿವಿಜ್ ಹಾಗೂ ರೋಟರಿ ಇಂಟರ್ ನ್ಯಾಷನಲ್ ಅಧ್ಯಕ್ಷ ಶೇಖರ್ ಮೆಹ್ತಾ ಅವರ ಸಮ್ಮುಖದಲ್ಲಿ ಒಪ್ಪಂದಕ್ಕೆ ಸಹಿ ಹಾಕಲಾಯಿತು.

ಮೊದಲ ಹಂತದ ಆಮ್ಲಜನಕ ಸಾಂದ್ರಕಗಳು ಮುಂದಿನ 7 ರಿಂದ 10 ದಿನಗಳೊಳಗೆ ಭಾರತಕ್ಕೆ ತಲುಪುವ ನಿರೀಕ್ಷೆ ಇದೆ.

ರೋಟರಿ ಸಂಸ್ಥೆಯು ದೇಶದ ವಿವಿಧ ನಗರಗಳು, ಹಳ್ಳಿಗಳಲ್ಲಿ ತೀರಾ ಅಗತ್ಯವಿದ್ದವರಿಗೆ ಈ ಸಾಂದ್ರಕಗಳನ್ನು ಉಚಿತವಾಗಿ ನೀಡಲಿದೆ.

ಸಂಸ್ಥೆಗೆ ಆಭಾರಿ: ‘ಕೋವಿಡ್ ಸಾಂಕ್ರಾಮಿಕ ರೋಗದ ವಿರುದ್ಧದ ನಮ್ಮ ಹೋರಾಟಕ್ಕೆ ಕ್ಯೂನೆಟ್ ಸಂಸ್ಥೆ ಕೈಜೋಡಿಸಿರುವುದು ಸಂತಸ ನೀಡಿದೆ. ರೋಗಿಗಳ ಜೀವ ಉಳಿಸಲು ಅಗತ್ಯವಿರುವ ಆಮ್ಲಜನಕ ಸಾಂದ್ರಕಗಳನ್ನು ಒದಗಿಸಿದ್ದಕ್ಕೆ ಆ ಸಂಸ್ಥೆಗೆ ಆಭಾರಿಯಾಗಿದ್ದೇವೆ’ ಎಂದು ಡಿಸ್ಟ್ರಿಕ್ಟ್ ಗವರ್ನರ್ ಬಿ.ಎಲ್.ನಾಗೇಂದ್ರ ಪ್ರಸಾದ್ ತಿಳಿಸಿದ್ದಾರೆ.

ಮಲ್ಟಿಪ್ಲೆಕ್ಸ್ ಸಂಸ್ಥೆಯಿಂದ ಬೆಂಗಳೂರು ಕೇಂದ್ರ ಕಾರಾಗೃಹಕ್ಕೆ ಆಮ್ಲಜನಕ ಸಾಂದ್ರಕ ಒದಗಿಸಲಾಯಿತು

ಆಮ್ಲಜನಕ ಸಾಂದ್ರಕ ಕೊಡುಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಲ್ಟಿಪ್ಲೆಕ್ಸ್ ಸಮೂಹ ಸಂಸ್ಥೆಯು ಬೆಂಗಳೂರು ಕೇಂದ್ರ ಕಾರಾಗೃಹದ ಆರೋಗ್ಯ ಕೇಂದ್ರ ಹಾಗೂ ತುಮಕೂರು ಜಿಲ್ಲಾಡಳಿತಕ್ಕೆ ತಲಾ 5 ಆಮ್ಲಜನಕ ಸಾಂದ್ರಕಗಳನ್ನು ಕೊಡುಗೆಯಾಗಿ ನೀಡಿದೆ.

ಕಾರಾಗೃಹ ಇಲಾಖೆಯ ಮಹಾನಿರ್ದೇಶಕ ಅಲೋಕ್ ಮೋಹನ್ ಅವರ ಸೂಚನೆಯಂತೆ ಆರೋಗ್ಯ ಕೇಂದ್ರಕ್ಕೆ ಆಮ್ಲಜನಕ ಸಾಂದ್ರಕಗಳನ್ನು ಒದಗಿಸಲಾಗಿದೆ ಎಂದು ಸಂಸ್ಥೆಯು ತಿಳಿಸಿದೆ.

‘ಕೋವಿಡ್‌ನಿಂದ ಸೃಷ್ಟಿಯಾಗಿರುವ ಬಿಕ್ಕಟ್ಟಿನ ಸಮಯದಲ್ಲಿ ಜನರ ಜೀವ ರಕ್ಷಿಸಲು ಆಮ್ಲಜನಕ ಸಾಂದ್ರಕಗಳು ಸಹಕಾರಿ. ಮಲ್ಟಿಪ್ಲೆಕ್ಸ್ ಸಂಸ್ಥೆ ಇವುಗಳನ್ನು ಒದಗಿಸಿರುವುದು ಸಂತಸದ ವಿಷಯ. ಈ ಸಂಸ್ಥೆಯ ಕಾರ್ಯ ಇತರರಿಗೂ ಮಾದರಿಯಾಗಲಿ’ ಎಂದು ಕೇಂದ್ರ ಕಾರಾಗೃಹದ ಮುಖ್ಯ ಅಧೀಕ್ಷಕ ಪಿ.ರಂಗನಾಥ್ ಹೇಳಿದರು.

ಕಾರಾಗೃಹ ಆರೋಗ್ಯ ಕೇಂದ್ರದ ಮುಖ್ಯ ಆರೋಗ್ಯಾಧಿಕಾರಿ ಡಾ.ಉಮಾ, ಅಧೀಕ್ಷಕರಾದ ಲತಾ, ವೈದ್ಯಾಧಿಕಾರಿ ಡಾ.ಸಂತೋಷ್, ಡಾ.ಪ್ರಮೀಳಾ, ಸಹಾಯಕ ಅಧೀಕ್ಷಕ ಪರಮೇಶ್, ಮಹದೇವನಾಯಕ್ ಹಾಗೂ ಶ್ರೀಶೈಲ ಮೇಟಿ ಇದ್ದರು.

ನಗರದಲ್ಲಿ ಇಂದು

ಚಾಮರಾಜಪೇಟೆ ಸರ್ವಧರ್ಮ ಸಮ್ಮಿಲನ: ಎಲ್ಲ ಧರ್ಮಗುರುಗಳಿಂದ ಪ್ರಾರ್ಥನೆ ಹಾಗೂ ದಿನಸಿ ಕಿಟ್ ವಿತರಣೆ– ಶಾಸಕ ಬಿ.ಜೆಡ್.ಜಮೀರ್ ಅಹಮದ್ ಖಾನ್, ಸ್ಥಳ–ಶಾಸಕರ ಕಚೇರಿ ಮುಂಭಾಗ, ಚಾಮರಾಜಪೇಟೆ, ಬೆಳಿಗ್ಗೆ 11

ವಿಚಾರ ಕಲರವ: ‘ವರ್ತಮಾನ ಕೃಷಿ ಕಾನೂನುಗಳು’ ಉಪನ್ಯಾಸ–ಹಿರಿಯ ವಕೀಲ ಶ್ರೀಧರ್ ಪ್ರಭು, ಉಪಸ್ಥಿತಿ– ಕುಲಪತಿ ಕೆ.ಆರ್.ವೇಣುಗೋಪಾಲ್, ಆಯೋಜನೆ–ಬೆಂಗಳೂರು ವಿಶ್ವ ವಿದ್ಯಾಲಯದ ಎನ್‌ಎಸ್‌ಎಸ್ ಘಟಕ, ಸಂಜೆ 5.30 (ಆನ್‌ಲೈನ್ ಕಾರ್ಯಕ್ರಮ)

9 ವಿಡಿಯೊ ಪುರಾವೆ; ಅಂತಿಮ ಹಂತದಲ್ಲಿ ಪೂರ್ವ ವಿಭಾಗ ಪೊಲೀಸರ ತನಿಖೆ • ದೋಷಾರೋಪ ಪಟ್ಟಿ ಸಲ್ಲಿಕೆ ಶೀಘ್ರ

ಪತಿಯಿಂದಲೇ ಅತ್ಯಾಚಾರ ಮಾಡಿಸಿ ಚಿತ್ರೀಕರಣ!

• ಸಂತೋಷ ಜಿಗಳಿಕೊಪ್ಪ

ಬೆಂಗಳೂರು: ಬಾಂಗ್ಲಾದೇಶದ 23 ವರ್ಷದ ಯುವತಿ ಮೇಲೆ ಮೃಗೀಯವಾಗಿ ವರ್ತಿಸಿ ಸಾಮೂಹಿಕ ಅತ್ಯಾಚಾರ ಎಸಗಿದ್ದ ಪ್ರಕರಣದಲ್ಲಿ ಪೂರ್ವ ವಿಭಾಗದ ಪೊಲೀಸರು ನಡೆಸುತ್ತಿರುವ ತನಿಖೆ ಅಂತಿಮ ಹಂತದಲ್ಲಿದ್ದು, ನ್ಯಾಯಾಲಯಕ್ಕೆ ಶೀಘ್ರವೇ ದೋಷಾರೋಪ ಪಟ್ಟಿ ಸಲ್ಲಿಸುವ ಸಾಧ್ಯತೆ ಇದೆ.

ಪ್ರಕರಣದ ತನಿಖೆಯಲ್ಲಿ ಸಾಕಷ್ಟು ಪುರಾವೆಗಳನ್ನು ಸಂಗ್ರಹಿಸಿರುವ ಪೊಲೀಸರು, ಕೃತ್ಯದ ಕಾರಣ ಹಾಗೂ ಆರೋಪಿಗಳು ಕೃತ್ಯ ಎಸಗಿದ ಪರಿಯನ್ನು ಕಂಡು ಬೆಚ್ಚಿ ಬಿದ್ದಿದ್ದಾರೆ. ಮಹಿಳೆಯರು ಸೇರಿದಂತೆ 10 ಆರೋಪಿಗಳು, ಯುವತಿಯೊಬ್ಬಳ ಮೇಲೆ ಯಾವ ರೀತಿ ಮೃಗೀಯವಾಗಿ ವರ್ತಿಸಿ ಗುಪ್ತಾಂಗಕ್ಕೆ ಹಾನಿ ಮಾಡಿ ಸಾಮೂಹಿಕ ಅತ್ಯಾಚಾರ ಎಸಗಿದ್ದರೆಂಬ ಅಂಶ ದೋಷಾರೋಪ ಪಟ್ಟಿಯಲ್ಲಿದೆ.

ಸಂತ್ರಸ್ತೆ ಅನುಭವಿಸಿದ ಯಾತನೆ ಹಾಗೂ ಆಕೆ ಮೇಲಾದ ದೌರ್ಜನ್ಯದ ಸಂಗತಿ ಕೇಳಿ ಕೆಲ ಪೊಲೀಸ್ ಅಧಿಕಾರಿಗಳೇ ಮರುಕಪಟ್ಟಿದ್ದಾರೆ. ಇಡೀ ರಾಜ್ಯದಲ್ಲೇ ಇಷ್ಟು ಕ್ರೂರವಾಗಿ ಸಾಮೂಹಿಕ ಅತ್ಯಾಚಾರ ಎಸಗಿದ ಪ್ರಕರಣಗಳನ್ನು ನೋಡಿರಲಿಲ್ಲವೆಂದು ಅಧಿಕಾರಿಯೊಬ್ಬರು ಹೇಳಿದರು.

ಬಂಧಿತ ಆರೋಪಿಗಳು

> **ಪ್ರಕರಣದ ತನಿಖೆಯಲ್ಲಿ ವಿಭಾಗದ ಇಡೀ ತಂಡ ಕೆಲಸ ಮಾಡುತ್ತಿದೆ. ದೋಷಾರೋಪ ಪಟ್ಟಿ ಸಲ್ಲಿಸಲು ಬೇಕಾದ ದಾಖಲೆಗಳನ್ನು ಸಂಗ್ರಹಿಸುತ್ತಿದೆ**
> **ಎಸ್.ಡಿ.ಶರಣಪ್ಪ,**
> ಪೂರ್ವ ವಿಭಾಗದ ಡಿಸಿಪಿ

ಮೂವರು ಮಹಿಳಾ ಆರೋಪಿಗಳ ಸಮ್ಮುಖದಲ್ಲೇ ಏಳು ಪುರುಷ ಆರೋಪಿಗಳು, ಸಂತ್ರಸ್ತೆ ಮೇಲೆ ಸಾಮೂಹಿಕ ಅತ್ಯಾಚಾರ ಎಸಗಿರುವುದಕ್ಕೆ ಪುರಾವೆಗಳು ಸಿಕ್ಕಿವೆ. ಸಂತ್ರಸ್ತೆಯ ಗುಪ್ತಾಂಗದೊಳಗೆ ಮದ್ಯದ ಬಾಟಲಿ ಹಾಗೂ ಕಾಲ್ಬೆರಳು ತುರುಕಿ ಸಾಮೂಹಿಕ ಅತ್ಯಾಚಾರ ಎಸಗಿದ್ದ ಆರೋಪಿಗಳು, ಎಲ್ಲ ದೃಶ್ಯಗಳನ್ನೂ ಮೊಬೈಲ್ ಕ್ಯಾಮೆರಾದಲ್ಲಿ ಸೆರೆ ಹಿಡಿದಿದ್ದಾರೆ.

ಸಂತ್ರಸ್ತೆ ಹಾಗೂ ಆರೋಪಿಗಳು ಪರಿಚಯಸ್ಥರು. ಹಣದ ವ್ಯವಹಾರ ಸಂಬಂಧ ಅವರ ನಡುವೆ ವೈಷಮ್ಯ ಬೆಳೆದಿತ್ತು. ಅದೇ ವಿಚಾರವಾಗಿ ಮಾತನಾಡಬೇಕೆಂದು ಚೆನ್ನೈನಿಂದ ಸಂತ್ರಸ್ತೆಯನ್ನು ರಾಮಮೂರ್ತಿನಗರ ಠಾಣೆ ವ್ಯಾಪ್ತಿಯ ಕೆ. ಚನ್ನಸಂದ್ರದ ಮನೆಗೆ ಕರೆಸಿದ್ದ ಆರೋಪಿಗಳು, ಮದ್ಯದ ಪಾರ್ಟಿ ಮಾಡಿದ್ದರು. ಅದಾದ ನಂತರ ಜಗಳ ತೆಗೆದು ಕೃತ್ಯ ಎಸಗಿದ್ದರು. ಕೃತ್ಯದ ಎಲ್ಲ ದೃಶ್ಯಗಳಿರುವ 9 ವಿಡಿಯೊಗಳು ಲಭ್ಯವಾಗಿವೆ. ಅವುಗಳು ಸೇರಿದಂತೆ ಘಟನಾ ಸ್ಥಳದಲ್ಲಿ ಸಿಕ್ಕ ಬಟ್ಟೆ, ರಕ್ತದ ಕಲೆಗಳು, ಮದ್ಯದ ಬಾಟಲಿಗಳು ಹಾಗೂ ಇತರೆ ವಸ್ತುಗಳನ್ನು ಪರೀಕ್ಷೆಗಾಗಿ ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ. ಅದರ ವರದಿಗಾಗಿ ಪೊಲೀಸರು ಕಾಯುತ್ತಿದ್ದಾರೆ.

‘ಆರೋಪಿಗಳಾದ ಸಾಗರ್, ಮೊಹಮ್ಮದ್ ಬಾಬಾ ಶೇಕ್, ರಿದಾಯ್ ಬಾಬು, ಹಕೀಲ್, ಶೂಬೂಜ್, ರಫ್ಸಾನ್, ತಾನಿಯಾ ಸೇರಿದಂತೆ 10 ಮಂದಿಯನ್ನು ಬಂಧಿಸಲಾಗಿದೆ. ಇದರಲ್ಲಿ 9 ಮಂದಿ ಬಾಂಗ್ಲಾ ಪ್ರಜೆಗಳು. ಒಬ್ಬ ಮಾತ್ರ ಹೈದರಾಬಾದ್ ನಿವಾಸಿ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

ಅತ್ಯಾಚಾರಕ್ಕೆ ಪತ್ನಿಯಿಂದಲೇ ಪ್ರಚೋದನೆ: ‘ರಫ್ಸಾನ್ ಹಾಗೂ ತಾನಿಯಾ ಮದುವೆಯಾಗಿದ್ದರು. ಸಂತ್ರಸ್ತೆ ಮೇಲೆ ಅತ್ಯಾಚಾರ ಎಸಗಲು ಪತ್ನಿ ತಾನಿಯಾಳೇ ತನ್ನ ಪತಿಗೆ ಪ್ರಚೋದನೆ ನೀಡಿದ್ದಳು. ಸಂತ್ರಸ್ತೆ ಮೇಲೆ ತನ್ನ ಪತಿ ಅತ್ಯಾಚಾರ ಎಸಗುವ ವೇಳೆಯಲ್ಲಿ ತಾನೇ ವಿಡಿಯೊ ಚಿತ್ರೀಕರಣ ಮಾಡಿದ್ದಳು. ಆ ವಿಡಿಯೊ ಸಹ ಲಭ್ಯವಾಗಿದೆ’ ಎಂದೂ ಅಧಿಕಾರಿ ತಿಳಿಸಿದರು.

‘ಎರಡು ಕೊಠಡಿ ಮನೆಯಲ್ಲಿ ಕೃತ್ಯ ನಡೆದಿದೆ. ಒಂದು ಕೊಠಡಿಯಲ್ಲಿ ಕುಳಿತಿದ್ದ ಆರೋಪಿಗಳು, ಅಲ್ಲಿಯೇ ಸಂತ್ರಸ್ತೆ ಜೊತೆ ಮೃಗೀಯವಾಗಿ ವರ್ತಿಸಿ ಸಾಮೂಹಿಕ ಅತ್ಯಾಚಾರ ಎಸಗಿದ್ದರು. ಅದಾದ ನಂತರ, ಆರೋಪಿ ತಾನಿಯಾ ಸಂತ್ರಸ್ತೆಯನ್ನು ಮತ್ತೊಂದು ಕೊಠಡಿಗೆ ಎಳೆದೊಯ್ದಿದ್ದಳು. ಅಲ್ಲಿ ಆಕೆಯ ಪತಿಯು ಸಂತ್ರಸ್ತೆ ಮೇಲೆ ಅತ್ಯಾಚಾರ ಎಸಗಿದ್ದ’ ಎಂದು ಅಧಿಕಾರಿ ಹೇಳಿದರು.

ನಾಲ್ವರು ಎಸಿಪಿ, 8 ಇನ್‌ಸ್ಪೆಕ್ಟರ್ ಕೆಲಸ

ಬೆಂಗಳೂರಿನಲ್ಲಿ ನಡೆದ ಅತ್ಯಾಚಾರದ ಬಗ್ಗೆ ಸ್ಥಳೀಯ ಪೊಲೀಸರಿಗೆ ಯಾವುದೇ ಮಾಹಿತಿಯೂ ಇರಲಿಲ್ಲ. ಅತ್ಯಾಚಾರದ ವಿಡಿಯೊಗಳು ಈಶಾನ್ಯ ರಾಜ್ಯಗಳು ಹಾಗೂ ಬಾಂಗ್ಲಾದೇಶದಲ್ಲಿ ಹರಿದಾಡಿದ್ದವು. ವಿಚಾರಣೆ ಆರಂಭಿಸಿದ್ದ ಅಸ್ಸಾಂ ಪೊಲೀಸರು, ಯುವತಿ ಕುಟುಂಬಸ್ಥರನ್ನು ಪತ್ತೆ ಮಾಡಿದ್ದರು. ಯುವತಿ ಹಾಗೂ ಆಕೆಯ ಸ್ನೇಹಿತರು ಬೆಂಗಳೂರಿನಲ್ಲಿರುವ ಸಂಗತಿ ಗೊತ್ತಾಗಿತ್ತು.

ವಿಡಿಯೊ ಹಾಗೂ ಮೊಬೈಲ್ ನಂಬರ್ ಸಹಿತವಾಗಿ ಅಸ್ಸಾಂ ಪೊಲೀಸರು, ನಗರ ಪೊಲೀಸ್ ಕಮಿಷನರ್ ಕಮಲ್ ಪಂತ್ ಅವರಿಗೆ ಮಾಹಿತಿ ಕಳುಹಿಸಿದ್ದರು. ತ್ವರಿತವಾಗಿ ಸ್ಪಂದಿಸಿದ ಕಮಲ್ ಪಂತ್, ವಿಶೇಷ ತಂಡಗಳನ್ನು ರಚಿಸಿದ್ದರು. ತನಿಖಾ ತಂಡವು ಒಂದೇ ದಿನದಲ್ಲೇ ಆರೋಪಿಗಳನ್ನು ಸೆರೆ ಹಿಡಿಯುವಲ್ಲಿ ಯಶಸ್ವಿಯಾಗಿದೆ.

ಕೃತ್ಯದ ಬಗ್ಗೆ ರಾಮಮೂರ್ತಿನಗರ ಠಾಣೆಯಲ್ಲಿ ಪ್ರಕರಣ ದಾಖಲಾಯಿತು. ನಾಲ್ವರು ಎಸಿಪಿಗಳು ಹಾಗೂ 8 ಇನ್‌ಸ್ಪೆಕ್ಟರ್ ನೇತೃತ್ವದ ತಂಡಗಳು, ಹಗಲಿರುಳು ಶ್ರಮಿಸಿ ತನಿಖೆ ಮಾಡಿ ದೋಷಾರೋಪ ಪಟ್ಟಿ ಸಿದ್ಧಪಡಿಸುತ್ತಿವೆ.

ಸುದ್ದಿ 2 ನಿಮಿಷ

ಪೊಲೀಸರ ಜೊತೆ ಕುಡುಕನ ರಂಪಾಟ

ಬೆಂಗಳೂರು: ನಗರದ ಕಾರ್ಪೊರೇಷನ್ ವೃತ್ತದಲ್ಲಿ ಬೈಕ್ ತಡೆದು ನಿಲ್ಲಿಸಿದರೆಂಬ ಕಾರಣಕ್ಕೆ ಪೊಲೀಸರ ಜೊತೆ ಕುಡುಕನೊಬ್ಬ ಮಂಗಳವಾರ ರಂಪಾಟ ಮಾಡಿದ್ದಾನೆ.

‘ಪಾನಮತ್ತನಾಗಿ ಬೈಕ್ ಚಲಾಯಿಸಿಕೊಂಡು ಹೊರಟಿದ್ದ ಸವಾರರನ್ನು ತಡೆದು ತಪಾಸಣೆ ನಡೆಸಲಾಯಿತು. ಮದ್ಯದ ಅಮಲಿನಲ್ಲಿ ಆತ ಮಾತನಾಡಿ ಕರ್ತವ್ಯಕ್ಕೆ ಅಡ್ಡಿಪಡಿಸಿದ. ಆತನನ್ನು ವಶಕ್ಕೆ ಪಡೆದು ಠಾಣೆಗೆ ಕರೆದೊಯ್ಯಲಾಯಿತು’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಬೈಕ್ ತಡೆದಿದ್ದಕ್ಕೆ ಎಎಸ್‌ಐ ಅವರ ಜೊತೆ ಜಗಳ ತೆಗೆದ ಕುಡುಕ, ‘ಎಷ್ಟು ದಂಡವಿದೆ ಹೇಳು ಕಟ್ಟುತ್ತೇನೆ’ ಎಂದಿದ್ದ. ನಿಲ್ಲಲು ಆಗದಷ್ಟು ಮದ್ಯ ಕುಡಿದಿದ್ದ ಆತನಿಗೆ ಬುದ್ಧಿವಾದ ಹೇಳಿದ್ದ ಎಎಸ್‌ಐ, ರಸ್ತೆ ಪಕ್ಕದಲ್ಲಿ ಕುಳಿತುಕೊಳ್ಳುವಂತೆ ತಿಳಿಸಿದ್ದರು. ಅದಕ್ಕೆ ಒಪ್ಪದ ಆತ, ರಸ್ತೆಯಲ್ಲೆಲ್ಲ ಓಡಾಡಿದ್ದ. ಮಾಸ್ಕ್ ಸಹ ಹಾಕಿರಲಿಲ್ಲ’

‘ಪಿಎಸ್‌ಐ ಸ್ಥಳಕ್ಕೆ ಬರುತ್ತಿದ್ದಂತೆ ಕುಡುಕ, ದಂಡ ಕಟ್ಟುವುದಾಗಿ ಹೇಳಿದ್ದ. ‘ಬೇಕಾದರೆ ನನಗೆ ಹೊಡೆಯಿರಿ’ ಎಂದು ಕೂಗಾಡಿದ್ದ. ಕುಡುಕನ ಸಹವಾಸ ಬೇಡವೆಂದು ಪೊಲೀಸರು ದೂರ ಹೋಗಿ ನಿಲ್ಲುತ್ತಿದ್ದರು. ಈ ಎಲ್ಲ ದೃಶ್ಯವು ಮೊಬೈಲ್ ಕ್ಯಾಮೆರಾದಲ್ಲಿ ಸೆರೆಯಾಗಿದೆ’ ಎಂದೂ ಮೂಲಗಳು ತಿಳಿಸಿವೆ.

ವಾರಸುದಾರರಿಗೆ ₹1 ಕೋಟಿ ಮೌಲ್ಯದ ಸ್ವತ್ತು ವಿತರಣೆ

ನೆಲಮಂಗಲ: ನೆಲಮಂಗಲ ಉಪವಿಭಾಗದ ಠಾಣೆಗಳ ಸರಹದ್ದಿನಲ್ಲಿ ನಡೆದಿದ್ದ ಅಪರಾಧ ಪ್ರಕರಣಗಳಲ್ಲಿ ಪೊಲೀಸರು ವಶಪಡಿಸಿಕೊಂಡಿದ್ದ ಮಾಲುಗಳನ್ನು ಕೇಂದ್ರ ವಲಯದ ಐಜಿಪಿ ಎಂ.ಚಂದ್ರಶೇಖರ್ ಅವರು ವಾರಸುದಾರರಿಗೆ ಮಂಗಳವಾರ ಹಿಂತಿರುಗಿಸಿದರು.

ನೆಲಮಂಗಲ ವೃತ್ತ, ಮಾದನಾಯಕನಹಳ್ಳಿ, ಗ್ರಾಮಾಂತರ, ದಾಬಸ್‌ಪೇಟೆ, ತ್ಯಾಮಗೊಂಡ್ಲು ಪೊಲೀಸ್ ಠಾಣಾ ವ್ಯಾಪ್ತಿಗಳ ಅಪರಾಧ ಪ್ರಕರಣಗಳಲ್ಲಿ ಆರೋಪಿಗಳನ್ನು ಪತ್ತೆ ಮಾಡಿದ್ದರು.

ಡಕಾಯಿತಿ, ಸುಲಿಗೆ, ಮನೆ ಕಳವು, ಸಾಮಾನ್ಯ ಕಳವು ಪ್ರಕರಣಗಳಿಂದ ಒಟ್ಟು ₹1,08,48,500 ಮೌಲ್ಯದ ಚಿನ್ನ, ಬೆಳ್ಳಿ, ನಗದು, ವಾಹನಗಳು, ಟವರ್ ಬ್ಯಾಟರಿ, ತಂತಿಗಳನ್ನು ವಶಪಡಿಸಿಕೊಂಡಿದ್ದರು.

ಆರೋಪಿಗಳ ಪತ್ತೆಯಲ್ಲಿ ಪ್ರಮುಖ ಪಾತ್ರ ವಹಿಸಿದ್ದ 14 ಪೊಲೀಸರಿಗೆ ಪ್ರಶಂಸನಾ ಪತ್ರ ವಿತರಿಸಲಾಯಿತು.

ಬಳಿಕ ಮಾತನಾಡಿದ ಎಂ.ಚಂದ್ರಶೇಖರ್,‘ಹೂವು ಮಾರುವ ನೆಪದಲ್ಲಿ ಮನೆಗಳನ್ನು ವೀಕ್ಷಿಸುತ್ತಿದ್ದ ಹೆಂಡತಿ, ಬೀಗ ಹಾಕಿದ ಮನೆಗಳ ಮಾಹಿತಿಯನ್ನು ಗಂಡನಿಗೆ ನೀಡುತ್ತಿದ್ದಳು’ ಎಂದು ಪ್ರಕರಣವೊಂದನ್ನು ಬಿಚ್ಚಿಟ್ಟರು.

ಸಿ.ಡಿ ಬ್ಲ್ಯಾಕ್‌ಮೇಲ್: ಆರೋಪಿಗಳಿಗೆ ಜಾಮೀನು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಿ.ಡಿ ಸೃಷ್ಟಿಸಿ ಬಿಜೆಪಿ ಶಾಸಕ ರಮೇಶ್ ಜಾರಕಿಹೊಳಿ ಅವರನ್ನು ಬ್ಲ್ಯಾಕ್‌ಮೇಲ್ ಮಾಡಿದ್ದ ಪ್ರಕರಣದಲ್ಲಿ ಆರೋಪಿಗಳಾದ ನರೇಶ್ ಗೌಡ ಹಾಗೂ ಶ್ರವಣ್ ಎಂಬುವರಿಗೆ ನಗರದ ನ್ಯಾಯಾಲಯ ನಿರೀಕ್ಷಣಾ ಜಾಮೀನು ನೀಡಿದೆ.

‘ಕೆಲಸದ ಆಮಿಷವೊಡ್ಡಿದ್ದ ರಮೇಶ ಜಾರಕಿಹೊಳಿ ನನ್ನ ಮೇಲೆ ಅತ್ಯಾಚಾರ ಎಸಗಿದ್ದಾರೆ’ ಎಂದು ಆರೋಪಿಸಿ ಯುವತಿಯೊಬ್ಬರು ಕಬ್ಬನ್‌ಪಾರ್ಕ್ ಠಾಣೆಗೆ ದೂರು ನೀಡಿದ್ದರು. ಅದರ ಬೆನ್ನಲ್ಲೇ ಸದಾಶಿವನಗರ ಠಾಣೆಗೆ ದೂರು ನೀಡಿದ್ದ ರಮೇಶ ಜಾರಕಿಹೊಳಿ, ‘ಸಿ.ಡಿ ಸೃಷ್ಟಿಸಿರುವ ಕೆಲವರು ಹಣಕ್ಕೆ ಬ್ಲ್ಯಾಕ್‌ಮೇಲ್ ಮಾಡಿದ್ದಾರೆ. ರಾಜಕೀಯವಾಗಿ ಮುಗಿಸುವ ಷಡ್ಯಂತ್ರವಿದು’ ಎಂದು ಆರೋಪಿಸಿದ್ದರು.

ಎರಡೂ ಪ್ರಕರಣಗಳ ತನಿಖೆಯನ್ನು ವಿಶೇಷ ತನಿಖಾ ತಂಡ (ಎಸ್‌ಐಟಿ) ನಡೆಸುತ್ತಿದೆ. ಅತ್ಯಾಚಾರ ಪ್ರಕರಣದಲ್ಲಿ ಸಂತ್ರಸ್ತೆ ಹಾಗೂ ಆರೋಪಿ ರಮೇಶ ಅವರ ವೈದ್ಯಕೀಯ ಪರೀಕ್ಷೆ ನಡೆಸಿ ಹೇಳಿಕೆಯನ್ನೂ ಪಡೆದಿದೆ. ಸದಾಶಿನಗರ ಠಾಣೆ ಪ್ರಕರಣದಲ್ಲಿ ಸುದ್ದಿವಾಹಿನಿಗಳಲ್ಲಿ ಕೆಲಸ ಮಾಡಿದ್ದ ನರೇಶ್ ಗೌಡ ಹಾಗೂ ಶ್ರವಣ್ ಪಾತ್ರವಿರುವ ಮಾಹಿತಿ ಎಸ್‌ಐಟಿಗೆ ಸಿಕ್ಕಿದೆ. ಆದರೆ, ಅವರಿಬ್ಬರು ತಲೆಮರೆಸಿಕೊಂಡಿದ್ದಾರೆ.

ಬಂಧನ ಭೀತಿಯಲ್ಲಿರುವ ನರೇಶ್ ಹಾಗೂ ಶ್ರವಣ್, ನಿರೀಕ್ಷಣಾ ಜಾಮೀನು ಕೋರಿ ವಕೀಲರ ಮೂಲಕ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದರು. ವಿಚಾರಣೆ ನಡೆಸಿದ ಸ್ಥಳೀಯ ನ್ಯಾಯಾಲಯ, ಜಾಮೀನು ಮಂಜೂರು ಮಾಡಿದೆ.

ಎಸ್‌ಐಟಿ ರದ್ದು ಕೋರಿ ಸಂತ್ರಸ್ತೆ ಅರ್ಜಿ

ಬೆಂಗಳೂರು: ಶಾಸಕ ರಮೇಶ ಜಾರಕಿಹೊಳಿ ಸಿಡಿ ಪ್ರಕರಣದ ತನಿಖೆಗೆ ವಿಶೇಷ ತನಿಖಾ ತಂಡ (ಎಸ್‌ಐಟಿ) ರಚನೆ ಮಾಡಿರುವ ಪೊಲೀಸ್ ಆಯುಕ್ತರ ಆದೇಶ ರದ್ದುಪಡಿಸುವಂತೆ ಕೋರಿ ಸಂತ್ರಸ್ತೆ ಹೈಕೋರ್ಟ್‌ಗೆ ತಕಾರರು ಅರ್ಜಿ ಸಲ್ಲಿಸಿದ್ದಾರೆ.

ಈವರೆಗಿನ ಎಸ್‌ಐಟಿ ತನಿಖೆ ಪರಿಗಣಿಸಬಾರದು. ತನಿಖೆಗೆ ಹೊಸ ತಂಡ ರಚಿಸಲು ಆದೇಶಿಸಬೇಕು ಎಂದು ಅವರು ಕೋರಿದ್ದಾರೆ. ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಸ್. ವಿಶ್ವಜಿತ್ ಶೆಟ್ಟಿ ಅವರಿದ್ದ ಪೀಠ, ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ, ಗೃಹ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ, ಬೆಂಗಳೂರು ನಗರ ಪೊಲೀಸ್ ಕಮಿಷನರ್, ಮತ್ತು ಎಸ್‌ಐಟಿಗೆ ನೋಟಿಸ್ ಜಾರಿ ಮಾಡಲು ಆದೇಶಿಸಿದೆ.

‘ವೈದ್ಯಕೀಯ ಪರೀಕ್ಷೆ ಸಂದರ್ಭದಲ್ಲಿ ಆರೋಪಿಯ ರಕ್ತ ಮಾದರಿ, ಕೂದಲು, ವೀರ್ಯ, ಗಂಟಲು ದ್ರವ ಮತ್ತು ಉಗುರು ಪಡೆದು ಡಿಎನ್‌ಎ ಪರೀಕ್ಷೆ ನಡೆಸಬೇಕು. ಆದರೆ, ರಮೇಶ ಜಾರಕಿಹೊಳಿ ಅವರಿಗೆ ನಡೆಸಿದ ವೈದ್ಯಕೀಯ ಪರೀಕ್ಷೆ ಸಂದರ್ಭದಲ್ಲಿ ರಕ್ತದೊತ್ತಡ ಮತ್ತು ಮಧುಮೇಹ ಪರೀಕ್ಷೆ ನಡೆಸಲಾಗಿದೆ’ ಎಂದು ಅವರು ಅರ್ಜಿಯಲ್ಲಿ ದೂರಿದ್ದಾರೆ.

‘ಆರೋಪಿಗೆ ಗೃಹ ಸಚಿವರ ನಿಕಟ ಸಂಪರ್ಕ ಇದೆ. ಎಸ್‌ಐಟಿ ಮುಖ್ಯಸ್ಥರು ರಜೆಯಲ್ಲಿದ್ದಾರೆ. ಹೀಗಾಗಿ, ಪಾರದರ್ಶಕ ತನಿಖೆ ಸಾಧ್ಯವಿಲ್ಲ. ಹೊಸದಾಗಿ ರಚಿಸುವ ತನಿಖಾ ತಂಡ ಹೈಕೋರ್ಟ್ ಮೇಲ್ವಿಚಾರಣೆಯಲ್ಲಿ ತನಿಖೆ ನಡೆಸಬೇಕು’ ಎಂದು ಅವರು ಕೋರಿದ್ದಾರೆ.

ಆರೋಗ್ಯ ಕಾರ್ಯಕರ್ತರ ಕುಟುಂಬದ ಸದಸ್ಯರಿಗೆ ಆದ್ಯತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆರೋಗ್ಯ ಕಾರ್ಯಕರ್ತರ ಕುಟುಂಬದ ಸದಸ್ಯರನ್ನು ದುರ್ಬಲ ಗುಂಪಿನಡಿ ಗುರುತಿಸಿ, ಲಸಿಕೆ ಒದಗಿಸಲು ಕ್ರಮಕೈಗೊಳ್ಳಬೇಕು ಎಂದು ರಾಷ್ಟ್ರೀಯ ಆರೋಗ್ಯ ಅಭಿಯಾನದ ನಿರ್ದೇಶಕಿ ಅರುಂಧತಿ ಚಂದ್ರಶೇಖರ್ ಸೂಚಿಸಿದ್ದಾರೆ.

ಈ ಬಗ್ಗೆ ಬಿಬಿಎಂಪಿ ಮುಖ್ಯ ಆಯುಕ್ತರು ಹಾಗೂ ಜಿಲ್ಲಾಧಿಕಾರಿಗಳಿಗೆ ಅವರು ನಿರ್ದೇಶನ ನೀಡಿದ್ದಾರೆ. ‘ಆರೋಗ್ಯ ಕೇಂದ್ರಗಳಲ್ಲಿ ಕಾರ್ಯನಿರ್ವಹಿಸುವವರು ಹಾಗೂ ಆರೋಗ್ಯ ಸೇವೆ ಒದಗಿಸುವವರನ್ನು ಮುಂಚೂಣಿ ಆರೋಗ್ಯ ಕಾರ್ಯಕರ್ತರು ಎಂದು ಗುರುತಿಸಲಾಗಿದೆ. ಅವರಿಗೆ ಕಳೆದ ಜ.16ರಿಂದಲೇ ಲಸಿಕೆಯನ್ನು ಒದಗಿಸಲಾಗುತ್ತಿದೆ. ಲಸಿಕೆಯನ್ನು ಈವರೆಗೂ ಪಡೆಯದವರು ಆದಷ್ಟು ಬೇಗ ಲಸಿಕೆ ಹಾಕಿಸಿಕೊಳ್ಳಬೇಕು. ಮೂರನೇ ಹಂತದಲ್ಲಿ ಅವರ ಕುಟುಂಬದ ಸದಸ್ಯರನ್ನು ದುರ್ಬಲ ಗುಂಪಿಗೆ ಸೇರ್ಪಡೆ ಮಾಡಲಾಗಿದೆ’ ಎಂದು ತಿಳಿಸಿದ್ದಾರೆ.

‘ಆರೋಗ್ಯ ಕಾರ್ಯಕರ್ತರ ಕುಟುಂಬದವರೆಂದರೇ ಒಂದೇ ಸೂರಿನಡಿ ವಾಸಿಸುವ ಪತಿ/ಪತ್ನಿ, ಅತ್ತೆ, ಮಾವ, ತಂದೆ, ತಾಯಿ ಮತ್ತು 18ರಿಂದ 44 ವರ್ಷದವರೆಗಿನ ಮಕ್ಕಳು. ಇವರಿಗೆ ಲಸಿಕೆ ನೀಡಲು ಆದ್ಯತೆ ನೀಡಲಾಗುವುದು. ಆರೋಗ್ಯ ಕಾರ್ಯಕರ್ತರು ತಮ್ಮ ಕುಟುಂಬದವರು ಎಂದು ಪರಿಗಣಿಸಲು ನೀಡುವ ದಾಖಲಾತಿಯನ್ನು ಅವರು ಕಾರ್ಯನಿರ್ವಹಿಸುವ ಸಂಸ್ಥೆಯ ಮುಖ್ಯಸ್ಥರು ಪರಿಶೀಲಿಸಿ, ಪ್ರಮಾಣೀಕರಿಸಬೇಕು’ ಎಂದು ವಿವರಿಸಿದ್ದಾರೆ.

ಚಿತ್ರಾವಳಿ

ಕೆ.ಆರ್‌ಪುರ ಕ್ಷೇತ್ರದ ನಲ್ಲೂರಹಳ್ಳಿಯಲ್ಲಿ ಆಟೊ ಚಾಲಕರು ಮತ್ತು ಆಶಾ ಕಾರ್ಯಕರ್ತೆಯರಿಗೆ ಟಿ.ಕೆ.ಆರ್ ಫೌಂಡೇಷನ್ ಸಂಸ್ಥಾಪಕ ಕಿರಣ್‌ಕುಮಾರ್ ರೆಡ್ಡಿಯವರು ದಿನಸಿ ಕಿಟ್ ಮತ್ತು ಸಸಿಗಳನ್ನು ವಿತರಿಸಿದರು. ಫೌಂಡೇಷನ್ ಸದಸ್ಯರಾದ ಮುರಳಿ ಸ್ವಾಮಿ, ಆಟೊ ನಾಗರಾಜ್ ಹಾಜರಿದ್ದರು.

ಕೋವಿಡ್ ತಡೆಗಟ್ಟಲು ಸರ್ಕಾರದ ಜೊತೆ ಕೈಜೋಡಿಸಿರುವ ಭಾರತೀಯ ಚರ್ಮ, ಲೈಂಗಿಕ ಮತ್ತು ಕುಷ್ಠರೋಗ ತಜ್ಞರ ಸಂಘದ ರಾಜ್ಯ ಘಟಕವು ₹1 ಕೋಟಿ ಮೌಲ್ಯದ ವೈದ್ಯಕೀಯ ಪರಿಕರಗಳನ್ನು ವಿತರಿಸಿದೆ. ರಾಜ್ಯದ ಎಲ್ಲಾ ಪ್ರಾಥಮಿಕ ಆರೋಗ್ಯ ಕೇಂದ್ರಗಳು, ಬೆಂಗಳೂರಿನ ವಿಕ್ಟೋರಿಯಾ ಮತ್ತು ಬೌರಿಂಗ್ ಆಸ್ಪತ್ರೆಗಳಿಗೆ ಪರಿಕರ ವಿತರಿಸುವ ಕಾರ್ಯಕ್ರಮಕ್ಕೆ ಕಂದಾಯ ಸಚಿವ ಆರ್‌ಅಶೋಕ ಸೋಮವಾರ ಚಾಲನೆ ನೀಡಿದರು.

ಮಲ್ಟಿಪ್ಲೆಕ್ಸ್ ಸಮೂಹ ಸಂಸ್ಥೆಯ ವತಿಯಿಂದ ಬೆಂಗಳೂರು ಕೇಂದ್ರ ಕಾರಾಗೃಹದ ಆರೋಗ್ಯ ಕೇಂದ್ರ ಮತ್ತು ತುಮಕೂರು ಜಿಲ್ಲಾ ಕೇಂದ್ರಕ್ಕೆ ತಲಾ ಐದು ಆಮ್ಲಜನಕ ಸಾಂದ್ರಕಗಳನ್ನು ನೀಡಲಾಯಿತು. ಕಾರಾಗೃಹದ ಮುಖ್ಯ ಅಧೀಕ್ಷಕ ಡಾ.ಪಿ. ರಂಗನಾಥ್, ಅಧೀಕ್ಷಕರಾದ ಲತಾ ಮತ್ತಿತರರು ಇದ್ದರು

ಮಾಗಡಿ ರಸ್ತೆಯ ಬಾಪೂಜಿ ಪದವಿಪೂರ್ವ ಕಾಲೇಜು ಆವರಣದಲ್ಲಿ ಮಾಜಿ ಸಚಿವ ಕೃಷ್ಣಯ್ಯ ಶೆಟ್ಟಿ ಹಾಗೂ ಆನಂದ್ ಗುರೂಜಿ ಅವರು 500 ತೃತೀಯ ಲಿಂಗಿಗಳಿಗೆ ದಿನಸಿ ಕಿಟ್‌ಗಳನ್ನು ವಿತರಿಸಿದರು. ಪಿ.ಎಸ್‌ಪ್ರಕಾಶ್ ಹಾಗೂ ಇತರರು ಇದ್ದರು.

ಬ್ರಾಹ್ಮಣರಿಗೆ ಅವಮಾನ; ಕಮಿಷನರ್‌ಗೆ ದೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬ್ರಾಹ್ಮಣ ಸಮುದಾಯದ ಬಗ್ಗೆ ಸಾಮಾಜಿಕ ಜಾಲತಾಣಗಳಲ್ಲಿ ಅವಹೇಳನಕಾರಿಯಾಗಿ ಮಾತನಾಡಿರುವ ನಟ ಚೇತನ್ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು’ ಎಂದು ಆಗ್ರಹಿಸಿ ರಾಜ್ಯ ಬ್ರಾಹ್ಮಣ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಎಚ್.ಎಸ್. ಸಚ್ಚಿದಾನಂದ ಮೂರ್ತಿ ಅವರು ನಗರ ಪೊಲೀಸ್ ಕಮಿಷನರ್ ಕಮಲ್ ಪಂತ್ ಅವರಿಗೆ ಸೋಮವಾರ ದೂರು ನೀಡಿದ್ದಾರೆ.

ಇದರ ಬೆನ್ನಲ್ಲೇ, ಮಂಗಳವಾರ ಕಮಿಷನರ್‌ಗೆ ಇ-ಮೇಲ್ ಮೂಲಕ ದೂರು ಕಳುಹಿಸಿರುವ ವಿಜಯನಗರದ ಕಾವ್ಯಾ ಅಚ್ಯುತ್, ‘ಸರ್ಕಾರಿ ಸಂಸ್ಥೆಯ ಹೆಸರು ಹಾಗೂ ಮುದ್ರೆಯನ್ನು ಸಚ್ಚಿದಾನಂದಮೂರ್ತಿ ದುರ್ಬಳಕೆ ಮಾಡಿಕೊಂಡಿದ್ದಾರೆ’ ಎಂದು ಆರೋಪಿಸಿದ್ದಾರೆ.

ಎರಡೂ ದೂರುಗಳನ್ನು ಸ್ವೀಕರಿಸಿರುವ ಕಮಿಷನರ್, ಕ್ರಮದ ಭರವಸೆ ನೀಡಿದ್ದಾರೆ.

ಸಂಸ್ಥೆಗಳ ಮನವಿ ಆಧರಿಸಿ ದೂರು: ‘ಚೇತನ್ ಅವರ ಹೇಳಿಕೆ ಬ್ರಾಹ್ಮಣ ಸಮುದಾಯದವರಿಗೆ ಬೇಸರ ಉಂಟು ಮಾಡಿದೆ. ಈ ಬಗ್ಗೆ ಕ್ರಮ ಕೈಗೊಳ್ಳುವಂತೆ ರಾಜ್ಯದ ವಿವಿಧ ಬ್ರಾಹ್ಮಣ ಸಂಘ ಸಂಸ್ಥೆಗಳು ನನಗೆ ಮನವಿ ಮಾಡಿದ್ದವು. ಹೀಗಾಗಿ, ಚೇತನ್ ವಿರುದ್ಧ ಕ್ರಮ ಕೈಗೊಳ್ಳುವಂತೆ ಮನವಿ ಮಾಡುತ್ತೇನೆ’ ಎಂದು ಸಚ್ಚಿದಾನಂದ ಮೂರ್ತಿ ದೂರಿನಲ್ಲಿ ತಿಳಿಸಿದ್ದಾರೆ.

ಅಶಾಂತಿ ಸೃಷ್ಟಿಗೆ ಯತ್ನ: ‘ಬಡ ಹಾಗೂ ಆರ್ಥಿಕವಾಗಿ ಹಿಂದುಳಿದ ಬ್ರಾಹ್ಮಣ ಸಮುದಾಯದವರ ಅಭಿವೃದ್ಧಿಗೆ ಮಂಡಳಿ ಯಾವುದೇ ಕೆಲಸ ಮಾಡುತ್ತಿಲ್ಲ. ನಟ ಚೇತನ್ ವಿರುದ್ಧ ದೂರು ನೀಡುವ ಮೂಲಕ ಬ್ರಾಹ್ಮಣ ಸಮುದಾಯದವರನ್ನು ಎತ್ತಿ ಕಟ್ಟಿ ಅಶಾಂತಿ ಸೃಷ್ಟಿಸಲು ಸಚ್ಚಿದಾನಂದಮೂರ್ತಿ ಯತ್ನಿಸಿದ್ದಾರೆ’ ಎಂದು ಕಾವ್ಯಾ ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ನಟ ಚೇತನ್ ವಿರುದ್ಧ ಕ್ರಮಕ್ಕೆ ಆಗ್ರಹ

ಬೆಂಗಳೂರು: ‘ಸಾಮಾಜಿಕ ಜಾಲತಾಣದಲ್ಲಿ ಬ್ರಾಹ್ಮಣ ಸಮಾಜದ ಕುರಿತು ಅವಹೇಳನಕಾರಿಯಾಗಿ ಮಾತನಾಡಿರುವ ನಟ ಚೇತನ್ ಅವರು ಬಹಿರಂಗವಾಗಿ ಕ್ಷಮೆಯಾಚಿಸಬೇಕು. ಸಮಾಜದ ಸ್ವಾಸ್ಥ್ಯ ಕದಡುವವರ ವಿರುದ್ಧ ಸರ್ಕಾರವು ಸೂಕ್ತ ಕ್ರಮಕೈಗೊಳ್ಳಬೇಕು’ ಎಂದು ಅಖಿಲ ಹವ್ಯಕ ಮಹಾಸಭಾ ಆಗ್ರಹಿಸಿದೆ.

‘ಚೇತನ್ ಅವರು ಬ್ರಾಹ್ಮಣ ಸಮಾಜವನ್ನು ಭಯೋತ್ಪಾದಕರ ಜೊತೆ ಹೋಲಿಕೆ ಮಾಡಿ ಮಾತನಾಡಿದ್ದಾರೆ. ಇದು ನಾಡಿನಲ್ಲಿ ಅಶಾಂತಿಗೆ ಕಾರಣವಾಗಬಹುದಾಗಿದ್ದು, ಅವರ ಹೇಳಿಕೆಗಳು ಖಂಡನೀಯ. ಪ್ರಚಾರಕ್ಕೋಸ್ಕರ ಸಮಾಜದಲ್ಲಿ ಜಾತಿಗಳ ನಡುವೆ ವಿಷಬೀಜ ಬಿತ್ತುವ ಹಾಗೂ ಸಮಾಜದ ಶಾಂತಿಯನ್ನು ಕದಡುವ ಹೇಳಿಕೆಗಳು ಶಿಕ್ಷಾರ್ಹ’ ಎಂದು ಮಹಾಸಭೆಯ ಪ್ರಧಾನ ಕಾರ್ಯದರ್ಶಿ ವೇಣುವಿಘ್ನೇಶ್ ಸಂಪ ತಿಳಿಸಿದ್ದಾರೆ.

₹ 90 ಲಕ್ಷ ಕಳವು; ಆಂಧ್ರದಲ್ಲಿ ಸಿಕ್ಕಿಬಿದ್ದ ಬಾಂಗ್ಲಾ ಪ್ರಜೆಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಾಗಲಗುಂಟೆ ಠಾಣೆ ವ್ಯಾಪ್ತಿಯ ಮನೆಯೊಂದರಲ್ಲಿ ₹ 90 ಲಕ್ಷ ಕದ್ದುಕೊಂಡು ಪಶ್ಚಿಮ ಬಂಗಾಳಕ್ಕೆ ಕಾರಿನಲ್ಲಿ ಪರಾರಿಯಾಗುತ್ತಿದ್ದ ಬಾಂಗ್ಲಾ ಪ್ರಜೆಗಳಿಬ್ಬರು ಆಂಧ್ರಪ್ರದೇಶ ಪೊಲೀಸರ ಕೈಗೆ ಸಿಕ್ಕಿಬಿದ್ದಿದ್ದಾರೆ.

‘ಬಾಂಗ್ಲಾದೇಶದ ಸಂಜು ಸಹಾ ಹಾಗೂ ಶುಭಂಕರ್ ಬಂಧಿತರು. ಇವರನ್ನು ಆಂಧ್ರಪ್ರದೇಶದ ಚಿತ್ತೂರು ಪೊಲೀಸರು ಇತ್ತೀಚೆಗೆ ಬಂಧಿಸಿದ್ದರು. ಬಾಗಲಗುಂಟೆ ಠಾಣೆ ವ್ಯಾಪ್ತಿಯ ಮನೆಯಲ್ಲಿ ಕಳ್ಳತನ ಎಸಗಿದ್ದ ಪ್ರಕರಣದಲ್ಲಿ ಅವರನ್ನು ಕಸ್ಟಡಿಗೆ ಪಡೆದು ಮಹಜರು ಮಾಡಲಾಗಿದೆ’ ಎಂದು ಉತ್ತರ ವಿಭಾಗದ ಡಿಸಿಪಿ ಧರ್ಮೇಂದ್ರಕುಮಾರ್ ಮೀನಾ ‘ಪ್ರಜಾವಾಣಿ’ಗೆ ತಿಳಿಸಿದರು.

ಚಿಂದಿ ಆಯುವ ಕೆಲಸ: ‘ಪಶ್ಚಿಮ ಬಂಗಾಳದ ಮೂಲಕ ದೇಶದೊಳಗೆ ಅಕ್ರಮವಾಗಿ ನುಸುಳಿದ್ದ ಆರೋಪಿಗಳು, ಬೆಂಗಳೂರಿಗೆ ಬಂದು ಚಿಂದಿ ಆಯುವ ಕೆಲಸ ಆರಂಭಿಸಿದ್ದರು. ಚಿಂದಿ ಆಯುತ್ತ ನಗರದಲ್ಲಿ ಸುತ್ತಾಡುತ್ತಿದ್ದ ಆರೋಪಿಗಳು, ಮನೆಗಳನ್ನು ಗುರುತಿಸುತ್ತಿದ್ದರು’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಬಾಗಲಗುಂಟೆ ಠಾಣೆ ವ್ಯಾಪ್ತಿಯ ನಿವಾಸಿಯೊಬ್ಬರ ಮನೆಯಲ್ಲಿ ₹ 90 ಲಕ್ಷ ಕದ್ದಿದ್ದ ಆರೋಪಿಗಳು, ಹಣದ ಸಮೇತ ಬಾಂಗ್ಲಾದೇಶಕ್ಕೆ ವಾಪಸು ಹೋಗಲು ಮುಂದಾಗಿದ್ದರು.’

’ಕಾರು ಬಾಡಿಗೆ ಮಾಡಿಕೊಂಡು ಆರೋಪಿಗಳು ಪಶ್ಚಿಮ ಬಂಗಾಳಕ್ಕೆ ಹೊರಟಿದ್ದರು. ಆಂಧ್ರಪ್ರದೇಶ ಚಿತ್ತೂರು ಬಳಿ ಚೆಕ್‌ಪೋಸ್ಟ್‌ನಲ್ಲಿ ಕಾರು ತಡೆದಿದ್ದ ಪೊಲೀಸರು, ಪರಿಶೀಲನೆ ನಡೆಸಿದ್ದರು. ಆರೋಪಿಗಳ ಬಳಿ ₹ 90 ಲಕ್ಷ ಪತ್ತೆಯಾಗಿತ್ತು. ಅದಕ್ಕೆ ಯಾವುದೇ ದಾಖಲೆ ನೀಡಿರಲಿಲ್ಲ’ ಎಂದೂ ಮೂಲಗಳು ತಿಳಿಸಿವೆ.

‘ಕಾರು ಜಪ್ತಿ ಮಾಡಿ ಪ್ರಕರಣ ದಾಖಲಿಸಿಕೊಂಡಿದ್ದ ಪೊಲೀಸರು, ಆರೋಪಿಗಳನ್ನು ಬಂಧಿಸಿದ್ದರು. ಬೆಂಗಳೂರಿನಲ್ಲಿ ಹಣ ಕದ್ದು ಪರಾರಿಯಾಗುತ್ತಿದ್ದ ಸಂಗತಿ ಬಾಯ್ಬಿಟ್ಟಿದ್ದರು. ಅದೇ ಮಾಹಿತಿ ಆಧರಿಸಿ ಆಂಧ್ರ ಪೊಲೀಸರು, ನಗರದ ಪೊಲೀಸರಿಗೆ ಮಾಹಿತಿ ನೀಡಿದ್ದರು. ಬಾಗಲಗುಂಟೆ ಪೊಲೀಸರು, ಆರೋಪಿಗಳನ್ನು ಬಾಡಿ ವಾರೆಂಟ್ ಮೇಲೆ ಕಸ್ಟಡಿಗೆ ಪಡೆದು ನಗರಕ್ಕೆ ಕರೆತಂದಿದ್ದರು. ಪ್ರಕರಣದ ಮಹಜರು ಮುಗಿಸಿ ಆರೋಪಿಗಳನ್ನು ಪುನಃ ಆಂಧ್ರ ಪೊಲೀಸರ ಸುಪರ್ದಿಗೆ ನೀಡಲಾಗಿದೆ’ ಎಂದೂ ಮೂಲಗಳು ಹೇಳಿವೆ.

‘ರೌಡಿ’ ಆಗಬೇಕೆಂದು ದರೋಡೆಗೆ ಸಂಚು; ಇಬ್ಬರ ಬಂಧನ

ಬೆಂಗಳೂರು: ತಾವು ‘ರೌಡಿ’ ಆಗಬೇಕು. ತಮ್ಮನ್ನು ನೋಡಿ ಎಲ್ಲರೂ ಭಯಪಡಬೇಕು ಎಂದುಕೊಂಡು ದರೋಡೆ ಮಾಡಲು ಸಂಚು ರೂಪಿಸಿದ್ದ ಇಬ್ಬರು ಆರೋಪಿಗಳನ್ನು ಮಾರತ್ತಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಭೋಗನಹಳ್ಳಿ ನಿವಾಸಿ ಕೀರ್ತಿ (23) ಹಾಗೂ ಮಂಜುನಾಥ್ (23) ಬಂಧಿತರು. ಅವರಿಂದ 9 ಲಾಂಗ್, ಡ್ರ್ಯಾಗರ್ ಹಾಗೂ ಎರಡು ಬೈಕ್ ಜಪ್ತಿ ಮಾಡಲಾಗಿದೆ. ಮೂವರು ಸಹಚರರು ತಲೆಮರೆಸಿಕೊಂಡಿದ್ದಾರೆ’ ಎಂದು ಪೊಲೀಸರು ಹೇಳಿದರು.

‘ಬೆಳ್ಳಂದೂರು ರೈಲ್ವೆ ನಿಲ್ದಾಣ ಬಳಿ ನಿರ್ಜನ ಪ್ರದೇಶದಲ್ಲಿ ನಿಂತಿದ್ದ ಆರೋಪಿಗಳು, ದಾರಿಯಲ್ಲಿ ಬರುವ ಸಾರ್ವಜನಿಕರಿಗಾಗಿ ಕಾಯುತ್ತಿದ್ದರು. ಅವರಿಗೆ ಮಾರಕಾಸ್ತ್ರ ತೋರಿಸಿ ದರೋಡೆ ಮಾಡುವ ಉದ್ದೇಶ ಅವರದ್ದಾಗಿತ್ತು. ಈ ಬಗ್ಗೆ ಮಾಹಿತಿ ಬರುತ್ತಿದ್ದಂತೆ ಕಾರ್ಯಾಚರಣೆ ನಡೆಸಿ ಆರೋಪಿಗಳನ್ನು ಬಂಧಿಸಲಾಯಿತು’ ಎಂದೂ ತಿಳಿಸಿದರು.

ಅಪರಾಧ ಸುದ್ದಿ

ಜಂಟಿ ಪೊಲೀಸ್ ಕಮಿಷನರ್ ರವಿಕಾಂತೇಗೌಡ ಎಚ್ಚರಿಕೆ

ಜನರನ್ನು ಬೆಪ್ಪು ಮಾಡುತ್ತಿರುವ ‘ಸಿಂಗಂ’, ‘ಸಿಂಹಿಣಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ’ಐಎಎಸ್, ಐಪಿಎಸ್ ಹಾಗೂ ಇತರೆ ಉನ್ನತ ಹುದ್ದೆಯಲ್ಲಿರುವ ಕೆಲ ಅಧಿಕಾರಿಗಳು, ‘ಸಿಂಗಂ’ ಹಾಗೂ ‘ಸಿಂಹಿಣಿ’ ಎಂಬ ಬಿರುದು ಪಡೆದುಕೊಂಡು ಸಾಮಾಜಿಕ ಜಾಲತಾಣಗಳಲ್ಲಿ ವೈಯಕ್ತಿಕ ವರ್ಚಸ್ಸು ಬೆಳೆಸಿಕೊಳ್ಳುತ್ತಿದ್ದಾರೆ. ಜನರನ್ನು ಬೆಪ್ಪು ಮಾಡುತ್ತಿರುವ ಇಂಥ ಬೆಳವಣಿಗೆ ಬಗ್ಗೆ ಸಾರ್ವಜನಿಕರು ಎಚ್ಚರಿಕೆಯಿಂದ ಇರಬೇಕು‘ ಎಂದು ಜಂಟಿ ಪೊಲೀಸ್ ಕಮಿಷನರ್ (ಸಂಚಾರ) ಬಿ.ಆರ್. ರವಿಕಾಂತೇಗೌಡ ಕಿವಿಮಾತು ಹೇಳಿದ್ದಾರೆ.



ರವಿಕಾಂತೇಗೌಡ

ಅಧಿಕಾರಿಗಳ ವಲಯದಲ್ಲಿ ಇತ್ತೀಚಿನ ದಿನಗಳಲ್ಲಿ ನಡೆಯುತ್ತಿರುವ ಬೆಳವಣಿಗೆ ಬಗ್ಗೆ ಸಾಮಾಜಿಕ ಜಾಲತಾಣಗಳಲ್ಲಿ ಅಭಿಪ್ರಾಯ ಹಂಚಿಕೊಂಡಿರುವ ಅವರು, ‘ಕಪ್ಪು-ಬಿಳುಪು ಚಿತ್ರಗಳ ಮೂಲಕ ಜನರನ್ನು ಬೆಪ್ಪು ಮಾಡುವ ಅಪಾಯಕಾರಿ ಅಧಿಕಾರಿಗಳಿಗೆ ಲಿಂಗ ಬೇಧವಿಲ್ಲ. ಈ ವಿಷಯದಲ್ಲಿ ನಾವೆಲ್ಲರೂ ಎಚ್ಚರದಿಂದ ಇರುವುದು ಒಳಿತು’ ಎಂದಿದ್ದಾರೆ.

‘ಅಧಿಕಾರಿಶಾಹಿ, ಬ್ರಿಟಿಷಶಾಹಿ ಮನೋಭಾವದಿಂದ ಆಚೆ ಬಾರದೆ ವಿಜೃಂಭಿಸುತ್ತಿರುವುದು ಹಾಗೂ ಸಾರ್ವಜನಿಕ ಹಣವನ್ನು ದುಂದು ಮಾಡಿದರೂ ಕೆಲವರು ಭೇಷ್ ಎನಿಸಿಕೊಳ್ಳುತ್ತಿರುವ ಈ ಹೊತ್ತಿನಲ್ಲಿ ಒಬ್ಬ ಅಧಿಕಾರಿಯಾಗಿ ನಿಮ್ಮೊಂದಿಗೆ ಈ ಮಾತು ಹಂಚಿಕೊಳ್ಳುತ್ತಿದ್ದೇನೆ. ಕಳೆದ ದಶಕದಲ್ಲಿ ತಂತ್ರಜ್ಞಾನದಲ್ಲಾದ ಒಂದು ಬೆಳವಣಿಗೆಯನ್ನು ನಾವೆಲ್ಲ ಗಮನಿಸಬೇಕು. ತಂತ್ರಜ್ಞಾನದ ಅರಿವುಳ್ಳವರು ಅಧಿಕಾರಶಾಹಿಯಲ್ಲಿ ಹೆಚ್ಚಾಗುತ್ತಿದ್ದಂತೆ, ಸಾಮಾಜಿಕ ಜಾಲತಾಣ ಮೂಲಕ ವೈಯಕ್ತಿಕ ವರ್ಚಸ್ಸು ಬೆಳೆಸಿಕೊಳ್ಳಲು ಮಾರ್ಗ ಕಂಡುಕೊಂಡರು. ತಾವಷ್ಟೇ ಪ್ರಾಮಾಣಿಕರು ಎಂಬುದಾಗಿಯೂ, ತಾವು ಸಿಂಗಂ, ಸಿಂಹಿಣಿಯರೆಂದೂ ಬಿಂಬಿಸಿಕೊಳ್ಳಲು ಪ್ರಾರಂಭಿಸಿದರು.’

‘ಕೆಲವರು ತಮ್ಮದೇ ಅಭಿಮಾನಿಗಳ ಫೇಸ್‌ಬುಕ್ ಪುಟಗಳನ್ನು ಆರಂಭಿಸಿದರು. ತಾವು ಮಾಡಬೇಕಾದ ಕೆಲಸಗಳನ್ನು ತಮ್ಮ ಹೊಣೆಗಾರಿಕೆಯೆಂದು ಭಾವಿಸದೆ, ತಮ್ಮ ವಿಶಿಷ್ಟತೆಯೆಂದು ಪ್ರಚಾರಕ್ಕಿಳಿದರು. ಆಡಳಿತದ ಹೊರವಲಯದಲ್ಲಿರುವ ಮುಗ್ಧ ಜನರಲ್ಲಿ ತಾವು ಅವರ ಉದ್ಧಾರಕ್ಕೆ ಬಂದ ಅವತಾರ ಪುರುಷರೆಂದು ನಂಬಿಸತೊಡಗಿದರು. ಇವರಿಂದ ಸ್ಫೂರ್ತಿ ಪಡೆದಂತಹ ಸಿನಿಮಾಗಳು ಬಂದು ಹೀರೋಗಳಾಗಿ ವಿಜೃಂಭಿಸಿದರು. ಅಸಲಿಗೆ ಇಂಥ ಅಧಿಕಾರಿಗಳ ಅವತಾರಗಳನ್ನು ಅವರ ಒಳ-ಹೊರಗು ಬಲ್ಲವರು ಕಂಡು ಹೇಸುತ್ತಾರೆ’ ಎಂದೂ ರವಿಕಾಂತೇಗೌಡ ಹೇಳಿದ್ದಾರೆ.

‘ಉದಾಹರಣೆಗೆ ಈಶಾನ್ಯ ರಾಜ್ಯದಿಂದ ಬಂದಿದ್ದ ಒಬ್ಬ ಐಪಿಎಸ್ ಅಧಿಕಾರಿಯ ಬಗ್ಗೆ ಹಬ್ಬಿದ್ದ ರೋಚಕ ಕತೆಗಳು ಹಾಗೂ ಸಾಹಸಗಳು ನಿಜವೆಂದು ನಾನು ನಂಬಿದ್ದೆ, ನಾನು ಇಲಾಖೆಗೆ ಬಂದು ಅವರ ಅವತಾರಗಳನ್ನು ಕಂಡು ಗಾಬರಿಯಾದೆ. ಪ್ರಾಮಾಣಿಕರು, ದಕ್ಷರು ಸದ್ದಿಲ್ಲದೆ ಕೆಲಸ ಮಾಡುವುದನ್ನೂ ಕಂಡೆ.’

ಮಳೆ ವೇಳೆ ಡಾಂಬರೀಕರಣ ಮುಖ್ಯ ಆಯುಕ್ತರಿಗೆ ದೂರು

ಬೆಂಗಳೂರು: ಯಲಹಂಕ ವಲಯದ ಸೋಮೇಶ್ವರನಗರದಲ್ಲಿ ಡಾಂಬರೀಕರಣ ಕಾಮಗಾರಿ ಕಳಪೆ ಗುಣಮಟ್ಟದಿಂದ ಕೂಡಿರುವ ಬಗ್ಗೆ ಹಾಗೂ ಮಳೆಯ ನಡುವೆಯೇ ಡಾಂಬರೀಕರಣ ನಡೆಸಿರುವ ಬಗ್ಗೆ ಸ್ಥಳೀಯ ನಿವಾಸಿ ಡಾ.ಆನಂದ ಕುಮಾರ್ ಅವರು ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ಅವರಿಗೆ ಲಿಖಿತ ದೂರು ನೀಡಿದ್ದಾರೆ.

ಕಳಪೆ ಕಾಮಗಾರಿಗೆ ಕಾರಣರಾಗಿರುವ ಗುತ್ತಿಗೆದಾರರ ವಿರುದ್ಧ ಹಾಗೂ ಬಿಬಿಎಂಪಿಯ ಎಂಜಿನಿಯರ್‌ಗಳ ವಿರುದ್ಧ ಶಿಸ್ತುಕ್ರಮ ಕೈಗೊಳ್ಳುವಂತೆ ಅವರು ಒತ್ತಾಯಿಸಿದ್ದಾರೆ.

‘ಜೂನ್ 3ರಂದು ಮಧ್ಯಾಹ್ನ 3.45ರ ವೇಳೆ ಸೋಮೇಶ್ವರ ನಗರದ ಮೂರನೇ ಮುಖ್ಯರಸ್ತೆಯ ಎರಡನೇ ಅಡ್ಡರಸ್ತೆಗೆ ಮಳೆಯ ನಡುವೆಯೇ ಡಾಂಬರೀಕರಣ ನಡೆಸಲಾಗಿದೆ. ಈ ವಿಚಾರ ತಿಳಿದರೂ ಬಿಬಿಎಂಪಿ ಎಂಜಿನಿಯರ್‌ಗಳು ಅದನ್ನು ತಡೆಯುವ ಪ್ರಯತ್ನ ಮಾಡಿಲ್ಲ. ನಾನು ಈ ವಿಚಾರವನ್ನು ಅವರ ಗಮನಕ್ಕೆ ತಂದೆ. ಆಗ ಅವರು, ‘ಒಂದು ವೇಳೆ ರಸ್ತೆ ಹದಗೆಟ್ಟರೂ, ಕಾಮಗಾರಿಯ ಲೋಪ ನಿರ್ವಹಣೆಯ ಹೊಣೆಗಾರಿಕೆ ಅವಧಿ ಜಾರಿಯಲ್ಲಿರುವುದರಿಂದ ಸಂಬಂಧಪಟ್ಟ ಗುತ್ತಿಗೆದಾರರೇ ಅದನ್ನೇ ದುರಸ್ತಿ ಮಾಡುತ್ತಾರೆ’ ಎಂದು ಉದಾಸೀನದಿಂದ ಹೇಳಿದ್ದಾರೆ’ ಎಂದು ಅವರು ಆರೋಪಿಸಿದ್ದಾರೆ.

‘ಇಂತಹ ಕಳಪೆ ಕಾಮಗಾರಿಗಳಿಂದಾಗಿಯೇ ರಸ್ತೆಗಳಲ್ಲಿ ಬೇಗನೇ ಗುಂಡಿಗಳು ನಿರ್ಮಾಣವಾಗುತ್ತವೆ. ಕಾಮಗಾರಿ ನಡೆಸಿದ ಬಳಿಕ ಗುತ್ತಿಗೆದಾರರು ಹೊಣೆಗಾರಿಕೆಯ ಅವಧಿಯಲ್ಲೂ ಅದರ ನಿರ್ವಹಣೆಯನ್ನು ಸರಿಯಾಗಿ ಮಾಡುವುದಿಲ್ಲ’ ಎಂದೂ ಅವರು ಆರೋಪಿಸಿದ್ದಾರೆ.

‘ಇದೇ ರಸ್ತೆಯಲ್ಲಿ ಇತರ ಕಟ್ಟಡ ಕಾಮಗಾರಿಗಳು ನಡೆಯುತ್ತಿದ್ದು, ಅದಕ್ಕಾಗಿ ಅಗೆದ ಮಣ್ಣನ್ನು ರಸ್ತೆಯಲ್ಲೇ ರಾಶಿ ಹಾಕಲಾಗಿದೆ. ಈ ನಡುವೆಯೇ ಕಾಮಗಾರಿ ನಡೆಸಲಾಗಿದೆ’ ಎಂದೂ ಅವರು ದೂರಿದ್ದಾರೆ.

ಯಲಹಂಕ ವಲಯದ ಜಂಟಿ ಆಯುಕ್ತರಿಗೆ, ಕಾರ್ಯಪಾಲಕ ಎಂಜಿನಿಯರ್‌ಗೆ ಹಾಗೂ ಬಿಬಿಎಂಪಿಯ ಎಂಜಿನಿಯರಿಂಗ್ ವಿಭಾಗದ ಮುಖ್ಯಸ್ಥರಿಗೂ ದೂರಿನ ಪ್ರತಿಯನ್ನು ಆನಂದ್ ಕುಮಾರ್ ಕಳುಹಿಸಿದ್ದಾರೆ.

ಆರೋಪಿಗಳಿಂದ ಜಪ್ತಿ ಮಾಡಲಾದ ಬೈಕ್‌ಗಳು

₹ 4 ಲಕ್ಷ ಮೌಲ್ಯದ ಬೈಕ್ ಜಪ್ತಿ

ಬೆಂಗಳೂರು: ಲಾಕ್‌ಡೌನ್ ಸಂದರ್ಭದಲ್ಲಿ ಮನೆಗಳ ಮುಂದೆ ನಿಲ್ಲಿಸುತ್ತಿದ್ದ ಬೈಕ್‌ಗಳನ್ನು ಕದಿಯುತ್ತಿದ್ದ ಮೂವರು ಆರೋಪಿಗಳನ್ನು ಜಗಜೀವನರಾಮ್ ನಗರ ಪೊಲೀಸರು ಬಂಧಿಸಿದ್ದಾರೆ.

‘ಅರಾಫತ್ ನಗರದ ಕಬೀರ್ (20), ಹಳೇ ಗುಡ್ಡದಹಳ್ಳಿಯ ರೋಷನ್ (20) ಹಾಗೂ ಅಫ್ಸರ್ ಪಾಷಾ (20) ಬಂಧಿತರು. ಅವರಿಂದ ₹ 4 ಲಕ್ಷ ಮೌಲ್ಯದ 6 ಬೈಕ್‌ಗಳನ್ನು ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಠಾಣೆ ವ್ಯಾಪ್ತಿಯ ನಿವಾಸಿಯೊಬ್ಬರು ತಮ್ಮ ಮನೆ ಮುಂದೆ ಬೈಕ್ ನಿಲ್ಲಿಸಿದ್ದರು. ರಾತ್ರಿ ವೇಳೆ ಮನೆ ಬಳಿ ಬಂದಿದ್ದ ಆರೋಪಿಗಳು, ಬೈಕ್ ಕದ್ದು ಪರಾರಿಯಾಗಿದ್ದರು. ಈ ಬಗ್ಗೆ ದೂರು ದಾಖಲಾಗಿತ್ತು.’

‘ಕದ್ದು ಬೈಕ್‌ಗಳನ್ನು ಆರೋಪಿಗಳು, ಬೇರೆಯವರಿಗೆ ಮಾರುತ್ತಿದ್ದರು. ಕೆಂಗೇರಿ, ಸಿಟಿ ಮಾರ್ಕೆಟ್, ವಿಜಯನಗರ ಹಾಗೂ ಕುಂಬಳಗೋಡು ಠಾಣೆ ವ್ಯಾಪ್ತಿಗಳಲ್ಲೂ ಆರೋಪಿಗಳು ಕೃತ್ಯ ಎಸಗಿರುವುದು ಗೊತ್ತಾಗಿದೆ’ ಎಂದೂ ಪೊಲೀಸರು ತಿಳಿಸಿದರು.

ಪ್ರಮುಖ ವೆಬ್‌ಸೈಟ್‌ಗಳು ತಾತ್ಕಾಲಿಕ ಸ್ಥಗಿತ

ಪ್ಯಾರಿಸ್ (ಎಎಫ್‌ಪಿ): ಕ್ಲೌಡ್ ಕಂಪ್ಯೂಟಿಂಗ್ ಸೇವಾ ಪೂರೈಕೆದಾರರಿಂದ ಉಂಟಾದ ದೋಷದಿಂದಾಗಿ ಅಮೆರಿಕದ ಶ್ವೇತಭವನ ಸೇರಿದಂತೆ ವಿವಿಧ ದೇಶಗಳ ಸರ್ಕಾರಿ ವೆಬ್‌ಸೈಟ್‌ಗಳು ಹಾಗೂ ನ್ಯೂಯಾರ್ಕ್ ಟೈಮ್ಸ್, ರೆಡ್ಡಿಟ್, ಅಮೆಜಾನ್ ಸೇರಿದಂತೆ ಪ್ರಮುಖ ಮಾಧ್ಯಮಗಳ ವೆಬ್‌ಸೈಟ್‌ಗಳು ಮಂಗಳವಾರ ತಾತ್ಕಾಲಿಕವಾಗಿ ಸ್ಥಗಿತಗೊಂಡಿದ್ದವು.

ಈ ದೋಷದಿಂದಾಗಿ ಬ್ರಿಟನ್‌ನ ಸರ್ಕಾರಿ ವೆಬ್‌ಸೈಟ್‌ಗಳು, ಸಿಎನ್‌ಎನ್ ಮತ್ತು ಮತ್ತು ಬಿಬಿಸಿ ವೆಬ್‌ಸೈಟ್‌ಗಳ ಬಿತ್ತರದಲ್ಲೂ ವ್ಯತ್ಯಯವುಂಟಾಗಿತ್ತು. ಇವುಗಳ ಸೇವೆ ಗಂಟೆಯ ಬಳಿಕ ಪುನರಾರಂಭಗೊಂಡವು.

‘ಎರರ್ 503, ಸೇವೆ ಲಭ್ಯವಿಲ್ಲ’, ‘ಸಂಪರ್ಕ ವೈಫಲ್ಯ’ ಸಂದೇಶಗಳು ವೆಬ್‌ಸೈಟ್‌ಗಳಲ್ಲಿ ಕಾಣಿಸಿಕೊಂಡವು. ನಂತರ ಸ್ಯಾನ್‌ಫ್ರಾನ್ಸಿಸ್ಕೊ ಮೂಲದ ‘ಫಾಸ್ಟ್ಲಿ’ ಕಂಪನಿ ಸೇವೆಯಲ್ಲಿ ಸಮಸ್ಯೆ ಇರುವುದು ಗೊತ್ತಾಯಿತು. ಕೂಡಲೇ ಕಂಪನಿಯು ಸಮಸ್ಯೆ ಬಗೆಹರಿಸಿತು.

‘ಫಾಸ್ಟ್ಲಿ’ ಕಂಪನಿಯು ವಿಶ್ವದಾದ್ಯಂತ ಬಹುತೇಕ ವೆಬ್‌ಸೈಟ್‌ಗಳಿಗೆ ಲೋಡ್ ಮಾಡುವ ಸಮಯವನ್ನು ವೇಗಗೊಳಿಸುವ ಸೇವೆ ಒದಗಿಸುತ್ತಿದೆ.

ಸಲಹಾ ಸಮಿತಿ ಸದಸ್ಯರಾಗಿ ಆಯ್ಕೆ

ಸಿದ್ದರಾಜು

ಹೆಸರಘಟ್ಟ: ಯಲಹಂಕ ವಿಧಾನ ಸಭಾ ಕ್ಷೇತ್ರದ ಬಿಜೆಪಿ ಎಸ್.ಸಿ.ಮೋರ್ಚಾ ಉಪಾಧ್ಯಕ್ಷ ಮಾದಾವರ ಗ್ರಾಮದ ಸಿದ್ದರಾಜು ಅವರನ್ನು ಭಾರತೀಯ ರೈಲ್ವೆ ವಿಭಾಗದ ಸಲಹಾ ಸಮಿತಿ ಸದಸ್ಯರಾಗಿ ಆಯ್ಕೆ ಮಾಡಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಮಾಕಳಿ:ಪಿಯು ಕಾಲೇಜು ಮಂಜೂರು

ಹೆಸರಘಟ್ಟ: ಮಾಕಳಿ ಗ್ರಾಮದಲ್ಲಿರುವ ಪ್ರೌಢಶಾಲೆಯನ್ನು ಪದವಿ ಪೂರ್ವ ಕಾಲೇಜನ್ನಾಗಿ ಉನ್ನತೀಕರಿಸಲಾಗಿದ್ದು, ಪ್ರಸಕ್ತ ಸಾಲಿನಿಂದ ಈ ಕಾಲೇಜು ಕಾರ್ಯಾರಂಭ ಮಾಡಲಿದೆ.

'ಪದವಿ ಪೂರ್ವ ಕಾಲೇಜು ಪ್ರಾರಂಭವಾಗುವುದರಿಂದ ಈ ಭಾಗದ ಗ್ರಾಮಸ್ಥರಿಗೆ ಹೆಚ್ಚು ಅನುಕೂಲವಾಗಲಿದೆ' ಎಂದು ಆಲೂರು ಗ್ರಾಮದ ನಿವಾಸಿ ಅರುಣ್ ಕುಮಾರ್ ಹೇಳಿದರು.

ಆಹಾರದ ಕಿಟ್ ವಿತರಣೆ.... ಯಲಹಂಕ ಉಪನಗರದ ಅಂಬೇಡ್ಕರ್ ಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಶಾಸಕ ಎಸ್.ಆರ್.ವಿಶ್ವನಾಥ್ ಹಾಗೂ ಬೆಂಗಳೂರು ನಗರ ಜಿಲ್ಲಾಧಿಕಾರಿ ಜೆ.ಮಂಜುನಾಥ್ ಅವರು ಅರ್ಚಕರಿಗೆ ಆಹಾರದ ಕಿಟ್ ವಿತರಿಸಿದರು. ಬೆಂಗಳೂರು ಉತ್ತರ ಉಪವಿಭಾಗಾಧಿಕಾರಿ ಕೆ.ರಂಗನಾಥ್, ಯಲಹಂಕ ತಾಲ್ಲೂಕು ತಹಶೀಲ್ದಾರ್ ಕೆ.ನರಸಿಂಹಮೂರ್ತಿ ಇದ್ದರು

ತುರ್ತು ಸಭೆ ನಡೆಸಿದ ಪಶುಸಂಗೋಪನಾ ಸಚಿವ ಪ್ರಭು ಚವ್ಹಾಣ

ಕಾಲು ಬಾಯಿ ರೋಗ: 'ರಿಂಗ್ ವ್ಯಾಕ್ಸಿನ್'ಗೆ ಸೂಚನೆ

ಪ್ರಜಾವಾಣಿ ವಾರ್ತೆ

ಪ್ರಭು ಚವ್ಹಾಣ

ಬೆಂಗಳೂರು: ಕಾಲು ಬಾಯಿ ರೋಗ ತೀವ್ರವಾಗಿ ವ್ಯಾಪಿಸಿರುವ ಜಿಲ್ಲೆಗಳಲ್ಲಿ ತಕ್ಷಣವೇ 'ರಿಂಗ್ ವ್ಯಾಕ್ಸಿನ್' ಪ್ರಕ್ರಿಯೆ ನಡೆಸಲು ಪಶುಸಂಗೋಪನಾ ಸಚಿವ ಪ್ರಭು ಚವ್ಹಾಣ ಅವರು ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಮಂಗಳವಾರ ಇಲ್ಲಿ ತುರ್ತುಸಭೆ ನಡೆಸಿದ ಅವರು, ರೋಗ ಲಕ್ಷಣ ಉಲ್ಬಣಗೊಂಡ 5 ರಿಂದ 10 ಕಿ.ಮೀ ವ್ಯಾಪ್ತಿಯಲ್ಲಿ ಮುಂಜಾಗ್ರತೆ ಕ್ರಮವಾಗಿ ರಾಸುಗಳಿಗೆ ಲಸಿಕೆ ನೀಡಬೇಕು ಎಂದು ಹೇಳಿದರು.

ಕೊಡಗು, ರಾಮನಗರ, ಚಿಕ್ಕಬಳ್ಳಾಪುರ, ಹಾಸನ, ಚಾಮರಾಜನಗರ, ಬೆಂಗಳೂರು ನಗರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ ಕೂಡಲೇ 'ರಿಂಗ್ ವ್ಯಾಕ್ಸಿನ್' ಪ್ರಕ್ರಿಯೆ ಆರಂಭಿಸಬೇಕು. ರೋಗ ಉಲ್ಬಣ ಪರಿಸ್ಥಿತಿ ಕಂಡುಬಂದರೆ ಸಾರ್ವಜನಿಕರು ಕೂಡಲೇ ಪಶು ವೈದ್ಯಾಧಿಕಾರಿಗಳಿಗೆ ತಿಳಿಸಬೇಕು ಎಂದು ತಿಳಿಸಿದರು.

ಕಾಲು ಬಾಯಿ ರೋಗಕ್ಕೆ ರಾಸುಗಳಿಗೆ ಲಸಿಕೆ ನೀಡಲು ಪಶುಸಂಗೋಪನೆ ಇಲಾಖೆಯ ಎಲ್ಲ ಸಿಬ್ಬಂದಿ, ಅಧಿಕಾರಿಗಳು ಮತ್ತು ಕೆಎಂಎಫ್ ಸಿಬ್ಬಂದಿಯನ್ನು ಬಳಸಿಕೊಳ್ಳಲಾಗುವುದು. ಸಿಬ್ಬಂದಿ ಕೊರತೆ ಇದ್ದರೂ ರೈತರು ಮತ್ತು ಜಾನುವಾರುಗಳ ಆರೋಗ್ಯ ರಕ್ಷಣೆಗೆ ಬೇಕಾದ ಎಲ್ಲ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ ಎಂದು ಪ್ರಭು ಚವ್ಹಾಣ ಹೇಳಿದರು.

ಖಾಲಿ ಹುದ್ದೆಗಳ ನೇಮಕಾತಿಗೆ ಕ್ರಮ: ಕೋವಿಡ್ ಕಾರಣ ಕಲ್ಯಾಣ ಕರ್ನಾಟಕ ಭಾಗದ 61 ಪಶುವೈದ್ಯಾಧಿಕಾರಿಗಳು, 32 ಪಶು ವೈದ್ಯಕೀಯ ಪರೀಕ್ಷಕರು ಹಾಗೂ 83 ಪಶು ವೈದ್ಯಕೀಯ ಸಹಾಯಕರ ಹುದ್ದೆಗಳಿಗೆ ತಡೆ ನೀಡಲಾಗಿತ್ತು. ಈಗ ನೇಮಕಾತಿ ಪ್ರಕ್ರಿಯೆ ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸಬೇಕು. ಇಲ್ಲವಾದರೆ, ಅಧಿಕಾರಿಗಳ ವಿರುದ್ಧ ಶಿಸ್ತುಕ್ರಮ ತೆಗೆದುಕೊಳ್ಳುವುದಾಗಿ ಹೇಳಿದರು.

ಹೊಸ ಗೋಶಾಲೆಗಳಿಗೆ ಕ್ರಿಯಾ ಯೋಜನೆ: ರಾಜ್ಯದಲ್ಲಿ ಗೋಹತ್ಯೆ ನಿಷೇಧ ಕಾಯ್ದೆ ಜಾರಿಯಾದ ನಂತರ ಜಿಲ್ಲೆಗೊಂದು ಗೋಶಾಲೆ ನಿರ್ಮಿಸಲು ಉದ್ದೇಶಿಸಿದ್ದು, ಅದಕ್ಕೆ ಬೇಕಾದ ಎಲ್ಲ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ. 30 ಜಿಲ್ಲೆಗಳಲ್ಲಿ ಹೊಸ ಗೋಶಾಲೆಗಳನ್ನು ಆರಂಭಿಸಲು ಕ್ರಿಯಾ ಯೋಜನೆ ರೂಪಿಸಲಾಗಿದೆ. ಇದಕ್ಕೆ ಸರ್ಕಾರ ₹15 ಕೋಟಿ ಅನುದಾನ ನಿಗದಿ ಮಾಡಿದೆ. ಈಗಾಗಲೇ ₹7.50 ಕೋಟಿ ಅನುದಾನ ಬಿಡುಗಡೆ ಮಾಡಲಾಗಿದೆ ಎಂದು ಅವರ ಹೇಳಿದರು.

ರಾಜ್ಯದಲ್ಲಿ 188 ಖಾಸಗಿ ಗೋಶಾಲೆಗಳಿಗೆ ಮೇ ಅಂತ್ಯದವರೆಗೆ ₹18.50 ಲಕ್ಷ ಅನುದಾನ ನೀಡಲಾಗಿದೆ ಎಂದೂ ಅವರು ತಿಳಿಸಿದರು.

ಅಧಿಕಾರಿಗಳಿಗೆ ಸಚಿವರ ಎಚ್ಚರಿಕೆ

ಕಾಲುಬಾಯಿ ನಿಯಂತ್ರಣಕ್ಕೆ ಲಸಿಕೆ ಹಾಕುವುದು, ಕಲ್ಯಾಣ ಕರ್ನಾಟಕದ ಖಾಲಿ ಹುದ್ದೆಗಳ ಭರ್ತಿ ಹಾಗೂ ಗೋಶಾಲೆ ನಿರ್ಮಾಣಕ್ಕೆ ಸಂಬಂಧಿಸಿದಂತೆ ನಿರೀಕ್ಷಿತ ಮಟ್ಟದಲ್ಲಿ ಕೆಲಸ ಆಗದಿರುವುದಕ್ಕೆ ಸಚಿವ ಪ್ರಭು ಚವ್ಹಾಣ ಅಸಮಾಧಾನ ವ್ಯಕ್ತಪಡಿಸಿದರು.

'ನಿರೀಕ್ಷಿತ ಮಟ್ಟದಲ್ಲಿ ಕೆಲಸಗಳನ್ನು ಮಾಡಲು ಸಾಧ್ಯವಾಗದೇ ಇದ್ದರೆ, ಕುರ್ಚಿ ಖಾಲಿ ಮಾಡಿ. ನಿಮ್ಮಿಂದ ಇಲಾಖೆಯ ಅಭಿವೃದ್ಧಿ ಕೆಲಸ ಕುಂಠಿತವಾದರೆ ಸಹಿಸಲು ಸಾಧ್ಯವಿಲ್ಲ' ಎಂದು ಇಲಾಖೆ ನಿರ್ದೇಶಕರು ಮತ್ತು ಆಯುಕ್ತರಿಗೆ ನೇರವಾಗಿ ಹೇಳಿದರು.

ಸಭೆಯಲ್ಲಿ ಪಶುಸಂಗೋಪನೆ ಇಲಾಖೆಯ ಕಾರ್ಯದರ್ಶಿ ಕ್ಯಾಪ್ಟನ್ ಮಣಿವಣ್ಣನ್, ಆಯುಕ್ತ ಬಸವರಾಜೇಂದ್ರ, ನಿರ್ದೇಶಕ ಶಿವರಾಮ್ ಮತ್ತು ಇತರ ಅಧಿಕಾರಿಗಳು ಇದ್ದರು.

'ತಾರತಮ್ಯ ಆಗದಂತೆ ಎಚ್ಚರವಹಿಸಿ'

ನವನಗರೋತ್ಥಾನ ಕಾಮಗಾರಿ ಬಿಲ್ ಪಾವತಿಯಲ್ಲಿ ತಾರತಮ್ಯ: ಸಿ.ಎಂ ಗೆ ದೂರು

ಪ್ರಜಾವಾಣಿ ವಾರ್ತೆ

ಮುನಿರತ್ನ

ಬೆಂಗಳೂರು: ಸರ್ಕಾರವು 2018-19ನೇ ಸಾಲಿನ ಬಜೆಟ್‌ನಲ್ಲಿ ನವನಗರೋತ್ಥಾನ ಯೋಜನೆಯಡಿ ಬಿಬಿಎಂಪಿಗೆ ಮಂಜೂರು ಮಾಡಿರುವ ಅನುದಾನದಲ್ಲಿ ರಾಜರಾಜೇಶ್ವರಿನಗರ ಕ್ಷೇತ್ರದ ವ್ಯಾಪ್ತಿಯಲ್ಲಿ ಕೈಗೊಂಡ ಕಾಮಗಾರಿಗಳ ಬಿಲ್ ಪಾವತಿಯಲ್ಲಿ ತಾರತಮ್ಯವಾಗುತ್ತಿದೆ ಎಂದು ಆರೋಪಿಸಿ ಶಾಸಕ ಮುನಿರತ್ನ ಅವರು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರಿಗೆ ಇತ್ತೀಚೆಗೆ ದೂರು ನೀಡಿದ್ದಾರೆ.

ನಗರದ ಎಲ್ಲ ವಿಧಾನಸಭಾ ಕ್ಷೇತ್ರಗಳ ಕಾಮಗಾರಿಗಳ ಪ್ರಗತಿ ಪರಿಶೀಲನೆ ನಡೆಸಿ ತಾರತಮ್ಯ ಆಗದಂತೆ ಬಿಲ್ ಪಾವತಿಗೆ ಕ್ರಮಕೈಗೊಳ್ಳುವಂತೆ ನಗರಾಭಿವೃದ್ಧಿ ಇಲಾಖೆಗೆ ಮುಖ್ಯಮಂತ್ರಿ ಆದೇಶ ಮಾಡಿದ್ದಾರೆ. ಬಿಲ್ ಪಾವತಿಯಲ್ಲಿ ತಾರತಮ್ಯ ಸರಿಪಡಿಸುವಂತೆ ಸೂಚಿಸಿ ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ಅವರಿಗೆ ನಗರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಾಕೇಶ್ ಸಿಂಗ್ ಪತ್ರ ಬರೆದಿದ್ದಾರೆ.

ಮುನಿರತ್ನ ಪತ್ರದಲ್ಲೇನಿದೆ: '2018-19ನೇ ಸಾಲಿನಲ್ಲಿ ಮುಖ್ಯಮಂತ್ರಿ ನವನಗರೋತ್ಥಾನ ಯೋಜನೆಯಡಿ ₹ 8,015.37 ಕೋಟಿ ಕ್ರಿಯಾಯೋಜನೆಗೆ ಬಿಬಿಎಂಪಿ ಬಜೆಟ್‌ನಲ್ಲಿ ಅನುಮೋದನೆ ನೀಡಲಾಗಿದೆ. ಇದರಡಿ ಪ್ರಮುಖ ರಸ್ತೆಗಳು, ಉಪಪ್ರಮುಖ ರಸ್ತೆಗಳು ಹಾಗೂ ವಾರ್ಡ್ ರಸ್ತೆಗಳ ಅಭಿವೃದ್ಧಿಗೆ ₹ 4,107.34 ಕೋಟಿ ಮೀಸಲಿಡಲಾಗಿದೆ. ಹಲವಾರು ಕಾಮಗಾರಿಗಳು ಪೂರ್ಣಗೊಂಡಿದ್ದು, ಬಿಲ್ ಪಾವತಿಗಾಗಿ ಕೋರಿಕೆಗಳು ಸಲ್ಲಿಕೆಯಾಗಿವೆ. ರಸ್ತೆ ಮತ್ತು ಮೂಲಸೌಕರ್ಯ ವಿಭಾಗ ನಿರ್ವಹಿಸಿರುವ ಪ್ರಮುಖ ರಸ್ತೆಗಳಿಗೆ ಮತ್ತು ಉಪ ಪ್ರಮುಖ ರಸ್ತೆಗಳಿಗೆ ಬಿಲ್ ಸಲ್ಲಿಕೆ ಆದ ತಕ್ಷಣವೇ ಆದ್ಯತೆ ಮೇರೆಗೆ ಹಣ ಬಿಡುಗಡೆ ಮಾಡಲಾಗುತ್ತಿದೆ'.

'ಈ ಯೋಜನೆಯಡಿ ನಗರದ ವಿವಿಧ ಕ್ಷೇತ್ರಗಳಿಗೆ ಹಣ ಬಿಡುಗಡೆಯಾಗಿದೆ. ಆದರೆ, ಆರ್.ಆರ್.ನಗರ ಕ್ಷೇತ್ರದ ಕಾಮಗಾರಿಗಳಿಗೆ ಬಿಲ್ ಪಾವತಿಸುವಾಗ ವಿಳಂಬ ಮಾಡಲಾಗುತ್ತಿದ್ದು, ತಾರತಮ್ಯ ಧೋರಣೆ ಅನುಸರಿಸಲಾಗುತ್ತಿದೆ ಎಂದು ಹಲವರು ನನ್ನಲ್ಲಿ ಅಲವತ್ತುಕೊಂಡಿದ್ದಾರೆ. ಆರ್.ಆರ್.ನಗರ ಕ್ಷೇತ್ರದ ಕಾಮಗಾರಿಗಳ ಬಿಲ್ ಪಾವತಿಗೆ ಕ್ರಮ ಕೈಗೊಳ್ಳುವಂತೆ ಸೂಕ್ತ ನಿರ್ದೇಶನ ನೀಡಬೇಕು' ಎಂದು ಮುಖ್ಯಮಂತ್ರಿಗೆ ಮೇ 24ರಂದು ಬರೆದ ಪತ್ರದಲ್ಲಿ ಮುನಿರತ್ನ ಒತ್ತಾಯಿಸಿದ್ದಾರೆ.

ರಾಕೇಶ್ ಸಿಂಗ್ ಅವರು ಬಿಬಿಎಂಪಿಗೆ ಬರೆದ ಪತ್ರದಲ್ಲಿ, 'ನವನಗರೋತ್ಥಾನ ಯೋಜನೆಯಡಿ ಕೈಗೊಳ್ಳುವ ಭಾರಿ ಕಾಮಗಾರಿಗಳ ಬಿಲ್ ದೊಡ್ಡ ಮೊತ್ತದ್ದಾಗಿರುತ್ತವೆ. ಇವುಗಳ ಅನುಷ್ಠಾನಕ್ಕೆ ದೀರ್ಘಾವಧಿ ಬೇಕಾಗುತ್ತದೆ. ವಾರ್ಡ್ ಕಾಮಗಾರಿಗಳು ಅಲ್ಪಾವಧಿಯಲ್ಲಿ ಅನುಷ್ಠಾನಗೊಂಡು ಬಿಲ್ ಕಡಿಮೆ ಅವಧಿಯಲ್ಲಿ ಸಲ್ಲಿಕೆಯಾಗುತ್ತಿದೆ. ಸರ್ಕಾರದಿಂದ ಬಿಬಿಎಂಪಿಗೆ ಮೂರು ತಿಂಗಳಿಗೊಮ್ಮೆ ಈ ಯೋಜನೆಯ ಅನುದಾನ ನಿಯಮಿತವಾಗಿ ಬಿಡುಗಡೆಯಾಗುತ್ತಿದೆ. ಕಾಮಗಾರಿಗೆ ಅಡ್ಡಿ ಆಗದಂತೆ ಬಿಲ್ ಪಾವತಿಗೆ ಅದನ್ನು ವಿನಿಯೋಗಿಸುವ ಹೊಣೆ ಬಿಬಿಎಂಪಿಯದು' ಎಂದು ನೆನಪಿಸಿದ್ದಾರೆ.

ಮುಖ್ಯಾಂಶಗಳು

- ಪ್ರತಿ 3 ತಿಂಗಳ ಆದ್ಯತಾ ಪಟ್ಟಿ ತಯಾರಿಸಿ ಬಿಲ್ ಬಟವಾಡೆ ಯೋಜನೆಗೆ ಸಲಹೆ
- ತಕ್ಷಣ ಸರಿಪಡಿಸುವಂತೆ ನಗರಾಭಿವೃದ್ಧಿ ಇಲಾಖೆ ಆದೇಶ
- ನವನಗರೋತ್ಥಾನ ಯೋಜನೆ ಅನುದಾನ ಅನ್ಯ ಉದ್ದೇಶಕ್ಕೆ ಬಳಸುವಂತಿಲ್ಲ

ಬಿದರಹಳ್ಳಿ: ಉಚಿತ ಲಸಿಕಾ ಅಭಿಯಾನಕ್ಕೆ ಚಾಲನೆ

ಕೆ.ಆರ್.ಪುರ: ಕ್ಷೇತ್ರದ ಬಿದರಹಳ್ಳಿ ಬ್ಲಾಕ್ ಕಾಂಗ್ರೆಸ್ ಪಕ್ಷದ ವತಿಯಿಂದ ಏರ್ಪಡಿಸಿದ್ದ ಉಚಿತ ಲಸಿಕಾ ಅಭಿಯಾನಕ್ಕೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಚಾಲನೆ ನೀಡಿದರು.

'ಕೊರೊನಾ ನಿಯಂತ್ರಣಕ್ಕಾಗಿ ಸಮರ್ಪಕವಾಗಿ ಲಸಿಕೆ ನೀಡುವಲ್ಲಿ ಸರ್ಕಾರ ಸಂಪೂರ್ಣ ವಿಫಲವಾಗಿದೆ. ಕಾಂಗ್ರೆಸ್ ಪಕ್ಷದ 90 ಜನ ಶಾಸಕರ ಅನುದಾನದಲ್ಲಿ ತಲಾ ಒಂದು ಕೋಟಿ ಹಾಗೂ ಕೆಪಿಸಿಸಿ ಕಡೆಯಿಂದ 10 ಕೋಟಿ ಸೇರಿ ನೂರು ಕೋಟಿ ಅನುದಾನದಲ್ಲಿ ಲಸಿಕೆ ಪಡೆದು ಜನರಿಗೆ ನೀಡಲು ಸಿದ್ದವಿದ್ದೇವೆ ಎಂದು ಮೊದಲು ನಿಂದಲೂ ಸರ್ಕಾರಕ್ಕೆ ಮನವಿ ಮಾಡಿದ್ದೇವೆ. ಆದರೆ ಸರ್ಕಾರ ಅನುಮತಿ ನೀಡುತ್ತಿಲ್ಲ. ಈ ವಿಚಾರಕ್ಕೆ ಸಂಬಂಧಿಸಿದಂತೆ ನಮ್ಮ ಎಲ್ಲ ಶಾಸಕರು ಆಯಾ ಜಿಲ್ಲಾಧಿಕಾರಿಗಳಿಗೆ ಅನುಮತಿಗಾಗಿ ಮನವಿ ಸಲ್ಲಿಸಲಿದ್ದಾರೆ' ಎಂದರು.

ಬಿದರಹಳ್ಳಿಯ ಬ್ಲಾಕ್ ಕಾಂಗ್ರೆಸ್‌ನ ಮುಖಂಡರು ಮಣಿಪಾಲ್ ಆಸ್ಪತ್ರೆಯೊಂದಿಗೆ ಒಪ್ಪಂದ ಮಾಡಿಕೊಂಡು ಈಗಾಗಲೇ 1,200 ಲಸಿಕೆಗೆ ಹಣ ನೀಡಿ ಲಸಿಕೆ ನೀಡಲು ಅಭಿಯಾನ ಪ್ರಾರಂಭ ಮಾಡಿದ್ದಾರೆ. 3000ಕ್ಕೂ ಹೆಚ್ಚು ಜನರಿಗೆ ಲಸಿಕೆ ಹಾಕಲು ಯೋಜನೆ ಮಾಡಿರುವುದು ಮಾದರಿಯಾಗಿದೆ ಎಂದರು.

ಕಾಂಗ್ರೆಸ್ ಮುಖಂಡ ಉದಯ್ ಕುಮಾರ್, ಬಿದರಹಳ್ಳಿ ಪಂಚಾಯತಿ ಅಧ್ಯಕ್ಷ ವರುಣ್, ಚಂದ್ರು, ಸುನಿಲ್, ಮುನಿರಾಜು, ಉದಯಕುಮಾರ್, ಜಯರಾಂ ರೆಡ್ಡಿ, ನಲ್ಲೂರಹಳ್ಳಿ ನಾಗೇಶ್ ಇದ್ದರು.

ಉಚಿತ ಲಸಿಕಾ ಅಭಿಯಾನಕ್ಕೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಚಾಲನೆ ನೀಡಿದರು. ಶಾಸಕರಾದ ಶರತ್ ಬಚ್ಚೇಗೌಡ, ನಾರಾಯಣ ಸ್ವಾಮಿ, ರಿಜ್ವಾನ್ ಅರ್ಷದ್ ಇದ್ದರು

ಅಲೆಮಾರಿ ಸಮುದಾಯಗಳಿಗೆ ರಾಜ್ಯಸಭಾ ಸದಸ್ಯ ಎಲ್.ಹನುಮಂತಯ್ಯ ನೇತೃತ್ವದಲ್ಲಿ ದಿನಸಿ ಹಾಗೂ ವೈದ್ಯಕೀಯ ಕಿಟ್ ವಿತರಿಸಲಾಯಿತು

ಅಲೆಮಾರಿಗಳಿಗೆ ದಿನಸಿ ಕಿಟ್ ವಿತರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾನ್ಯತಾ ಟೆಕ್‌ಪಾರ್ಕ್ ಸುತ್ತಲಿನ ಪ್ರದೇಶಗಳಲ್ಲಿ ಟೆಂಟ್‌ಗಳಲ್ಲಿ ವಾಸಿಸುತ್ತಿರುವ ಕುಳುವ–ಕೊರಚ, ದಲಿತ ಹಾಗೂ ಮುಸ್ಲಿಂ ಸಮುದಾಯಗಳ ನಿರ್ಗತಿಕರಿಗೆ ರಾಜ್ಯಸಭಾ ಸದಸ್ಯ ಎಲ್.ಹನುಮಂತಯ್ಯ ನೇತೃತ್ವದಲ್ಲಿ ದಿನಸಿ ಹಾಗೂ ವೈದ್ಯಕೀಯ ಕಿಟ್ ವಿತರಿಸಲಾಯಿತು.

ಅಲೆಮಾರಿ ಬುಡಕಟ್ಟು ಮಹಾಸಭಾ ಹಾಗೂ ಅಖಿಲ ಕರ್ನಾಟಕ ಕುಳುವ ಮಹಾಸಭಾ ಜಂಟಿಯಾಗಿ ಈ ಕಾರ್ಯಕ್ರಮ ಆಯೋಜಿಸಿದ್ದವು.

'ಲಾಕ್‌ಡೌನ್‌ನಿಂದಾಗಿ ಅಲೆಮಾರಿ ಹಾಗೂ ಆದಿವಾಸಿ ಬುಡಕಟ್ಟು ಸಮುದಾಯಗಳ ಜನ ಸಂಕಷ್ಟಕ್ಕೆ ಸಿಲುಕಿದ್ದಾರೆ. ಕೋವಿಡ್ ಪರಿಹಾರ ಪ್ಯಾಕೇಜ್ ಘೋಷಿಸುವ ವೇಳೆ ರಾಜ್ಯ ಸರ್ಕಾರ ಇವರನ್ನು ಕಡೆಗಣಿಸಿದೆ. ಇವರ ನೆರವಿಗೆ ಧಾವಿಸುವಂತೆ ಮುಖ್ಯಮಂತ್ರಿಯವರಿಗೆ ಪತ್ರ ಬರೆದಿದ್ದೇನೆ. ಇವರಿಗೆ ಆದ್ಯತೆಯ ಮೇರೆಗೆ ಕೋವಿಡ್ ಲಸಿಕೆ ನೀಡುವಂತೆಯೂ ಒತ್ತಾಯಿಸಿದ್ದೇನೆ' ಎಂದು ಹನುಮಂತಯ್ಯ ತಿಳಿಸಿದರು.

ಭಾರತೀಯ ಕುಳುವ ಮಹಾ ಸಂಘದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಆದರ್ಶ್ ಯಲ್ಲಪ್ಪ, ರಾಜ್ಯ ಪ್ರಧಾನ ಕಾರ್ಯದರ್ಶಿ ಬಿ.ಎಸ್. ಆನಂದ್ ಕುಮಾರ್, ಮಾನವ ಹಕ್ಕುಗಳ ಹೋರಾಟಗಾರ್ತಿ ರೆಬೆಕಾ ಹಿಲ್ಮೆನ್, ಕಮ್ಮಾರ ಬುಡಕಟ್ಟು ಸಂಘಟನೆಯ ಅಧ್ಯಕ್ಷ ಕೆ.ಪಿ.ಸಿದ್ದಪ್ಪಾಜಿ, ಕೊಳ್ಳೆಗಾಲ ಮತ್ತು ಅಲೆಮಾರಿ ಕೊರಮ ಸಮುದಾಯಗಳ ಮುಖಂಡ ಆಡುಗೋಡಿ ನಾಗರಾಜು ಇದ್ದರು.

ಗೆಲುವಿಗೆ ಪಕ್ಷ, ಸಂಘಟನೆ ಮುಖ್ಯ: ಡಿ.ಕೆ.ಶಿವಕುಮಾರ್

ಪ್ರಜಾವಾಣಿ ವಾರ್ತೆ

ಶಿವಕುಮಾರ್

ಬೆಂಗಳೂರು: 'ಯಾವುದೇ ಚುನಾವಣೆಯಲ್ಲಿ ಗೆಲುವು ಸಾಧಿಸಿ, ನಾಯಕನನ್ನು ಬೆಳೆಸಲು ಕೇವಲ ವ್ಯಕ್ತಿಯಿಂದ ಸಾಧ್ಯವಿಲ್ಲ. ಅದಕ್ಕೆ ಪಕ್ಷ ಹಾಗೂ ಸಂಘಟನೆ ಮುಖ್ಯ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದರು.

ಇತ್ತೀಚೆಗೆ ನಡೆದ ಉಪ ಚುನಾವಣೆಯಲ್ಲಿ ಮಸ್ಕಿ ಕ್ಷೇತ್ರದಿಂದ ಆಯ್ಕೆಯಾದ ಬಸವನಗೌಡ ತುರುವಿಹಾಳ್ ಅವರನ್ನು ಕೆಪಿಸಿಸಿ ಕಚೇರಿಯಲ್ಲಿ ಸನ್ಮಾನಿಸಿ ಮಾತನಾಡಿದ ಅವರು, 'ನಾನು ಪಕ್ಷದ ಅಧ್ಯಕ್ಷನಾಗಿ ಪ್ರತಿಜ್ಞೆ ತೆಗೆದುಕೊಳ್ಳುವ ದಿನ ರಾಹುಲ್ ಗಾಂಧಿ ಕರೆ ಮಾಡಿ ಎಲ್ಲರನ್ನೂ ಒಟ್ಟಾಗಿ ತೆಗೆದುಕೊಂಡು ಹೋಗಬೇಕೆಂದು ಹೇಳಿದ್ದರು. ಜತೆಗೂಡುವುದು ಆರಂಭ. ಜತೆಗೂಡಿ ಆಲೋಚಿಸುವುದು ಪ್ರಗತಿ, ಜತೆಗೂಡಿ ಕೆಲಸ ಮಾಡುವುದು ಯಶಸ್ಸು ಎಂದು ನಾನು ಅವರಿಗೆ ಹೇಳಿದ್ದೆ' ಎಂದರು.

'ಮಸ್ಕಿಯಲ್ಲಿ ಗೆಲುವು ಸಾಧಿಸಲು ಕಾರಣ ಅಭ್ಯರ್ಥಿ ಬಗ್ಗೆ ಇಡೀ ಜಿಲ್ಲೆಯ ನಾಯಕರಲ್ಲಿ ಒಕ್ಕೊರಲಿನ ಅಭಿಪ್ರಾಯ ಬಂದಿದ್ದು. ನಂತರ ಎಲ್ಲರೂ ಒಟ್ಟಾಗಿ ಕೆಲಸ ಮಾಡಿದ್ದು. ಈ ಗೆಲುವಿಗೆ ಡಿ.ಕೆ. ಶಿವಕುಮಾರ್ ಆಗಲಿ, ಕಾರ್ಯಾಧ್ಯಕ್ಷರಾಗಲಿ ಕಾರಣ ಅಲ್ಲ. ನೀವು ಮತದಾರರ ಸ್ವಾಭಿಮಾನ ಉಳಿಸಿಕೊಂಡಿದ್ದು ಮುಖ್ಯ' ಎಂದು ತುರುವಿಹಾಳ್ ಅವರನ್ನು ಹೊಗಳಿದರು.

'ಪ್ರತಿ ಕ್ಷೇತ್ರದಲ್ಲಿ ನಮಗೆ ಮಾಹಿತಿ ನೀಡುವ ತಂಡವಿದೆ. ಯಾರೇ ಪಕ್ಷದ ವಿರುದ್ಧ ಶಿಸ್ತು ಮೀರಿ ನಡೆದುಕೊಂಡರೆ ನಾನು ಸುಮ್ಮನೆ ಇರುವುದಿಲ್ಲ. ನಿಮಗೆ ಯಾರ ಬೆಂಬಲ ಇದ್ದರೂ ಸರಿ, ನಾನು ಮುಲಾಜು ನೋಡುವುದಿಲ್ಲ' ಎಂದು ಪಕ್ಷದ ಕಾರ್ಯಕರ್ತರಿಗೆ ಎಚ್ಚರಿಕೆ ನೀಡಿದರು.

ಕಾಂಗ್ರೆಸ್ ಹೋರಾಟದ ಫಲ: 'ಲಸಿಕೆ ನೀಡುವ ಜವಾಬ್ದಾರಿ ರಾಜ್ಯ ಸರ್ಕಾರಗಳದ್ದಲ್ಲ. ಕೇಂದ್ರ ಸರ್ಕಾರ ಜವಾಬ್ದಾರಿ ಹೊರಬೇಕು ಎಂದು ವಿರೋಧ ಪಕ್ಷಗಳು ಒತ್ತಾಯಿಸಿದ್ದರಿಂದ ದೇಶದಲ್ಲಿ 18 ವರ್ಷ ದಾಟಿದವರಿಗೂ ಉಚಿತ ಲಸಿಕೆ ನೀಡಲು ಕೇಂದ್ರ ಸರ್ಕಾರ ತೀರ್ಮಾನಿಸಿದೆ' ಎಂದು ಶಿವಕುಮಾರ್ ತಿಳಿಸಿದರು.

'ಇದು ಕಾಂಗ್ರೆಸ್ ಹೋರಾಟದ ಫಲ. ನಾವು ನಮ್ಮ ಅಭಿಯಾನ ಆರಂಭಿಸಿ, ರಾಜ್ಯಪಾಲರನ್ನು ಭೇಟಿಯಾಗಿ, ಅವರ ಮೂಲಕ ರಾಷ್ಟ್ರಪತಿಗೆ ಪತ್ರ ರವಾನಿಸಲಾಗಿತ್ತು. ಜಿಲ್ಲಾ ಮಟ್ಟದಿಂದಲೂ ಒತ್ತಾಯ ಮಾಡಿದ್ದೆವು' ಎಂದರು.

'ಕುಟುಂಬ ರಾಜಕಾರಣದಿಂದ ಸಂಸದೀಯ ವ್ಯವಸ್ಥೆಗೆ ಧಕ್ಕೆ'

ಬಿ.ಎಲ್.ಶಂಕರ್

ಬೆಂಗಳೂರು: 'ನಮ್ಮ ದೇಶದ ಬಹುಭಾಷಾ ಮತ್ತು ಬಹುಸಂಸ್ಕೃತಿಗೆ ಪೂರಕವಾಗಿಯೇ ಸಂಸದೀಯ ಪದ್ಧತಿಯನ್ನು ಅಳವಡಿಸಿಕೊಳ್ಳಲಾಗಿದೆ. ಆದರೆ, ಕುಟುಂಬ ರಾಜಕಾರಣ ಮತ್ತು ಕೋಮುವಾದದಿಂದ ಈ ವ್ಯವಸ್ಥೆಯ ಆಶಯಗಳು ಬುಡಮೇಲಾಗುತ್ತಿವೆ' ಎಂದು ಕಾಂಗ್ರೆಸ್ ಮುಖಂಡ ಬಿ.ಎಲ್. ಶಂಕರ್ ಬೇಸರ ವ್ಯಕ್ತಪಡಿಸಿದರು.

ಬೆಂಗಳೂರು ವಿಶ್ವವಿದ್ಯಾಲಯದ ರಾಷ್ಟ್ರೀಯ ಸೇವಾ ಯೋಜನೆ ಘಟಕದ ವತಿಯಿಂದ 'ಸಂಸದೀಯ ಪದ್ಧತಿಗಳು ಹಾಗೂ ವಿಧಾನಗಳು' ಕುರಿತು ಸೋಮವಾರ ನಡೆದ ವಿಚಾರಸಂಕಿರಣದಲ್ಲಿ ಅವರು ಮಾತನಾಡಿದರು.

'ಸದ್ಯ ಸಂಸತ್‌ನಲ್ಲಿ ಶೇ 41ರಷ್ಟು ಅಪರಾಧಿಕ ಹಿನ್ನೆಲೆಯುಳ್ಳವರು, ಶೇ 86ರಷ್ಟು ಕೋಟ್ಯಾಧೀಶರು ಹಾಗೂ ಶೇ 60ರಷ್ಟು ಮಂದಿ ರಾಜಕೀಯ ಕುಟುಂಬದ ಹಿನ್ನೆಲೆಯಿಂದ ಬಂದವರಿದ್ದು, ಇವರೇ ನಮ್ಮನ್ನು ಆಳುತ್ತಿದ್ದಾರೆ' ಎಂದರು.

'ಸಭಾಧ್ಯಕ್ಷ ಹಾಗೂ ರಾಜ್ಯಪಾಲರನ್ನು ನಿಷ್ಪಕ್ಷಪಾತವಾಗಿ ಪ್ರಧಾನ ಮಂತ್ರಿ ಅಥವಾ ಮುಖ್ಯಮಂತ್ರಿಗಳು, ವಿರೋಧ ಪಕ್ಷದ ನಾಯಕರು ಹಾಗೂ ಸುಪ್ರೀಂ ಕೋರ್ಟ್ ಅಥವಾ ಹೈಕೋರ್ಟ್‌ಗಳ ಮುಖ್ಯ ನ್ಯಾಯಾಧೀಶರನ್ನು ಒಳಗೊಂಡ ಸಮಿತಿಯ ಮೂಲಕ ಆಯ್ಕೆ ಮಾಡಿದರೆ ದೇಶದ ಸಂಸದೀಯ ಮಾದರಿಯ ವ್ಯವಸ್ಥೆಯು ಇನ್ನಷ್ಟು ಬಲಗೊಳ್ಳುತ್ತದೆ' ಎಂದು ಅಭಿಪ್ರಾಯಪಟ್ಟರು.

'ಇತ್ತೀಚಿನ ದಿನಗಳಲ್ಲಿ ಪಕ್ಷಾಂತರ ನಿಷೇಧ ಕಾಯ್ದೆಯ ಗುರಿ, ಉದ್ದೇಶಗಳು ವಿಫಲವಾಗುತ್ತಿರುವುದು ಅಸಮರ್ಥ ಸಭಾಪತಿಗಳಿಂದ. ಇಂದಿನ ರಾಜಕಾರಣ ಭ್ರಷ್ಟಗೊಳ್ಳಲಿಕ್ಕೆ, ರಾಜಕೀಯ ಮುಖಂಡರು ಹಾಗೂ ರಾಜಕೀಯ ಪಕ್ಷಗಳು ಕಾರಣವೇ ಹೊರತು ಸಾರ್ವಜನಿಕರಲ್ಲ. ಶೇಕಡ 90ರಷ್ಟು ರಾಜಕಾರಣ ವ್ಯಾಪಾರವಾಗಿರುವುದು ಬಹಳ ದುರ್ದೈವದ ಸಂಗತಿ' ಎಂದು ಬೇಸರಿಸಿದರು. ಕುಲಪತಿ ಪ್ರೊ. ಕೆ.ಆರ್ ವೇಣುಗೋಪಾಲ್ ಅಧ್ಯಕ್ಷತೆ ವಹಿಸಿದ್ದರು. ರಾಜ್ಯ ಎನ್‌ಎಸ್‌ಎಸ್ ಅಧಿಕಾರಿ ಪ್ರತಾಪ್ ಲಿಂಗಯ್ಯ, ಎನ್‌ಎಸ್‌ಎಸ್ ಸಂಯೋಜನಾಧಿಕಾರಿ ಡಾ. ಎನ್. ಸತೀಶ್ ಗೌಡ ಉಪಸ್ಥಿತರಿದ್ದರು.

ಭೂ ಮಂಜೂರಾತಿ ವಿಳಂಬ: ಹೂಡಿಕೆಗೆ ಹಿಂದೇಟು

ಪ್ರಜಾವಾಣಿ ವಾರ್ತೆ

ಎಲ್.ಗಿರೀಶ್

ಬೆಂಗಳೂರು: ಕೋವಿಡ್ ಎರಡನೇ ಅಲೆಯ ಕಾರಣ ಒಡ್ಡಿ ಭೂಮಂಜೂರಾತಿಗೆ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ (ಕೆಐಎಡಿಬಿ) ವಿಳಂಬ ಮಾಡಿದ್ದು, ಯುದ್ಧ ವಿಮಾನಗಳ ಬಿಡಿಭಾಗ ಉತ್ಪಾದನಾ ಉದ್ದಿಮೆಯು ರಾಜ್ಯದಿಂದಲೇ ಕೈತಪ್ಪುವ ಆತಂಕ ಎದುರಾಗಿದೆ.

ಎಡಿಡಿ ಎಂಜಿನಿಯರಿಂಗ್ ಕಾಂಪೊನೆಂಟ್ಸ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ (ಎಇಸಿಪಿಎಲ್) ರಕ್ಷಣಾ ಕ್ಷೇತ್ರಗಳಿಗೆ ಅತ್ಯುನ್ನತ ದರ್ಜೆಯ ಮೆಟಲ್ ಕಟಿಂಗ್ ಟೂಲ್ಸ್ ಪೂರೈಕೆ ಮಾಡುತ್ತಿದೆ. ಇದು ಜರ್ಮನಿಯ ಜಿಎಂಬಿಎಚ್‌ನ ಅಂಗಸಂಸ್ಥೆಯಾಗಿದ್ದು, ತನ್ನ ಉದ್ಯಮವನ್ನು ಬೆಂಗಳೂರಿನಲ್ಲಿ ವಿಸ್ತರಿಸಲು ಮುಂದೆ ಬಂದಿದೆ.

'ಇದಕ್ಕೆ ಜಮೀನು ಕೋರಿ ಮೂರು ವರ್ಷಗಳ ಹಿಂದೆಯೇ ಅರ್ಜಿ ಸಲ್ಲಿಸಿದ್ದೆವು. ಕಚೇರಿಯಿಂದ ಕಚೇರಿಗೆ ಅಲೆದಾಡಿದ ಬಳಿಕ ತುಮಕೂರಿನ ಮಷೀನ್ ಟೂಲ್ ಪಾರ್ಕ್‌ನಲ್ಲಿ ಭೂಮಿ ಮಂಜೂರು ಮಾಡುವ ಭರವಸೆಯನ್ನು ಕೆಐಎಡಿಬಿ ನೀಡಿತ್ತು. ಈಗ ಕೋವಿಡ್ ಎರಡನೇ ಅಲೆಯಲ್ಲಿ ಸಿಬ್ಬಂದಿ ಕೊರತೆ ಕಾರಣ ನೀಡಿ ಭೂಮಿ ಮಂಜೂರಾತಿಗೆ ವಿಳಂಬ ಮಾಡಲಾಗುತ್ತಿದೆ. ಉದ್ಯಮ ಆರಂಭಿಸುವ ಕನಸು ಮತ್ತೊಮ್ಮೆ ಮಸುಕಾಗಿದೆ' ಎಂದು ಎಇಐಪಿಎಲ್ ನಿರ್ದೇಶಕ ಎಲ್.ಗಿರೀಶ್ ಹೇಳಿದರು.

'ಅಗತ್ಯ ಭೂಮಿ ಮಂಜೂರು ಮಾಡುವುದಾಗಿ ಕರ್ನಾಟಕ ಉದ್ಯೋಗ ಮಿತ್ರದಿಂದ ಸಂದೇಶ ಬಂದಿತ್ತು. ಅದಕ್ಕೆ ಪೂರಕವಾಗಿ ಹಣ ಪಾವತಿ ಮಾಡುವಂತೆ ಸೂಚನೆ ಬಂದಿತ್ತು. ಅದರಂತೆ ಜಮೀನಿನ ದರದ ಶೇ 30ರಷ್ಟು ಪಾವತಿಸಿದ್ದೇನೆ. ಆದರೆ, ಜಾಗದ ಮಂಜೂರಾತಿ ಮಾತ್ರ ಆಗಿಲ್ಲ' ಎಂದು ಹೇಳಿದರು.

'ಎಇಐಪಿಎಲ್‌ನ ಮಾತೃ ಸಂಸ್ಥೆಯಾದ ಜರ್ಮನ್ ಎಡಿಡಿ ಎಂಜಿನಿಯರಿಂಗ್ ಜಿಎಂಬಿಎಚ್ ಕಂಪನಿಯು ಈ ಯೋಜನೆಗಾಗಿ ಬಂಡವಾಳ ತೊಡಗಿಸಲು ಆಸಕ್ತಿ ಹೊಂದಿತ್ತು. ಭೂಮಿ ಮಂಜೂರಾತಿ ವಿಳಂಬವಾಗುತ್ತಿರುವ ಕಾರಣ ಹೂಡಿಕೆಯಿಂದ ಹಿಂದೆ ಸರಿಯಲು ಅದು ಆಲೋಚಿಸುತ್ತಿದೆ' ಎಂದು ಅವರು ಆತಂಕ ವ್ಯಕ್ತಪಡಿಸಿದರು.

ತಾವರೆಕೆರೆಯಲ್ಲಿ ಕೊರೊನಾದಿಂದ ಮೃತಪಟ್ಟವರ ಕುಟುಂಬಗಳಿಗೆ ರಾಜ್ಯ ಕುಂಬಾರ ಸರ್ಕಾರಿ ನೌಕರರ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಭಾನುವಾರ ಪರಿಹಾರ ಧನ ವಿತರಿಸಲಾಯಿತು. ಚಿತ್ರದುರ್ಗದ ಕುಂಬಾರ ಗುಂಡಯ್ಯ ಮಠದ ಬಸವ ಶಿವಮೂರ್ತಿ ಸ್ವಾಮೀಜಿ, ಸಂಘದ ಅಧ್ಯಕ್ಷ ಆರ್.ಶ್ರೀನಿವಾಸ್, ಪ್ರಧಾನ ಕಾರ್ಯದರ್ಶಿ ಬಾಬು ಎಸ್.ಕುಂಬಾರ, ಪದಾಧಿಕಾರಿಗಳಾದ ಸಂಗಮೇಶ್, ಚಿಕ್ಕವೀರಯ್ಯ, ಭೀಮಪ್ಪ ಇದ್ದರು

ಸೂಜಿ, ಪಿನ್ನು ಇನ್ನಿತರ ದಿನಬಳಕೆಯ ವಸ್ತುಗಳ ವ್ಯಾಪಾರ ಮಾಡುವ ಶಿವ

ಊರೂರು ಸುತ್ತುವ ವ್ಯಾಪಾರಿಗಳಿಗೆ ಲಾಕ್‌ಡೌನ್ ಸಂಕಷ್ಟ

ಪ್ರಜಾವಾಣಿ ವಾರ್ತೆ

ದಾಬಸ್ ಪೇಟೆ: ನಿತ್ಯ ಊರೂರು ಸುತ್ತಿ ವ್ಯಾಪಾರ ಮಾಡಿ ಬದುಕುವ ವ್ಯಾಪಾರಸ್ಥರು ಲಾಕ್‌ಡೌನ್‌ನಿಂದ ಸಂಕಷ್ಟಕ್ಕೆ ಸಿಲುಕಿದ್ದಾರೆ.

ದಿನವೂ ಹತ್ತಾರು ಊರುಗಳನ್ನು ಸುತ್ತುತ್ತ ಸೂಜಿ, ಪಿನ್ನು, ಸೋಪ್, ಫಿನಾಯಿಲ್ ಮತ್ತಿತರ ಚಿಕ್ಕ–ಪುಟ್ಟ ವಸ್ತುಗಳು ಹಾಗೂ ಇನ್ನಿತರ ದಿನಬಳಕೆಯ ವಸ್ತುಗಳನ್ನು ಮಾರುತ್ತಿದ್ದವರ ಹೊಟ್ಟೆಗೆ ತಣ್ಣೀರು ಬಟ್ಟೆಯೇ ಗತಿಯಾಗಿದೆ.

'ಬೆಳಿಗ್ಗೆ ಆರು ಗಂಟೆಗೆ ಮನೆ ಬಿಟ್ಟು ಹತ್ತು ಗಂಟೆಯವರೆಗೆ ವ್ಯಾಪಾರ ಮಾಡುತ್ತೇವೆ. ದಿನಕ್ಕೆ ₹500 ವ್ಯಾಪಾರವಾದರೇ ಅದೇ ಹೆಚ್ಚು. ಅಂಗಡಿಗಳಿಂದ ಸಾಲ ಮಾಡಿ ತಂದ ವಸ್ತುಗಳ ಹಣ ಪಾವತಿಸಿ, ಸ್ಕೂಟರ್‌ಗಳಿಗೆ ಪೆಟ್ರೋಲ್ ಹಾಕಿಸುವ ಖರ್ಚು ತೆಗೆದರೆ ₹100 ಕೂಡ ಉಳಿಯುವುದಿಲ್ಲ. ಇಷ್ಟೇ ಹಣದಲ್ಲಿ ನಾವು ಜೀವನ ಸಾಗಿಸಬೇಕಾಗಿದೆ' ಎಂದು ಶಿವ ಅಳಲು ತೋಡಿಕೊಂಡರು.

'ಈಗ ಕೆಲವು ಅಂಗಡಿಗಳಲ್ಲಿ ವಸ್ತುಗಳು ಸಿಗುತ್ತಿಲ್ಲ. ಕೈಯಲ್ಲಿ ದುಡ್ಡಿಲ್ಲದ ಕಾರಣ ಜನ ಕೂಡ ಖರೀದಿಗೆ ಮುಂದೆ ಬರುತ್ತಿಲ್ಲ' ಎಂದರು.

'ನಮಗೆ ಸ್ವಂತ ಮನೆಯಿಲ್ಲ. ತಿಂಗಳಿಗೆ ಒಂದೂವರೆ ಸಾವಿರ ರೂಪಾಯಿ ಮನೆ ಬಾಡಿಗೆ ಕಟ್ಟಬೇಕು. ತಾಯಿ, ಪತ್ನಿ, ಇಬ್ಬರು ಮಕ್ಕಳು ಇದ್ದು, ನನ್ನೊಬ್ಬನ ದುಡಿಮೆಯಲ್ಲಿಯೇ ಕುಟುಂಬ ನಡೆಸಬೇಕು. ಲಾಕ್‌ಡೌನ್‌ನಿಂದ ನಮ್ಮ ಬದುಕು ನಿಜಕ್ಕೂ ಬೀದಿಗೆ ಬಿದ್ದಿದೆ. ಸರ್ಕಾರ ನಮ್ಮಂಥ ಅಸಂಘಟಿತರಿಗೆ ಹೆಚ್ಚು ನೆರವು ನೀಡಬೇಕು' ಎಂದು ಮನವಿ ಮಾಡಿದರು.

ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನದಾಸ್ ಅಭಿಮತ

'ನ್ಯಾಯಾಂಗದ ಮೇಲಿನ ಟೀಕೆ ರಚನಾತ್ಮಕವಾಗಿರಲಿ'

ಪ್ರಜಾವಾಣಿ ವಾರ್ತೆ

ಎಚ್.ಎನ್. ನಾಗಮೋಹನ್ ದಾಸ್

ಬೆಂಗಳೂರು: 'ನ್ಯಾಯಾಂಗವನ್ನು ಟೀಕಿಸುವ ಹಕ್ಕನ್ನು ನಮ್ಮ ಸಂವಿಧಾನವೂ ಪ್ರತಿಯೊಬ್ಬರಿಗೂ ನೀಡಿದೆ. ಆದರೆ, ಈ ಟೀಕೆ ಅಥವಾ ವಿಮರ್ಶೆಯು ರಚನಾತ್ಮಕವಾಗಿರಬೇಕೇ ವಿನಾ ನಮ್ಮ ಹಿರಿಯರು ಕಟ್ಟಿದ ನ್ಯಾಯಾಂಗ ವ್ಯವಸ್ಥೆಯನ್ನು ಹಾಳು ಮಾಡುವಂತಿರಬಾರದು' ಎಂದು ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನದಾಸ್ ಸಲಹೆ ನೀಡಿದರು.

ಬೆಂಗಳೂರು ನಗರ ಮತ್ತು ಮೈಸೂರು ವಿಶ್ವವಿದ್ಯಾಲಯಗಳ ಪತ್ರಿಕೋದ್ಯಮ ವಿಭಾಗದ ವತಿಯಿಂದ 'ದೇಶದ್ರೋಹದ ಕಾನೂನು ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯ' ಕುರಿತು ಸೋಮವಾರ ಆನ್‌ಲೈನ್‌ನಲ್ಲಿ ಹಮ್ಮಿಕೊಂಡಿದ್ದ ವಿಚಾರ ಸಂಕಿರಣದಲ್ಲಿ ಅವರು ಮಾತನಾಡಿದರು.

'ಕೇರಳದ ಶಾಲೆಯಲ್ಲಿ ರಾಷ್ಟ್ರಗೀತೆ ಹಾಡುವಾಗ ಕೆಲವು ಮಕ್ಕಳು ಮೌನವಾಗಿ ನಿಂತಿದ್ದರು. ರಾಷ್ಟ್ರಗೀತೆ ಹಾಡಲಿಲ್ಲ. ಇದನ್ನು ಗಮನಿಸಿದ ಆ ಶಾಲೆಯ ಮುಖ್ಯಶಿಕ್ಷಕ ಆ ಮಕ್ಕಳನ್ನು ಶಾಲೆಯಿಂದ ಅಮಾನತುಗೊಳಿಸಿದರು. ಕೇರಳ ಹೈಕೋರ್ಟ್ ಕೂಡ ಮುಖ್ಯಶಿಕ್ಷಕರ ಕ್ರಮ ಸರಿ ಎಂದು ಹೇಳಿತು. ಪ್ರಕರಣ ಸುಪ್ರೀಂಕೋರ್ಟ್‌ವರೆಗೂ ಹೋಯಿತು. ನ್ಯಾಯಮೂರ್ತಿ ಚಿನ್ನಪ್ಪರೆಡ್ಡಿ ಪೀಠವು ಪ್ರಕರಣವನ್ನು ವಿಚಾರಣೆಗೆ ಕೈಗೆತ್ತಿಕೊಂಡಿತು. ಮಕ್ಕಳು ಅವರ ಧಾರ್ಮಿಕ ನಂಬಿಕೆಗೆ ಅನುಗುಣವಾಗಿ ಮೌನವಾಗಿದ್ದರು. ಅವರು ಮೌನವಾಗಿರುವುದೂ ಅಭಿವ್ಯಕ್ತಿ ಸ್ವಾತಂತ್ರ್ಯ. ರಾಷ್ಟ್ರದ್ರೋಹದ ಪ್ರಶ್ನೆ ಇಲ್ಲಿ ಉದ್ಭವಿಸುವುದಿಲ್ಲ. ಮಕ್ಕಳನ್ನು ಅಮಾನತುಗೊಳಿಸಿದರೆ ಸಂವಿಧಾನದ ಮೇಲಿನ ಗೌರವವನ್ನು ನಾವೇ ಕಡಿಮೆಗೊಳಿಸಿದಂತಾಗುತ್ತದೆ ಎಂದು ಪೀಠ ಅಭಿಪ್ರಾಯಪಟ್ಟಿತ್ತು' ಎಂದು ಅವರು ಉದಾಹರಿಸಿದರು.

'ನಮ್ಮ ಸಂಸ್ಕೃತಿಯು ಸಹನೆಯೇ ಮುಖ್ಯ ಎನ್ನುತ್ತದೆ, ನಮ್ಮ ತತ್ವಶಾಸ್ತ್ರಗಳು ಸಹನೆ, ತಾಳ್ಮೆಯನ್ನೇ ಉಲ್ಲೇಖಿಸುತ್ತವೆ. ಅದರಂತೆ ನಮ್ಮ ಸಂವಿಧಾನವು ಸಹನೆ, ತಾಳ್ಮೆಯ ಗುಣವನ್ನು ಪಾಲಿಸುತ್ತದೆ. ನ್ಯಾಯಾಂಗವನ್ನು ಟೀಕಿಸುವ ಹಕ್ಕನ್ನು ಸಂವಿಧಾನ ಕೊಟ್ಟಿದ್ದರೂ ಅದನ್ನು ವಿವೇಚನೆಯಿಂದ ಬಳಸಬೇಕು. ನಮ್ಮ ವಿಮರ್ಶೆಗಳು, ಟೀಕೆಗಳನ್ನು ಈ ವ್ಯವಸ್ಥೆಯನ್ನು ವಿಸ್ತರಿಸುವಂತಿರಬೇಕು, ಹಾಳು ಮಾಡುವಂತಿರಬಾರದು' ಎಂದು ಪುನರುಚ್ಚರಿಸಿದರು.

'ಇತ್ತೀಚೆಗಿನ ಕೆಲವು ಬೆಳವಣಿಗೆಗಳನ್ನು ನೋಡಿದಾಗ, ರಾಜದ್ರೋಹ ಅಥವಾ ದೇಶದ್ರೋಹದ ಕಾನೂನಿನ ಅನುಷ್ಠಾನದಲ್ಲಿ ನಾವು ಎಡವಿದ್ದೇವೇನೋ ಎನಿಸುತ್ತದೆ. ಸ್ವಾತಂತ್ರ್ಯ ಹೋರಾಟವನ್ನು ಹತ್ತಿಕ್ಕಲು ಬ್ರಿಟಿಷ್ ಸರ್ಕಾರವು ಇಂತಹ ದಮನಕಾರಿ ಕಾನೂನುಗಳನ್ನು ರೂಪಿಸಿತ್ತು. ಆದರೆ, ಸ್ವಾತಂತ್ರ್ಯ ಬಂದ ನಂತರವೂ ನಮ್ಮ ಸರ್ಕಾರಗಳು ಈ ಕಾನೂನುಗಳನ್ನು ಮುಂದುವರಿಸಿರುವುದು ದುರದೃಷ್ಟಕರ' ಎಂದು ಅಭಿಪ್ರಾಯಪಟ್ಟರು.

ಮೈಸೂರು ವಿಶ್ವವಿದ್ಯಾಲಯದ ಪತ್ರಿಕೋದ್ಯಮ ವಿಭಾಗದ ಮುಖ್ಯಸ್ಥ ಪ್ರೊ. ನಿರಂಜನ ವಾನಳ್ಳಿ, ಬೆಂಗಳೂರು ನಗರ ವಿಶ್ವವಿದ್ಯಾಲಯದ ಪತ್ರಿಕೋದ್ಯಮ ವಿಭಾಗದ ಮುಖ್ಯಸ್ಥ ಡಾ.ಎನ್. ನರಸಿಂಹಮೂರ್ತಿ ಇದ್ದರು.

100 ಗ್ರಾಮಗಳಲ್ಲಿ ಪ್ರವಾಹ ಮುನ್ಸೂಚನೆ ವ್ಯವಸ್ಥೆ

ಮನೋಜ್ ರಾಜನ್

ಬೆಂಗಳೂರು: ಕೃಷ್ಣಾ ನದಿ ಪಾತ್ರದಲ್ಲಿ ನಿರಂತರ ಪ್ರವಾಹಕ್ಕೆ ತುತ್ತಾಗುವ 100 ಗ್ರಾಮಗಳಲ್ಲಿ ಪ್ರವಾಹದ ಮುನ್ನೆಚ್ಚರಿಕೆ ನೀಡುವ ಕೇಂದ್ರೀಕೃತ ಮಾಹಿತಿ ಪ್ರಸಾರ ವ್ಯವಸ್ಥೆಯನ್ನು ಪೈಲಟ್ ಯೋಜನೆಯಾಗಿ ಕೈಗೆತ್ತಿಕೊಳ್ಳಲಾಗಿದೆ ಎಂದು ಕರ್ನಾಟಕ ರಾಜ್ಯ ವಿಕೋಪ ನಿರ್ವಹಣೆ ಪ್ರಾಧಿಕಾರದ ಆಯುಕ್ತ ಮನೋಜ್ ರಾಜನ್ ಹೇಳಿದರು.

'ಬೆಳಗಾವಿ, ಬಾಗಲಕೋಟೆ ಮತ್ತು ರಾಯಚೂರು ಜಿಲ್ಲೆಗಳ ವ್ಯಾಪ್ತಿಗೆ ಬರುವ ಗ್ರಾಮಗಳಲ್ಲಿ ಜಾರಿ ಮಾಡಲಾಗಿದೆ. ಬೆಂಗಳೂರಿನಿಂದಲೇ ಈ ವ್ಯವಸ್ಥೆ ನಿಯಂತ್ರಿಸಲಾಗುತ್ತದೆ. ಇದರ ಜಾರಿಗೆ ₹95 ಲಕ್ಷ ಖರ್ಚಾಗಿದೆ' ಎಂದು ತಿಳಿಸಿದರು.

ಈಗಾಗಲೇ ಯೋಜನೆ ಜಾರಿಯಾಗಿದ್ದು, ಗ್ರಾಮಸ್ಥರಿಗೆ ಹವಾಮಾನ ಮಾಹಿತಿಯಲ್ಲದೆ, ಗುಡುಗು, ಮಿಂಚು, ಪ್ರವಾಹ, ಭೂಕುಸಿತ ಮತ್ತು ಇತರ ತುರ್ತು ಸನ್ನಿವೇಶಗಳ ಬಗ್ಗೆ ಮುನ್ನೆಚ್ಚರಿಕೆ ನೀಡಲಾಗುತ್ತದೆ. ಕರ್ನಾಟಕ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರ ಈ ಯೋಜನೆಯನ್ನು ಜಾರಿ ಮಾಡಿದ್ದು, ನಿರ್ವಹಣೆಯನ್ನೂ ಮಾಡುತ್ತಿದೆ.

ಈ ಯೋಜನೆಯನ್ನು ಮೊದಲ ಹಂತದಲ್ಲಿ ಕೃಷ್ಣಾ ನದಿ ಪಾತ್ರದಲ್ಲಿ ಆರಂಭಿಸಲಾಗಿದೆ. ಈ ಪ್ರದೇಶವು ನಿರಂತರ ಪ್ರವಾಹಕ್ಕೆ ತುತ್ತಾಗುತ್ತಿರುವುದೇ ಮುಖ್ಯ ಕಾರಣ. ಪ್ರತಿ ಗ್ರಾಮ ಪಂಚಾಯಿತಿ ಕಚೇರಿಯಲ್ಲೂ ತಲಾ ನಾಲ್ಕು ಸ್ಪೀಕರ್‌ಗಳನ್ನು ಅಳವಡಿಸಲಾಗಿದ್ದು, ಸಂದೇಶಗಳು ನಾಲ್ಕೂ ದಿಕ್ಕಿಗೆ ಕೇಳಿಸುವಂತೆ ವ್ಯವಸ್ಥೆ ಮಾಡಲಾಗಿದೆ ಎಂದು ಮನೋಜ್ ವಿವರಿಸಿದರು.

ಚಲನಚಿತ್ರ ಕ್ಷೇತ್ರಕ್ಕೆ ₹6.60 ಕೋಟಿ ಬಿಡುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಎರಡನೇ ಅಲೆಯ ಲಾಕ್‌ಡೌನ್‌ನಿಂದ ಸಂಕಷ್ಟಕ್ಕೆ ತುತ್ತಾಗಿದ್ದ ಸಿನಿಮಾ ಮತ್ತು ಕಿರುತೆರೆಯ ಕಲಾವಿದರು ಮತ್ತು ತಂತ್ರಜ್ಞರಿಗೆ ರಾಜ್ಯ ಸರ್ಕಾರ ₹6.60 ಕೋಟಿ ಅನುದಾನ ಬಿಡುಗಡೆ ಮಾಡಿ ಆದೇಶ ಹೊರಡಿಸಿದೆ.

ಇತ್ತೀಚೆಗೆ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಘೋಷಿಸಿದ್ದ ಆರ್ಥಿಕ ಪ್ಯಾಕೇಜ್‌ನಲ್ಲಿ ಈ ಕ್ಷೇತ್ರದವರನ್ನೂ ಸೇರಿಸಲಾಗಿತ್ತು. ಸುಮಾರು 22 ಸಾವಿರ ಜನರಿಗೆ ತಲಾ ₹3,000 ಪರಿಹಾರ ಸಿಗಲಿದೆ. ಚಲನಚಿತ್ರ ಕ್ಷೇತ್ರದವರೂ ಸಂಕಷ್ಟದಲ್ಲಿದ್ದು ಅವರಿಗೂ ಪರಿಹಾರ ನೀಡಬೇಕು ಎಂದು ಹಲವು ನಟ–ನಟಿಯರು ಸರ್ಕಾರಕ್ಕೆ ಮನವಿ ಮಾಡಿದ್ದರು.

ಮೌಖಿಕ ಒಪ್ಪಿಗೆ ಸೂಚಿಸಿದ ಐಎಎಸ್ ಅಧಿಕಾರಿ ರೋಹಿಣಿ ಸಿಂಧೂರಿ • ಅಕ್ಷತಾ ಪಾಂಡವಪುರ ನಟನೆ

‘ಭಾರತ ಸಿಂಧೂರಿ’ ಚಿತ್ರ ನಿರ್ಮಾಣಕ್ಕೆ ಸಿದ್ಧತೆ

• ಎಂ.ಎನ್.ಯೋಗೇಶ್

ರೋಹಿಣಿ ಸಿಂಧೂರಿ

ಮಂಡ್ಯ: ಐಎಎಸ್ ಅಧಿಕಾರಿ ರೋಹಿಣಿ ಸಿಂಧೂರಿ ಅವರ ಸಾಧನೆಗಳನ್ನು ಆಧರಿಸಿ ನಗರದ ‘ನಾಲ್ವಡಿ ಕೃಷ್ಣರಾಜ ಒಡೆಯರ್ ಫಿಲಮ್ಸ್’ ಸಂಸ್ಥೆಯು ‘ಭಾರತ ಸಿಂಧೂರಿ’ ಚಲನಚಿತ್ರ ನಿರ್ಮಿಸಲು ಸಿದ್ಧತೆ ನಡೆಸಿದೆ.

ನಟಿ ಅಕ್ಷತಾ ಪಾಂಡವಪುರ ‘ಸಿಂಧೂರಿ’ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ಸಾಹಿತಿ, ನಿರ್ದೇಶಕ ಕೃಷ್ಣ ಸ್ವರ್ಣಸಂದ್ರ ಚಿತ್ರ ನಿರ್ಮಿಸಿ, ನಿರ್ದೇಶಿಸುತ್ತಿದ್ದಾರೆ. ಲಾಕ್‌ಡೌನ್ ಮುಗಿದ ನಂತರ ಚಿತ್ರ ಸೆಟ್ಟೇರಲಿದೆ. ಸಿಂಧೂರಿ ಅವರು ಹುಟ್ಟಿ ಬೆಳೆದ ಆಂಧ್ರಪ್ರದೇಶ, ಕರ್ತವ್ಯ ನಿರ್ವಹಿಸಿದ ಮಂಡ್ಯ, ಮೈಸೂರು, ಹಾಸನ, ಬೆಂಗಳೂರು ಭಾಗದಲ್ಲಿ ಚಿತ್ರೀಕರಣ ನಡೆಯಲಿದೆ ಎಂದು ನಿರ್ದೇಶಕರು ತಿಳಿಸಿದ್ದಾರೆ.

‘ಮೈಸೂರಿನಲ್ಲಿ ಈಚೆಗೆ ನಡೆದ ರೋಹಿಣಿ ಸಿಂಧೂರಿ– ಶಿಲ್ಪಾನಾಗ್ ನಡುವಿನ ಜಟಾಪಟಿಗೂ ಭಾರತ ಸಿಂಧೂರಿ ಚಲನಚಿತ್ರಕ್ಕೂ ಯಾವುದೇ ಸಂಬಂಧವಿಲ್ಲ. ವರ್ಷದಿಂದಲೂ ಚಿತ್ರದ ಸಿದ್ಧತೆ ನಡೆಯುತ್ತಿದೆ. ಮಂಡ್ಯ ಜಿಲ್ಲೆಯಲ್ಲಿ ಅವರು ಮಾಡಿದ ಸಾಧನೆಗಳನ್ನು ಪ್ರಮುಖವಾಗಿಟ್ಟುಕೊಂಡು ಹಾಸನ, ಮೈಸೂರಿನಲ್ಲಿ ಮಾಡಿದ ಸಾಧನೆಗಳೊಂದಿಗೆ ಚಿತ್ರ ರೂಪುಗೊಳ್ಳಲಿದೆ. ಚಿತ್ರ ನಿರ್ಮಾಣಕ್ಕೆ ಸಿಂಧೂರಿ ಒಪ್ಪಿಗೆ ಸೂಚಿಸಿದ್ದಾರೆ. ಈಚೆಗೆ ಭೇಟಿಯಾಗಿದ್ದಾಗ, ಚಿತ್ರ ನೋಡಲು ಕಾತರದಿಂದ ಇರುವುದಾಗಿ ತಿಳಿಸಿದ್ದರು’ ಎಂದು ನಿರ್ದೇಶಕ ಕೃಷ್ಣ ಸ್ವರ್ಣಸಂದ್ರ ಹೇಳಿದರು.

ಕೃಷ್ಣ ಸ್ವರ್ಣಸಂದ್ರ ಅವರು ಚಿತ್ರದ ಬಗ್ಗೆ ತಿಳಿಸಿದ್ದಾರೆ. ಜೀವನಾಧಾರಿತ ಕತೆಗಳಲ್ಲಿ ಅಭಿನಯಿಸುವುದು ಸವಾಲು, ಅದೃಷ್ಟವೇ ಆಗಿದೆ. ಕತೆ ಬಗ್ಗೆ ಕುತೂಹಲವಿದೆ

ಅಕ್ಷತಾ ಪಾಂಡವಪುರ, ನಟಿ

ಸಿಂಧೂರಿ ಮಂಡ್ಯ ಜಿಲ್ಲಾ ಪಂಚಾಯಿತಿ ಸಿಇಒ ಆಗಿದ್ದಾಗ ಜಿಲ್ಲೆಯನ್ನು ರಾಜ್ಯದಲ್ಲೇ ಮೊದಲ ಬಯಲು ಶೌಚಮುಕ್ತ ಜಿಲ್ಲೆಯನ್ನಾಗಿ ಮಾಡಿದ್ದರು. ರಾಷ್ಟ್ರದಲ್ಲೇ 3ನೇ ಜಿಲ್ಲೆಯಾಗಿ ಪ್ರಧಾನಿ ನರೇಂದ್ರ ಮೋದಿ ಮೆಚ್ಚುಗೆಗೂ ಪಾತ್ರವಾಗಿತ್ತು. ರಾಷ್ಟ್ರ ಪ್ರಶಸ್ತಿಗೂ ಪಾತ್ರವಾಯಿತು. ಕೇವಲ ಒಂದು ವರ್ಷದಲ್ಲಿ (2014–15) 1.30 ಲಕ್ಷ ಶೌಚಾಲಯ ನಿರ್ಮಿಸಿದ ಕೀರ್ತಿಗೆ ಅವರು ಪಾತ್ರರಾಗಿದ್ದರು.

ಜೊತೆಗೆ ಜಿಲ್ಲೆಯಲ್ಲಿ ಅವ್ಯಾಹತವಾಗಿ ನಡೆಯುತ್ತಿದ್ದ ಬಾಲ್ಯವಿವಾಹ ನಿರ್ಮೂಲನೆ, ಹೆಣ್ಣು ಭ್ರೂಣಹತ್ಯೆ ತಡೆಗೆ ಪ್ರಯತ್ನಿಸಿದ್ದರು. ಈ ಅಂಶಗಳನ್ನಾಧರಿಸಿ ನಿರ್ದೇಶಕರು ಕತೆ ಸಿದ್ಧಗೊಳಿಸಿದ್ದಾರೆ.

ರಾಜಕೀಯ: ಸಿಂಧೂರಿ ಸಿಇಒ ಆಗಿದ್ದಾಗ ಮಂಡ್ಯ ಜಿಲ್ಲಾ ಪಂಚಾಯಿತಿ ಅನಿರೀಕ್ಷಿತ ರಾಜಕೀಯ ಬೆಳವಣಿಗೆಗೂ ಸಾಕ್ಷಿಯಾಗಿತ್ತು. ಅವರ ಅವಧಿಯಲ್ಲಿ 7 ಮಂದಿ ಅಧ್ಯಕ್ಷರು ಬದಲಾಗಿದ್ದರು. ಆಗಲೂ ರೋಹಿಣಿ ಒತ್ತಡದಲ್ಲಿ ಕೆಲಸ ಮಾಡಿದ್ದರು. ಈ ಅಂಶಗಳೂ ಚಿತ್ರದಲ್ಲಿ ಪ್ರಮುಖ ಪಾತ್ರವಹಿಸಲಿವೆ.

‘ಕಾರ್ಯಕ್ರಮವೊಂದರಲ್ಲಿ ಅಂಬರೀಷ್ ಅವರು ರೋಹಿಣಿ ಸಿಂಧೂರಿ ಅವರನ್ನು, ‘ನೀವು ಸುಂದರವಾಗಿದ್ದೀರಿ, ಚೆನ್ನಾಗಿ ಕೆಲಸವನ್ನೂ ಮಾಡುತ್ತೀರಿ’ ಎಂದು ಹೊಗಳಿದ್ದರು. ಚಿತ್ರದಲ್ಲಿ ಅಂಬರೀಷ್ ಪಾತ್ರವೂ ಪ್ರಮುಖವಾಗಿರಲಿದೆ’ ಎಂದು ಕೃಷ್ಣ ತಿಳಿಸಿದರು.

ಈ ಕುರಿತು ಪ್ರತಿಕ್ರಿಯೆ ಪಡೆಯಲು ರೋಹಿಣಿ ಸಿಂಧೂರಿ ಅವರನ್ನು ಸಂಪರ್ಕಿಸಿದಾಗ ಅವರು ಕರೆ ಸ್ವೀಕರಿಸಲಿಲ್ಲ.

ಸಿಂಧೂರಿಗೆ ನಟಿ ರಮ್ಯಾ ಬೆಂಬಲ

ರಮ್ಯಾ

ಬೆಂಗಳೂರು: ಇತ್ತೀಚೆಗಷ್ಟೇ ‘ರಾಜಕೀಯ ಈಗ ಮುಗಿದುಹೋದ ಪ್ರಯಾಣ’ ಎಂದು ಹೇಳಿ ಸುದ್ದಿಯಾಗಿದ್ದ ನಟಿ, ಮಾಜಿ ಸಂಸದೆ ರಮ್ಯಾ ಇದೀಗ ಮೈಸೂರಿನ ಜಿಲ್ಲಾಧಿಕಾರಿಯಾಗಿದ್ದ ರೋಹಿಣಿ ಸಿಂಧೂರಿ ಅವರ ವರ್ಗಾವಣೆ ಕುರಿತು ಪ್ರತಿಕ್ರಿಯೆ ನೀಡಿದ್ದಾರೆ.

ಇನ್‌ಸ್ಟಾಗ್ರಾಂ ಖಾತೆಯಲ್ಲಿ ‘ರೋಹಿಣಿ ಸಿಂಧೂರಿ ಅವರ ಕಾರ್ಯವೈಖರಿಯನ್ನು ನಾನು ಯಾವಾಗಲೂ ಮೆಚ್ಚಿದ್ದೇನೆ. ಈಗಲೂ ಮೆಚ್ಚಿಕೊಳ್ಳುತ್ತೇನೆ. ಆದರೆ ಇಂದಿನ ರಾಜಕೀಯ, ಉತ್ತಮ ಕೆಲಸಗಳನ್ನು ಮಾಡುತ್ತಿರುವ ಪ್ರಾಮಾಣಿಕ ಅಧಿಕಾರಿಗಳನ್ನು ಪ್ರೋತ್ಸಾಹಿಸುತ್ತಿಲ್ಲ ಮತ್ತು ಬೆಂಬಲಿಸುತ್ತಿಲ್ಲ ಎನ್ನುವ ನಿರಾಶೆ ಇದೆ’ ಎಂದು ಉಲ್ಲೇಖಿಸಿದ್ದಾರೆ. ಇದರ ಜೊತೆಗೆ ಖಾಸಗಿ ಸುದ್ದಿ ಮಾಧ್ಯಮಕ್ಕೆ ರೋಹಿಣಿ ಸಿಂಧೂರಿ ಅವರು ನೀಡಿದ ಸಂದರ್ಶನದ ತುಣುಕು ಅಪ್‌ಲೋಡ್ ಮಾಡಿದ್ದಾರೆ.

ಇದರಲ್ಲಿ ವರ್ಗಾವಣೆ ನಿರೀಕ್ಷೆ ಮಾಡಿದ್ರಾ ಎನ್ನುವ ಪ್ರಶ್ನೆಯೊಂದಕ್ಕೆ ಉತ್ತರಿಸುತ್ತಿರುವ ರೋಹಿಣಿ ಸಿಂಧೂರಿ, ‘ಇಲ್ಲ, ನಿರೀಕ್ಷೆ ಮಾಡಿರಲಿಲ್ಲ. ಎಂಟು ತಿಂಗಳಲ್ಲಿ ಒಳ್ಳೆಯ ಕೆಲಸ ಮಾಡುತ್ತಿರುವಾಗ, ಕೋವಿಡ್ ಪ್ರಕರಣಗಳು ಇಳಿಕೆಯಾಗುತ್ತಿರುವಾಗ, ರಾಜ್ಯದಲ್ಲೇ ಅತಿ ಹೆಚ್ಚು ಲಸಿಕೆಯನ್ನು ನೀಡಿರುವಾಗ, ತಾಲ್ಲೂಕು ಮಟ್ಟದಲ್ಲಿ ಒಳ್ಳೆಯ ಕೆಲಸವಾಗುತ್ತಿರುವಾಗ, ಜನರಿಂದ ಉತ್ತಮ ಸ್ಪಂದನೆ ಸಿಗುತ್ತಿರುವಾಗ ವರ್ಗಾವಣೆ ನಿರೀಕ್ಷೆ ಮಾಡಿರಲಿಲ್ಲ’ ಎಂದಿದ್ದಾರೆ.

‘ಮೈಸೂರಿನ ಹೆಸರಿಗೆ ಕಳಂಕ’

ಮೈಸೂರು: ‘ಎಂಟು ತಿಂಗಳಿಂದ ಸುಮ್ಮನಿದ್ದು, ವರ್ಗಾವಣೆಯಾಗಿ ಹೋಗುವಾಗ ಭೂ ಮಾಫಿಯಾ ಕುರಿತು ಮಾತನಾಡಿದ್ದಾರೆ. ಈಗ ಹೇಳಿಕೆ ನೀಡಿದ್ದು ಏಕೆ? ಈ ಆರೋಪಗಳಿಗೆ ಜಿಲ್ಲಾ ಉಸ್ತುವಾರಿ ಸಚಿವರೇ ಉತ್ತರಿಸಬೇಕು’ ಎಂದು ಕಾಂಗ್ರೆಸ್ ಮುಖಂಡ, ಮಾಜಿ ಶಾಸಕ ವಾಸು ಆಗ್ರಹಿಸಿದರು.

‘ಮೈಸೂರಿನಿಂದ ವರ್ಗಾವಣೆಯಾಗಿರುವ ಜಿಲ್ಲಾಧಿಕಾರಿ, ಮೈಸೂರಿನ ಹೆಸರಿಗೆ ಕಳಂಕ ಉಂಟುಮಾಡುವ ಹೇಳಿಕೆ ನೀಡಿದ್ದಾರೆ. ಅವರ ಹೇಳಿಕೆಯಿಂದ ಮೈಸೂರಿನ ಜನರನ್ನು ಎಲ್ಲರೂ ಅನುಮಾನದಿಂದ ನೋಡುವಂತಾಗಿದೆ’ ಎಂದು ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಹೆಸರು ಹೇಳದೆಯೇ ರೋಹಿಣಿ ಸಿಂಧೂರಿ ವಿರುದ್ಧ ಕಿಡಿಕಾರಿದರು.

‘ಐಎಎಸ್ ಅಧಿಕಾರಿಗಳ ವರ್ಗಾವಣೆಗೆ ಭೂ ಹಗರಣ ಕಾರಣ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮೈಸೂರಿನಲ್ಲಿ ಇಬ್ಬರು ಐಎಎಸ್ ಅಧಿಕಾರಿಗಳ ನಡುವಿನ ಕಿತ್ತಾಟಕ್ಕೆ ಭೂ ಹಗರಣ ಕಾರಣ. ಅದರ ಬಗ್ಗೆ ಸ್ವತಂತ್ರ ಸಂಸ್ಥೆ ಮೂಲಕ ತನಿಖೆ ನಡೆಸಬೇಕು. ವರ್ಗಾವಣೆ ಶಿಕ್ಷೆ ಅಲ್ಲ. ಈ ಇಬ್ಬರೂ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕು’ ಎಂದು ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಒತ್ತಾಯಿಸಿದರು.

ಸುದ್ದಿಗಾರರ ಜೊತೆ ಮಂಗಳವಾರ ಮಾತನಾಡಿದ ಅವರು, ‘ಮೈಸೂರು ಮಹಾ ನಗರಪಾಲಿಕೆಯ ಆಯುಕ್ತರಾಗಿದ್ದ ಶಿಲ್ಪಾನಾಗ್ ಮತ್ತು ಜಿಲ್ಲಾಧಿಕಾರಿಯಾಗಿದ್ದ ರೋಹಿಣಿ ಸಿಂಧೂರಿ ನಡುವಿನ ಜಗಳಕ್ಕೆ ಬಿಜೆಪಿಯ ಸಂಸದ, ಶಾಸಕರು ಮತ್ತು ಜೆಡಿಎಸ್ ಶಾಸಕ ಸಾ.ರಾ. ಮಹೇಶ್ ಕಾರಣ. ಮೊದಲಿಗೆ ಒಬ್ಬ ಐಎಎಸ್ ಅಧಿಕಾರಿಯನ್ನು ಬಿಜೆಪಿಯವರು ಬೆಂಬಲಿಸಿದರು. ಅದರಲ್ಲೂ ಸಂಸದ ಪ್ರತಾಪ್ ಸಿಂಹ ಮೊದಲು ರೋಹಿಣಿ ಸಿಂಧೂರಿ ಪರ ಇದ್ದರು. ಬಳಿಕ ವಿರೋಧಿಸಿದರು. ಇಬ್ಬರು ಅಧಿಕಾರಿಗಳನ್ನು ಪರಸ್ಪರ ಎತ್ತಿ ಕಟ್ಟಿದವರೇ ಬಿಜೆಪಿ ಶಾಸಕರು’ ಎಂದು ಆಪಾದಿಸಿದರು

ಸಿದ್ದರಾಮಯ್ಯ

‘ಇಂಥ ಸಂದರ್ಭದಲ್ಲಿ ಜಿಲ್ಲಾ ಮಂತ್ರಿ ಏನು ಮಾಡುತ್ತಿದ್ದರು. ಅವರ ವೈಫಲ್ಯ ಅಲ್ಲವೇ’ ಎಂದು ಪ್ರಶ್ನಿಸಿದರು. ‘ಭೂ ಹಗರಣದ ತನಿಖೆಗೆ ಮುಂದಾಗಿದ್ದೇ ನನ್ನ ವರ್ಗಾವಣೆಗೆ ಕಾರಣ ಎಂದು ರೋಹಿಣಿ ಸಿಂಧೂರಿ ಹೇಳಿದ್ದಾರೆ. ಜಿಲ್ಲಾಧಿಕಾರಿ ಹುದ್ದೆಯಲ್ಲಿ ಶಿಲ್ಪಾನಾಗ್ ಅವರನ್ನು ಕೂರಿಸುವ ಪ್ರಯತ್ನ ವಿಫಲವಾದಾಗ ಇಬ್ಬರೂ ಅಧಿಕಾರಿಗಳನ್ನು ಬಿಜೆಪಿಯ ಸಂಸದ, ಶಾಸಕರು ಎತ್ತಿ ಕಟ್ಟಿದರು’ ಎಂದು ಸಿದ್ದರಾಮಯ್ಯ ಅವರು ಟೀಕಿಸಿದರು.

ಕರಾವಳಿ: ನಾಳೆಯಿಂದ ಮಳೆ ಸಾಧ್ಯತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಂಗಾರು ಆರಂಭಗೊಂಡಿರುವುದರಿಂದ ರಾಜ್ಯದ ಕರಾವಳಿ ಜಿಲ್ಲೆಗಳಲ್ಲಿ ಜೂ.10ರಿಂದ 13ರವರೆಗೆ ಭಾರಿ ಮಳೆಯಾಗುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಐದು ದಿನಗಳ ಹಿಂದೆ ರಾಜ್ಯ ಪ್ರವೇಶಿಸಿದ್ದ ಮುಂಗಾರು, ಎರಡು ದಿನ ಹಲವು ಜಿಲ್ಲೆಗಳಲ್ಲಿ ಧಾರಾಕಾರ ಮಳೆ ಸುರಿಸಿತ್ತು.

ಈಗ ಕರಾವಳಿ ಭಾಗದಲ್ಲಿ ಮತ್ತೆ ಮಳೆ ಹೆಚ್ಚಾಗುವ ಮುನ್ಸೂಚನೆ ಇದೆ. ಈ ಭಾಗದ ಉತ್ತರ ಕನ್ನಡ, ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳಲ್ಲಿ ಮೂರೂ ದಿನ ‘ಯೆಲ್ಲೊ ಅಲರ್ಟ್’ ಘೋಷಿಸಿರುವುದಾಗಿ ಇಲಾಖೆ ತಿಳಿಸಿದೆ.

‘ಉತ್ತರ ಒಳನಾಡಿನ ಜಿಲ್ಲೆಗಳಲ್ಲಿ ಈ ವಾರ ಒಣಹವೆ ಮುಂದುವರಿಯಲಿದೆ. ದಕ್ಷಿಣ ಒಳನಾಡಿನ ಹಲವು ಜಿಲ್ಲೆಗಳಲ್ಲಿ ಗುಡುಗು, ಸಿಡಿಲು ಹೆಚ್ಚಾಗಿ ಇರಲಿದ್ದು, ಸಾಧಾರಣ ಮಳೆಯಾಗಬಹುದು’ ಎಂದೂ ಹೇಳಿದೆ.

ಕಾರವಾರ ಹಾಗೂ ಕೋಲಾರ ಜಿಲ್ಲೆಯ ಮುಳಬಾಗಿಲು ಭಾಗದಲ್ಲಿ ಸೋಮವಾರ ತಲಾ 1 ಸೆಂ.ಮೀ ಮಳೆಯಾಗಿದೆ. ರಾಯಚೂರಿನಲ್ಲಿ 35 ಡಿಗ್ರಿ ಸೆಲ್ಸಿಯಸ್ ಗರಿಷ್ಠ ತಾಪಮಾನ ದಾಖಲಾಗಿದೆ. ಕಲಬುರ್ಗಿ, ವಿಜಯಪುರ, ಬೀದರ್, ಹಾಸನದಲ್ಲಿ ತಲಾ 34 ಹಾಗೂ ಚಿಕ್ಕಮಗಳೂರಿನಲ್ಲಿ 18 ಡಿಗ್ರಿ ಸೆಲ್ಸಿಯಸ್ ಕನಿಷ್ಠ ತಾಪಮಾನ ದಾಖಲಾಗಿದೆ.

ಅಲ್ಲಲ್ಲಿ ಮಳೆ

ಮಡಿಕೇರಿ/ಕಾರವಾರ: ಕೊಡಗು ಜಿಲ್ಲೆಯ ಪೊನ್ನಂಪೇಟೆ, ತಿತಿಮತಿ ಹಾಗೂ ಮಡಿಕೇರಿಯಲ್ಲಿ ಮಂಗಳವಾರ ಸಾಧಾರಣ ಮಳೆಯಾಗಿದೆ.

ಕಾರವಾರ ಜಿಲ್ಲೆಯ ವಿವಿಧೆಡೆ ಆಗಾಗ ಜಿಟಿಜಿಟಿ ಮಳೆಯಾಗಿದೆ. ಕಾರವಾರ ಮತ್ತು ಶಿರಸಿಯಲ್ಲಿ ಬೆಳಿಗ್ಗೆಯಿಂದಲೇ ಮೋಡ ಕವಿದ ವಾತಾವರಣವಿದ್ದು, ಕೆಲ ಸಲ ಸಾಧಾರಣ ಮಳೆಯಾಯಿತು.

ದಾಂಡೇಲಿ, ಜೊಯಿಡಾ, ಅಂಕೋಲಾ, ಸಿದ್ದಾಪುರ, ಹೊನ್ನಾವರ, ಗೋಕರ್ಣ ಸುತ್ತಮುತ್ತಲೂ ತುಂತುರು ಮಳೆ ಬಿದ್ದಿದೆ.

ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿಯಮಿತ
(ಕರ್ನಾಟಕ ಸರಕಾರದ ಉದ್ಯಮ)
ಪ್ರಧಾನ ಕಛೇರಿ: “ಪ್ರಿಯದರ್ಶಿನಿ ನೇಕಾರ ಭವನ” 1ನೇ, ಮಹಡಿ, ಕೆ.ಹೆಚ್.ಪಾಟೀಲ ಕಾಲೇಜ ಎದುರುಗಡೆ ವಿದ್ಯಾನಗರ, ಹುಬ್ಬಳ್ಳಿ–580 031
ಇ–ಮೇಲ್ khdcadmnhubli@gmail.com
ಸಂಖ್ಯೆ:ಕಕೈಅನಿ:ವ್ಯನಿ:ಸಿ.ಮ.ಆ:2021–22: ದಿನಾಂಕ : 07.06.2021

ಇ–ಟೆಂಡರ್ ಪ್ರಕಟಣೆ

ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮವು ರಾಜ್ಯಾದಂತ ವಿವಿದ ಘಟಕಗಳಿಗೆ ಅವಶ್ಯವಿರುವ ತಾಂತ್ರಿಕ ಸೂಪರವೈಜರ್/ಕಂಪ್ಯೂಟರ್ ಆಪರೇಟರ್, ಅಕೌಂಟ್ಸ್ ಕ್ಲರ್ಕ, ಮಾರಾಟ ಸಹಾಯಕರು,ವಾಹನ ಚಾಲಕರು, ಸೆಕ್ಯೂರಿಟಿಗಾರ್ಡ, ಅಟೆಂಡರ್ ಮತ್ತು ಸ್ವೀಪರ್ಸ್ ಸಿಬ್ಬಂದಿಗಳನ್ನು ಹೊರಗುತ್ತಿಗೆ ಆಧಾರದ ಮೇಲೆ ಪಡೆಯಲು ಇ–ಪ್ರಕ್ಯೂರಮೆಂಟ್ ಮೂಲಕ ಟೆಂಡರ್‌ನ್ನು ಅಹ್ವಾನಿಸಿದೆ.

ಸೂಚನೆ. (1). ಟೆಂಡರ್ ಅಂದಾಜು ಮೊತ್ತ ರೂ. 288.00 ಲಕ್ಷಗಳು (2) ಇ.ಎಮ್.ಡಿ. ಮೊತ್ತ ರೂ. 4.00 ಲಕ್ಷ. (3) ಪ್ರೀ ಬಿಡ್ 07.07.2021 ರಂದು. ಬೆ. 11.00 ಘಂಟೆಗೆ. (4) ಅರ್ಜಿ ಸಲ್ಲಿಸುವ ಅಂತಿಮ ದಿನಾಂಕ. 12.07.2021 ಸಂಜೆ. 17.30. ಘಂಟೆಯವರೆಗೆ ಮಾತ್ರ (5) ತಾಂತ್ರಿಕ ಬಿಡ್ ತೆರೆಯುವ ದಿನಾಂಕ. 15.07.2021 ಬೆ. 11.00 ಘಂಟೆಗೆ (6) ಹೆಚ್ಚಿನ ಮಾಹಿತಿಗಾಗಿ ಮೇಲ್ಕಂಡ ಕಛೇರಿಯ ವ್ಯವಸ್ಥಾಪಕರು (ಸಿ ಮತ್ತು ಆ) ಮೊ. 9880778677 ಮುಖಾಂತರ ಸಂಪರ್ಕಿಸಬಹುದಾಗಿದೆ. ಅಥವಾ ಇ–ಪ್ರಕ್ಯೂರಮೆಂಟ್ ವೆಬ್‌ಸೈಟ್. www.eproc.karnataka.gov.in

ಸಹಿ/– ವ್ಯವಸ್ಥಾಪಕ ನಿರ್ದೇಶಕರು,
ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿಯಮಿತ, ಹುಬ್ಬಳ್ಳಿ
ವಾಸಾಸಂಇ/ಧಾರವಾಡ/ಎಂ.ಸಿ.ಎ/158/2021–22

ಕರ್ನಾಟಕ ಸರಕಾರ
ಉಪ ನಿರ್ದೇಶಕರು ಸಮಾಜ ಕಲ್ಯಾಣ ಇಲಾಖೆ. ಗದಗ
ದೂ : 08372–231828 ಇ–ಮೇಲ್ : dswogadag@gmail.com

ಇ–ಪ್ರೋಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

2021–22ನೇ ಸಾಲಿಗೆ ಗದಗ ಜಿಲ್ಲಾ ವ್ಯಾಪ್ತಿಯ ಸಮಾಜ ಕಲ್ಯಾಣ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖಾ ವತಿಯಿಂದ ಕಾರ್ಯನಿರ್ವಹಿಸುತ್ತಿರುವ ಸರ್ಕಾರಿ ವಸತಿ ಶಾಲೆ, ಆಶ್ರಮ ಶಾಲೆ, ಮೆಟ್ರಿಕ್ ಪೂರ್ವ/ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಿಗೆ ಆಹಾರ ಸಾಮಗ್ರಿ ಸರಬರಾಜು ಮಾಡಲು ಟೆಂಡರ್ ಸಂಖ್ಯೆ: SWD/2021-22/IND1486 ದಿನಾಂಕ: 07/06/2021 ರನ್ವಯ e-portal ನಲ್ಲಿ ಟೆಂಡರ್ ಕರೆಯಲಾಗಿದ್ದು ಇಚ್ಛೆಯುಳ್ಳ ಅರ್ಹ ಗುತ್ತಿಗೆದಾರರು e-portal ಮೂಲಕ ಟೆಂಡರ್ ಸಲ್ಲಿಸಬಹುದಾಗಿದೆ. ಟೆಂಡರ್‌ಗಿಟ್ಟ ಅಂದಾಜು ಮೊತ್ತ ರೂ. 485.47 ಲಕ್ಷ.

ಹೆಚ್ಚಿನ ವಿವರಗಳನ್ನು ಹಾಗೂ ಟೆಂಡರ್ ದಸ್ತಾವೇಜುಗಳನ್ನು Website: www.eproc.karnataka.gov.in ನಲ್ಲಿ ಪಡೆಯಬಹುದಾಗಿದೆ. ಟೆಂಡರಗಳನ್ನು ದಿನಾಂಕ: 07–06–2021 ರಿಂದ 06–07–2021 ರ ಸಂಜೆ 5.00 ಗಂಟೆವರೆಗೆ e-portal ನಲ್ಲಿ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಕಚೇರಿ ದೂರವಾಣಿ ಸಂಖ್ಯೆ 08372–231828 ಸಂಪರ್ಕಿಸಲು ಕೋರಿದೆ.

ಸಹಿ/– (ಪ್ರಶಾಂತ ಎಮ್. ವರಗಪ್ಪನವರ)
ಉಪನಿರ್ದೇಶಕರು,
ಸಮಾಜ ಕಲ್ಯಾಣ ಇಲಾಖೆ, ಗದಗ
ವಾಸಾಸಂಇ/ಗದಗ/ಎಂ.ಸಿ.ಎ/104/2021–22

ಕರ್ನಾಟಕ ಸರ್ಕಾರ
ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ
ನಂ.1–1/5, ನೆಲಮಹಡಿ, ಸಿಲ್ವರ್ ಜ್ಯೂಬಿಲಿ ಬ್ಲಾಕ್, ಯುನಿಟಿ ಬಿಲ್ಡಿಂಗ್, ಸಿ.ಎಸ್.ಐ. ಕಾಂಪೌಂಡ್, 3ನೇ ಕ್ರಾಸ್, ಮಿಷನ್ ರಸ್ತೆ, ಬೆಂಗಳೂರು–560027
ಸಂಖ್ಯೆ : ರೇರ/ಆಡಳಿತ/41/2021–22 ದಿನಾಂಕ : 08.06.2021

ಟೆಂಡರ್ ಪ್ರಕಟಣೆ (ಇ–ಪ್ರಕ್ಯೂರ್‌ಮೆಂಟ್ ಮೂಲಕ)

ವಿಷಯ : ಬಾಡಿಗೆ ಕಾರುಗಳನ್ನು ಹೊರಗುತ್ತಿಗೆ ಆಧಾರದ ಮೇಲೆ ಪಡೆಯುವ ಬಗ್ಗೆ.

ಈ ಕಛೇರಿಗೆ ಹೊರ ಸಂಪನ್ಮೂಲದಿಂದ ಬಾಡಿಗೆ ಕಾರುಗಳನ್ನು ಹೊರಗುತ್ತಿಗೆ ಆಧಾರದ ಮೇಲೆ ಪಡೆಯಲು ಕರ್ನಾಟಕ ಪಾರದರ್ಶಕ ಅಧಿನಿಯಮ 1999–2000 ಮೇರೆಗೆ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳನ್ನು ಇ–ಪ್ರೊಕ್ಯೂರ್‌ಮೆಂಟ್ ವಿಳಾಸ http://eproc.karnataka.gov.in ರಲ್ಲಿ ಪರಿಶೀಲಿಸಿ ಸೂಕ್ತ ದಾಖಲಾತಿಗಳೊಂದಿಗೆ ಟೆಂಡರ್ ಸಲ್ಲಿಸಬಹುದು. ಇ–ಪೋರ್ಟಲ್‌ನಲ್ಲಿ ಕಾಣಿಸಿದೆ ನಿಬಂಧನೆಗಳು ಟೆಂಡರ್ ಇ.ಎಂ.ಡಿ ಮೊತ್ತ ಹಾಗೂ ಇತರೆ ವಿವರಗಳನ್ನು ಗಮನಿಸಿ ಕ್ರಮ ವಹಿಸುವುದು. ವಿವರ ಈ ಕೆಳಕಂಡಂತೆ ಇರುತ್ತದೆ.

ಕ್ರ. ಸಂ.	ವಿಷಯ	ದಿನಾಂಕ
1	ಟೆಂಡರನ್ನು ಇ ಪೋರ್ಟಲ್ ಮೂಲಕ ಡೌನ್‌ಲೋಡ್ ಮಾಡಿಕೊಳ್ಳುವ ದಿನಾಂಕ	08.06.2021
2	ದ್ವಿ ಲಕೋಟೆ ಪದ್ಧತಿಯಂತೆ ಇ ಪೋರ್ಟಲ್‌ನಲ್ಲಿ ಟೆಂಡರನ್ನು ಸಲ್ಲಿಸುವ ದಿನಾಂಕ	23.06.2021
3	ದ್ವಿ ಲಕೋಟೆ ಪದ್ಧತಿಯಂತೆ ಇ ಪೋರ್ಟಲ್‌ನಲ್ಲಿ ಟೆಂಡರನ್ನು ತೆರೆಯುವ ದಿನಾಂಕ	24.06.2021

ಸಹಿ/– ಕಾರ್ಯದರ್ಶಿ
ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ, ಬೆಂಗಳೂರು.

ಕೋವಿಡ್–19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ರಾಜ್ಯ ಪೊಲೀಸ್ ವಸತಿ ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ನಂ. 59, ರಿಚ್‌ಮಂಡ್ ರಸ್ತೆ, (ಜನರಲ್ ಕೆ.ಎಸ್. ತಿಮ್ಮಯ್ಯ ರಸ್ತೆ) ಬೆಂಗಳೂರು–25.
ದೂರವಾಣಿ: 080–25584102 / 25594893. ವೆಬ್‌ಸೈಟ್: www.ksphc.org
ಇ–ಮೇಲ್: eecontractksphc@gmail.com
ಸಂಖ್ಯೆ: ಇಇ/ಕೆಎಸ್‌ಪಿಹೆಚ್&ಐಡಿಸಿಎಲ್/ಕಾಂಟ್ರ್ಯಾಕ್ಟ್/ಟೆಂಡರ್/2021–2022/93 ದಿನಾಂಕ: 05.06.2021

ಅಲ್ಪಾವಧಿ ಟೆಂಡರ್ ಆಹ್ವಾನ ಪ್ರಕಟಣೆ

ಕೆಎಸ್‌ಪಿಹೆಚ್ ಮತ್ತು ಐಡಿಸಿಎಲ್ ಕೆಳಕಂಡ ಕಾಮಗಾರಿಗಳಿಗೆ ಪಿಎಂಸಿ ಮತ್ತು 3ನೇ ವ್ಯಕ್ತಿ/ಸಂಸ್ಥೆಯಿಂದ ಗುಣಮಟ್ಟ ಭರವಸೆ ಹಾಗೂ ಕೆಎಸ್‌ಪಿಹೆಚ್ ಮತ್ತು ಐಡಿಸಿಎಲ್‌ನ ಕಾಮಗಾರಿಗಳ ಮೇಲ್ವಿಚಾರಣೆಗಾಗಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://eproc.karnataka.gov.in ಮೂಲಕ ಟೆಂಡರ್‌ನ್ನು ಆಹ್ವಾನಿಸುತ್ತಿದೆ.

1) ಕೆಎಸ್‌ಪಿಹೆಚ್ ಮತ್ತು ಐಡಿಸಿಎಲ್, ಬೆಂಗಳೂರು ಗ್ರಾಮೀಣ ವಿಭಾಗದ ಪ್ರಾಜೆಕ್ಟ್ ಮ್ಯಾನೇಜ್‌ಮೆಂಟ್ ಕನ್ಸಲ್ಟೆಂಟ್ (ಪಿಎಂಸಿ) “ಕಮಾಂಡೆಂಟ್ ಕ್ವಾರ್ಟರ್ಸ್ ಅಡ್ಮಿನ್ ಬ್ಲಾಕ್‌ನ 1ನೇ ಮಹಡಿ ನಿರ್ಮಾಣ–1 ಸಂಖ್ಯೆ, ಆರ್‌ಎಸ್‌ಐ ಕ್ವಾರ್ಟರ್ಸ್–4 ಸಂಖ್ಯೆ (ಬ್ಲಾಕ್–ಸಿ), ಕಲ್ಯಾಣ ಕೇಂದ್ರ (ಸಮುದಾಯ ಕೇಂದ್ರ), ಗಾರ್ಡ್ ರೂಮ್, ತುಮಕೂರು ಜಿಲ್ಲೆಯ ಕೊರಟಗೆರೆ ತಾಲ್ಲೂಕಿನ ತುಂಬಗನಹಳ್ಳಿಯಲ್ಲಿ 12ನೇ ಬೆಟಾಲಿಯನ್ ಕೆಎಸ್‌ಆರ್‌ಪಿಗೆ ಪೆರೇಡ್ ಮೈದಾನ, ಹೆಚ್ಚುವರಿ ಕಾಮಗಾರಿ, ರಸ್ತೆ, ರಾಂಪ್ ಯಾರ್ಡ್ ಲೈಟಿಂಗ್, ಓವರ್‌ಹೆಡ್ ಟ್ಯಾಂಕ್ ಸಂಪ್ ಮತ್ತು ಪೀಠೋಪಕರಣಗಳ ಸರಬರಾಜು.
2) ‘ಹಾವೇರಿಯಲ್ಲಿ ಡಿಎಆರ್ ನಿರ್ಮಾಣ’ ಕಾಮಗಾರಿಗೆ ದಾವಣಗೆರೆ ವಿಭಾಗದ ಕೆಎಸ್‌ಪಿಹೆಚ್ ಮತ್ತು ಐಡಿಸಿಎಲ್‌ನ ಕಾಮಗಾರಿಗಳಿಗೆ 3ನೇ ವ್ಯಕ್ತಿ/ಸಂಸ್ಥೆಯಿಂಧ ಗುಣಮಟ್ಟದ ಭರವಸೆ ಮತ್ತು ಮೇಲ್ವಿಚಾರಣೆ.
3) ‘ವಿಜಯಪುರ ಜಿಲ್ಲೆಯಲ್ಲಿ ಡಿಎಆರ್ ನಿರ್ಮಾಣ’ ಕಾಮಗಾರಿಗೆ ಬೆಳಗಾವಿ ವಿಭಾಗದ ಕೆಎಸ್‌ಪಿಹೆಚ್ ಮತ್ತು ಐಡಿಸಿಎಲ್‌ನ ಕಾಮಗಾರಿಗಳಿಗೆ 3ನೇ ವ್ಯಕ್ತಿ/ಸಂಸ್ಥೆಯಿಂಧ ಗುಣಮಟ್ಟದ ಭರವಸೆ ಮತ್ತು ಮೇಲ್ವಿಚಾರಣೆ.
4) ‘ಕೊಪ್ಪಳದಲ್ಲಿ ಡಿಎಆರ್ ನಿರ್ಮಾಣ’ ಕಾಮಗಾರಿಗೆ ಕಲಬುರಗಿ ವಿಭಾಗದ ಕೆಎಸ್‌ಪಿಹೆಚ್ ಮತ್ತು ಐಡಿಸಿಎಲ್‌ನ ಕಾಮಗಾರಿಗಳಿಗೆ 3ನೇ ವ್ಯಕ್ತಿ/ಸಂಸ್ಥೆಯಿಂಧ ಗುಣಮಟ್ಟದ ಭರವಸೆ ಮತ್ತು ಮೇಲ್ವಿಚಾರಣೆ.
5) ‘ಬೆಂಗಳೂರು 3ನೇ ಬೆಟಾಲಿಯನ್ ಮತ್ತು 4ನೇ ಬೆಟಾಲಿಯನ್‌ನಲ್ಲಿ ಆರ್ಮರಿ ನಿರ್ಮಾಣ’ ಕಾಮಗಾರಿಗೆ ಬೆಂಗಳೂರು ನಗರ ವಿಭಾಗದ ಕೆಎಸ್‌ಪಿಹೆಚ್ ಮತ್ತು ಐಡಿಸಿಎಲ್‌ನ ಕಾಮಗಾರಿಗಳಿಗೆ 3ನೇ ವ್ಯಕ್ತಿ/ಸಂಸ್ಥೆಯಿಂಧ ಗುಣಮಟ್ಟದ ಭರವಸೆ ಮತ್ತು ಮೇಲ್ವಿಚಾರಣೆ.
6) ‘ಧಾರವಾಡದ ಪೊಲೀಸ್ ತರಬೇತಿ ಶಾಲೆಗಾಗಿ ಮೊದಲ ಮಹಡಿಯಲ್ಲಿ ವಿವಿಧೋದ್ದೇಶ ಸಭಾಂಗಣ ಮತ್ತು 60 ಸಂಖ್ಯೆ ಸಾಮರ್ಥ್ಯದ ಶಾಲಾ ಕೊಠಡಿಗಳ ನಿರ್ಮಾಣ’ ಕಾಮಗಾರಿಗೆ ಬೆಳಗಾವಿ ವಿಭಾಗದ ಕೆಎಸ್‌ಪಿಹೆಚ್ ಮತ್ತು ಐಡಿಸಿಎಲ್‌ನ ಕಾಮಗಾರಿಗಳಿಗೆ 3ನೇ ವ್ಯಕ್ತಿ/ಸಂಸ್ಥೆಯಿಂಧ ಗುಣಮಟ್ಟದ ಭರವಸೆ ಮತ್ತು ಮೇಲ್ವಿಚಾರಣೆ. (2ನೇ ಕರೆ)

ಕಟ್ಟಡ ಕಾರ್ಯಗಳ ಗುಣಮಟ್ಟ ಭರವಸೆ ಮತ್ತು ಪ್ರಾಜೆಕ್ಟ್ ಮಾನಿಟರಿಂಗ್ ಸೇವೆಗಳಲ್ಲಿ ನಿರ್ದಿಷ್ಟ ಅನುಭವವನ್ನು ಹೊಂದಿರುವ ಆಸಕ್ತ ಸಲಹೆಗಾರರು / ಸಂಸ್ಥೆಗಳು, ಅಗತ್ಯವಾದ ಮೂಲಸೌಕರ್ಯಗಳು ಮತ್ತು ಅಂತಹ ಸೇವೆಗಳನ್ನು ಕೈಗೊಳ್ಳಲು ಹಣಕಾಸಿನ ಸಾಮರ್ಥ್ಯಗಳನ್ನು ಹೊಂದಿರುವವರು ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸಬಹುದು.
ಟೆಂಡರ್ ಶುಲ್ಕ, ಇಎಂಡಿ, ಟೆಂಡರ್ ಡಾಕ್ಯುಮೆಂಟ್‌ಗಳು ಮುಂತಾದ ವಿವರಗಳು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ 16.06.2021 ರಿಂದ ಲಭ್ಯವಿರುತ್ತದೆ.
“ಯಾವುದೇ ಕಾರಣಗಳನ್ನು ನೀಡದೆ ಯಾವುದೇ ಅಥವಾ ಎಲ್ಲಾ ಬಿಡ್‌ಗಳನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಕೆಎಸ್‌ಪಿಹೆಚ್ ಮತ್ತು ಐಡಿಸಿಎಲ್ ಹೊಂದಿದೆ”.
ಸೂಚನೆ: ಇನ್ನು ಮುಂದೆ ಟೆಂಡರ್‌ನ ಯಾವುದೇ ಬದಲಾವಣೆ/ಮಾರ್ಪಾಡುಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.

ಸಹಿ/– ಕಾರ್ಯಪಾಲಕ ಅಭಿಯಂತರರು
ಗುತ್ತಿಗೆಗಳು I/c
DIPR/DDU/BCPL/502/2021-22

ಕೋವಿಡ್–19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಮೈಸೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಸಯ್ಯಾಜಿರಾವ್ ರಸ್ತೆ, ಮೈಸೂರು–570024.
ಫೋನ್/ಫ್ಯಾಕ್ಸ್: 0821–2418828
ಸಂಖ್ಯೆ: ಮೈನಪಾ/ಕಾಇಂ/ಟಿಎನ್/12/21–22 ದಿನಾಂಕ: 31–05–2021

ಮುಂದೂಡಿದ ಟೆಂಡರ್ ಪ್ರಕಟಣೆ

ಇ–ಪ್ರೊಕ್ಯೂರ್‌ಮೆಂಟ್ ವ್ಯವಸ್ಥೆಯಡಿ ಟೆಂಡರ್ ಷೆಡ್ಯೂಲ್ ದಿನಾಂಕಗಳು ಕೆಳಕಂಡಂತಿವೆ.

		ಹಿಂದಿನ ದಿನಾಂಕ	ಮುಂದೂಡಿದ ದಿನಾಂಕ	
1	ಇ–ಪೋರ್ಟಲ್‌ನಲ್ಲಿ ಟೆಂಡರ್ ದಾಖಲೆಗಳು ಚಾಲ್ತಿಗೆ ಬರುವ ದಿನಾಂಕ	24.05.2021	09.06.2021	ಬೆಳಿಗ್ಗೆ 11.00 ಗಂಟೆವರೆಗೆ
2	ಪ್ರೀ–ಬಿಡ್ ಮೀಟಿಂಗ್	15.06.2021	01.07.2021	ಬೆಳಿಗ್ಗೆ 11.30 ಗಂಟೆಗೆ
3	ಟೆಂಡರ್ ಸಲ್ಲಿಸುವ ಕೊನೆ ದಿನಾಂಕ ಮತ್ತು ಕಾಲ	23.06.2021	08.07.2021	ಸಂಜೆ 5.30 ಗಂಟೆವರೆಗೆ
4	ಟೆಂಡರ್‌ನ ತಾಂತ್ರಿಕ ಬಿಡ್ಡನ್ನು ತೆರೆಯುವ ದಿನಾಂಕ ಮತ್ತು ಕಾಲ	24.06.2021	09.07.2021	ಸಂಜೆ 5.30 ಗಂಟೆಯ ನಂತರ
5	ಆರ್ಥಿಕ ಟೆಂಡರ್ ಅನ್ನು ತೆರೆಯುವ ದಿನಾಂಕ ಮತ್ತು ಕಾಲ	ತಾಂತ್ರಿಕ ಬಿಡ್ಡಿನಲ್ಲಿ ಆಯ್ಕೆಯಾದ ಗುತ್ತಿಗೆದಾರರಿಗೆ ಆರ್ಥಿಕ ಬಿಡ್ಡನ್ನು ತೆರೆಯುವ ದಿನಾಂಕ ಮತ್ತು ಕಾಲವನ್ನು ನಂತರ ತಿಳಿಸಲಾಗುವುದು.		

ಸಹಿ/– ಕಾರ್ಯಪಾಲಕ ಅಭಿಯಂತರರು(ಪೂ)
ಮೈಸೂರು ಮಹಾನಗರ ಪಾಲಿಕೆ, ಮೈಸೂರು.
DIPR/MYS/YC/143A/2021-22

ಕರ್ನಾಟಕ ಸರ್ಕಾರ
ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ರಾಯಚೂರು
(ಸರ್ಕಾರದ ಸ್ವಾಯತ್ತ ಸಂಸ್ಥೆ)
ಹೈದ್ರಾಬಾದ ರೋಡ, ರಾಯಚೂರು – 584102. Ph/Fax : 08532-238488/89
Web: www.rims-raichur.com Email : info@rims-raichur.com
ಸಂ.ರಿಮ್ಸ್/ಸರಬರಾಜು/ಟೆಂಡರ್/ಉಪಕರಣ/02/2021–22/ಕಾಲ್–2 ದಿನಾಂಕ :08.06.2021

ಇ–ಟೆಂಡರ್ ಪ್ರಕಟಣೆ

ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಬೋಧಕ ಆಸ್ಪತ್ರೆಯ ಸ್ತ್ರೀ ಮತ್ತು ಪ್ರಸೂತಿ ವಿಭಾಗದಲ್ಲಿ ಮಾಡ್ಯೂಲರ್ ಓಟಿ ಸ್ಥಾಪಿಸಲು ಅರ್ಹ ಟೆಂಡರ್‌ದಾರರಿಂದ ಟೆಂಡರ್ ಆಹ್ವಾನಿಸಲಾಗಿದೆ.
1) ಟಂಡರ್‌ಗಳನ್ನು ದಿನಾಂಕ : 09.06.2021 ರಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ಟೆಂಡರ್ ಫಾರ್ಮ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 23.06.2021 ರ ಸಾಯಂಕಾಲ 5.00 ಗಂಟೆಗೆ, 3) ತಾಂತ್ರಿಕ ಲಕೋಟೆ (ಮೊದಲನೆಯ ಕವರ್) ತೆರೆಯುವ ದಿನಾಂಕ : 25.06.2021 ಬೆಳಿಗ್ಗೆ 11.00 ಗಂಟೆಗೆ

ಆಸಕ್ತಿಯುಳ್ಳ ಟೆಂಡರ್‌ದಾರರು ಹೆಚ್ಚಿನ ಮಾಹಿತಿಗಾಗಿ ಮತ್ತು ಟೆಂಡರ್‌ಗೆ ಸಂಬಂಧಪಟ್ಟ ದಾಖಲೆಗಳನ್ನು ಕರ್ನಾಟಕ ಇ–ಸಂಗ್ರಹಣಾ ಕೋಶದ ವೆಬ್‌ಸೈಟ್ https://eproc.karnataka.gov.in ನಲ್ಲಿ ಹಾಗೂ ಈ ಸಂಸ್ಥೆಯ ವೆಬ್‌ಸೈಟ್ www.rims-raichur.com ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಸಹಿ/– ನಿರ್ದೇಶಕರು,
ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ರಾಯಚೂರು
ವಾ.ಸಾ.ಸಂ.ಇ/ರಾಯಚೂರು/99/ಎಂ.ಸಿ.&ಎ/2021–22

रजिस्ट्री सं. डी.एल. 33004/99 REGD. NO. D.L.-33004/99

भारत का राजपत्र
ಭಾರತ ಸರಕಾರದ ರಾಜ್ಯಪತ್ರ

सी जी - डी एल - अ - 19052021-227063
CG-DL-E-19052021-227063
असाधारण
ಅಸಾಧಾರಣ
भाग II - खण्ड-3 - उप-खण्ड-(ii)
ಭಾಗ II - ಸೆಕ್ಷನ್ 3 - ಉಪ ಸೆಕ್ಷನ್ (ii)
प्राधिकार से प्रकाशित
ಪ್ರಾಧಿಕಾರದಿಂದ ಪ್ರಕಟಿಸಲಾಗಿದೆ

सं. 1786] नई दिल्ली, सोमवार, मई 17, 2021/वैशाख 27, 1943
ಸಂಖ್ಯೆ 1786] ನವದೆಹಲಿ, ಸೋಮವಾರ, ಮೇ 17, 2021/ವೈಶಾಖ 27, 1943

ಭಾರತ ಸರ್ಕಾರದ ರಸ್ತೆ ಸಾರಿಗೆ ಹಾಗೂ ಹೆದ್ದಾರಿಗಳ ಸಚಿವಾಲಯ
ಅಧಿಸೂಚನೆ
ನವದೆಹಲಿ, ದಿನಾಂಕ 17ನೇ ಮೇ, 2021

ಎಸ್.ಓ. 1913(ಇ)— [illegible]

[illegible]

ಷೆಡ್ಯೂಲ್

ರಾಜ್ಯ : ಕರ್ನಾಟಕ					ಜಿಲ್ಲೆ : ಬಳ್ಳಾರಿ
ಕ್ರಮ ಸಂಖ್ಯೆ	ಸರ್ವೆ/ಹಿಸ್ಸಾ ನಂಬರ್	ಜಮೀನಿನ ತರಹೆ	ಜಮೀನಿನ ಸ್ವರೂಪ	ವಿಸ್ತೀರ್ಣ (ಸ್ಕ್ವೇರ್ ಮಾಪನದಲ್ಲಿ)	ವಿಸ್ತೀರ್ಣ (ಹೆಕ್ಟೇರ್‌ಗಳಲ್ಲಿ)
ತಾಲ್ಲೂಕು : ಕೂಡ್ಲಿಗಿ					ಗ್ರಾಮ : ಆಲೂರು
1	204/1	ಖಾಸಗಿ	ಖುಷ್ಕಿ	5,260.9100000 (ಚದರ ಮೀಟರ್)	0.5260910
ಗ್ರಾಮ : ಬಣವಿಕಲ್ಲು					
1	469	ಖಾಸಗಿ	ಕೃಷಿಯೇತರ (ನಾನ್-ಅಗ್ರಿಕಲ್ಚರ್)	2,347.0000000 (ಚದರ ಮೀಟರ್)	0.2347000
			ಒಟ್ಟು	7,606.9100	0.7608

[F.No.NHAI/PIU-CTA/HST-CTA/NH-50/3A]
ರಾಜೇಶ್ ಗುಪ್ತ, ನಿರ್ದೇಶಕರು.

(ತೋಟಗಾರಿಕೆ ಇಲಾಖೆ)
ತೋಟಗಾರಿಕೆ ಉಪ ನಿರ್ದೇಶಕರು (ಜಿಲ್ಲಾ ಪಂಚಾಯತ್), ಮೈಸೂರು

2020–21ನೇ ಸಾಲಿಗೆ ಸಹಾಯಕ ತೋಟಗಾರಿಕೆ ನಿರ್ದೇಶಕರವರ ಕಛೇರಿ, ತಾಳೆ ಬೆಳೆ ಅಭಿವೃದ್ಧಿ ಯೋಜನೆ, ಮೈಸೂರು ರವರ ಕಛೇರಿ ಅಧೀನದ ಕಬಿನಿ ತಾಳೆ ತೋಟಗಾರಿಕೆ ಕ್ಷೇತ್ರದಲ್ಲಿರುವ ತಾಳೆ ಸಂಸ್ಕರಣ ಘಟಕದಲ್ಲಿ ಒಂದು ವರ್ಷದ ಅವಧಿಗೆ ತಾಳೆ ಹಣ್ಣು ಸಂಸ್ಕರಣೆ ಮಾಡಲು ಅರ್ಹ ಗುತ್ತಿಗೆದಾರರು, ಆಸಕ್ತ ಖಾಸಗಿ ಸಂಸ್ಥೆಯವರಿಂದ **ಇ–ಪ್ರಕ್ಯೂರ್‌ಮೆಂಟ್ ಮೂಲಕ ಅಲ್ಪಾವಧಿ ಇ–ಟೆಂಡರ್** ಕರೆಯಲಾಗಿದೆ. ಆಸಕ್ತರು, ಇ–ಪ್ರಕ್ಯೂರ್‌ಮೆಂಟ್ ಜಾಲತಾಣದಲ್ಲಿ ಮಾಹಿತಿ ಪಡೆಯಬಹುದು ಅಥವಾ ಈ ಕೆಳ ಸಹಿದಾರರ ಕಛೇರಿಯಿಂದ ಹೆಚ್ಚಿನ ಮಾಹಿತಿ ಪಡೆಯಬಹುದು.

ಸಹಿ/– ತೋಟಗಾರಿಕೆ ಉಪ ನಿರ್ದೇಶಕರು (ಜಿಲ್ಲಾ ಪಂಚಾಯತ್), ಮೈಸೂರು
DIPR/DDMYS/MCA/189/2021-22

ಕರ್ನಾಟಕ ಸರ್ಕಾರ
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಾರ್ಯಾಲಯ ಕೊಪ್ಪಳ.
ಸಂಖ್ಯೆ: ಉಗ್ರಾಣ/KKRDB/37/2021–22 ದಿನಾಂಕ: 06.06.2021

ಅಲ್ಪಾವಧಿ ಇ–ಪ್ರಕ್ಯೂರಮೆಂಟ್ ಟೆಂಡರ್ ಅಧಿಸೂಚನೆ

ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ ಕಲಬುರಗಿ 2021–22ನೇ ಸಾಲಿನ ಮ್ಯಾಕ್ರೋ ಕ್ರಿಯಾ ಯೋಜನೆಯಲ್ಲಿ ಕೊಪ್ಪಳ ಜಿಲ್ಲೆಯ ಗಂಗಾವತಿಯ ಸಾರ್ವಜನಿಕ ಆಸ್ಪತ್ರೆಗೆ ಕೋವಿಡ್–19 ನಿರ್ವಾಹಣೆಗಾಗಿ ಮತ್ತು ಚಿಕಿತ್ಸೆಗಾಗಿ Paediatrict Cum adult Ventilators ಗಳನ್ನು ಸರಬರಾಜು ಮಾಡಲು ಅಲ್ಪಾವಧಿ ಇ–ಪ್ರಕ್ಯೂರಮೆಂಟ್ ಟೆಂಡರ್ ಕರೆಯಲಾಗಿದೆ.
1)ಭರ್ತಿ ಮಾಡಿದ ಟೆಂಡರ್‌ನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಅವಧಿ : 22.06.2021 ರಂದು ಸಾಯಂಕಾಲ 02–00 ಗಂಟೆಯೊಳಗೆ. 2) ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 24.06.2021 ರಂದು ಸಾಯಂಕಾಲ 02–00 ಗಂಟೆಗೆ. 3) ಆರ್ಥಿಕ ಬಿಡ್ ತೆರೆಯುವ ದಿನಾಂಕ: 26.06.2021 ರಂದು ಬೆಳಿಗ್ಗೆ 11–00 ಗಂಟೆಗೆ.
E-Mail:dhokoppal@gmail.com

ಸಹಿ/– ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ, ಅಧಿಕಾರಿಗಳು ಕೊಪ್ಪಳ.
ಡಿಐಪಿಆರ್/ಕೊಪ್ಪಳ/99/ಎಂಸಿಎ/2021–22

ನಗರಸಭಾ ಕಾರ್ಯಾಲಯ, ಭದ್ರಾವತಿ
ತರೀಕೆರೆ ರಸ್ತೆ, ಭದ್ರಾವತಿ, ಶಿವಮೊಗ್ಗ ಜಿಲ್ಲೆ – 577301
Phone : 08282-266356, Email : itstaff_ulb_bhadravathi@yahoo.com,
Web : www.bhadravathicity.mrc.gov.in
ನಂ. ನಸಭ/ಕಾವಿ/ಟೆಂಡರ್/ಸಿಆರ್/13/2020–21 ದಿನಾಂಕ: 04.06.2021

ಅಲ್ಪಾವಧಿ ಮರು ಟೆಂಡರ್ ಪ್ರಕಟಣೆ
(ಕರ್ನಾಟಕ ಸರ್ಕಾರದ ಇ –ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

ಎಸ್.ಎಫ್.ಸಿ ಮುಕ್ತ ನಿಧಿ ಹಾಗೂ ನಗರ ಭೂ ಸಾರಿಗೆ ನಿರ್ದೇಶನಾಲಯದ ಹಾಗೂ ನಗರಸಭಾ ಉದ್ಯಮ ನಿದಿಯ ಅನುದಾನದಡಿಗಳಲ್ಲಿ ನಗರಸಭೆ ವ್ಯಾಪ್ತಿಯಲ್ಲಿ ಬರುವ ರೂ. 397.23 ಲಕ್ಷಗಳಲ್ಲಿ ಒಟ್ಟು 02 ಪ್ಯಾಕೇಜ್ ಕಾಮಗಾರಿಗಳನ್ನು ನಿರ್ವಹಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದ್ಯಾದ್ದೇಶ 1999–2000 ಪ್ರಕಾರ ಆಕ್ಟ್ 2000 ನಿಯಮದಂತೆ Karnataka Standard Tender Document-KW-4 ಪ್ರಕಾರ ಐಟಂವಾರು ಅಲ್ಪಾವಧಿ ಮರು ಟೆಂಡರ್‌ನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ. ಅರ್ಹ ಟೆಂಡರ್‌ದಾರರು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ http://eproc.karnataka.gov.in. ಮುಖಾಂತರ ಟೆಂಡರ್‌ನಲ್ಲಿ ಭಾಗವಹಿಸಬಹುದು.
(1) ಮೇಲ್ಕಂಡ ಟೆಂಡರ್ ಬಿಡ್‌ಗಳಿಗೆ ಪ್ರಿ–ಬಿಡ್ ಸಭೆ ದಿನಾಂಕ: 02.07.2021 ಪೂರ್ವಾಹ್ನ 11.00 ಗಂಟೆಗೆ, (2) ಮೇಲ್ಕಂಡ ಟೆಂಡರ್ ಬಿಡ್‌ಗಳನ್ನು ಇ–ಪೋರ್ಟಲ್‌ನಲ್ಲಿ ಸಲ್ಲಿಸುವ ಕೊನೆಯ ದಿನಾಂಕ : 06.07.2021 ಅಪರಾಹ್ನ 4.30 ಗಂಟೆವರೆಗೆ. (3) ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ತಾಂತ್ರಿಕ ಬಿಡ್ ತೆರೆಯುವ ದಿನಾಂಕ 08.07.2021 ಪೂರ್ವಾಹ್ನ 11.00 ಗಂಟೆಯ ನಂತರ ಆನ್‌ಲೈನ್ ಮೂಲಕ. ಸದರಿ ದಿನಾಂಕ ರಜಾ ದಿನವೆಂದು ಘೋಷಿಸಲ್ಪಟ್ಟಲ್ಲಿ ಮುಂದಿನ ದಿನಾಂಕವನ್ನು ಪರಿಗಣಿಸತಕ್ಕದ್ದು. (4) ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಆರ್ಥಿಕ ಬಿಡ್ ತೆರೆಯುವ ದಿನಾಂಕವನ್ನು ಮುಂದೆ ತಿಳಿಸಲಾಗುವುದು. (5) ಟೆಂಡರ್‌ದಾರರು ಟೆಂಡರ್ ದಾಸ್ತಾವೇಜಿನಲ್ಲಿ ಎಲ್ಲಾ ಷರತ್ತುಗಳಿಗೆ ಬದ್ಧರಿರತಕ್ಕದ್ದು.

ಸಹಿ/–
ಪೌರಾಯುಕ್ತರು,
ನಗರಸಭೆ, ಭದ್ರಾವತಿ
ವಾಸಾಸಂಇ/ಶಿ/ನಂ.07–06/ಝೆಂಕಾರ್/2021–22

ಕರ್ನಾಟಕ ಗ್ರಾಮೀಣ ಮೂಲಭೂತ ಸೌಕರ್ಯ ಅಭಿವೃದ್ಧಿ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಅಧೀಕ್ಷಕ ಅಭಿಯಂತರರ ಕಚೇರಿ, ಬೆಂಗಳೂರು ವಲಯ, ಗ್ರಾಮೀಣ ಭವನ, 3ನೇ ಮಹಡಿ, ಎ–ಬ್ಲಾಕ್, ಸಿ.ಎ. ನಿವೇಶನ ಸಂಖ್ಯೆ–6, 17ನೇ ಮುಖ್ಯರಸ್ತೆ, 13ನೇ ಅಡ್ಡರಸ್ತೆ, ಜ್ಞಾನಭಾರತಿ ಬಡಾವಣೆ, 2ನೇ ಬ್ಲಾಕ್, ಅಮ್ಮಾ ಆಶ್ರಮ ರಸ್ತೆ, ಬೆಂಗಳೂರು–560056
Tel. No. 29558287, E-mail: sebengaluru@kridl.net
ಸಂ:ಅ.ಅ/ಕೆ.ಆರ್.ಐ.ಡಿ.ಎಲ್/ಬೆಂ.ವ/ಲೆಕ್ಕಪತ್ರ/Pre-Audit/ಎ/2021–22/86 ದಿನಾಂಕ: 07–06–2021

ಅಲ್ಪಾವಧಿ ಸಂಕ್ಷಿಪ್ತ ಟೆಂಡರ್ ಪ್ರಕಟಣೆ

ಅಧೀಕ್ಷಕ ಅಭಿಯಂತರರು, ಕೆಆರ್‌ಐಡಿಎಲ್ ಬೆಂಗಳೂರು ವಲಯ ವ್ಯಾಪ್ತಿಯಲ್ಲಿ ಬರುವ (6 ವಿಭಾಗಗಳ) ಬೆಂಗಳೂರು ಬಿಎಂಆರ್‌ಸಿಎಲ್, ರಾಮನಗರ, ತುಮಕೂರು, ಚಿಕ್ಕಬಳ್ಳಾಪುರ ಮತ್ತು ಕೋಲಾರ ಜಿಲ್ಲೆಗಳಲ್ಲಿ ಇರುವಂತಹ ವಿಭಾಗೀಯ ಕಚೇರಿಯಲ್ಲಿ (ಕಾರ್ಯಪಾಲಕ ಅಭಿಯಂತರರ ಕಚೇರಿಗಳು) ದಿ: 01/04/2021 ರಿಂದ Pre-Audit ಮಾಡುವ ಸಂಬಂಧ ಆಸಕ್ತಿವುಳ್ಳ Charted Accountants / Cost Accountants ಗಳಿಂದ ಶೀಲ್ ಮಾಡಲಾದ ಕೋಟೇಶನ್ನು ಎರಡು ಕವರ್ ಮಾದರಿಯಲ್ಲಿ ಆಹ್ವಾನಿಸಲಾಗಿದೆ.
Charted Accountants ಗಳು ನಿರ್ವಹಿಸಬೇಕಾದ ಕೆಲಸ ಕಾರ್ಯಗಳ ಮಾರ್ಗಸೂಚಿ, ಸಂಸ್ಥೆಯ ಬಗ್ಗೆ ಕಿರು ಮಾಹಿತಿ, ಹಾಗೂ ಹಲವು ಷರತ್ತುಗಳ ಬಗ್ಗೆ ಸಂಸ್ಥೆಯ ವೆಬ್‌ಸೈಟ್ www.kridl.org ಡೌನ್‌ಲೋಡ್ ಲಿಂಕ್ ಅಡಿಯಲ್ಲಿ ಪಡೆಯಬಹುದಾಗಿರುತ್ತದೆ. ಕೋಟೇಶನ್‌ಗಳನ್ನು ಸಲ್ಲಿಸುವಾಗ Charted Accountants ಗಳ ಕಚೇರಿಗಳು ಕೆಆರ್‌ಐಡಿಎಲ್ ಬೆಂಗಳೂರು ವಲಯ ವ್ಯಾಪ್ತಿಯಲ್ಲಿಯೇ ಇರಬೇಕೆಂದು ಹಾಗೂ ಎಲ್ಲಾ ವಿಭಾಗಗಳಿಗೂ (10 ಉಪ ವಿಭಾಗಗಳಿಗೆ ಪ್ರತ್ಯೇಕವಾಗಿ) ಅನ್ವಯಿಸುವಂತೆ Audit fee ಮೊತ್ತವನ್ನು ಕಡ್ಡಾಯವಾಗಿ ಕೋಟ್ ಮಾಡಬೇಕೆಂಬ ಅಂಶಗಳ ಬಗ್ಗೆ ಸ್ಪಷ್ಟಪಡಿಸಲಾಗಿದೆ. ಕೋಟೇಶನ್‌ಗಳನ್ನು ಅಂಚೆ ಮುಖಾಂತರ ಅಥವಾ ಖುದ್ದಾಗಿ ದಿ: 18/06/2021ರ ಸಂಜೆ 4:30 ಗಂಟೆಯವರೆಗೆ ಮಾತ್ರ ಸ್ವೀಕರಿಸಲು ಅವಕಾಶ ಕಲ್ಪಿಸಲಾಗಿದೆ. ಕೋಟೇಶನ್‌ಗಳನ್ನು ದಿ: 21/06/2021ರ ಬೆಳಿಗ್ಗೆ 11:00 ಗಂಟೆಗೆ ಹಾಜರಿದ್ದವರ ಸಮ್ಮುಖದಲ್ಲಿ ತೆರೆಯಲಾಗುವುದು. ಯಾವುದೇ ಸ್ಪಷ್ಟೀಕರಣಕ್ಕಾಗಿ ಅಧೀಕ್ಷಕ ಅಭಿಯಂತರರು, ಕೆಆರ್‌ಐಡಿಎಲ್ ಬೆಂಗಳೂರು ವಲಯ, ಬೆಂಗಳೂರು ಇವರನ್ನು ಕಚೇರಿಯ ಸಮಯದಲ್ಲಿ ಸಂಪರ್ಕಿಸಬಹುದು.

ಸಹಿ/– ಅಧೀಕ್ಷಕ ಅಭಿಯಂತರರು,
ಕೆಆರ್‌ಐಡಿಎಲ್, ಬೆಂಗಳೂರು ವಲಯ.





ನಮ್ಮ ಪ್ರಾಣವಾಯುವಾಗಿರುವ ಆಮ್ಲಜನಕವು ವಾತಾವರಣದಲ್ಲಿ ಎಲ್ಲೆಡೆಯಲ್ಲಿಯೂ ಯಥಾಪ್ರಮಾಣದಲ್ಲಿ ಸಮಾನವಾಗಿ ಇದೆ. ಕೊರೊನಾ ಸೋಂಕಿನ ಎರಡನೆಯ ಅಲೆಯ ಸಮಯದಲ್ಲಿ ಆಮ್ಲಜನಕದ ಕುರಿತು ಎದ್ದಿರುವ ಹಲವು ಕುತೂಹಲ, ಸಂದೇಹಗಳ ನಿವಾರಣೆ ಮತ್ತು ಮಾಹಿತಿ ಇಲ್ಲಿದೆ...

ಆಮ್ಲಜನಕ ಹೇಗೆ 'ಕೃತಕ' ಆಗುತ್ತದೆ?

ಚೈತನ್ಯ ಮಜಲುಕೋಡಿ

ವಾತಾವರಣದಲ್ಲಿರುವ ಗಾಳಿಯನ್ನು ಒಂದು ಹಿಡಿ ಸಂಗ್ರಹಿಸಿ ಅದರಲ್ಲಿ ಯಾವೆಲ್ಲ ಅನಿಲಗಳಿವೆ/ ಎಷ್ಟು ಪ್ರತಿಶತ ಇವೆ ಎಂದು ಪರೀಕ್ಷೆ ಮಾಡಿದರೆ ಅದರಲ್ಲಿ ಶೇ. 78 ಸಾರಜನಕವೂ, ಶೇ. 20.9 ಆಮ್ಲಜನಕವೂ ಮತ್ತು ಉಳಿದ ಒಂದು ಶೇಕಡದಲ್ಲಿ ಇಂಗಾಲದ ಡೈ ಆಕ್ಸೈಡ್ ಮತ್ತು ಆರ್ಗಾನ್ ಅನಿಲ ಇದೆ ಎಂಬ ಫಲಿತಾಂಶ ದೊರೆಯುತ್ತದೆ. ಹಾಗಾದರೆ ಇದಕ್ಕೂ ವೈದ್ಯಕೀಯ ಆಮ್ಲಜನಕಕ್ಕೂ ಇರುವ ವ್ಯತ್ಯಾಸವೇನು ನೋಡೋಣ.

ಆರೋಗ್ಯವಂತ ಮನುಷ್ಯನ ಒಂದು ಬಾರಿಯ ಉಸಿರಾಟದಲ್ಲಿ ಬಳಕೆಯಾಗುವ ಆಮ್ಲಜನಕವು ನಾವು ಶ್ವಾಸಕೋಶಕ್ಕೆ ಒಳಗೆಳೆದುಕೊಂಡ ಗಾಳಿಯಲ್ಲಿನ ಆಮ್ಲಜನಕದ ಕಾಲು ಭಾಗ ಅಷ್ಟೇ. ಪ್ರಜ್ಞೆ ತಪ್ಪಿದ ವ್ಯಕ್ತಿಯೊಬ್ಬನಿಗೆ ಬಾಯಿಂದ ಬಾಯಿಗೆ ಉಸಿರು ನೀಡುವುದರಲ್ಲಿ ಏನೂ ತೊಂದರೆ ಇರದಿರುವುದೂ ಇದೇ ಕಾರಣಕ್ಕೆ. ದೀರ್ಘವಾದ ಮತ್ತು ಆಳವಾಗಿ ಉಸಿರೆಳೆದುಕೊಳ್ಳುವ ಅಭ್ಯಾಸ ಹೊಂದಿರುವವರಲ್ಲಿ ಮಾತ್ರ ಆಮ್ಲಜನಕ ಹೆಚ್ಚಾಗಿ ಉಪಯೋಗ ಹೊಂದುತ್ತದೆ ಎನ್ನಬಹುದು.

ವೈದ್ಯಕೀಯ ಆಮ್ಲಜನಕ (medical oxygen)ದಲ್ಲಿ ಶೇ. 99.5ದಷ್ಟು ಅಥವಾ ಅದಕ್ಕಿಂತ ಹೆಚ್ಚು ಶುದ್ಧ ಆಮ್ಲಜನಕ ಅನಿಲವೇ ಇರುತ್ತದೆ. ಇಂಗಾಲದ ಡೈ ಆಕ್ಸೈಡ್ (300 ppm), ಮಾನಾಕ್ಸೈಡ್ (05 ppm), ತೇವ (67 ppm) ಇಷ್ಟಕ್ಕಿಂತ ಕಡಿಮೆ ಇರಬೇಕೆಂಬ ಅಧಿನಿಯಮವೂ ಇದೆ.

ವೈದ್ಯಕೀಯ ಅಗತ್ಯದ ಈ ಆಮ್ಲಜನಕವನ್ನು ಮುಖ್ಯವಾಗಿ ಮೂರು ವಿಧಗಳಿಂದ ಪೂರೈಸಬಹುದು:

ಆಮ್ಲಜನಕ ಉತ್ಪಾದಿಸುವ ದೊಡ್ಡ ದೊಡ್ಡ ಕಾರ್ಖಾನೆಗಳಲ್ಲಿ ವಾತಾವರಣದ ಗಾಳಿಯನ್ನು ಸೆಳೆದು ಅದನ್ನು ಒತ್ತಡ ಹೆಚ್ಚಿಸುವ ಮತ್ತು ಶೀತಲಗೊಳಿಸುವ ಪ್ರಕ್ರಿಯೆಗಳಿಂದ ಅನ್ಯ ಅನಿಲಗಳನ್ನು ಬೇರ್ಪಡಿಸಿ ದ್ರವರೂಪದಲ್ಲಿ ಆಮ್ಲಜನಕವನ್ನು ಉತ್ಪಾದಿಸಲಾಗುತ್ತದೆ. ಇದರ ಉಷ್ಣತೆ ಮೈನಸ್ 183.1 ಡಿಗ್ರಿ ಸೆಲ್ಸಿಯಸ್. ನೀರು ಮಂಜುಗಡ್ಡೆಯಾಗಲು ಸೊನ್ನೆ ಡಿಗ್ರಿ ತಲುಪಿದರೆ ಸಾಕು ಎಂಬ ವಿಷಯ ಮನಗಂಡರೆ ಈ ದ್ರವ ಆಮ್ಲಜನಕದ ನಿರ್ವಹಣೆ ಎಷ್ಟು ತೊಡಕಿನದ್ದು ಎಂಬುದು ಅರಿವಾದೀತು. ಇದನ್ನು ದೊಡ್ಡ ಟ್ಯಾಂಕರುಗಳಲ್ಲಿ ತುಂಬಿಸಿ ರೈಲು/ರಸ್ತೆ/ವಿಮಾನ/ಹಡಗುಗಳ ಮೂಲಕ ಅಗತ್ಯವಿರುವ ಜಾಗಕ್ಕೆ ತಲುಪಿಸಲಾಗುತ್ತದೆ. ಅಲ್ಲಿ ಜಿಲ್ಲಾ/ತಾಲ್ಲೂಕು ಆಮ್ಲಜನಕ ಸಂಗ್ರಹಣ ಘಟಕಕ್ಕೋ ಅಥವಾ ದೊಡ್ಡ ಆಸ್ಪತ್ರೆಗಳಲ್ಲಿ ಇರುವ ಆ ರೀತಿಯ ಸಂಗ್ರಹಣ ಘಟಕಕ್ಕೋ ತಲುಪಿಸಲಾಗುತ್ತದೆ. ಅಲ್ಲಿಂದ ಪೈಪ್ಲೈನ್ ಮುಖಾಂತರ ಅಥವಾ ಸಣ್ಣ ಸಿಲಿಂಡರುಗಳಿಗೆ ತುಂಬಿಸಿ ಆಯಾ ನಿರ್ದಿಷ್ಟ ಸ್ಥಳಕ್ಕೆ ತಲುಪಿಸಲಾಗುತ್ತದೆ.

ಜಿಲ್ಲೆ–ತಾಲ್ಲೂಕು ಕೇಂದ್ರಗಳಲ್ಲಿಯೇ ಆಮ್ಲಜನಕ ಉತ್ಪಾದನಾ ಘಟಕ ಸ್ಥಾಪನೆಗೊಳ್ಳುತ್ತಿರುವ ಸುದ್ದಿಯನ್ನ ನಾವೀಗ ನೋಡುತ್ತಿದ್ದೇವೆ. ಇಲ್ಲಿಯೂ ವಾತಾವರಣದಿಂದ ಗಾಳಿಯನ್ನು ಸೆಳೆಯಲಾಗುತ್ತದೆ. ನಂತರ ಅದನ್ನು ಅತಿ ಒತ್ತಡಕ್ಕೇರಿಸಿ ವಿಶಿಷ್ಟವಾದ ಹರಳುಗಳ ಮೂಲಕ ಹಾಯಿಸಲಾಗುತ್ತದೆ. ಅದು ಗಾಳಿಯಲ್ಲಿನ ಅನ್ಯ ಅನಿಲಗಳನ್ನು ಸೆಳೆದು ಆಮ್ಲಜನಕವನ್ನು ಮಾತ್ರವೇ ಹೊರಬಿಡುತ್ತದೆ. ಆ ಹರಳುಗಳಲ್ಲಿ ಶೇಖರಗೊಳ್ಳುತ್ತ ಹೋಗುವ ಅನ್ಯ ಅನಿಲಗಳನ್ನು ನಂತರ ನಿರ್ವಾತ/ಶೂನ್ಯ ಒತ್ತಡದ ಮೂಲಕ ಹೊರಗೆಳೆದು ಮತ್ತೆ ಮರುಬಳಕೆಗೆ ಸಿದ್ಧಗೊಳಿಸಲಾಗುತ್ತದೆ. ಇಲ್ಲಿ ಸೀದಾ ಶೇ. 90-95 ಶುದ್ಧ ಆಮ್ಲಜನಕವು ಅನಿಲ ರೂಪದಲ್ಲೇ ದೊರೆತುಬಿಡುತ್ತದೆ. ಇದನ್ನು ಅಲ್ಲಿಯೇ ಸ್ಥಾಪಿತವಾಗಿರುವ ಟ್ಯಾಂಕುಗಳಲ್ಲಿ ಸಂಗ್ರಹಿಸಿ ಸರಬರಾಜು ಮಾಡುತ್ತಾರೆ. ಇದರ ನಿರ್ವಹಣೆಗೆ ನಿರಂತರ ವಿದ್ಯುತ್ ಪೂರೈಕೆ ಅಗತ್ಯ ಎಂಬುದನ್ನು ಗಮನದಲ್ಲಿಡಬೇಕು.

'ಆಕ್ಸಿಜನ್ ಕಾನ್ಸನ್‌ಟ್ರೇಟರ್'ಗಳು (Oxygen Concentrator) ಎಂಬುದು ಪ್ರಚಲಿತ ಸುದ್ದಿಯಲ್ಲಿರುವ ಆಮ್ಲಜನಕ ಪೂರೈಕೆಯ ಯಂತ್ರಗಳಾಗಿವೆ. ಕೆಲವು ಸರಳ ನಿಯಮಗಳನ್ನು ಅನುಸರಿಸುವುದರ ಮೂಲಕ ಮನೆಯಲ್ಲೇ ಇದನ್ನು ಬಳಸುತ್ತ ಅಗತ್ಯ ಪ್ರಮಾಣದ ಆಮ್ಲಜನಕವನ್ನು ರೋಗಿಗೆ ಕೊಡಬಹುದೆಂದು ವೈದ್ಯರು ಹೇಳುತ್ತಾರೆ. ಇದರಲ್ಲೂ ವಾತಾವರಣದ ಗಾಳಿಯಿಂದ ಅನ್ಯ ಅನಿಲಗಳನ್ನು ಹರಳಿನ ಗಾತ್ರದ ಹೀರುಕಗಳಿಂದ ಸೆಳೆದು ಶೇ. 90-95 ಶುದ್ಧ ಆಮ್ಲಜನಕವನ್ನು ಉತ್ಪಾದಿಸಲಾಗುತ್ತದೆ. ಏಕಕಾಲಕ್ಕೆ ಒಂದು ರೋಗಿಗೆ ಮಾತ್ರವೇ ಇದನ್ನು ಬಳಸಲು ಸಾಧ್ಯವಿದ್ದು, ಈ ಸಾಧನಕ್ಕೂ ವಿದ್ಯುತ್ ಅತ್ಯವಶ್ಯವಾಗಿದೆ. ಎಲ್ಲಿಂದೆಲ್ಲಿಗೂ ಕೊಂಡೊಯ್ಯಬಲ್ಲದ್ದಾಗಿರುವುದರಿಂದ ಇದಕ್ಕೆ ದಿನೇ ದಿನೇ ಪ್ರಾಮುಖ್ಯ ಹೆಚ್ಚುತ್ತಿದೆ.

ಇವೆಲ್ಲದರಲ್ಲೂ ತೇವವು ಇಲ್ಲವಾದ ಕಾರಣ ಆಮ್ಲಜನಕವನ್ನು ಶುದ್ಧಜಲದಲ್ಲಿ ಹಾಯಿಸಿಯೇ (nebulizer) ರೋಗಿಯ ಶ್ವಾಸಕ್ಕೆ ಕೊಡಬೇಕಾಗುತ್ತದೆ. ಇಲ್ಲದಿದ್ದರೆ ಉಸಿರಾಟದಲ್ಲಿ ಉರಿಯುಂಟಾಗುತ್ತದೆ. ಪೂರ್ಣಶುದ್ಧ ಆಮ್ಲಜನಕವನ್ನು ರೋಗಿಗೆ ಯಾವಾಗಲೂ ನೀಡುವುದಿಲ್ಲ. ಪರಿಸ್ಥಿತಿಗೆ ತಕ್ಕಂತೆ ಶೇ. 40-70 ಅನ್ನು ನಿಯಂತ್ರಕಗಳ ಮೂಲಕ ವೈದ್ಯರ ನಿರ್ದೇಶನದ ಮೇರೆಗೆ ನೀಡಲಾಗುತ್ತದೆ. ಗೊತ್ತಿಲ್ಲದವರು ನಿರ್ವಹಿಸಲು ಹೋದರೆ ಅಪಾಯ ಕಟ್ಟಿಟ್ಟ ಬುತ್ತಿ.

ಗಮನಿಸಬೇಕಾದ ಇನ್ನೊಂದು ಸಂಗತಿಯೆಂದರೆ ಕಾರ್ಖಾನೆಗಾಗಿ ಉತ್ಪಾದಿತವಾಗುವ ಆಮ್ಲಜನಕವು ರಾಸಾಯನಿಕ ಪ್ರಕ್ರಿಯೆಗಳಿಗೆ ಬಳಕೆಯಾಗುವ ಆಗುವ ಕಾರಣ, ಅಲ್ಲಿ ವೈದ್ಯಕೀಯ ಬಳಕೆಗೆ ಬೇಕಿರುವ ಹೆಚ್ಚಿನ ಶುದ್ಧಿಯ ಅಗತ್ಯವಿಲ್ಲ. ಆದ್ದರಿಂದ ಎರಡನ್ನೂ ಅದಲುಬದಲು ಮಾಡಬಾರದೆಂಬ ಎಚ್ಚರ ಬೇಕು. ❖

ಆಕ್ಸಿಜನ್ ಕಾನ್ಸನ್‌ಟ್ರೇಟರ್

ಈಗ ಮೀಟಿಂಗ್ ಸಮಯ...

ನವೀನ್ ಎಚ್.ವಿ.

ತಾಂತ್ರಿಕ ಆವಿಷ್ಕಾರಗಳು ಮನುಷ್ಯನ ಸಂವಹನವನ್ನು ಸರಳಗೊಳಿಸಿವೆ, ಉತ್ತಮಗೊಳಿಸಿವೆ. ಹಿಂದೆ ಕೇವಲ ಧ್ವನಿಮಾರ್ಗವೊಂದೇ ಇದ್ದಿತು. ಆದರೆ ಈಗ ಧ್ವನಿ, ಚಿತ್ರಗಳ (Audio/Video) ಮೂಲಕವೂ ಸಂವಹನವನ್ನು ನಡೆಸಬಹುದಾಗಿದೆ. ಇದೇ 'ಆನ್‌ಲೈನ್ ಮೀಟಿಂಗ್' (online meeting) ಎಂದರೆ 'ಜಾಲಗೋಷ್ಠಿ'; virtual meeting ಅಥವಾ digital meeting.

ಇಂದು ನಮಗೆಲ್ಲರಿಗೂ 'ಆನ್‌ಲೈನ್ ಮೀಟಿಂಗ್' ಅವಶ್ಯವಾಗಿದೆ. ಈ ಮೀಟಿಂಗುಗಳಿಗಾಗಿ ಕೆಲವು ತಯಾರಿಗಳನ್ನೂ ಶಿಷ್ಟಾಚಾರಗಳನ್ನು ನಾವು ಪಾಲಿಸಬೇಕಾಗಿರುತ್ತದೆ. ಇದನ್ನು Virtual Meeting Etiquette (ವರ್ಚ್ಯುಯಲ್ ಮೀಟಿಂಗ್ ಶಿಷ್ಟಾಚಾರ) ಎನ್ನುತ್ತಾರೆ. ಈ ನಿಯಮಗಳನ್ನು ಪಾಲಿಸುವುದರಿಂದ ಮೀಟಿಂಗ್‌ಗಳನ್ನೂ ಸಮರ್ಥವಾಗಿ, ಫಲಪ್ರದವಾಗಿ ನಡೆಸಲು ಅನುಕೂಲವಾಗುತ್ತವೆ. ಇಂತಹ ಕೆಲವು ಸರಳ ನಿಯಮಗಳು ಇಲ್ಲಿವೆ:

1. ಭಾಗವಹಿಸುವ ಎಲ್ಲರಿಗೂ ಸರಿಹೊಂದುವ ಒಂದು ಸಮಯದಲ್ಲಿ ಮೀಟಿಂಗನ್ನು ಹೊಂದಿಸಬೇಕು.
2. ಆಹ್ವಾನದಲ್ಲಿ ಮೀಟಿಂಗಿನ ಉದ್ದೇಶ ಮತ್ತು ವಿಷಯ ಸೂಚಿಗಳನ್ನೂ ನೀಡುವುದರಿಂದ ಭಾಗವಹಿಸುವ ವ್ಯಕ್ತಿಗಳು ಅದಕ್ಕೆ ಸೂಕ್ತವಾದ ರೀತಿಯಲ್ಲಿ ತಯಾರಾಗಿ ಬರಬಹುದಾಗಿದೆ.
3. ಮೀಟಿಂಗ್‌ನ ಮೊದಲು ಮೀಟಿಂಗ್ ರೂಮಿನ ಸಂಪರ್ಕಸಾಧನಗಳಾದ ಕ್ಯಾಮೆರಾ, ಧ್ವನಿವರ್ಧಕ (microphone) ಪರೀಕ್ಷಿಸಿಕೊಳ್ಳಬೇಕು. ಚರ್ಚೆಯ ವಿಷಯಗಳನ್ನು ಬರೆದಿಟ್ಟುಕೊಳ್ಳಲು ಒಂದು ಪುಸ್ತಕವನ್ನೂ ಅಥವಾ ಕಂಪ್ಯೂಟರಿನ notepad, wordpad, OneNoteಗಳನ್ನೂ ಸಿದ್ಧವಾಗಿಟ್ಟುಕೊಳ್ಳಬೇಕು.
4. ಕಡಿಮೆ ಜನರಿರುವ ಮೀಟಿಂಗುಗಳಲ್ಲಿ ಎಲ್ಲರೂ ಪಾಲ್ಗೊಳ್ಳುವ ಸಲುವಾಗಿ ಸಾಧ್ಯವಾದಷ್ಟು ಕ್ಯಾಮೆರಾವನ್ನು On ಮಾಡಿಕೊಳ್ಳಲು ಸೂಚಿಸಿ; ಇದರಿಂದ ಭಾಗವಹಿಸುವ ಎಲ್ಲರೂ ವಿಷಯದ ಬಗ್ಗೆ ಗಮನ ವಹಿಸಲು ಸಹಕಾರಿಯಾಗುತ್ತದೆ.
5. ಮೀಟಿಂಗ್ ನಡೆಯುತ್ತಿರುವಾಗ ಕೀ ಬೋರ್ಡ್ ಬಳಸುವುದು, ಅನವಶ್ಯಕ ಮಾತನಾಡುವುದು, ತಿನ್ನುವುದು, ಬೇರೆ ಕಡೆ ತಿರುಗಿ ನೋಡುವುದು, ಮೊಬೈಲ್ ಬಳಸುವುದು ಅಥವಾ ಬೇರೆ ಯಾವುದೋ ಕೆಲಸಗಳಲ್ಲಿ ತೊಡಗುವುದು – ಇಂಥವನ್ನು ಮಾಡಬಾರದು.
6. ಮಾತನಾಡುವಾಗ ಒಬ್ಬರ ಮುಖವನ್ನಷ್ಟೇ ನೋಡದೆ ಕ್ಯಾಮೆರಾವನ್ನು ನೋಡಿಕೊಂಡು ಮಾತನಾಡಬೇಕು. ನಿಮ್ಮ ಧ್ವನಿಯೂ ಸ್ಪಷ್ಟವಾಗಿರಲಿ.
7. ಮೀಟಿಂಗಿನ ವಿಷಯಗಳನ್ನು ಆದ್ಯತೆ ಮೇರೆಗೆ ಗುರುತಿಸಿ ವಿಷಯಗಳನ್ನು ಮಂಡಿಸಿ. ಈ ವಿಷಯದ ಬಗ್ಗೆ ನಿರ್ಧಾರಯುತವಾಗಿ ಮಾತನಾಡುವಂತಹ ವ್ಯಕ್ತಿಯೊಬ್ಬರಿದ್ದರೆ ಅವರಿಗೆ ವಿಷಯದ ಬಗ್ಗೆ ಮಾತನಾಡಲು ಹೆಚ್ಚಿನ ಸಮಯ ಕೊಡಿ. ಇತರ ಜನರ ಅಭಿಪ್ರಾಯಗಳನ್ನೂ ಆಲಿಸಿ.
8. ಮಂಡಿಸಿದ ವಿಷಯಗಳಲ್ಲಿ ಯಾವುದಾದರೂ ಚರ್ಚೆಗೆ ತೆಗೆದುಕೊಳ್ಳುವಂತಿದ್ದರೆ ಭಾಗವಹಿಸಿರುವ ಎಲ್ಲರ ಅಭಿಪ್ರಾಯವನ್ನೂ ತಿಳಿದುಕೊಳ್ಳಿ. ಇದರಿಂದ ಅವರ ಪಾಲ್ಗೊಳ್ಳುವಿಕೆಯನ್ನು ನಾವು ಆದರಿಸಿದಂತಾಗುತ್ತದೆ.
9. ನಿರ್ಧಾರ ಕೈಗೊಳ್ಳಬೇಕಿದ್ದರೆ ಅದಕ್ಕೆ ಪೂರಕವಾದ ದಾಖಲೆ, ಪ್ರಮಾಣಗಳನ್ನು, ಕಾರಣಗಳನ್ನು, ಸ್ಪಷ್ಟವಾಗಿ ತಿಳಿಸಿ. ಯಾವುದಾದರೂ ವಿಷಯಗಳು/ಪ್ರಶ್ನೆಗಳು ಉಳಿದಿದ್ದರೆ ಅದನ್ನು ಹೇಗೆ ನಿಭಾಯಿಸಬಹುದು, ಯಾರು ನಿಭಾಯಿಸಬಹುದು ಎಂಬುದನ್ನು ತಿಳಿಸಿ. ಮತ್ತೊಮ್ಮೆ ಮೀಟಿಂಗಿನ ಅವಶ್ಯಕತೆ ಇದೆಯೇ ಎಂದು ನಿರ್ಧರಿಸಿ.
10. ಒಬ್ಬ ಸೂಕ್ತ ವ್ಯಕ್ತಿಯನ್ನು ಗುರುತಿಸಿ ಅವರಿಗೆ ಮುಂದೆ ಮಾಡಬೇಕಾಗಿರುವ ಕಾರ್ಯವನ್ನು ವಿವರಿಸಿ; ಅವರಿಗೆ ಪೂರಕವಾಗಿ ಬೇಕಿರುವ ಸಾಧನ, ಸಂಪನ್ಮೂಲಗಳನ್ನು ಒದಗಿಸಿ ಅಥವಾ ಅವನ್ನು ಕ್ರೋಡೀಕರಿಸಿಕೊಳ್ಳುವ ಅಧಿಕಾರವನ್ನು ವಹಿಸಿ ಕೊಡಿ. ಅಂತೆಯೇ ಇತರೆ ವ್ಯಕ್ತಿಗಳಿಗೆ ಯಾವುದಾದರೂ ಜವಾಬ್ದಾರಿಗಳಿದ್ದರೆ ಅದನ್ನೂ ಹಂಚಿಕೆ ಮಾಡಿ.
11. ಆದ್ಯತೆಯ ಮೇರೆಗೆ ದೈನಂದಿನ, ಸಾಪ್ತಾಹಿಕ ಅಥವಾ ಪಾಕ್ಷಿಕ ಮೀಟಿಂಗುಗಳನ್ನು ವ್ಯವಸ್ಥೆ ಮಾಡಿ ಮಾಹಿತಿಗಳನ್ನು, ವರದಿಗಳನ್ನು ಹಂಚಿಕೊಳ್ಳಿ. ಕಾರ್ಯಪ್ರಗತಿಗೆ ತಕ್ಕನಾಗಿ ಕೆಲಸದ ಗುರಿಯನ್ನು ಪರಿಶೀಲನೆ ಮಾಡಿ ನವೀಕರಿಸಿಕೊಳ್ಳಿ.
12. ಮೀಟಿಂಗಿನ ಕೊನೆಯಲ್ಲಿ ಯಾವುದಾದರೂ ಪ್ರಶ್ನೆಗಳು ಉಳಿದಿದೆಯೇ ಎಂಬುದನ್ನು ಕೇಳಿ ಖಚಿತಪಡಿಸಿಕೊಳ್ಳಿ. ಸಾಧ್ಯವಾದರೆ ಭಾಗವಹಿಸಿದವರ ಹೆಸರನ್ನು ಉಲ್ಲೇಖಿಸಿ (ಅವರ ಗಮನ ಸೆಳೆಯಲು) ಚರ್ಚಿಸಿದ ವಿಷಯದ ಬಗ್ಗೆ ಅವರಿಗೆ ಒಪ್ಪಿಗೆ ಇದೆಯೇ ಇಲ್ಲವೇ ಎಂಬುದನ್ನು ಪರಿಶೀಲಿಸಿ.
13. 'Am I audible...' , ' Are you following...' ಎಂದು ಪದೇ ಪದೇ ಕೇಳಿ ಎಲ್ಲರನ್ನೂ 'ಎಚ್ಚರಿಸುವ' ರೀತಿ ಮಾತನಾಡದಿರಿ. ಆಯಾ ವ್ಯಕ್ತಿಗಳನ್ನು ಸರಿಯಾಗಿ ಪ್ರಶ್ನೆ ಕೇಳಿ ಅವರಿಂದಲೇ ಉತ್ತರವನ್ನು ಪಡೆಯುವುದು ಸೂಕ್ತ.
14. ಮೀಟಿಂಗಿನ ನಂತರ 'Minutes of meeting' ಸಿದ್ಧಪಡಿಸಿ ಭಾಗವಹಿಸಿದ ಎಲ್ಲರ ಬಳಿಯೂ ಹಂಚಿಕೊಳ್ಳಿ. ಇದರಿಂದ ಎಲ್ಲರೂ ವಿಷಯದ ಬಗ್ಗೆ ಏಕಾಭಿಪ್ರಾಯವಾಗಿ ಗ್ರಹಿಸಲು/ಯೋಚಿಸಲು ಸುಲಭವಾಗುತ್ತದೆ.
15. ಕೆಲವೊಮ್ಮೆ ಚರ್ಚೆಗಳು ಮೀಟಿಂಗಿನ ಉದ್ದೇಶದ ಹೊರತಾಗಿ ಬೇರೆ ವಿಷಯಕ್ಕೂ ಹೊರಳುತ್ತವೆ. ಇದರಿಂದ ಭಾಗವಹಿಸಿದವರ ಸಮಯ ವ್ಯರ್ಥವಾಗುವುದಲ್ಲದೆ, ಮೀಟಿಂಗಿನ ಬಗ್ಗೆ ಆಸಕ್ತಿ ಕೂಡ ಉಳಿಯುವುದಿಲ್ಲ. ಇದನ್ನು virtual burnout ಎಂದು ಕರೆಯುತ್ತಾರೆ. ಆದ್ದರಿಂದ ಮೀಟಿಂಗನ್ನು ಒಂದು ಸೀಮಿತ ಚೌಕಟ್ಟಿನಲ್ಲಿ ಸಮಯಾಧಾರಿತವಾಗಿ ನಡೆಸಿದರೆ ಒಳಿತು.

ಇವಿಷ್ಟೇ ಅಲ್ಲದೆ, ಸಂಸ್ಥೆಗಳಲ್ಲಿ ಈಗಾಗಲೇ ಸ್ಥಾಪಿತವಾಗಿರುವ ನಿಯಮಗಳನ್ನು ಪಾಲಿಸಿಕೊಂಡು ಸಂದರ್ಭಾನುಸಾರ ಇವುಗಳನ್ನು ಪರಿಷ್ಕಾರ ಮಾಡಿಕೊಂಡು ಅನುಸರಿಸಬಹುದು. ❖

ಸಿಇಟಿ ದಿಕ್ಸೂಚಿ

Chemistry - Some Basic Concepts of Chemistry

1. 1.0 g of Mg is burnt with 0.28 g of O_2 in a closed vessel. Which reactant is left in excess and how much ?
   (1) Mg, 5.8 g (2) Mg, 0.58 g
   (3) O_2, 0.24 g (4) O_2, 2.4 g
2. A gas mixture contains 25 % He and 75 % CH_4 by volume at a given temperature and pressure. The percentage by mass of METHANE in the mixture is approximately _____
   (1) 92 % (2) 75 %
   (3) 8 % (4) 25 %
3. A mixture of $CaCl_2$ and NaCl weighing 4.44 g is treated with sodium carbonate solution to precipitate all the calcium ions as calcium carbonate. The Calcium carbonate so obtained is heated strongly to get 0.56 g of CaO. The percentage of NaCl in the mixture is (atomic mass of Ca = 40)
   (1) 75 (2) 31.5
   (3) 40.2 (4) 25
4. 25 cm^3 of oxalic acid completely neutralised 0.064 g of sodium hydroxide. Molarity of the oxalic acid solution is
   (1) 0.045 (2) 0.032
   (3) 0.064 (4) 0.015
5. The number of water molecules present in a drop of water weighing 0.018 gm is
   (1) 6.022×10^{26} (2) 6.022×10^{23}
   (3) 6.022×10^{19} (4) 6.022×10^{20}
6. Empirical formula of a compound is CH_2O and its molecular mass is 90, the molecular formula of the compound is
   (1) $C_3H_6O_3$ (2) $C_2H_4O_2$
   (3) $C_6H_{12}O_6$ (4) CH_2O
7. The mass of 112 cm^3 of NH_3 gas at STP is
   (1) 0.085 g (2) 0.850 g
   (3) 8.500 g (4) 80.500 g
8. The number of oxygen atoms in 4.4 gm of CO_2 is,
   (1) 1.2×10^{23} (2) 6×10^{22}
   (3) 6×10^{23} (4) 12×10^{23}
9. An organic compound contains C = 40 %, H = 13.33 % and N = 46.67 %. Its empirical formula is
   (1) C_2H_2N (2) C_3H_7N
   (3) CH_4N (4) CHN
10. The mass of AgCl precipitated when a solution containing 11.70g of NaCl is added to a solution containing 3.4g of $AgNO_3$ is [Atomic mass of Ag = 108, Atomic mass of Na = 23]
   (1) 1.17 g (2) 5.74 g
   (3) 6.8 (4) 2.87

Answers

1. Answer (2):

Moles of Mg given $= \frac{1}{24} = 0.0416$

Moles of O_2 given $= \frac{0.28}{32} = 0.00875$

Here, O_2 acts as limiting reagent $2Mg + O_2 \rightarrow 2MgO$

1 mole of O_2 reacts with 2 mole of Mg

0.00875 mole of O_2 react with 2x0.00875 mole of Mg = 0.0175 mole of Mg

∴ Number of moles of 'Mg' unreacted = 0.0416-0.0175 = 0.0241

∴ Mass of 'Mg' left unreacted = 0.0241x24 = 0.58 grams

2. Answer (1):

$V \propto n$ (constant T & P)

$$\frac{V_{CH_4}}{V_{He}} = \frac{n_{CH_4}}{n_{He}} \Rightarrow \frac{75}{25} = \frac{n_{CH_4}}{n_{He}} \Rightarrow \frac{3}{1} = \frac{\frac{(\omega t)_{CH_4}}{16}}{\frac{(\omega t)_{He}}{4}}$$

$$\frac{(\omega t)_{CH_4}}{(\omega t)_{He}} = 12$$

$$\omega t\% \text{ of } CH_4 = \frac{(\omega t)_{CH_4}}{(\omega t)_{CH_4} + (\omega t)_{He}} \times 100 = 92.3\%$$

3. Answer (1):

Sol.: $\underset{0.56g}{CaO} \leftarrow \underset{1g}{CaCO_3} \leftarrow \underset{1.11g}{CaCl_2}$ b

$[56 \rightarrow 100][100 \rightarrow 111]$

Amount of $NaCl = 4.44 - 1.11 = 3.33$

$\% \text{ of } NaCl = \frac{3.33}{4.44} \times 100 = 75$

4. Answer (2):

Hint: No of equivalents of $NaOH = \frac{0.064}{40} = 16 \times 10^{-4}$

No of equivalents of oxalic acid = 16×10^{-4}

Normality $= 16 \times 10^{-4} \times \frac{1000}{25} = 0.064N$

Molarity $= \frac{Normality}{2} = 0.032$ M

5. Answer (4):

$\therefore 0.018 gm \leftrightarrow 1 \times 10^{-3}$ mole

$\leftrightarrow 6.023 \times 10^{23}$ molecules

18gm = 1mole = 6.023×10^{20} water molecules

6. Answer (1):

Molecular formula = (Empirical formula)n

Where $n = \frac{M.F\ mass}{E.F\ mass} = \frac{90}{30} = 3$

∴ Molecular formula = (Empirical formula)n

$= (CH_2O)_3$

$= C_3H_6O_3$

7. Answer (1):

22400 cm^3 at STP = 1 mole of $NH_3 \rightarrow 17g$

$\therefore 112\ cm^3 \rightarrow xg$

$\therefore x = \frac{112}{22400} \times 17$

$= 8.5 \times 10^{-2} g$

8. Answer (1):

Molar mass of CO_2 (Mwt) = 44 g/mol

Given the mass of CO_2 (w) = 4.4 g

Moles of CO_2 (n) = given mass / molecular mass = 4.4 / 44 = 0.1mol

One CO_2 molecule having two oxygen atoms

So, the total number of oxygen - atom = 2 × number of moles × NA

= 2 × 0.1 × 6.023 × 10^{23} atoms = 1.2 × 10^{23} atoms

So, the total number of oxygen- atom = 2 × number of moles × NA

= 2 × 0.1 × 6.023 × 10^{23} atoms

= 1.2 × 10^{23} atoms

9. Answer (3):

Given that

% of C = 40 %

% of H = 13.33 %

% of N = 46.61 %

Assume a 100g sample, convert the same % values to grams

40g carbon

13.33g Hydrogen

46.67g Nitrogen

Moles of Hydrogen = 13.33g / [1g/mol] = 13.33 mol

Moles of Nitrogen = 46.67g / [14g/mol] = 3.33 mol

After dividing the smallest resultant mole by each atom

C = 3.33 / 3.33 = 1; H = 3.33 / 13.33 = 4; N = 3.33 / 3.33 = 1

The formula of the compound is $C_1H_4N_1$ or CH_4N.

10. Answer (4):

$$\underset{58.5g}{NaCl} + \underset{170}{AgNO_3} \longrightarrow NaNO_3 + \underset{143.5g}{AgCl}$$

(limiting reagent)

Required ratio 58.5: 170

Given ratio 11.70: 3.4 (Limiting reagent)

170g AgNO3 143.5 (g) AgCl

x = 3.4 × 143.5/170 = 2.879

(ಪ್ರಶ್ನೋತ್ತರ ಸಂಯೋಜನೆ: ಆಕಾಶ್ ಇನ್‌ಸ್ಟಿಟ್ಯೂಟ್, ಬೆಂಗಳೂರು)

ಪೊಲೀಸ್ ಕಾನ್‌ಸ್ಟೇಬಲ್ ನೇಮಕಾತಿ ಪರೀಕ್ಷೆಯ ಮಾದರಿ ಪ್ರಶ್ನೆಗಳು

ಭಾಗ-3

26. ಕರ್ನಾಟಕದಲ್ಲಿ ಇತ್ತೀಚೆಗೆ ರಚನೆಯಾದ ಹೊಸ ಜಿಲ್ಲೆ ಯಾವುದು?
ಎ) ಯಾದಗಿರಿ
ಬಿ) ವಿಜಯನಗರ
ಸಿ) ಚಿಕ್ಕಬಳ್ಳಾಪುರ
ಡಿ) ಚಿಕ್ಕೋಡಿ

27. ಈ ಕೆಳಗಿನವುಗಳನ್ನು ಹೊಂದಿಸಿ ಬರೆಯಿರಿ

1) ಸೂಪಾ	ಅ) ಮ್ಯಾಂಗನೀಸ್
2) ಕಪ್ಪತಗುಡ್ಡ	ಆ) ಬಾಕ್ಸೈಟ್
3) ಕುಂಸಿ	ಇ) ಚಿನ್ನದ ಅದಿರು
4) ಖಾನಾಪುರ	ಈ) ಕಬ್ಬಿಣದ ಅದಿರು

ಎ) 1-ಅ, 2-ಆ, 3-ಇ, 4-ಈ
ಬಿ) 1-ಆ, 2-ಅ, 3-ಈ, 4-ಇ
ಸಿ) 1-ಈ, 2-ಇ, 3-ಆ, 4-ಅ
ಡಿ) 1-ಅ, 2-ಇ, 3-ಈ, 4-ಆ

28. ಕಪ್ಪುಮಣ್ಣು ಯಾವ ಶಿಲೆಯ ಶಿಥಿಲೀಕರಣದಿಂದ ನಿರ್ಮಾಣಗೊಂಡಿದೆ?
ಎ) ಗ್ರಾನೈಟ್
ಬಿ) ಕಲ್ಲಿದ್ದಲು
ಸಿ) ಬಸಾಲ್ಟ್
ಡಿ) ಗ್ರಾಫೈಟ್

29. ಈಗಿನ ISRO ಅಧ್ಯಕ್ಷರು ಯಾರು?
ಎ) ಕೆ.ರಾಧಾಕೃಷ್ಣನ್
ಬಿ) ಎ.ಎಸ್.ಕಿರಣ್ ಕುಮಾರ್
ಸಿ) ಕೆ. ಶಿವನ್
ಡಿ) ಕಸ್ತೂರಿರಂಗನ್

30. 2021ರ ವಿಶ್ವ ಸ್ನೂಕರ್ ಚಾಂಪಿಯನ್ ಯಾರು?
ಎ) ಮಾರ್ಕ್ ಸೆಲ್ಬಿ
ಬಿ) ಪ್ರಕಾಶ್ ನಂಜಪ್ಪ
ಸಿ) ಯೋಗೇಶ್ವರ್ ದತ್
ಡಿ) ಪಂಕಜ್ ಅಡ್ವಾಣಿ

31. ಶ್ವೇತ ಕ್ರಾಂತಿಯ ಹರಿಕಾರ ಯಾರು?
ಎ) ಎಂ.ಎಸ್.ಸ್ವಾಮಿನಾಥನ್
ಬಿ) ಪಾಂಡುರಂಗ ಹೆಗಡೆ
ಸಿ) ಸುಂದರ್‌ಲಾಲ್ ಬಹುಗುಣ
ಡಿ) ವರ್ಗೀಸ್ ಕುರಿಯನ್

32. 11, 24, 39, 416, 525, ..., 749 ಈ ಸರಣಿಯಲ್ಲಿ ಬಿಟ್ಟು ಹೋಗಿರುವ ಸಂಖ್ಯೆ ಯಾವುದು?
ಎ) 425 ಬಿ) 518
ಸಿ) 636 ಡಿ) 618

33. ಅಧಿಕ ವರ್ಷದಲ್ಲಿ ಎಷ್ಟು ದಿನ ಇರುತ್ತವೆ?
ಎ) 365 ಬಿ) 366
ಸಿ) 367 ಡಿ) 360

34. ಇವುಗಳಲ್ಲಿ ಪಶ್ಚಿಮಾಭಿಮುಖವಾಗಿ ಹರಿಯುವ ನದಿ ಯಾವುದು?
ಎ) ಕೃಷ್ಣಾ
ಬಿ) ಕಾವೇರಿ
ಸಿ) ಮಲಪ್ರಭಾ
ಡಿ) ಶರಾವತಿ

35. ಸಮುದ್ರದಲ್ಲಿ ಭಾರತದ ಸಾರ್ವಭೌಮತೆ ಎಷ್ಟು ದೂರದವರೆಗೆ ವ್ಯಾಪಿಸಿದೆ?
ಎ) 6 ನಾಟಿಕಲ್ ಮೈಲು
ಬಿ) 15 ನಾಟಿಕಲ್ ಮೈಲು
ಸಿ) 12 ನಾಟಿಕಲ್ ಮೈಲು
ಡಿ) 10 ನಾಟಿಕಲ್ ಮೈಲು

36. ಕರ್ನಾಟಕ ವಿಧಾನ ಪರಿಷತ್ ಸದಸ್ಯರ ಸಂಖ್ಯೆ ಎಷ್ಟು?
ಎ) 224 ಬಿ) 140
ಸಿ) 75 ಡಿ) 125

37. ಕರ್ನಾಟಕ ರಾಜ್ಯದಲ್ಲೇ ಅತೀ ಎತ್ತರದ ಶಿಖರ ಯಾವುದು?
ಎ) ಕುದುರೆಮುಖ
ಬಿ) ರುದ್ರಗಿರಿ
ಸಿ) ಮುಳ್ಳಯ್ಯನಗಿರಿ
ಡಿ) ಪುಷ್ಪಗಿರಿ

38. ಗೊಡಚಿನ ಮಲ್ಕಿ ಜಲಪಾತ ಯಾವ ನದಿಗೆ ಸಂಬಂಧಿಸಿದ್ದು?
ಎ) ಹಿರಣ್ಯಕೇಶಿ
ಬಿ) ಮಲಪ್ರಭಾ
ಸಿ) ಘಟಪ್ರಭಾ
ಡಿ) ಮಾರ್ಕಂಡೇಯ

39. ಓಬವ್ವ ಚಿತ್ರದುರ್ಗ ಕೋಟೆಯನ್ನು ಹೈದರ್ ಅಲಿ ಸೈನ್ಯದಿಂದ ರಕ್ಷಿಸಿದ ಕಾಲಕ್ಕೆ ಅಲ್ಲಿಯ ಪಾಳೇಗಾರ ಯಾರಾಗಿದ್ದರು?
ಎ) ರಾಜಾ ಎಚ್ಚಮ್ಮ ನಾಯಕ
ಬಿ) ರಾಜಾ ಶಿವಪ್ಪ ನಾಯಕ
ಸಿ) ರಾಜಾ ವೀರ ಮದಕರಿ ನಾಯಕ
ಡಿ) ಸಂಗೊಳ್ಳಿ ರಾಯಣ್ಣ

40. ಈ ಕೆಳಗಿನವುಗಳಲ್ಲಿ ಓಝೋನ್ ನಾಶಕ್ಕೆ ಪ್ರಮುಖ ಕಾರಣ ಯಾವುದು?
ಎ) ಮರ್ಕ್ಯುರಿ
ಬಿ) ಕಾರ್ಬನ್
ಸಿ) ಸೀಸ
ಡಿ) ಸಿ.ಎಫ್.ಸಿ

ಭಾಗ-2ರ ಉತ್ತರ

11. ಸಿ, 12. ಸಿ, 13. ಬಿ, 14. ಸಿ, 15. ಡಿ, 16. ಡಿ, 17. ಎ, 18. ಎ, 19. ಸಿ, 20. ಸಿ, 21. ಎ, 22. ಸಿ, 23. ಡಿ, 24. ಡಿ, 25. ಎ

(ಪ್ರಶ್ನೋತ್ತರ ಸಂಯೋಜನೆ: ಸ್ಲೇಟ್ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಕೇಂದ್ರ, ಧಾರವಾಡ)

❦ ಸುಭಾಷಿತ ❦

ಮಕ್ಕಳು ಪುಸ್ತಕಗಳನ್ನು ಪ್ರೀತಿಸುವುದನ್ನು ಕಲಿತಾಗ, ಕಲಿಕೆಯನ್ನು ಪ್ರೀತಿಸುವುದನ್ನು ಸಹ ಕಲಿಯುತ್ತಾರೆ.

-ಲಾರಾ ಬುಷ್

ಲಸಿಕೆ ನೀತಿಯ ಪರಿಷ್ಕರಣೆ ಸ್ವಾಗತಾರ್ಹ ಪರಿಣಾಮಕಾರಿ ಜಾರಿಯೂ ಆಗಲಿ

ಹದಿನೆಂಟು ವರ್ಷ ವಯಸ್ಸು ಮೀರಿದ ಎಲ್ಲ ಪ್ರಜೆಗಳಿಗೂ ಕೋವಿಡ್ ಲಸಿಕೆಯನ್ನು ಕೇಂದ್ರ ಸರ್ಕಾರವೇ ಉಚಿತವಾಗಿ ಒದಗಿಸುವುದಾಗಿ ಪ್ರಧಾನಿ ನರೇಂದ್ರ ಮೋದಿ ಸೋಮವಾರ ಘೋಷಿಸಿದ್ದಾರೆ. ತಡವಾಗಿಯಾದರೂ ಇಂತಹುದೊಂದು ನಿರ್ಧಾರ ತೆಗೆದುಕೊಂಡಿರುವುದು ಸ್ವಾಗತಾರ್ಹ. ಕೋವಿಡ್ ಲಸಿಕೆಯ ಬದಲಾದ ಈ ನೀತಿಯು ಈ ತಿಂಗಳ 21ರಿಂದ ಜಾರಿಗೆ ಬರಲಿದೆ. 18-44ರ ವಯೋಮಾನದವರಿಗೆ ಲಸಿಕೆ ಹಾಕಿಸುವ ಹೊಣೆಯನ್ನು ರಾಜ್ಯ ಸರ್ಕಾರಗಳ ಮೇಲೆ ಹೊರಿಸಿ, ಲಸಿಕೆಗೆ ತರಹೇವಾರಿ ದರಗಳನ್ನು ಕೇಂದ್ರವು ನಿಗದಿಪಡಿಸಿತ್ತು. ಲಸಿಕೆ ನೀತಿಯ ಬಗ್ಗೆ ಸೃಷ್ಟಿಯಾಗಿದ್ದ ಗೊಂದಲವು ಈಗ ಕೇಂದ್ರ ಸರ್ಕಾರವು ಪ್ರಕಟಿಸಿರುವ ಲಸಿಕೆ ನೀತಿ ಜಾರಿಗೆ ಬಂದರೆ ನಿವಾರಣೆ ಆಗಬಹುದು ಎಂಬ ನಿರೀಕ್ಷೆ ಮೂಡಿದೆ. ಕೇಂದ್ರ ಸರ್ಕಾರವೇ ಲಸಿಕೆಯನ್ನು ಖರೀದಿಸಿ ರಾಜ್ಯ ಸರ್ಕಾರಗಳಿಗೆ ಒದಗಿಸುವ, ಏಕರೂಪದ ಲಸಿಕೆ ನೀತಿಯನ್ನು ಜಾರಿಗೆ ತರಲು ಮುಂದಾಗಿರುವುದು ಗುಣಾತ್ಮಕ ಬದಲಾವಣೆ. ಈಗ ಜಾರಿಯಲ್ಲಿರುವ ನೀತಿಯಂತೆ, ಲಸಿಕೆ ತಯಾರಕರು ಶೇಕಡ 50ರಷ್ಟು ಲಸಿಕೆಗಳನ್ನು ಕೇಂದ್ರ ಸರ್ಕಾರಕ್ಕೆ ಪೂರೈಸಿ, ಉಳಿದದ್ದನ್ನು ರಾಜ್ಯ ಸರ್ಕಾರಗಳು ಮತ್ತು ಖಾಸಗಿ ವಲಯಕ್ಕೆ ಸಮನಾಗಿ ಒದಗಿಸಬೇಕಿತ್ತು. ತಾವು ಪಡೆಯುವ ಲಸಿಕೆಗಳಿಗೆ ರಾಜ್ಯ ಸರ್ಕಾರಗಳೇ ಹಣ ಪಾವತಿಸಬೇಕಿತ್ತು. ಹಲವು ರಾಜ್ಯ ಸರ್ಕಾರಗಳು ವಿದೇಶಿ ಕಂಪನಿಗಳಿಂದ ಲಸಿಕೆಗಳ ನೇರ ಖರೀದಿಗೂ ಯತ್ನಿಸಿದ್ದವು. ಲಸಿಕೆಗಳು ಲಭ್ಯವೇ ಇಲ್ಲದಿದ್ದ ಸಂದರ್ಭದಲ್ಲಿ 18-44ರ ವಯೋಮಾನದವರಿಗೆ ಲಸಿಕೆ ಹಾಕಿಸುವ ಹೊಣೆಯನ್ನು ರಾಜ್ಯ ಸರ್ಕಾರಗಳ ಮೇಲೆ ಹೊರಿಸಿದ್ದು ಹಲವು ಗೊಂದಲ ಮತ್ತು ತಾರತಮ್ಯಗಳಿಗೆ ಕಾರಣವಾಗಿತ್ತು. ರಾಜ್ಯಗಳಿಗೆ ಲಸಿಕೆ ಪೂರೈಕೆಯಲ್ಲಿ ವ್ಯತ್ಯಾಸವಾಗಿತ್ತು. ಹೀಗಾಗಿ ಕೋವಿಡ್ ಪ್ರಕರಣಗಳು ಹೆಚ್ಚು ಇದ್ದ ರಾಜ್ಯಗಳಲ್ಲಿ ಸಾವಿನ ಸಂಖ್ಯೆಯು ತೀವ್ರವಾಗಿ ಏರಿಕೆ ಕಂಡಿತ್ತು. ದೇಶದಾದ್ಯಂತ 7.75 ಕೋಟಿ ಡೋಸ್ ಲಸಿಕೆಗಳನ್ನು ಜನರಿಗೆ ಏಪ್ರಿಲ್‌ನಲ್ಲಿ ಹಾಕಿಸುವುದು ಸಾಧ್ಯವಾಗಿದ್ದರೂ ಮೇ ತಿಂಗಳಲ್ಲಿ ಲಸಿಕೆ ಹಾಕಿಸುವಿಕೆಯು 6 ಕೋಟಿ ಡೋಸ್‌ಗೆ ಕುಸಿದಿತ್ತು. ಇದಕ್ಕೆ, ಕೇಂದ್ರ ಸರ್ಕಾರದ ಈ ಗೊಂದಲದ ನೀತಿಯೇ ಕಾರಣವಾಗಿತ್ತು. ದೊಡ್ಡ ಸಂಖ್ಯೆಯಲ್ಲಿ ಜನರಿಗೆ ಲಸಿಕೆ ಹಾಕಿಸಲಾಗಿದೆ ಎಂದು ಪ್ರಧಾನಿಯವರು ಹೇಳುತ್ತಿದ್ದರೂ, ದೇಶದ ಜನಸಂಖ್ಯೆಯಲ್ಲಿ ಈವರೆಗೆ ಶೇ 3ಕ್ಕಿಂತ ತುಸು ಹೆಚ್ಚು ಜನರಿಗೆ ಮಾತ್ರ ಪೂರ್ಣ ಲಸಿಕೆ ಹಾಕಲು ಸಾಧ್ಯವಾಗಿದೆ ಎನ್ನುವುದು ವಾಸ್ತವ. ಕೇಂದ್ರ ಸರ್ಕಾರದ ಈ ಎಡಬಿಡಂಗಿ ನೀತಿಯ ಕುರಿತು ಸಾರ್ವಜನಿಕರು ಮತ್ತು ಮಾಧ್ಯಮಗಳಿಂದ ತೀವ್ರ ಟೀಕೆ ವ್ಯಕ್ತವಾಗಿತ್ತು. ಕೇಂದ್ರ ಸರ್ಕಾರವನ್ನು ಸುಪ್ರೀಂ ಕೋರ್ಟ್ ಕೂಡ ಕಟುವಾಗಿ ಟೀಕಿಸಿದ್ದು, ಹಲವು ಕಠಿಣ ಪ್ರಶ್ನೆಗಳನ್ನು ಕೇಳಿತ್ತು. ವೈದ್ಯಕೀಯ ಆಮ್ಲಜನಕದ ಕೊರತೆ ಮತ್ತು ಹಂಚಿಕೆಯಲ್ಲಿನ ತಾರತಮ್ಯದ ವಿಚಾರದಲ್ಲಿಯೂ ಸುಪ್ರೀಂ ಕೋರ್ಟ್ ಮಧ್ಯಪ್ರವೇಶಿಸಿತ್ತು. ಲಸಿಕೆ ನೀತಿಗೆ ಸಂಬಂಧಿಸಿ ಕೇಂದ್ರವನ್ನು ತರಾಟೆಗೆ ತೆಗೆದುಕೊಂಡಿದ್ದ ನ್ಯಾಯಾಲಯವು ಲಸಿಕೆ ನೀತಿಯು 'ಅತಾರ್ಕಿಕ' ಎಂದಿತ್ತು. ಹಲವು ಕಟು ಪ್ರಶ್ನೆಗಳಿಗೆ ಕೇಂದ್ರ ಸರ್ಕಾರದಿಂದ ನೇರ ಉತ್ತರವನ್ನೂ ಬಯಸಿತ್ತು. ಹಾಗಾಗಿಯೇ ಪ್ರಧಾನಿ ಮೋದಿ ಅವರು ದೇಶವನ್ನು ಉದ್ದೇಶಿಸಿ ಮಾತನಾಡಿ, 18 ವರ್ಷ ದಾಟಿದ ಎಲ್ಲರಿಗೂ ಉಚಿತ ಲಸಿಕೆ ನೀಡುವುದಾಗಿ ಘೋಷಿಸಬೇಕಾಯಿತು.

ಕಾಲಮಿತಿಯಲ್ಲಿ ಗರಿಷ್ಠ ಸಂಖ್ಯೆಯ ಜನರಿಗೆ ಲಸಿಕೆಯ ಎರಡೂ ಡೋಸ್‌ಗಳನ್ನು ಹಾಕಿಸಲು ಕೇಂದ್ರ ಸರ್ಕಾರ ಸಮರೋಪಾದಿಯಲ್ಲಿ ಕ್ರಮ ಕೈಗೊಳ್ಳಬೇಕಿದೆ

ಈ ಹೊಸ ಲಸಿಕೆ ನೀತಿಯನ್ನು ಕಾಲಬದ್ಧವಾಗಿ ಮತ್ತು ಪರಿಣಾಮಕಾರಿಯಾಗಿ ಕೇಂದ್ರವು ಹೇಗೆ ಜಾರಿಗೆ ತರಲಿದೆ ಎನ್ನುವುದನ್ನು ಕಾದು ನೋಡಬೇಕಿದೆ. ದೇಶದ ಜನಸಂಖ್ಯೆಯ ಪ್ರಮಾಣಕ್ಕೆ ಅನುಗುಣವಾಗಿ ಲಸಿಕೆಯ ತಯಾರಿಕೆ ಮತ್ತು ವಿತರಣೆ ನಡೆಯುವ ಬಗ್ಗೆ ಈಗಾಗಲೇ ಹಲವು ಪ್ರಶ್ನೆಗಳೆದ್ದಿವೆ. ಜುಲೈ ತಿಂಗಳಿಂದ ಲಸಿಕೆಯ ತಯಾರಿಕೆ ಮತ್ತು ಪೂರೈಕೆಯನ್ನು ಹೆಚ್ಚಿಸುವುದಾಗಿ ಭಾರತದ ಎರಡೂ ಲಸಿಕೆ ತಯಾರಿಕಾ ಕಂಪನಿಗಳು ಪ್ರಕಟಿಸಿವೆ. ಈ ಮಧ್ಯೆ, ಇನ್ನೂ ಕೆಲವು ಹೊಸ ಕಂಪನಿಗಳು ದೇಶೀಯವಾಗಿ ಮತ್ತು ಕೆಲವು ವಿದೇಶಿ ಲಸಿಕೆಗಳನ್ನು ತಯಾರಿಸುವ ಪರವಾನಗಿ ಪಡೆದಿರುವ ಸುದ್ದಿಯೂ ಬಂದಿದೆ. ಪ್ರಧಾನಿ ಮೋದಿ ತಮ್ಮ ಭಾಷಣದಲ್ಲಿ ಲಸಿಕೆ ವಿತರಣೆ ಯೋಜನೆಯ ಜಾರಿಯಲ್ಲಿ ಹಿನ್ನಡೆ ಅನುಭವಿಸಿರುವುದಕ್ಕೆ ರಾಜ್ಯ ಸರ್ಕಾರಗಳನ್ನು ಮತ್ತು ಬಿಜೆಪಿಗೂ ಹಿಂದೆ ಕೇಂದ್ರವನ್ನು ಆಳಿರುವ ಇತರ ಪಕ್ಷಗಳ ಸರ್ಕಾರಗಳನ್ನು ದೂಷಿಸಿರುವುದು ದುರದೃಷ್ಟಕರ. ದೇಶದ ಎಲ್ಲ ಪ್ರಜೆಗಳಿಗೂ ಉಚಿತ ಲಸಿಕೆ ಒದಗಿಸುವ ಕೆಲಸವನ್ನು ಕೇಂದ್ರ ಸರ್ಕಾರ ಆರಂಭದಲ್ಲೇ ವ್ಯವಸ್ಥಿತವಾಗಿ ಕೈಗೊಂಡಿದ್ದರೆ ಭಾರಿ ಸಂಖ್ಯೆಯ ಸಾವು ನೋವುಗಳನ್ನು ತಡೆಯಬಹುದಿತ್ತು. ಸುಪ್ರೀಂ ಕೋರ್ಟ್ ಮಧ್ಯಪ್ರವೇಶಿಸಿ ಲಸಿಕೆ ನೀತಿಯನ್ನು ಸರಿಪಡಿಸಲು ಕಠಿಣ ಶಬ್ದಗಳಲ್ಲಿ ನಿರ್ದೇಶಿಸಬೇಕಾದ ಪರಿಸ್ಥಿತಿಯೂ ಉಂಟಾಗುತ್ತಿರಲಿಲ್ಲ. ಅದೇನೇ ಇರಲಿ, ಈಗ ಪ್ರಕಟಿಸಿರುವ ಉಚಿತ ಲಸಿಕೆ ವಿತರಣೆಯ ಹೊಸ ನೀತಿಯನ್ನು ಸಮರ್ಪಕವಾಗಿ ಮತ್ತು ಶೀಘ್ರವಾಗಿ ಜಾರಿಗೆ ತರಬೇಕಿದೆ. ಕಾಲಮಿತಿಯಲ್ಲಿ ಗರಿಷ್ಠ ಸಂಖ್ಯೆಯ ಜನರಿಗೆ ಲಸಿಕೆಯ ಎರಡೂ ಡೋಸ್‌ಗಳನ್ನು ಹಾಕಿಸಲು ಕೇಂದ್ರ ಸರ್ಕಾರ ಸಮರೋಪಾದಿಯಲ್ಲಿ ಕ್ರಮ ಕೈಗೊಳ್ಳಬೇಕಿದೆ. ಕೋವಿಡ್ ಮೂರನೆಯ ಅಲೆಯು ಬರುವ ಹೊತ್ತಲ್ಲಿ ಬಹುಸಂಖ್ಯೆಯ ಜನರು ಲಸಿಕೆ ಹಾಕಿಸಿಕೊಂಡು ರೋಗಪ್ರತಿರೋಧ ಶಕ್ತಿಯನ್ನು ಹೆಚ್ಚಿಸಿಕೊಳ್ಳುವಂತೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಜತೆಗೂಡಿ ಕೆಲಸ ಮಾಡಬೇಕಿದೆ.

ದಿನದ ಟ್ವೀಟ್

ತಿಳಿವಳಿಕೆ ಮುಖ್ಯವಾಗಲಿ

ಮಹಾರಾಷ್ಟ್ರದ ಸಣ್ಣ ಪಟ್ಟಣಕ್ಕೆ ಸೇರಿದ ಇಂಟರ್ನಿಯೊಬ್ಬನ ಸಂದರ್ಶನ ನಡೆಸುತ್ತಿದ್ದೆವು. ಅವನಿಗೆ ಒಂದು ಪ್ರಶ್ನೆ ಕೇಳಿದೆವು. ಉತ್ತರಿಸಲು ತಡಬಡಾಯಿಸಿದ ಯುವಕ ಇದ್ದಕ್ಕಿದ್ದಂತೆ, 'ನಾನು ಹಿಂದಿಯಲ್ಲಿ ಮಾತನಾಡಬಹುದೇ?' ಎಂದು ಕೇಳಿದ. ಆ ಬಗ್ಗೆ ನನಗೆ ಯಾವುದೇ ಆಕ್ಷೇಪ ಇರಲಿಲ್ಲ. ಅವನು ವಿಷಯವನ್ನು ಅದ್ಭುತವಾಗಿ ವಿವರಿಸಿದ. ತಿಳಿವಳಿಕೆ ಮಟ್ಟ ಮತ್ತು ಕೌಶಲ ಗೊತ್ತಾಯಿತು. ಅವನನ್ನು ನೇಮಿಸಿಕೊಂಡೆವು. ಕೋಡಿಂಗ್ ಕೌಶಲದ ಸಲುವಾಗಿ ನೇಮಕ ಮಾಡಿಕೊಳ್ಳುತ್ತಿದ್ದೇನೆ ಎಂದು ಅವನಿಗೆ ತಿಳಿಸಿದೆ.

ಅರುಣ್ ಕೃಷ್ಣನ್, ಸಂಸ್ಥಾಪಕ ಮತ್ತು ಸಿಇಒ, @AnalyticsN

25 ವರ್ಷಗಳ ಹಿಂದೆ

ಭಾನುವಾರ, 9-6-1996

• ರಾಜೀನಾಮೆ ವಾಪಸಿಗೆ ಭಿನ್ನ ಶಾಸಕರ ಒಪ್ಪಿಗೆ

ಬೆಂಗಳೂರು, ಜೂನ್ 8– ರಾಜ್ಯ ದಳ ಶಾಸಕಾಂಗ ಪಕ್ಷದಲ್ಲಿ ಭುಗಿಲೆದ್ದಿರುವ ಅಸಮಾಧಾನವನ್ನು ಶಮನಗೊಳಿಸಲೆಂದೇ ದೆಹಲಿಯಿಂದ ಬೆಂಗಳೂರಿಗೆ ದೌಡಾಯಿಸಿದ್ದ ಜನತಾ ದಳದ ಅಧ್ಯಕ್ಷರೂ ಆಗಿರುವ ಕೇಂದ್ರ ನಾಗರಿಕ ವಿಮಾನಯಾನ ಸಚಿವ ಸಿ.ಎಂ. ಇಬ್ರಾಹಿಂ ಸಂಧಾನದಿಂದಾಗಿ, ವಿಧಾನಸಭೆ ಅಧ್ಯಕ್ಷರಿಗೆ ನೀಡಿದ್ದ ರಾಜೀನಾಮೆಯನ್ನು ಹಿಂತೆಗೆದುಕೊಳ್ಳಲು ಬಂಡೆದಿದ್ದ ಶಾಸಕರು ಸಮ್ಮತಿಸಿದ್ದಾರೆ.

ಎರಡು ಹಂತದಲ್ಲಿ ನಡೆದ ಸಂಧಾನ ಹಾಗೂ ತೆರೆಮರೆಯಲ್ಲಿ ನಡೆದ ವಿದ್ಯಮಾನಗಳ ಪರಿಣಾಮವಾಗಿ ನೂತನ ಮುಖ್ಯಮಂತ್ರಿ ಜೆ.ಎಚ್. ಪಟೇಲ್ ನೇತೃತ್ವದ ಸರ್ಕಾರಕ್ಕೆ ಎದುರಾಗಿದ್ದ ಗಂಡಾಂತರ ನಿವಾರಣೆಯಾದಂತಾಗಿದೆ.

• ಕೋರ್ಟ್‌ಗೆ ಅಯೋಧ್ಯಾ ವಿವಾದ– ವಾಜಪೇಯಿ ಟೀಕೆ

ಮದ್ರಾಸ್, ಜೂನ್ 8 (ಪಿಟಿಐ)– ಅಯೋಧ್ಯಾ ವಿವಾದವನ್ನು ಸುಪ್ರೀಂ ಕೋರ್ಟಿಗೆ ಒಪ್ಪಿಸುವ ಸಂಯುಕ್ತ ರಂಗ ಸರ್ಕಾರದ ನಿರ್ಧಾರವನ್ನು ಮಾಜಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಟೀಕಿಸಿದ್ದಾರೆ.

50 ವರ್ಷಗಳ ಹಿಂದೆ

ಬುಧವಾರ, 9-6-1971

• 'ಗರೀಬಿ ಬಢಾವೋ'

ನವದೆಹಲಿ, ಜೂನ್ 8–ಜನಸಂಘವು ಭಾನುವಾರದಿಂದ ರಾಷ್ಟ್ರದಾದ್ಯಂತ ಹೂಡಿರುವ 'ಶ್ರೀಸಾಮಾನ್ಯನಿಗೆ ತೆರಿಗೆಗಳು ಬೇಡ' ಚಳವಳಿ ಅಂಗವಾಗಿ ಬಿಡುಗಡೆ ಮಾಡಿರುವ ಒಂದು ಪ್ರಕಟಣೆಯಲ್ಲಿ ಕೇಂದ್ರ ಬಜೆಟನ್ನು 'ಗರೀಬಿ ಬಢಾವೋ' (ದಾರಿದ್ರ್ಯ ವೃದ್ಧಿ) ಎಂದು ವರ್ಣಿಸಿದೆ.

ಸುಪ್ರಸಿದ್ಧ ಅರ್ಥಶಾಸ್ತ್ರಜ್ಞ ಪ್ರೊ.ಸುಬ್ರಹ್ಮಣ್ಯಂ ಸ್ವಾಮಿ ಮತ್ತು ಸಂಸತ್ ಸದಸ್ಯ ಡಾ.ಭಾಯಿ ಮಹಾವೀರ್ ಅವರು ಬಜೆಟನ್ನು ವಿಮರ್ಶಿಸಿರುವ ಲೇಖನಗಳನ್ನುಳ್ಳ ಅಪ್ರಕಟಣೆಯ ಶೀರ್ಷಿಕೆ 'ಗರೀಬಿ ಬಢಾವೋ'.

• ಕಾಮನ್‌ವೆಲ್ತ್ ತ್ಯಜಿಸುವುದಾಗಿ ಬ್ರಿಟನ್‌ಗೆ ಭಾರತದ ಎಚ್ಚರಿಕೆ

ನವದೆಹಲಿ, ಜೂನ್ 8– ತಾನು ಆಮದು ಮಾಡಿಕೊಳ್ಳುವ ಹತ್ತಿ ಬಟ್ಟೆ ಮೇಲೆ ಶೇ 15ರಷ್ಟು ಸುಂಕ ವಿಧಿಸುವುದಾಗಿ ಬ್ರಿಟನ್ ಹಟ ಹಿಡಿದರೆ ತಾನು ಕಾಮನ್‌ವೆಲ್ತ್ ತ್ಯಜಿಸಬೇಕಾಗುವುದು ಎಂದು ಭಾರತವು ಅದಕ್ಕೆ ಖಚಿತವಾಗಿ ತಿಳಿಸಿದೆ.

ಬ್ರಿಟನ್ ಈ ನಿರ್ಧಾರವನ್ನು ಬದಲಾಯಿಸಬೇಕೆಂದು ವಾಣಿಜ್ಯ ಸಚಿವ ಎಲ್.ಎನ್.ಮಿಶ್ರಾ ಒತ್ತಾಯಿಸಿದ್ದಾರೆ.

ಈ ಪ್ರಬುದ್ಧ ಪರಿಕಲ್ಪನೆಗಳ ನಡುವಿನ ಕಂದಕ ಹೆಚ್ಚುತ್ತಿರುವ ಬಗ್ಗೆ ಮರುಪರಿಶೀಲನೆ ಆಗಬೇಕಿದೆ

ರಾಷ್ಟ್ರೀಯತೆ ಮತ್ತು ಜಾತ್ಯತೀತತೆ ಪ್ರತ್ಯೇಕವೇ?

ವಿಶ್ಲೇಷಣೆ

ಬರಗೂರು ರಾಮಚಂದ್ರಪ್ಪ

ಜಾತ್ಯತೀತತೆಯು ರಾಷ್ಟ್ರೀಯತೆಗೆ ವಿರುದ್ಧವಾದ ನೆಲೆ ಎಂಬ ನಂಬಿಕೆಯನ್ನು ಇತ್ತೀಚಿನ ವರ್ಷಗಳಲ್ಲಿ ಬಿತ್ತಲಾಗುತ್ತಿದೆ. ಮೂಲಭೂತವಾದಿ ನೆಲೆಯಿಂದ ಜಾತ್ಯತೀತ ನಿಲುವನ್ನು ಹಂಗಿಸಲಾಗುತ್ತಿದೆ; ಇದರ ಫಲವಾಗಿ ಈ ಎರಡು ಪ್ರಬುದ್ಧ ಪರಿಕಲ್ಪನೆಗಳ ನಡುವಿನ ಕಂದಕ ಹೆಚ್ಚಾಗುತ್ತಿದೆ; ರಾಷ್ಟ್ರೀಯತೆಯನ್ನು ಬಹುಸಂಖ್ಯಾತರ ನೆಲೆಯಿಂದಲೂ ಜಾತ್ಯತೀತತೆಯನ್ನು ಅಲ್ಪಸಂಖ್ಯಾತರ ನೆಲೆಯಿಂದಲೂ ನಿರ್ವಚಿಸುವ ಹುಸಿ ನೋಟ ವಿಜೃಂಭಿಸುತ್ತಿದೆ. ಇದು ಸರಿಯೆ? ಈ ಎರಡು ಪರಿಕಲ್ಪನೆಗಳು ಮೂಲತಃ ಪರಸ್ಪರ ವಿರುದ್ಧವೆ? ಮರುಪರಿಶೀಲನೆ ಮಾಡಿಕೊಳ್ಳದಿದ್ದರೆ ದೇಶವನ್ನು ಹಾದಿ ತಪ್ಪಿಸುವ ಕುಟಿಲೋಪಾಯಗಳಿಗೆ ಪಾಯ ತೋಡಿದಂತಾಗುತ್ತದೆ.

ಮೊದಲಿಗೆ ನಾವು ಅರ್ಥ ಮಾಡಿಕೊಳ್ಳಬೇಕು: ದೇಶದ ಬಹುಸಂಖ್ಯಾತರ ಪರವಾಗಿದ್ದರೆ ಮಾತ್ರ ರಾಷ್ಟ್ರೀಯತೆಯಾಗುವುದಿಲ್ಲ; ಅಂತೆಯೇ ಅಲ್ಪಸಂಖ್ಯಾತರ ಪರವಾಗಿದ್ದರೆ ಮಾತ್ರ ಜಾತ್ಯತೀತವಾಗುವುದಿಲ್ಲ. ಆದರೆ ಯಾವುದೇ ದೇಶದಲ್ಲಿ ಬಹುಸಂಖ್ಯಾತರ ಎದುರು ಅಲ್ಪಸಂಖ್ಯಾತರು, ಸವರ್ಣೀಯರ ಎದುರು ಅಸ್ಪೃಶ್ಯರು, ಪುರುಷರ ಎದುರು ಮಹಿಳೆಯರು, ಬಂಡವಾಳಗಾರರ ಎದುರು ಬಡವರು ತಮ್ಮದೇ ವಿಶಿಷ್ಟ ಸಮಸ್ಯೆ ಮತ್ತು ಸವಾಲುಗಳನ್ನು ಎದುರಿಸುತ್ತಾರೆ. ಹೀಗಾಗಿ ಈ ಜನವರ್ಗಗಳ ಪರವಾಗಿರುವುದು ಸಾಮಾಜಿಕ-ಆರ್ಥಿಕ ಸಮತೋಲನದ ಒಂದು ಸೈದ್ಧಾಂತಿಕ ನಡೆಯಾಗುತ್ತದೆ. ಈ ನಡೆಯು ರಾಷ್ಟ್ರೀಯತೆಯ ವಿರೋಧಿ ಎಂದು ಭಾವಿಸಬೇಕಾಗಿಲ್ಲ.

ನಿಜ; ಜಾತ್ಯತೀತವಾದಿಗಳು ಎನ್ನಿಸಿಕೊಂಡ ಕೆಲವರು ಜಾತಿವಾದಿಗಳೂ ಸ್ವಜಾತಿ ಸ್ವಾರ್ಥರೂ ಆಗಿರಬಹುದು; ಅಂತೆಯೇ ರಾಷ್ಟ್ರೀಯವಾದಿಗಳು ಎನ್ನಿಸಿಕೊಂಡವರಲ್ಲಿ ಧಾರ್ಮಿಕ ಮೂಲಭೂತವಾದಿಗಳೂ ಇದ್ದಾರಲ್ಲವೆ? ಹಾಗೆಂದು ಈ ಎರಡು ಪರಿಕಲ್ಪನೆಗಳ ನಿಜದ ನೆಲೆಗಳನ್ನು ನಿರಾಕರಿಸುವುದು ಸರಿಯಾಗಲಾರದು. ಜಾತಿ ಮತ್ತು ಧಾರ್ಮಿಕ ದ್ವೇಷಕ್ಕೆ ಇವರಲ್ಲಿ ಯಾರೂ ಕಾರಣರಾಗಬಾರದು.

ಈಗ ಜಾಗತಿಕವಾಗಿ ಒಪ್ಪಿಕೊಂಡಿರುವ ನಿರ್ವಚನವನ್ನು ಗಮನಿಸಬಹುದು. ನಿರ್ದಿಷ್ಟ ದೇಶದ ಹಿತಾಸಕ್ತಿಯ ರಕ್ಷಣೆ, ಏಕತೆ, ಸಾರ್ವಭೌಮತೆಗಳನ್ನು ಕಾಪಾಡಿಕೊಳ್ಳುತ್ತ ಹೊರಗಿನ ಹಸ್ತಕ್ಷೇಪಕ್ಕೆ ಅವಕಾಶವಾಗದಂತೆ ಸ್ವಯಂ ಆಡಳಿತಕ್ಕೆ ಒಳಪಡಿಸಿಕೊಳ್ಳುವುದು ರಾಷ್ಟ್ರೀಯತೆಯ ಸಿದ್ಧಾಂತ ಎಂದು ನಿರ್ವಚಿಸಲಾಗಿದ್ದು, ಇದು ಜಗತ್ತಿನ ಎಲ್ಲ ದೇಶಗಳಿಗೂ ಅನ್ವಯಿಸುವ ಸಾಮಾನ್ಯೀಕೃತ ವಿವರಣೆಯಾಗಿದೆ. ಆನಂತರ ದೇಶಪ್ರೇಮವು ರಾಷ್ಟ್ರೀಯತೆಯ ಭಾಗವಾಯಿತು. ಜೊತೆಗೆ ದೇಶದೊಳಗಿನ ಸ್ಥಳೀಯ ಅಸ್ಮಿತೆಗಳಿಗೂ ರಾಷ್ಟ್ರೀಯತೆಯ ಆಯಾಮ ಒದಗಿಬಂದಿತು.

ಅಂತೆಯೇ ಸೆಕ್ಯುಲರಿಸಂ ಪರಿಕಲ್ಪನೆಯನ್ನು 1851ರಲ್ಲಿ ಮೊದಲಿಗೆ ಪ್ರತಿಪಾದಿಸಲಾಯಿತು. ಜಾತ್ಯತೀತತೆಯೆಂಬ ಪರಿಕಲ್ಪನೆಯು ಮೊದಲಿಗೆ ಬಂದಾಗ 'ದೇಶದ ಆಡಳಿತವು ಯಾವುದೇ ಧರ್ಮದೊಂದಿಗೆ ಸಂಬಂಧ ಇಟ್ಟುಕೊಂಡಿರಬಾರದೆಂದೂ ಧರ್ಮದೂರ ನೀತಿಯೇ ಜಾತ್ಯತೀತತೆಯೆಂದೂ ಹೇಳಲಾಗಿತ್ತು. ಆದರೆ ಈ ನೀತಿಯನ್ನು ಅಮೆರಿಕ, ಫ್ರಾನ್ಸ್ ಮುಂತಾದ ದೇಶಗಳ ಮೂಲಭೂತವಾದಿ ಕ್ರಿಶ್ಚಿಯನ್ನರೂ ಕೆಲವು ವಿದ್ವಜ್ಜನರೂ ವಿರೋಧಿಸಿದರು. ಮುಂದಿನ ದಿನಗಳಲ್ಲಿ 'ಸೆಕ್ಯುಲರಿಸಂ' ಎನ್ನುವುದು 'ನಿರ್ದಿಷ್ಟ ದೇಶದಲ್ಲಿ ಧರ್ಮದ ಹೆಸರಿನಲ್ಲಿ ಯಾರನ್ನಾಗಲಿ ಅಸಮತೆ, ಅಸಹನೆಗಳಿಂದ ಕಾಣಬಾರದ ತತ್ತ್ವ'ವಾಗಿ ರೂಪಾಂತರಗೊಂಡಿತು. ಭಾರತದಲ್ಲಿ ಇದೇ ತತ್ವವನ್ನು 'ಜಾತ್ಯತೀತತೆ' ಎಂಬ ಹೆಸರಿನಲ್ಲಿ ಬಳಸಲಾಗು ತ್ತಿದೆ.

ಡಾ. ಅಂಬೇಡ್ಕರ್ ರಚಿತ ಭಾರತದ ಸಂವಿಧಾನದಲ್ಲಿ ಜಾತ್ಯತೀತ ತತ್ವವು ಅಂತರ್ಗತವಾಗಿದ್ದರಿಂದ ಅದನ್ನು ಅದೇ ಪದದ ಮೂಲಕ ಪ್ರತ್ಯೇಕವಾಗಿ ನಮೂದಿಸುವ ಅಗತ್ಯವಿಲ್ಲವೆಂದು ಭಾವಿಸಲಾಗಿತ್ತು. ಈ ಭಾವನೆಗೆ ಪುಷ್ಟಿ ಕೊಡುವಂತೆ ರಾಷ್ಟ್ರೀಯ ಹೋರಾಟಗಳಿಂದ ಬೆಳೆದು ಬಂದಿದ್ದ ಜಾತ್ಯತೀತವಾದಿ ಪ್ರಧಾನಿ ನೆಹರೂ ಅವರು 'ಪ್ರಬುದ್ಧ ವಿಚಾರವಂತರೂ ವೈಜ್ಞಾನಿಕ ಮನೋಭಾವ ಉಳ್ಳವರೂ ಘನ ವಿದ್ವಾಂಸರೂ ಆದ ಡಾ. ಅಂಬೇಡ್ಕರ್, ಜಾತ್ಯತೀತ ಅಖಂಡ ನವಭಾರತ ನಿರ್ಮಿಸಲು ಈ ಸಂವಿಧಾನದಲ್ಲಿ ಭದ್ರ ಬುನಾದಿ ಹಾಕಿದ್ದಾರೆ'- ಎಂದು ಅಭಿಪ್ರಾಯಪಟ್ಟಿದ್ದರು. ಆದರೆ ನೆಹರೂ ನಂತರದ ಬೆಳವಣಿಗೆಗಳ ಹಿನ್ನೆಲೆಯಲ್ಲಿ ಇಂದಿರಾ ಗಾಂಧಿಯವರು ಪ್ರಧಾನಿಯಾಗಿದ್ದಾಗ ಸಂವಿಧಾನಕ್ಕೆ 42ನೇ ತಿದ್ದುಪಡಿ ತಂದು, ಪೀಠಿಕಾ ಭಾಗದಲ್ಲಿ ಜಾತ್ಯತೀತತೆ ಮತ್ತು ಸಮಾಜವಾದಿ ಎಂಬ ಪದಗಳನ್ನು ಸೇರಿಸಿ ಸ್ಪಷ್ಟಪಡಿಸಲಾಯಿತು. ಹಾಗೆ ನೋಡಿದರೆ, ರಾಷ್ಟ್ರೀಯತೆ ಮತ್ತು ಜಾತ್ಯತೀತತೆಗಳು ಸ್ವಾತಂತ್ರ್ಯಪೂರ್ವದ ಹೋರಾಟಗಳ ಭಾಗವಾಗಿ ಬೆಳೆದು ಬಂದಿರುವುದನ್ನು ಗಮನಿಸಬಹುದು. ಸ್ವಾಮಿ ವಿವೇಕಾನಂದ, ಗಾಂಧಿ, ಅಂಬೇಡ್ಕರ್, ಸುಭಾಷ್‌ಚಂದ್ರ ಬೋಸ್, ಭಗತ್‌ಸಿಂಗ್ ಮುಂತಾದವರು ರಾಷ್ಟ್ರೀಯತೆಯನ್ನು ಮನಗೂಡಿಸಿಕೊಂಡೇ ಬದುಕನ್ನು ರೂಪಿಸಿಕೊಂಡವರು; ತಮ್ಮದೇ ಆದ ವಿಭಿನ್ನ ಮಾರ್ಗಗಳ ಮೂಲಕ ರಾಷ್ಟ್ರೀಯತೆ ಮತ್ತು ಜಾತ್ಯತೀತತೆಯ ಹೋರಾಟಗಳನ್ನು ಬೆಳೆಸಿದವರು.

ಈಗ ವಿವೇಕಾನಂದರ ವಿಚಾರಧಾರೆಯನ್ನು ಗಮನಿಸೋಣ; ವಿದೇಶದಲ್ಲಿ ನಮ್ಮ ದೇಶ ಮತ್ತು ಹಿಂದೂ ಧರ್ಮದ ಹಿರಿಮೆಯನ್ನು ಒಟ್ಟಿಗೇ ಸಾರಿದ ವಿವೇಕಾನಂದರು ನಮ್ಮ ದೇಶದಲ್ಲಿರುವ ಜಾತಿ ಮತ್ತು ಧರ್ಮಗಳ ತಾರತಮ್ಯವನ್ನು ನಮ್ಮ ನೆಲದಲ್ಲೇ ನಿಂತು ಖಂಡಿಸಿದರು. 'ಜಾತಿಯ ದುರ್ಗಂಧದಿಂದ ಭಾರತದ ವಾತಾವರಣವೆಲ್ಲ ತುಂಬಿ ಹೋಗಿದೆ' (ಕೃತಿ ಶ್ರೇಣಿ ಸಂಪುಟ-6) ಎಂದರು. 1893ರ ಸೆಪ್ಟೆಂಬರ್ 11ರಂದು ಷಿಕಾಗೊದಲ್ಲಿ ಮಾಡಿದ ಭಾಷಣದಲ್ಲಿ 'ಸ್ವಮತಾಭಿಮಾನ, ಧಾರ್ಮಿಕ ದುರಭಿಮಾನ, ಅನ್ಯಮತ ದ್ವೇಷ'ಗಳನ್ನು ವಿರೋಧಿಸಿದರು. ಮುಂದೊಮ್ಮೆ 'ನಮ್ಮ ಮಾತೃಭೂಮಿಯಲ್ಲಿ ಹಿಂದೂ ಮತ್ತು ಮುಸಲ್ಮಾನ ಧರ್ಮಗಳೆರಡೂ ಮಿಲನವಾಗಬೇಕು' (ಕೃತಿ ಶ್ರೇಣಿ ಸಂ.7) ಎಂದು ಸಾರಿದರು. ವಿವೇಕಾನಂದರಲ್ಲಿ ಜಾತ್ಯತೀತತೆ ಮತ್ತು ರಾಷ್ಟ್ರೀಯತೆಯ ಭಾವಗಳೆರಡೂ ಒಂದಾಗಿ ಪ್ರಕಟಗೊಂಡಿರುವುದಕ್ಕೆ ಇವು ಸಾಂಕೇತಿಕ ಸಾಕ್ಷಿಗಳು.

ಗಾಂಧೀಜಿ ತಮ್ಮ ಹೋರಾಟದಲ್ಲಿ ಯಾವತ್ತೂ ಜಾತಿ, ಧರ್ಮ, ದೇವರುಗಳನ್ನು ಸಾಧನವಾಗಿ ಬಳಸಲಿಲ್ಲ. ಜನಸಾಮಾನ್ಯರ ಜಾತ್ಯತೀತ ಸಂಕೇತಗಳಾದ ಉಪ್ಪು, ಖಾದಿ, ಚರಕಗಳನ್ನು ಬಳಸಿದರು. ಹಿಂದೂ ಧರ್ಮದಲ್ಲಿನ ನಂಬಿಕೆಯಿಂದ ಅವರು 'ರಾಷ್ಟ್ರೀಯತೆ ಹಾಗೂ ಅಖಂಡ ಮಾನವಪ್ರೀತಿ ಪ್ರತ್ಯೇಕವಲ್ಲ. ಜನಾಂಗಗಳ ದ್ವೇಷಕ್ಕೆ ಇಲ್ಲಿ ಆಸ್ಪದವಿಲ್ಲ'... 'ಧರ್ಮವು ರಾಷ್ಟ್ರೀಯತೆಗೆ ಮಾನದಂಡವಲ್ಲ'... 'ನಮ್ಮ ರಾಷ್ಟ್ರವು ಯಾವುದೇ ಬಹುಸಂಖ್ಯಾತ ಧರ್ಮ, ಪಂಗಡ, ಸಮುದಾಯಗಳನ್ನು ಆಧರಿಸಿರುವುದಿಲ್ಲ. ಇದು ಧಾರ್ಮಿಕ ವ್ಯತ್ಯಾಸವಿಲ್ಲದ ಎಲ್ಲರ ಪ್ರಾತಿನಿಧಿಕ ರಾಷ್ಟ್ರವಾಗಿರುತ್ತದೆ' ಎಂದು ಪ್ರತಿಪಾದಿಸಿದರು.

ಡಾ. ಅಂಬೇಡ್ಕರ್ ಅವರು ರಚಿಸಿದ ಸಂವಿಧಾನದ ಚರ್ಚೆಯಲ್ಲಿ, ಹಿಂದೂ ಧರ್ಮನಿಷ್ಠರಾದ ಡಾ. ಎಸ್.ರಾಧಾಕೃಷ್ಣನ್ ಮತ್ತು ಹಿಂದೂ ಧರ್ಮವನ್ನು ಒಪ್ಪದ ಡಾ. ಅಂಬೇಡ್ಕರ್ ಅವರು ಒಟ್ಟಿಗೇ ಸರ್ವಧರ್ಮ ಸಮಾನತೆಯನ್ನು ಪ್ರತಿಪಾದಿಸಿದ್ದು ಜಾತ್ಯತೀತತೆಯ ಒಂದು ವ್ಯಾಖ್ಯಾನವಾಗಿ ಮಹತ್ವ ಪಡೆಯುತ್ತದೆ. ಜಾತ್ಯತೀತ ತತ್ವದ ಅಂಬೇಡ್ಕರ್ ಅವರು 'ನಾನೊಬ್ಬ ಭಾರತೀಯ ರಾಷ್ಟ್ರೀಯತೆಯ ಪ್ರತಿಪಾದಕ' ಎಂದು ಹೇಳಿದ್ದಲ್ಲದೆ 'ರಾಷ್ಟ್ರೀಯತೆಯೆನ್ನುವುದು ವಿವಿಧ ಪ್ರಭೇದಗಳ ಪ್ರಜ್ಞೆ' ಎನ್ನುವ ಮೂಲಕ ಬಹುತ್ವದ ಆಯಾಮವನ್ನು ತಿಳಿಸಿದರು. 'ರಾಷ್ಟ್ರೀಯ ಭಾವನೆ ಎಂದರೆ ನಾವೆಲ್ಲರೂ ಒಂದೇ ಎಂಬ ಭಾವನೆಯಿಂದ ಬಂಧು ಬಾಂಧವರಂತೆ ಬದುಕಬೇಕೆಂಬ ಆಶಯ' ಎಂದು ಸ್ಪಷ್ಟಪಡಿಸಿದರು.

ಪ್ರಖರ ರಾಷ್ಟ್ರೀಯವಾದಿಯಾದ ಸುಭಾಷ್‌ಚಂದ್ರ ಬೋಸ್ ಅವರು ಸಮತಾವಾದಿ ಆಶಯವುಳ್ಳ 'ಫಾರ್ವರ್ಡ್ ಬ್ಲಾಕ್' ಪಕ್ಷ ಸ್ಥಾಪನೆ ಮಾಡಿದ್ದರಲ್ಲೇ ಜಾತ್ಯತೀತ ತತ್ವ ಅಂತರ್ಗತವಾಗಿದೆ. ಧೀಮಂತ ರಾಷ್ಟ್ರೀಯ ಹೋರಾಟಗಾರ ಭಗತ್‌ಸಿಂಗ್ ಜಾತ್ಯತೀತ ಸಮತಾವಾದಿ ಸಿದ್ಧಾಂತಕ್ಕೆ ಬದ್ಧರಾಗಿದ್ದು ಇಲ್ಲಿ ಉಲ್ಲೇಖನೀಯ. ಮೌಲಾನ ಆಜಾದ್ ಅವರು ರಾಷ್ಟ್ರೀಯತೆಯ ಭಾವದೊಂದಿಗೆ ಜಾತ್ಯತೀತತೆಯನ್ನು ಬೆಸೆದು ಬದುಕಿದ್ದರು. ವಿಭಿನ್ನ ಧರ್ಮಗಳಿಗೆ ಸೇರಿದ್ದ ರಾಂಪ್ರಸಾದ್ ಬಿಸ್ಮಿಲ್ ಮತ್ತು ಅಶ್ಫಾಖುಲ್ಲಾಖಾನ್ ಅವರು ಸೋದರರಂತೆ ಬದುಕಿ ಸ್ವಾತಂತ್ರ್ಯ ಹೋರಾಟ ನಡೆಸಿದ್ದು ರಾಷ್ಟ್ರೀಯತೆ ಮತ್ತು ಜಾತ್ಯತೀತತೆಯ ಒಂದು ಅದ್ಭುತ ಆದರ್ಶ ಮಾದರಿಯಾಗಿದೆ. ವಾಜಪೇಯಿಯವರು ಜಾತ್ಯತೀತತೆಯನ್ನು 'ಸರ್ವಧರ್ಮ ಸಮಭಾವ'ವೆಂದು ಹೇಳಿದ್ದು ಒಂದು ಮುಖ್ಯವಾದ ಮಾತು.

ಈ ಎಲ್ಲ ನಿದರ್ಶನಗಳ ಸತ್ಯ ಸಾರ ಏನು? ಇತ್ತಂಡದ ಕೆಲವರು ತಮ್ಮ ಹುಸಿ ವೈಪರೀತ್ಯಗಳ ಅರೆಗಣ್ಣ ನೋಟ ಬಿಟ್ಟರೆ, ರಾಷ್ಟ್ರೀಯತೆ ಮತ್ತು ಜಾತ್ಯತೀತತೆಗಳೊಂದಾದ ಪರಿಕಲ್ಪನೆ ಅರ್ಥವಾಗುತ್ತದೆ; ಅರ್ಥಪೂರ್ಣವಾಗುತ್ತದೆ.

ಚುರುಮುರಿ

ಮೈಸೂರ್ ಚಲೊ

• ಸುಧೀಂದ್ರ

'ನಿಮಗೆ ಹರಿಣಿ ಆ್ಯಕ್ಟಿಂಗ್ ನ್ಯಾಚುರಲ್ ಅನ್ಸತ್ತೋ ಅಥವಾ ಕಲ್ಪನಾ ಆ್ಯಕ್ಟಿಂಗ್ ನ್ಯಾಚುರಲ್ ಅನ್ಸತ್ತೋ?' ಎಂದು ಮಡದಿ ಪ್ರಶ್ನಿಸಿದಳು. 'ಅವರೆಲ್ಲಾ ನನ್ನ ತಾತನ ಕಾಲದ ಹೀರೋಯಿನ್‌ಗಳು. ಬೇಕಿದ್ರೆ ರಚಿತಾರಾಮ್ ಬಗ್ಗೆನೋ ರಶ್ಮಿಕಾ ಮಂದಣ್ಣ ಬಗ್ಗೆನೋ ಇಲ್ಲಾ ರಾಧಿಕಾ ಪಂಡಿತ್ ಬಗ್ಗೆನೋ ಕೇಳು' ಎಂದೆ.

'ರಾತ್ರಿಯೆಲ್ಲಾ ಯುಟ್ಯೂಬಲ್ಲಿರೋ ಬರೋ ಸಿನಿಮಾ ನೋಡ್ತಿದ್ರೆ ಹೀಗೇ ಆಗೋದು. ಟೀವಿ ನೋಡಿ ಗೊತ್ತಾಗತ್ತೆ' ಎಂದು ಮೂದಲಿಸಿದಳು. 'ಓಹ್, ನೀನು ಕನ್ನಡ ಟೀವಿ ಸೀರಿಯಲ್‌ಗಳ ಬಗ್ಗೇನಾ ಹೇಳಿದ್ದು. 'ಶ್ರೀಗೌರಿ' ಸೀಮಂತದ ವಾರಗಿತ್ತಿ ಜಗಳದಲ್ಲಿ ಇವರಿಬ್ಬರೂ ಇರ್ಲಿಲ್ಲ. ಇನ್ನು 'ಸೀತಾ'ದಲ್ಲಿ ಸೊಸೆಗೆ ಕಾಟ ಕೊಡೋ ಮಲತಾಯಿ ಪಾತ್ರಗಳಲ್ಲಿರೋದು ಬೇರೆಯವರು. ಹಾಗಿದ್ರೆ 'ಅರಮನೆ' ಮಹಾರಾಣಿನಲ್ಲಿರೋ ಹೆಣ್ಮಕ್ಕಳ ಬಗ್ಗೆ ಹೇಳ್ತಿದ್ದೀಯೇನೋ, ನಾನೀಗ ಅದನ್ನು ನೋಡ್ತಿಲ್ಲ' ಎಂದೆ.

'ನನ್ನ ಕಣ್ತಪ್ಪಿಸಿ ನೀವು ಇಷ್ಟೆಲ್ಲಾ ಧಾರಾವಾಹಿಗಳನ್ನು ನೋಡ್ತಿದೀರೀಂತ ಈಗ ಗೊತ್ತಾಯ್ತು. ನ್ಯೂಸ್ ಚಾನೆಲ್ ಹಾಕಿ, ಮ್ಯಾನ್‌ಮಾರಲ್ಲಿ ಏನಾಗ್ತಿದೆ ಅನ್ನೋದು ಬೇಡ, ಮೈಸೂರಲ್ಲಿ ನಡೀತಿರೋ ಜಟಾಪಟಿನಾದ್ರೂ ತಿಳ್ಕೊಳ್ಳಿ' ಅಂದಳು. 'ನೀನು ಸೀರಿಯಲ್‌ಗಳನ್ನೆಲ್ಲಾ ಬಿಟ್ಟು, ನ್ಯೂಸ್ ನೋಡೋಕೆ ಶುರು ಹಚ್ಕೊಂಡಿದೀಯಾ ಅನ್ಸತ್ತೆ' ಎಂದು ರೇಗಿಸಿದೆ.

ರಿಮೋಟ್ ಒತ್ತಿದೆ. 'ಲೆಕ್ಕ ಮುಚ್ಚಿಡೋದ್ರಲ್ಲಿ ಕಲ್ಪನಾ ಆದ್ರಾ ವೈಸರ್?'; 'ಸೀಕ್ರೆಟ್ ಸ್ವಿಮ್ಮಿಂಗ್ ಪೂಲ್- ಆರ್ ವೀ ಫೂಲ್ಸ್?' ಎಂಬ ಅಬ್ಬರದ ಡಿಸ್ಕಷನ್‌ಗಳು ನಡೀತಿದ್ವು. ಪಂಚಾಯಿತಿ ಸದಸ್ಯರಿಂದ ಪಾರ್ಲಿಮೆಂಟ್ ಮೆಂಬರ್‌ಗಳ ತನಕ ಎಲ್ರೂ ನ್ಯೂಸ್ ಚಾನೆಲ್‌ಗಳಲ್ಲಿ ಭರ್ಜರಿ ಬ್ಯಾಟಿಂಗ್ ನಡೆಸ್ತಿದ್ರು.

ಇವೇ ಮಸಾಲೆಗಳನ್ನಿಟ್ಕೊಂಡು 'ಗಾಂಧಾರಿ ವರ್ಸಸ್ ನಾಗಿಣಿ' ಅನ್ನೋ ಧಾರಾವಾಹಿ ತೆಗೆದರೆ ಕನಿಷ್ಠ ಒಂದು ವರ್ಷನಾದ್ರೂ ಓಡಿಸಬಹುದಲ್ವಾ ಅನ್ನಿಸ್ತು. ಸೀರಿಯಲ್‌ಗಳಿಗೆ ಕಥೆ ಬರೆಯೋ ಸೀನಣ್ಣನಿಗೆ ಫೋನ್ ಹಚ್ಚಿದೆ. ಅವನ ಫೋನಿನಿಂದ 'ಇದು ಯಾರು ಬರೆದ ಕಥೆಯೋ... ಕೊನೆ ಹೇಗೊ ಅರಿಯಲಾರೆ' ರಿಂಗ್‌ಬ್ಯಾಕ್ ಟೋನ್ ಬರ್ತಿತ್ತು.

ಸಂಗತ

ಪರಿಸರ ತನ್ನನ್ನು ರಕ್ಷಿಸಿಕೊಳ್ಳಲಿ!

ಪರಿಸರದ್ರೋಹಿ ಆಗದಿರೋಣ, ಸಹಜವಾಗಿ ಬದುಕೋಣ

• ಪ್ರೊ. ಸಿದ್ದು ಯಾಪಲಪರವಿ

ಪರಿಸರ ದಿನವನ್ನು ನಾವು ತುಂಬಾ ವಿಚಿತ್ರವಾಗಿ ಆಚರಿಸುತ್ತೇವೆ, ಈ ಕುರಿತು ಅನೇಕ ಜೋಕುಗಳು, ಟ್ರೋಲುಗಳು ಹುಟ್ಟಿಕೊಳ್ಳುವಷ್ಟು. ಆದರೆ ಈ ವರ್ಷ ಮರಗಳ ಮಹತ್ವವನ್ನು ಮನುಷ್ಯ ಕೊಂಚ ಅರಿತುಕೊಂಡಿದ್ದಾನೆ. ಲಾಕ್‌ಡೌನ್ ಹೊತ್ತಿನಲ್ಲಿ ಏಕಾಗ್ರತೆಯಿಂದ ಆಡುವ ಆಟವೆಂದರೆ ಕೇವಲ 'ಉಸಿರಾಟ'!

ಆಕ್ಸಿಜನ್ ಪೂರೈಕೆ ಇಲ್ಲದ ಕಾರಣದಿಂದ ದೇಶದಲ್ಲಿ ಅನೇಕರು ಸಾವನ್ನಪ್ಪಿದ್ದಾರೆ. ಜಾಗತಿಕ ತಾಪಮಾನ ಹೆಚ್ಚುತ್ತಲೇ ಇದೆ. ಬೆಂಗಳೂರಿನಂತಹ ಗಾರ್ಡನ್ ಸಿಟಿಯು ಗಾರ್ಬೇಜ್ ಸಿಟಿಯಾಗಿದೆ. ಅಗತ್ಯಕ್ಕಿಂತ ಹೆಚ್ಚು ಬಳಸಲಾಗುವ ವಾಹನಗಳು, ಜಂಕ್‌ಫುಡ್, ಪ್ಲಾಸ್ಟಿಕ್, ಮನುಷ್ಯನ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರಿ, ನಿತ್ಯ ವಿಷದೌತಣ ಸಾಗಿದೆ.

ತಂತ್ರಜ್ಞಾನದ ಬಳಕೆಯ ಅಪಾಯ ಅರಿತ ಚೀನಾ, ಜಪಾನ್, ಜರ್ಮನಿ ಮತ್ತು ಅಮೆರಿಕದಂತಹ ರಾಷ್ಟ್ರಗಳು ನಿರಂತರ ಪರಿಸರ ಪಾಠ ಮಾಡುತ್ತವೆ. ಆದರೆ ನಮ್ಮಲ್ಲಿ ಗಿಡ ನೆಡುವ, ಬೆಳೆಸುವ ಪಾಠ ಕೇವಲ ಪರಿಸರ ದಿನಾಚರಣೆಗೆ ಮೀಸಲಾಗಿದೆ.

ಜಪಾನ್ ವಿದ್ಯಾರ್ಥಿಗಳಿಗೆ ಸ್ವಯಂ ಶಿಸ್ತು ಬದುಕಿನ ಅವಿಭಾಜ್ಯ ಅಂಗ. ಶಾಲೆಗಳಲ್ಲಿ ಗುಡಿಸಲು, ಶೌಚಾಲಯ ಸ್ವಚ್ಛ ಮಾಡಲು ಆಳುಗಳು ಇರುವುದಿಲ್ಲ. ಮಕ್ಕಳು ಖುದ್ದಾಗಿ ಸ್ವಚ್ಛಗೊಳಿಸುತ್ತಾರೆ. ಅದು ಅವರ ನೈತಿಕ ಪಾಠ.

ವಿದೇಶಕ್ಕೆ ಹೋಗಿ ಬರುವವರಿಗೆ ಅಲ್ಲಿನ ಸ್ವಚ್ಛತೆಯ ಮಹತ್ವ ಅರ್ಥವಾದರೂ ಭಾರತಕ್ಕೆ ಬಂದ ಕೂಡಲೇ ಮರೆತುಬಿಡುತ್ತಾರೆ. ಹೊರಗಡೆ ಹೊರಟಾಗ ಕಸ ಒಗೆಯಲು ಕೊರಳಿಗೆ ಬ್ಯಾಗು ನೇತಾಡಿಸಿಕೊಂಡು ವಿದೇಶಿಗರು ತಿರುಗುತ್ತಾರೆ. ಆದರೆ ನಮ್ಮಲ್ಲಿ ಹೊರಗೆ ಹೋಗಿ ಮನೆಯಲ್ಲಿದ್ದ ಕಸ ಚೆಲ್ಲಿ ಬರುತ್ತಾರೆ.

ನೆಲಕ್ಕೆ ಕ್ಯಾಕರಿಸಿ ಉಗುಳುವ ದೃಶ್ಯ ಭಾರತದಲ್ಲಿ ಸಾಮಾನ್ಯ. ಹಾಗೆ ನೋಡಿದರೆ, ನಮ್ಮ ಪುರಾತನರು ಉಗುಳುವುದು ಅನಾರೋಗ್ಯಕರ ಎಂದು ಹೇಳಿದ್ದಾರೆ. 'ಉಗುಳಿ ಉಗುಳಿ ರೋಗ, ಹಾಡಿ ಹಾಡಿ ರಾಗ' ಎಂಬ ನಾಣ್ಣುಡಿಯೇ ಸಾಕ್ಷಿ.

ಗ್ರಾಮೀಣ ಭಾಗದಲ್ಲಿ ಹೊರಗಿನಿಂದ ಬಂದ ಅತಿಥಿಗಳಿಗೆ ಕೈ ಕಾಲು ತೊಳೆಸಿ ತಿನ್ನಲು ಬೆಲ್ಲ ಕೊಡುತ್ತಿದ್ದರು. ಹಾಗೆ ನಡೆದುಕೊಳ್ಳುವುದು ಅನಾಗರಿಕತೆ ಎಂದು ನಂಬಿಸಿದ ಬ್ರಿಟಿಷರು, ಮನೆ ತುಂಬಾ ಬೂಟು ಹಾಕಿಕೊಂಡು ಓಡಾಡುವ ಸಂಸ್ಕೃತಿ ಕಲಿಸಿದರು. ಇಂಗ್ಲೆಂಡ್ ದೇಶದಲ್ಲಿ ವಿಪರೀತ ಚಳಿ. ಅದಕ್ಕೆ ತಕ್ಕಂತೆ ಅವರು ಇರುತ್ತಾರೆ. ಅದೇ ಅನುಕರಣೆ ನಮಗೆ ಸರಿಹೊಂದುವುದಿಲ್ಲ. ಭಾರತದ ವಾತಾವರಣದಲ್ಲಿ ಮನೆಯಲ್ಲಿ ಚಪ್ಪಲಿ ಹಾಕಿಕೊಂಡು ಓಡಾಡುವುದು ಅವೈಜ್ಞಾನಿಕ.

ಉಡುಗೆ, ತೊಡುಗೆಗಳು ಆಯಾ ದೇಶದ ಹವಾಮಾನಕ್ಕೆ ಸರಿ ಹೊಂದುವಂತೆ ಇರುತ್ತವೆ. ಮೈ ಬೆಚ್ಚಗೆ ಇರಲಿ ಎಂಬ ಕಾರಣದಿಂದ ಬಿಗಿ ಉಡುಪುಗಳನ್ನು ಧರಿಸುತ್ತಾರೆ. ನಮ್ಮ ದೇಶದ ಉಷ್ಣತೆಗೆ ಬಿಗಿ ಉಡುಪು ಹೊಂದುವುದಿಲ್ಲ. ನಾವು ವಿದ್ಯಾರ್ಥಿಗಳಾಗಿದ್ದಾಗ ಬಿಗಿ ಕಾಚ ಹಾಕಿಕೊಳ್ಳುವುದು ಆ ಕಾಲದ ಟ್ರೆಂಡ್ ಆಗಿತ್ತು. ಅನೇಕ ವಿದ್ಯಾರ್ಥಿಗಳು ತುರಿಕೆ ಮತ್ತು ಫಂಗಸ್ ಸೋಂಕಿನಿಂದ ಬಳಲುತ್ತಿದ್ದರು. ಆಗ ಪರೀಕ್ಷೆ ಮಾಡಿದ ವೈದ್ಯರು, 'ಹಿಂಗ ಬಿಗಿ ಚಡ್ಡಿ ಹಕ್ಕೊಂಡ್ರ ಒಳಗಿನ ಅಂಗಾಂಗಗಳು ಕೊಳತು ಹೋಗುತ್ತವ...' ಎಂದು ಹೆದರಿಸಿ, ಸಡಿಲ ಒಳ ಉಡುಪಿನ ಮಹತ್ವ ತಿಳಿಸಿದ್ದರು. ಇಂತಹ ಸಾವಿರಾರು ಉದಾಹರಣೆಗಳನ್ನು ನಾವು ನಿತ್ಯ ಬದುಕಿನಲ್ಲಿ ಕಾಣಬಹುದು.

ಆರೋಗ್ಯ ಮತ್ತು ಪರಿಸರ ಹಾಳಾಗಲು ಅನಗತ್ಯ ಮೊಪೆಡ್ ಬಳಕೆ ಮುಖ್ಯ ಕಾರಣ. ನಾನು ಪ್ರಾಧ್ಯಾಪಕನಾದ ಹೊಸತರಲ್ಲಿ ಸೈಕಲ್ ತುಳಿದುಕೊಂಡು ಕಾಲೇಜಿಗೆ ಹೋಗುತ್ತಿದ್ದೆ. ಕೆಲವು ವಿದ್ಯಾರ್ಥಿಗಳು 'ಸರ್ ನಿಮ್ಮ ಸೂಟು, ಬೂಟು ಮತ್ತು ಕಪ್ಪು ಕನ್ನಡಕಕ್ಕೆ ಸೈಕಲ್ ಸವಾರಿ ಚಂದ ಕಾಣೋದಿಲ್ಲ' ಎಂದು ನೇರವಾಗಿ ಹೇಳಿದ್ದರು. ಅದಕ್ಕೆ ಕಾರಣ ಬಹುಪಾಲು ಶ್ರೀಮಂತರ ಮಕ್ಕಳು ಕಾಲೇಜಿಗೆ ಲೂನಾ, ಮೊಪೆಡ್‌ನಲ್ಲಿ ಬರುತ್ತಿದ್ದರು.

ಈಗ ಜಿಮ್ಮಿಗೆ ಹೋಗಿ ಸೈಕಲ್ ತುಳಿದು ಬೆವರಿಳಿಸಲು ಸಾವಿರಾರು ರೂಪಾಯಿ ಫೀ ತುಂಬುತ್ತಾರೆ. ಆದರೆ ಜಿಮ್ಮಿಗೆ ಹೋಗಲು ಬೈಕ್, ಕಾರು ಬಳಸುವುದು ಆಧುನಿಕ ಬದುಕಿನ ವಿಪರ್ಯಾಸ.



ಚೀನಾವು ಸೈಕಲ್ ಬಳಸಲು ಭಿನ್ನ ರಸ್ತೆ ನಿರ್ಮಿಸಿ, ನೆರಳು ನೀಡಲು ಸಾಲು ಸಾಲು ಮರಗಳನ್ನು ಬೆಳೆಸಿದೆ. ನೆರಳಿನಲ್ಲಿ ಸೈಕಲ್ ತುಳಿದುಕೊಂಡು ಹೋಗುವುದು ಆರೋಗ್ಯ ರಕ್ಷಣೆಯ ಭಾಗವಾಗಿದೆ.

ಒಂದು ಕಡೆ ಪೆಟ್ರೋಲ್ ಉಳಿತಾಯದ ಜೊತೆಗೆ ಚೀನಾ, ಜಪಾನಿನ ಆರೋಗ್ಯಕರ ಜೀವನಶೈಲಿ ನಮಗೆ ಮಾದರಿಯಾಗದೆ, ನಮ್ಮದೇ ಆದ 'ಸೂಡೊ ಅಹಮಿಕೆ'ಯ ಕೃತಕ ಬದುಕಿನ ದಾಸರಾಗಿದ್ದೇವೆ. ಮಕ್ಕಳಿಗೆ ದೊಡ್ಡ ಬೈಕ್, ಬೆಲೆಬಾಳುವ ಮೊಬೈಲ್ ಫೋನ್ ಕೊಡಿಸುವುದು ಹುಸಿ ಪ್ರತಿಷ್ಠೆ ಎಂಬ ಅರಿವೇ ಇಲ್ಲದಾಗಿದೆ.

ನಮ್ಮ ದೈಹಿಕ, ಮಾನಸಿಕ ನೆಮ್ಮದಿ ಹಾಳು ಮಾಡುವ ಸಾಧನಗಳ ಅನಗತ್ಯ ಬಳಕೆಯಿಂದ ಪರಿಸರ ದ್ರೋಹಿಗಳಾಗಿದ್ದೇವೆ. ಸಹಜವಾಗಿ ಬದುಕೋಣ ಮತ್ತು ಪರಿಸರ ತನ್ನನ್ನು ತಾನು ರಕ್ಷಣೆ ಮಾಡಿಕೊಳ್ಳಲು ಅವಕಾಶ ನೀಡುವ ದೃಢ ಸಂಕಲ್ಪ ಮಾಡೋಣ.

ಲೇಖಕ: ಪ್ರಾಚಾರ್ಯ, ಕೆ.ವಿ.ಎಸ್.ಆರ್. ಕಾಲೇಜು, ಗದಗ

ವಾಚಕರ ವಾಣಿ

ಕಿರೀಟಪ್ರಾಯ ಪರೀಕ್ಷೆ: ಬೇಡಿಕೆ ಪರಿಗಣಿಸಿ

ಯುವಜನರ ಬದುಕಿಗೆ ನೇರವಾದ ಸಂಬಂಧವಿರುವ ಕೇಂದ್ರೀಯ ನೇಮಕಾತಿ ಪರೀಕ್ಷೆಗಳ ಬಗ್ಗೆ ಜೆಡಿಎಸ್ ಮುಖಂಡ ಎಚ್.ಡಿ.ಕುಮಾರಸ್ವಾಮಿ ಅವರು ಸಾಮಾಜಿಕ ಜಾಲತಾಣಗಳಲ್ಲಿ ಧ್ವನಿ ಎತ್ತುತ್ತಿರುವುದು ಆಶಾದಾಯಕ ಬೆಳವಣಿಗೆ. ಭಾರತದ ಒಕ್ಕೂಟ ಸರ್ಕಾರದಿಂದ ಆಗುತ್ತಿರುವ ಹಿಂದಿ ಹೇರಿಕೆಯನ್ನು ಅವರು ಪ್ರಶ್ನಿಸುತ್ತಿದ್ದಾರೆ. ನಾಡು- ನುಡಿಗೆ ತಮ್ಮ ರಾಜಕೀಯವನ್ನು ಇನ್ನಷ್ಟು ಕೇಂದ್ರೀಕರಿಸುವ ಮೂಲಕ ತಮ್ಮದು ಅಸಲಿ ಪ್ರಾದೇಶಿಕ ಪಕ್ಷ ಎಂಬುದನ್ನು ಅವರು ಸಾಬೀತು ಪಡಿಸಬೇಕಾಗಿದೆ.

ಇದೇ 27ರಂದು ಯುಪಿಎಸ್‌ಸಿ ಪೂರ್ವಭಾವಿ ಪರೀಕ್ಷೆ ಇತ್ತು. ಕೋವಿಡ್ ಎರಡನೇ ಅಲೆಯ ಪರಿಣಾಮವಾಗಿ ಅದು ಅಕ್ಟೋಬರ್‌ಗೆ ಮುಂದೂಡಲ್ಪಟ್ಟಿದೆ. ಇದು ಕೇಂದ್ರೀಯ ನೇಮಕಾತಿ ಪರೀಕ್ಷೆಗಳಲ್ಲಿಯೇ ಕಿರೀಟಪ್ರಾಯವಾಗಿರುವ ಪರೀಕ್ಷೆ. ಆದರೆ, ಇಂಗ್ಲಿಷ್ ಜೊತೆಗೆ ಹಿಂದಿ ಮಾಧ್ಯಮದಲ್ಲಿ ಮಾತ್ರ ಇದು ಇರುತ್ತದಾದ್ದರಿಂದ ಈ ಸಂಧಿಕಾಲದಲ್ಲಿ ನಾವು ಜಾಗೃತರಾಗಬೇಕಿದೆ. ಸಾರ್ವಜನಿಕರೂ ಎಚ್ಚೆತ್ತುಕೊಳ್ಳಬೇಕಾಗಿದೆ.

ಎಲ್ಲ ಪ್ರಾದೇಶಿಕ ಭಾಷೆಗಳಲ್ಲೂ ಬರೆಯಲು ಅವಕಾಶ ಕಲ್ಪಿಸುವಂತೆ ಹಕ್ಕೊತ್ತಾಯ ಮಂಡಿಸಬೇಕಾಗಿದೆ. ಇದು ತಮಿಳರು, ತೆಲುಗರು ಸೇರಿದಂತೆ ಹಿಂದಿಯೇತರ ಎಲ್ಲಾ ಭಾಷಿಕರ ಸಮಸ್ಯೆಯೂ ಆಗಿರುವುದರಿಂದ, ಇಂಗ್ಲಿಷ್ ಗೊತ್ತಿದ್ದವರು ಇಂತಹ ಮಹತ್ವದ ವಿಷಯವನ್ನು ಇಂಗ್ಲಿಷ್‌ನಲ್ಲಿಯೂ ಬರೆಯಬೇಕು. ಈ ಮೂಲಕ ಕರ್ನಾಟಕದ ಹೊರಗೂ ಈ ಬೇಡಿಕೆಯನ್ನು ವಿಸ್ತರಿಸಬೇಕಿದೆ. ಹಿಂದಿಯೇತರ ಎಲ್ಲ ಭಾಷಿಕರನ್ನೂ ಒಳಗೊಳ್ಳಬೇಕಿದೆ.

ಗಿರೀಶ್ ಮತ್ತೇರ, ಯರಗಟ್ಟ ಹಳ್ಳಿ, ಚನ್ನಗಿರಿ

ಪ್ರಯೋಗಶೀಲತೆ ಎಲ್ಲಾ ಕಾಲದ ಸತ್ಯ

ಹಳೆ ಕನ್ನಡ ಚಲನಚಿತ್ರಗಳು ಸದಭಿರುಚಿಯಿಂದ ಕೂಡಿದ್ದವಾಗಿದ್ದು ಈಗಿನವು 'ಅರುಚಿ' ಎಂದು ಡಾ. ದೊಡ್ಡರಂಗೇಗೌಡ (ಸಂಗತ, ಮೇ 28) ಮತ್ತು 'ರಾಮ! ರಾಮ!' ಎಂದು ಸಿ.ಪಿ.ಕೆ. (ಜೂನ್ 3) ಅಸಮಾಧಾನ ತೋರಿದ್ದಾರೆ. ಆದರೆ ಚಿತ್ರಗೀತೆಗಳ ಸಾಹಿತ್ಯ ಮತ್ತು ಸಂಗೀತ ಯುಗಧರ್ಮಕ್ಕನುಗುಣವಾಗಿ ಬಂದಿವೆ. ಪಿ.ಬಿ.ಶ್ರೀನಿವಾಸ್, ಡಾ. ರಾಜ್‌ಕುಮಾರ್, ಬಾಲಸುಬ್ರಹ್ಮಣ್ಯಂ ಅವರ ಹಾಡುಗಾರಿಕೆ ಒಬ್ಬರಂತೆ ಇನ್ನೊಬ್ಬರದ್ದು ಇರಲಿಲ್ಲ. ಇವರೆಲ್ಲಾ ಸುಮಧುರ ಗೀತೆಗಳ ಜೊತೆಗೆ ಪ್ರಯೋಗಶೀಲ ಗೀತೆಗಳನ್ನೂ ಹಾಡಿದ್ದು, ಕನ್ನಡ ಚಿತ್ರರಸಿಕರು ಅವೆಲ್ಲವನ್ನೂ ಮುಕ್ತವಾಗಿ ಸ್ವೀಕರಿಸಿದ್ದಾರೆ. ಹಂಸಲೇಖ, ಹರಿಕೃಷ್ಣ, ಯೋಗರಾಜ್ ಭಟ್, ಅರ್ಜುನ್ ಜನ್ಯ, ವಿಜಯ್ ಪ್ರಕಾಶ್‌ರಂತಹ ಪ್ರತಿಭಾವಂತರಿಂದಾಗಿ ಕನ್ನಡ ಚಿತ್ರಗಳು ಸಂಗೀತದಲ್ಲಿ ತಮ್ಮದೇ ಆದ ವೈಶಿಷ್ಟ್ಯವನ್ನು ಕಾಯ್ದುಕೊಂಡಿವೆ.

ಈಗಿನ ಚಿತ್ರಗೀತೆಗಳಲ್ಲಿ ಮತ್ತೆ ಮತ್ತೆ ಕೇಳಬಹುದಾದಂತಹ ಹಾಡುಗಳು ಇಲ್ಲವೆಂದೇನಲ್ಲ. ಉದಾ: ಮಧುವನ ಕರೆದರೆ (ಇಂತಿ ನಿನ್ನ ಪ್ರೀತಿಯ), ನಿನ್ನಿಂದಲೇ (ಮಿಲನ), ಮಿಸ್ಟರ್ ಆ್ಯಂಡ್ ಮಿಸೆಸ್ ರಾಮಾಚಾರಿ (ಮಿಸ್ಟರ್ ಆ್ಯಂಡ್ ಮಿಸೆಸ್ ರಾಮಾಚಾರಿ), ಹ್ಲೂಂನ ಉಹ್ಲೂಂನ (ಕೋಟಿಗೊಬ್ಬ 2), ಅಪ್ಪಾ ಐ ಲವ್ ಯು ಪಾ (ಚೌಕ) ಹೀಗೆ ಇನ್ನೂ ಬೇಕಾದಷ್ಟನ್ನು ಹೆಸರಿಸಬಹುದು. ಈ ಕಾಲದ ಇಂತಹ ಅನೇಕ ಹಾಡುಗಳು ಸಾಹಿತ್ಯ, ಸಂಗೀತ, ಹಾಡುಗಾರಿಕೆ, ದೃಶ್ಯವೈಭವ ಎಲ್ಲದರಲ್ಲೂ ಉತ್ಕೃಷ್ಟವಾಗಿವೆ. ಇವು ಕೋಟ್ಯಂತರ ಶ್ರೋತೃಗಳ ಮನಸೂರೆಗೊಂಡಿದ್ದು, ಕನ್ನಡ ಚಿತ್ರಗಳ ಗುಣಾತ್ಮಕತೆಯನ್ನು ಹೆಚ್ಚಿಸಿವೆ.

ಇಳಾ ಕುಲಕರ್ಣಿ, ಹೆಗ್ಗೋಡು

ಅನಾಥ ಮಕ್ಕಳಿಗಾಗಿನ ಯೋಜನೆ ವಿಸ್ತರಣೆಯಾಗಲಿ

ಕೋವಿಡ್ ಸೋಂಕಿನ ವ್ಯಾಪಕತೆ ನಾವ್ಯಾರೂ ಊಹಿಸಿರದಿದ್ದ ದಾರುಣ ಸ್ಥಿತಿಗೆ ನಮ್ಮನ್ನು ದೂಡುತ್ತಿದೆ. ಅದರಲ್ಲೂ ಮಕ್ಕಳ ಬದುಕಂತೂ ಎಲ್ಲ ರೀತಿಯಲ್ಲೂ ಅತಂತ್ರವಾಗಿಹೋಗಿರುವುದು ವಿಷಾದನೀಯ. ಹೀಗಾಗಿ ವಿವಿಧ ಬಗೆಯ ಮಕ್ಕಳ ಸ್ಥಿತಿ ಮತ್ತು ಸಮಸ್ಯೆಗಳನ್ನು ಹಲವು ಮುಖಗಳಲ್ಲಿ ಅಭ್ಯಸಿಸಿ, ಮಗುವಿನ ಬದುಕಿಗೆ ಪೂರಕ ಬೆಂಬಲ ನೀಡುವುದು, ಯೋಜನೆ ರೂಪಿಸುವುದು ಪ್ರಮುಖ ಆದ್ಯತೆಯಾಗಬೇಕಿದೆ.

ಈ ಸಂದರ್ಭದಲ್ಲಿ ಅನೇಕ ಮಕ್ಕಳು ಕೋವಿಡ್‌ನಿಂದ ಪೋಷಕರನ್ನು ಕಳೆದುಕೊಂಡು ಅನಾಥರಾಗುತ್ತಿರುವ ಪ್ರಮಾಣ ದಿನದಿಂದ ದಿನಕ್ಕೆ ಏರುತ್ತಿರುವುದು ಅತ್ಯಂತ ಸಂಕಟದಾಯಕವಾಗಿದೆ. ಈ ಹೊತ್ತಿನಲ್ಲಿ, ಪೋಷಕರನ್ನು ಕಳೆದುಕೊಂಡ ಮಕ್ಕಳ ಪಾಲನೆ-ಪೋಷಣೆ ಹಾಗೂ ಉತ್ತಮ ಭವಿಷ್ಯ ನಿರ್ಮಾಣಕ್ಕಾಗಿ ಅಗತ್ಯ ನೆರವು ನೀಡಲು ರಾಜ್ಯ ಸರ್ಕಾರವು 'ಬಾಲ ಸೇವಾ ಯೋಜನೆ' ರೂಪಿಸಿದೆ. ಮಗುವಿನ ಪೋಷಣೆಯ ಜವಾಬ್ದಾರಿ ಹೊತ್ತ ಕುಟುಂಬಕ್ಕೆ ಮಕ್ಕಳ ವಿನಿಯೋಗಕ್ಕಾಗಿ ಮಾಸಿಕ ₹ 3,500 ಸಹಾಯಧನವನ್ನು ಯೋಜನೆಯಲ್ಲಿ ಘೋಷಿಸಲಾಗಿದೆ. 10 ವರ್ಷದ ಒಳಗಿನ ಮಕ್ಕಳ ಆರೈಕೆಗಾಗಿ ಯಾವುದೇ ಕುಟುಂಬ ಮುಂದೆ ಬರದಿದ್ದಲ್ಲಿ, ನೋಂದಾಯಿತ ಮಕ್ಕಳ ಪಾಲನಾ ಸಂಸ್ಥೆಗಳಲ್ಲಿ ಆರೈಕೆ ಮಾಡಲಾಗುವುದು, 10ನೇ ತರಗತಿ ಪೂರೈಸಿದ ಮಕ್ಕಳ ಉನ್ನತ ಶಿಕ್ಷಣ, ಕೌಶಲಾಭಿವೃದ್ಧಿಗಾಗಿ ಲ್ಯಾಪ್‌ಟಾಪ್, ಟ್ಯಾಬ್ ಒದಗಿಸಲಾಗುವುದೆಂದು ತಿಳಿಸಲಾಗಿದೆ. ಜೊತೆಗೆ 21 ವರ್ಷ ತುಂಬಿದ ಹೆಣ್ಣುಮಕ್ಕಳ ಮದುವೆ, ಉನ್ನತ ಶಿಕ್ಷಣ, ಸ್ವಉದ್ಯೋಗ ಇತರ ಉದ್ದೇಶಗಳಿಗಾಗಿ ₹ 1 ಲಕ್ಷ ಸಹಾಯಧನ ಒದಗಿಸುವುದಾಗಿ ಹೇಳಿರುವುದು ಸ್ವಾಗತಾರ್ಹ.

ಆದರೆ ಇಂದಿನ ದುರ್ಭರ ಬದುಕಿನ ಸಂದರ್ಭದಲ್ಲಿ ಅನಾಥ ಮಕ್ಕಳ ಪೋಷಣೆಯ ಜವಾಬ್ದಾರಿ ಹೊರಲು ಮುಂದೆ ಬರುವ ಕುಟುಂಬಕ್ಕೆ ಸರ್ಕಾರದಿಂದ ಮತ್ತಷ್ಟು ಬೆಂಬಲವನ್ನು ನೀಡಬೇಕಿದೆ. 'ಬಾಲ ಸೇವಾ ಯೋಜನೆ'ಯನ್ನು ಇನ್ನಷ್ಟು ವಿಸ್ತರಿಸಿ, ಪ್ರತೀ ಮಗುವಿನ ಪ್ರತಿಯೊಂದು ಚಿಕಿತ್ಸಾ ವೆಚ್ಚವನ್ನು ಭರಿಸುವ ಮತ್ತು ಮಗು ಎಲ್ಲಿಯವರೆಗೆ ಓದಲು ಬಯಸುತ್ತದೋ ಅಲ್ಲಿಯವರೆಗೆ ಉಚಿತ ಶಿಕ್ಷಣವನ್ನು ನೀಡುವ ಜವಾಬ್ದಾರಿಯನ್ನು ಸರ್ಕಾರ ವಹಿಸಿಕೊಳ್ಳಬೇಕು. ಜೊತೆಗೆ ವಿದ್ಯಾಭ್ಯಾಸ ಪಡೆದ ಆಧಾರದಲ್ಲಿ ಪ್ರತೀ ಮಗುವಿಗೆ ಸರ್ಕಾರಿ ಕೆಲಸವನ್ನು ಖಾತರಿಗೊಳಿಸಬೇಕು ಮತ್ತು ಮುಖ್ಯವಾಗಿ ಸರ್ಕಾರವು ತಕ್ಷಣವೇ ಇಂತಹ ಅನಾಥ ಹೆಣ್ಣುಮಗುವಿನ ಹೆಸರಿನಲ್ಲಿ ₹ 5 ಲಕ್ಷ, ಗಂಡು ಮಗುವಿನ ಹೆಸರಿನಲ್ಲಿ ₹ 3 ಲಕ್ಷ ಬ್ಯಾಂಕ್ ಠೇವಣಿ ಇಟ್ಟು, ಅದರ ಬಡ್ಡಿಯನ್ನು ಮಗುವಿನ ಪೋಷಣೆಯ ಜವಾಬ್ದಾರಿ ತೆಗೆದುಕೊಂಡ ಕುಟುಂಬವು, ಮಗುವಿಗೆ 18 ವರ್ಷ ತುಂಬುವವರೆಗೆ ಬಳಸಿಕೊಳ್ಳಲು ಅನುವು ಮಾಡಿಕೊಡಬೇಕು. ಇದಾದರೆ ಪ್ರತೀ ಮಗುವಿಗೆ ಉತ್ತಮ ಭವಿಷ್ಯದ ಭರವಸೆ ನೀಡಿದಂತಾಗುತ್ತದೆ.

ರೂಪ ಹಾಸನ, ಹಾಸನ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.



ವೃದ್ಧಾಪ್ಯದತ್ತ ಜಗತ್ತು

ವಿಶ್ವದ ಹಲವು ದೇಶಗಳಲ್ಲಿ 65 ವರ್ಷ ಮೇಲ್ಪಟ್ಟವರ ಸಂಖ್ಯೆ ದಿನೇದಿನೇ ಏರಿಕೆಯಾಗುತ್ತಿದೆ. 2019ರ ಅಂತ್ಯದ ವೇಳೆಗೆ 65 ವರ್ಷ ಮೇಲ್ಪಟ್ಟ ಜನರ ಸಂಖ್ಯೆಯು ವಿಶ್ವದಾದ್ಯಂತ 70 ಕೋಟಿಯನ್ನು ದಾಟಿತ್ತು. ಮುಂದಿನ 30 ವರ್ಷಗಳಲ್ಲಿ ಅಂದರೆ, 2050ರ ಅಂತ್ಯದ ವೇಳೆಗೆ ಈ ಸಂಖ್ಯೆ 150 ಕೋಟಿ ದಾಟಲಿದೆ ಎಂದು ಅಂದಾಜಿಸಲಾಗಿದೆ. ವಿಶ್ವದ ಬಹುತೇಕ ಎಲ್ಲಾ ದೇಶಗಳಲ್ಲೂ ವೃದ್ಧರ ಸಂಖ್ಯೆ ಏರಿಕೆಯಾಗುತ್ತಿದ್ದರೂ ಪೂರ್ವ ಏಷ್ಯಾದ ದೇಶಗಳು, ಆಗ್ನೇಯ ಏಷ್ಯಾದ ದೇಶಗಳು ಮತ್ತು ಲ್ಯಾಟಿನ್ ಅಮೆರಿಕದ ದೇಶಗಳಲ್ಲಿ ವೃದ್ಧರ ಸಂಖ್ಯೆ ಭಾರಿ ವೇಗದಲ್ಲಿ ಏರಿಕೆಯಾಗುತ್ತಿದೆ

ಕಾರಣಗಳು

ಅಭಿವೃದ್ಧಿಯಲ್ಲಿ ಹಿಂದುಳಿದ ದೇಶಗಳಲ್ಲೇ ವೃದ್ಧರ ಸಂಖ್ಯೆಯಲ್ಲಿ ಗಣನೀಯ ಪ್ರಮಾಣದ ಏರಿಕೆಯಾಗಲಿದೆ ಎಂದು ನಿರೀಕ್ಷಿಸಲಾಗಿದೆ. ಈಗಲೂ ಅಭಿವೃದ್ಧಿಯಲ್ಲಿ ಹಿಂದುಳಿದ ದೇಶಗಳಲ್ಲೇ ವೃದ್ಧರ ಸಂಖ್ಯೆ ಭಾರಿ ಪ್ರಮಾಣದಲ್ಲಿ ಇದೆ. ಇದಕ್ಕೆ ಹಲವು ಕಾರಣಗಳನ್ನು ಗುರುತಿಸಲಾಗಿದೆ

- ಜನಸಂಖ್ಯೆ ಏರಿಕೆಯ ಕಾರಣ ವಿಶ್ವದ ಹಲವು ದೇಶಗಳಲ್ಲಿ ಜನಸಂಖ್ಯಾ ನಿಯಂತ್ರಣ ಕಾರ್ಯಕ್ರಮಗಳನ್ನು ದಶಕಗಳ ಹಿಂದೆ ಹಮ್ಮಿಕೊಳ್ಳಲಾಗಿತ್ತು. ಕೆಲವು ದೇಶಗಳು ಒಂದೇ ಮಗು ನೀತಿಯನ್ನು ಜಾರಿಗೆ ತಂದಿದ್ದವು. ಚೀನಾ ಇದನ್ನು ಕಟ್ಟುನಿಟ್ಟಾಗಿ ಅನುಷ್ಠಾನಕ್ಕೆ ತಂದಿತು. ಇದರಿಂದ ಒಂದೆರಡು ದಶಕದ ಅವಧಿಯಲ್ಲಿ ಜನನ ಪ್ರಮಾಣ ಇಳಿಕೆಯಾಗಿದೆ. ಇದೇ ಅವಧಿಯಲ್ಲಿ ಮರಣ ಪ್ರಮಾಣವೂ ಇಳಿಕೆಯಾದ ಕಾರಣ ವೃದ್ಧರ ಸಂಖ್ಯೆ ಏರಿಕೆಯಾಗಿದೆ
- ಈಗಿನ ಆಧುನಿಕ ಕುಟುಂಬಗಳು ಸಣ್ಣ ಕುಟುಂಬಗಳಾಗಿ ಬದಲಾಗಿವೆ. ಒಂದೇ ಮಗು ಸಾಕು ಎಂಬ ಮನಸ್ಥಿತಿಗೆ ಕುಟುಂಬಗಳು ಬಂದಿವೆ. ವೃದ್ಧರ ಸಂಖ್ಯೆ ಏರಿಕೆಯಾಗುತ್ತಿರುವ ದೇಶಗಳು, ಎರಡು ಮಕ್ಕಳನ್ನು ಹೊಂದಲು ಉತ್ತೇಜನ ಕಾರ್ಯಕ್ರಮಗಳನ್ನು ರೂಪಿಸಿವೆ. ಆದರೆ, ಒಂದೇ ಮಗು ಸಾಕು ಎಂಬ ನೀತಿಗೆ ಜನರು ಕಟ್ಟುಬಿದ್ದಿದ್ದಾರೆ. ಜನನ ಪ್ರಮಾಣ ಕಡಿಮೆಯಾಗಿರುವುದರಿಂದಲೇ ಒಟ್ಟು ಜನಸಂಖ್ಯೆಯಲ್ಲಿ ವೃದ್ಧರ ಪ್ರಮಾಣ ಏರಿಕೆಯಾಗಲು ಪ್ರಮುಖ ಕಾರಣ ಎಂದು ಗುರುತಿಸಲಾಗಿದೆ
- ಅಭಿವೃದ್ಧಿಯಲ್ಲಿ ಹಿಂದುಳಿದ ದೇಶಗಳಲ್ಲಿ ಈಗ ವೈದ್ಯಕೀಯ ಮೂಲಸೌಕರ್ಯ ಅಭಿವೃದ್ಧಿಯಾಗುತ್ತಿದೆ. ಇದರಿಂದ ಎಲ್ಲರಿಗೂ ಉತ್ತಮ ವೈದ್ಯಕೀಯ ಸೇವೆ ದೊರೆಯುತ್ತಿದ್ದು, ಮರಣ ಪ್ರಮಾಣ ಇಳಿಕೆಯಾಗಿದೆ. ಇದರಿಂದ ಜೀವಿತಾವಧಿ ಏರಿಕೆಯಾಗಿದೆ. ಈ ದೇಶಗಳೂ ಸೇರಿದಂತೆ ವಿಶ್ವದ ಎಲ್ಲೆಡೆ 2015-2019ರ ಅವಧಿಯಲ್ಲಿ 65 ವರ್ಷ ತುಂಬಿದವರು ಇನ್ನೂ 17 ವರ್ಷ ಜೀವಿಸುತ್ತಾರೆ ಎಂದು ನಿರೀಕ್ಷಿಸಲಾಗಿದೆ. 2045-2050ರ ಅವಧಿಯಲ್ಲಿ 65 ವರ್ಷ ತುಂಬಿದವರು ಇನ್ನೂ 19 ವರ್ಷ ಜೀವಿಸುತ್ತಾರೆ ಎಂದು ನಿರೀಕ್ಷಿಸಲಾಗಿದೆ

ವಿಶ್ವದ ಹಿರಿಯ ನಾಗರಿಕರ ಪ್ರದೇಶವಾರು ಪ್ರಮಾಣ

ವಿಶ್ವದ ಒಟ್ಟು ವೃದ್ಧರಲ್ಲಿ, ಪೂರ್ವ ಮತ್ತು ಆಗ್ನೇಯ ಏಷ್ಯಾದ ದೇಶಗಳಲ್ಲಿ ಹೆಚ್ಚಿನ ಸಂಖ್ಯೆಯ ವೃದ್ಧರು ಇದ್ದಾರೆ. 2050ರಲ್ಲೂ ಇದು ದುಪ್ಪಟ್ಟಾಗುತ್ತದೆಯಾದರೂ, ಶೇಕಡಾವಾರು ಪ್ರಮಾಣದಲ್ಲಿ ಯಾವುದೇ ಬದಲಾವಣೆ ಆಗುವುದಿಲ್ಲ ಎಂದು ನಿರೀಕ್ಷಿಸಲಾಗಿದೆ. ಆದರೆ, ಮಧ್ಯ ಮತ್ತು ದಕ್ಷಿಣ ಏಷ್ಯಾದಲ್ಲಿ ವೃದ್ಧರ ಪ್ರಮಾಣವು 2019ಕ್ಕೆ ಹೋಲಿಸಿದರೆ 2050ರಲ್ಲಿ ಗಣನೀಯ ಪ್ರಮಾಣದಲ್ಲಿ ಏರಿಕೆಯಾಗಲಿದೆ. ಆದರೆ ಯೂರೋಪ್ ಮತ್ತು ಉತ್ತರ ಅಮೆರಿಕದ ದೇಶಗಳಲ್ಲಿನ ವೃದ್ಧರ ಪ್ರಮಾಣ ಇಳಿಕೆಯಾಗಲಿದೆ.





2019ರ ವೇಳೆಗೆ 65 ವರ್ಷ ಮೇಲ್ಪಟ್ಟವರ ಸಂಖ್ಯೆ



2050ರ ವೇಳೆಗೆ 65 ವರ್ಷ ಮೇಲ್ಪಟ್ಟವರ ಸಂಖ್ಯೆ

ಭಾರತದ ಸ್ಥಿತಿಗತಿ

ಇತರ ದೇಶಗಳಂತೆ ಭಾರತದಲ್ಲೂ ಹಿರಿಯ ನಾಗರಿಕರ ಸಂಖ್ಯೆ ಹೆಚ್ಚುತ್ತಿದೆ. 60 ವರ್ಷ ದಾಟಿದವರ ಪ್ರಮಾಣ 2050ರ ವೇಳೆಗೆ ಶೇ 20ರಷ್ಟು ಹೆಚ್ಚಳವಾಗಲಿದೆ ಎಂದು ಅಂದಾಜಿಸಲಾಗಿದೆ. ಇತ್ತೀಚಿನ ವರ್ಷಗಳಲ್ಲಿ ಹಿರಿಯರ ಪ್ರಮಾಣ ಅಧಿಕವಾಗುತ್ತಿದೆ.

2011ರ ಜನಗಣತಿ ಪ್ರಕಾರ, ಭಾರತದಲ್ಲಿ 60 ವರ್ಷ ದಾಟಿದ 10.4 ಕೋಟಿ ಜನರಿದ್ದರು. 1961ರಲ್ಲಿ ಶೇ 5.6ರಷ್ಟಿದ್ದ ಹಿರಿಯ ನಾಗರಿಕರ ಪ್ರಮಾಣ 2011ರ ವೇಳೆಗೆ ಶೇ 8.6ಕ್ಕೆ ಏರಿಕೆಯಾಗಿದೆ. ಹಿರಿಯ ನಾಗರಿಕರಲ್ಲಿ ಶೇ 71ರಷ್ಟು ಗ್ರಾಮೀಣ ಭಾಗದಲ್ಲಿ, ಶೇ 29ರಷ್ಟು ನಗರಗಳಲ್ಲಿ ನೆಲೆಸಿದ್ದಾರೆ.

ಗ್ರಾಮೀಣ ಭಾಗದಲ್ಲಿ ಶೇ 66ರಷ್ಟು ಹಿರಿಯ ಪುರುಷರು ಮತ್ತು ಶೇ 28ರಷ್ಟು ಹಿರಿಯ ಮಹಿಳೆಯರು ಈ ವಯಸ್ಸಿನಲ್ಲೂ ಕೆಲಸ ಮಾಡುತ್ತಾರೆ. ನಗರಗಳಲ್ಲಿ ಈ ಪ್ರಮಾಣ ಕ್ರಮವಾಗಿ ಶೇ 46 ಮತ್ತು ಶೇ 11ರಷ್ಟು ಇದೆ. ಗ್ರಾಮೀಣ ಭಾಗಕ್ಕೆ ಹೋಲಿಸಿದರೆ, ನಗರ ಪ್ರದೇಶದ ಹಿರಿಯ ನಾಗರಿಕರಲ್ಲಿ ಹೃಯದ ಕಾಯಿಲೆ ಅಧಿಕ. ಅಂಗವೈಕಲ್ಯ ಮತ್ತು ದೃಷ್ಟಿಹೀನತೆಗಳು ವಯಸ್ಸಾದವರನ್ನು ಹೆಚ್ಚಾಗಿ ಬಾಧಿಸುತ್ತಿವೆ.

ಆರೋಗ್ಯ, ಹಣಕಾಸು ಮೊದಲಾದ ಕಾರಣಗಳಿಂದ ಹಿರಿಯರು ಮನೆಯವರ ಮೇಲೆ ಅವಲಂಬಿತವಾಗಿದ್ದಾರೆ. ದುಡಿಮೆಗಾಗಿ ಕಾರ್ಮಿಕರು ನಗರಗಳತ್ತ ವಲಸೆ ಹೋಗುವ ಪ್ರವೃತ್ತಿಯಿಂದಾಗಿ, ಹಳ್ಳಿಗಳು ವೃದ್ಧಾಶ್ರಮಗಳಂತೆ ಬಿಂಬಿತವಾಗುತ್ತಿವೆ.

ವಯಸ್ಸಾದವರು ಮತ್ತು ಪರಿಣಾಮಗಳು

ವಯಸ್ಸಾದವರ ಜನಸಂಖ್ಯೆ ಹೆಚ್ಚುತ್ತಿರುವುದರಿಂದ ಉಂಟಾಗುತ್ತಿರುವ ಸಾಮಾಜಿಕ ಮತ್ತು ಆರ್ಥಿಕ ಪರಿಣಾಮಗಳು ಜಗತ್ತಿನ ಅನೇಕ ರಾಷ್ಟ್ರಗಳಲ್ಲಿ ಹೆಚ್ಚು ಸ್ಪಷ್ಟವಾಗಿ ಗೋಚರಿಸುತ್ತಿವೆ. ದುಡಿಯುವ ವಯಸ್ಸಿನ ಜನಸಂಖ್ಯೆಯಲ್ಲಿನ ಕುಸಿತ, ಹೆಚ್ಚಿದ ಆರೋಗ್ಯ ವೆಚ್ಚಗಳು, ಪಿಂಚಣಿ, ಆರ್ಥಿಕತೆ ಸಮಸ್ಯೆಗಳು ಇದರಲ್ಲಿ ಮುಖ್ಯವೆನಿಸಿವೆ.

ದುಡಿಯುವ ವಯಸ್ಸಿನ ಜನರಿಗೆ ಬರ

ಹಿರಿಯ ನಾಗರಿಕರ ಸಂಖ್ಯೆ ವೇಗವಾಗಿ ಹೆಚ್ಚುತ್ತಿದೆ ಎಂದರೆ, ದುಡಿಯುವ ವಯಸ್ಸಿನ ಜನರ ಸಂಖ್ಯೆ ಕಡಿಮೆ ಇದೆ ಎಂದರ್ಥ. ಈ ಬೆಳವಣಿಗೆಯು ಅರ್ಹ ಕೆಲಸಗಾರರ ಪೂರೈಕೆಯ ಕೊರತೆಗೆ ಕಾರಣವಾಗುತ್ತದೆ. ಯುವ ಕಾರ್ಮಿಕರಿಗೆ ಇರುವ ಬೇಡಿಕೆ ಹಾಗೆಯೇ ಉಳಿಯಲಿದ್ದು, ಆರ್ಥಿಕತೆಗೆ ಪೆಟ್ಟು ಬೀಳುತ್ತದೆ. ಇದು ಉತ್ಪಾದಕತೆ, ಕಾರ್ಮಿಕ ವೆಚ್ಚಗಳು, ವ್ಯಾಪಾರ ವಿಸ್ತರಣೆ ಹಾಗೂ ಅಂತರರಾಷ್ಟ್ರೀಯ ಸ್ಪರ್ಧಾತ್ಮಕತೆ ಮೇಲೆ ನೇರವಾಗಿ ಪರಿಣಾಮ ಬೀರುತ್ತದೆ.

ಕೆಲಸಗಾರರ ಕೊರತೆಯಿಂದಾಗಿ, ಉಳಿದ ಅಲ್ಪ ಪ್ರಮಾಣದ ದುಡಿಯುವ ವರ್ಗದ ಮೇಲಿನ ಒತ್ತಡ ಇನ್ನಿಲ್ಲದಂತೆ ಹೆಚ್ಚಾಗುತ್ತದೆ. ಕೆಲವು ಸಂದರ್ಭಗಳಲ್ಲಿ, ಕಾರ್ಮಿಕರ ಪೂರೈಕೆಯಲ್ಲಿನ ಕೊರತೆಯು ವೇತನವನ್ನು ಹೆಚ್ಚಿಸಬಹುದು. ಆದರೆ ಇದರಿಂದಾಗಿ ವೇತನ ಹಣದುಬ್ಬರ ಉಂಟಾಗುವ ಸಾಧ್ಯತೆಯಿರುತ್ತದೆ.

ಆರೋಗ್ಯ ವೆಚ್ಚ

ವಯಸ್ಸಾದಂತೆ ಆರೋಗ್ಯ ರಕ್ಷಣೆಯ ಬೇಡಿಕೆ ಹೆಚ್ಚಾಗುತ್ತದೆ. ಹೆಚ್ಚು ವಯಸ್ಸಾದವರ ಸಂಖ್ಯೆ ಅಧಿಕವಿರುವ ದೇಶಗಳು ಆರೋಗ್ಯ ವ್ಯವಸ್ಥೆಗೆ ಹೆಚ್ಚಿನ ಹಣ ಮತ್ತು ಸಂಪನ್ಮೂಲಗಳನ್ನು ವಿನಿಯೋಗಿಸಬೇಕಾಗುತ್ತದೆ. ಮುಂದುವರಿದ ದೇಶಗಳಲ್ಲಿ ಒಟ್ಟು ಆಂತರಿಕ ಉತ್ಪನ್ನದಲ್ಲಿ (ಜಿಡಿಪಿ) ಆರೋಗ್ಯ ರಕ್ಷಣೆಯ ಪಾಲು ಹೆಚ್ಚಿನ ಪ್ರಮಾಣದಲ್ಲಿದೆ. ಆರೋಗ್ಯ ಸೇವೆಗಳ ಮೇಲೆ ಇನ್ನಷ್ಟು ಹಣ ವಿನಿಯೋಗಿಸುವುದರಿಂದ ಸಾಮಾಜಿಕ ಆದ್ಯತೆಗಳಿಗೆ ಹಿನ್ನಡೆಯಾಗುತ್ತದೆ.

ಮುಂದುವರಿದ ಅನೇಕ ದೇಶಗಳಲ್ಲಿ ಆರೋಗ್ಯ ಕ್ಷೇತ್ರವು ಕಾರ್ಯಕರ್ತರು ಮತ್ತು ಕೌಶಲದ ಕೊರತೆ ಎದುರಿಸುತ್ತಿವೆ. ಮನೆ ಆರೈಕೆ ಸೇವೆಗೆ ಬೇಡಿಕೆ ಹೆಚ್ಚುತ್ತಿದೆ. ಜೊತೆಗೆ ಹೊಸ ತಂತ್ರಜ್ಞಾನಗಳಲ್ಲಿ ಹೂಡಿಕೆ ಮಾಡುವ ಅಗತ್ಯವೂ ವೆಚ್ಚವನ್ನು ಅಧಿಕಗೊಳಿಸುತ್ತದೆ.

ಅವಲಂಬನೆ

ಹಿರಿಯ ನಾಗರಿಕರ ಜನಸಂಖ್ಯೆ ಹೆಚ್ಚಿರುವ ದೇಶಗಳು ಆರೋಗ್ಯ ವೆಚ್ಚ, ಪಿಂಚಣಿ ಸೌಲಭ್ಯ ಮತ್ತು ಇತರೆ ಧನಸಹಾಯ ಕಾರ್ಯಕ್ರಮಗಳಿಗೆ ವೆಚ್ಚ ಮಾಡಲು ತೆರಿಗೆಯ ಮೇಲೆ ಅಲಂಬಿತವಾಗಿರುತ್ತವೆ. ಕಡಿಮೆ ಸಂಖ್ಯೆಯಲ್ಲಿರುವ ದುಡಿಯುವ ವರ್ಗದ ಮೇಲೆ ತೆರಿಗೆ ವಿಧಿಸಿಯೇ ಈ ವೆಚ್ಚಗಳನ್ನು ಸರಿದೂಗಿಸಬೇಕಾದ ಒತ್ತಡದಲ್ಲಿವೆ. ತೆರಿಗೆ ಪಾವತಿಸುವ ದುಡಿಯುವ ವರ್ಗಕ್ಕೆ ಹೋಲಿಸಿದರೆ, ವಯಸ್ಸಾದವರು ಪಾವತಿಸುವ ತೆರಿಗೆ ಪ್ರಮಾಣ ಕಡಿಮೆ. ನಿವೃತ್ತಿ ವಯಸ್ಸು ಸ್ಥಿರವಾಗಿ, ಜೀವಿತಾವಧಿ ಹೆಚ್ಚಾದರೆ, ಪಿಂಚಣಿ ಪಡೆಯುವವರ ಸಂಖ್ಯೆ ಹೆಚ್ಚುತ್ತದೆ. ಇದೇ ವೇಳೆ ತೆರಿಗೆ ಪಾವತಿಸುವ ದುಡಿಯುವ ಜನರ ಪ್ರಮಾಣ ಕಡಿಮೆಯಾಗುತ್ತದೆ.

ಆರ್ಥಿಕತೆ

ಬರುವ ವರಮಾನವನ್ನು ಪಿಂಚಣಿ ನಿಧಿಗೆ ವಿನಿಯೋಗಿಸುತ್ತಿದ್ದರೆ, ಅದು ಉತ್ಪಾದಕತೆ, ಹೂಡಿಕೆಯನ್ನು ಕಂಠಿತಗೊಳಿಸಿ, ಆರ್ಥಿಕತೆಗೆ ಹೊಡೆತ ನೀಡುತ್ತದೆ. ಹಿರಿಯರೇ ಹೆಚ್ಚಾಗಿ ಕಾರ್ಮಿಕ ಬಲದ ಕುಸಿತವು ಆರ್ಥಿಕತೆ ಮೇಲೆ ಅನೇಕ ರೀತಿಯಲ್ಲಿ ಪರಿಣಾಮ ಬೀರುತ್ತದೆ. ಜಿಡಿಪಿಯ ಬೆಳವಣಿಗೆ ಕುಂಠಿತಗೊಳ್ಳುತ್ತದೆ. ದುಡಿಯುವ ವಯಸ್ಸಿನ ಜನರು ವೃದ್ಧರ ಸೇವೆಗೆ ಹೆಚ್ಚು ಹಣ ನೀಡಬೇಕಾಗುತ್ತದೆ. ಇವೆಲ್ಲ ಅಂಶಗಳು ಒಟ್ಟಾರೆ ದೇಶದ ಆರ್ಥಿಕ ಬೆಳವಣಿಗೆಯನ್ನು ತಗ್ಗಿಸುತ್ತವೆ.

ಆಧಾರ: ವಿಶ್ವಸಂಸ್ಥೆಯ ವಿಶ್ವ ಜನಸಂಖ್ಯಾ ವೃದ್ಧಾಪ್ಯ 2019 ವರದಿ

ಲಸಿಕೆ ವಿಚಾರದಲ್ಲಿ ಮಧ್ಯಪ್ರವೇಶ
‘ಸುಪ್ರೀಂ’ ನಡೆ ಶ್ಲಾಘಿಸಿ ಸಿಜೆಐಗೆ ಬಾಲಕಿಯ ಪತ್ರ

ನವದೆಹಲಿ (ಪಿಟಿಐ): ಸುಪ್ರೀಂಕೋರ್ಟ್ ಚಾಟಿ ಬೀಸಿದ ನಂತರ ಕೇಂದ್ರ ಸರ್ಕಾರ ದೇಶದಲ್ಲಿ 18 ವರ್ಷಕ್ಕಿಂತ ಮೇಲ್ಪಟ್ಟ ಎಲ್ಲರಿಗೂ ಉಚಿತವಾಗಿ ಕೋವಿಡ್ ಲಸಿಕೆ ನೀಡಲು ಎಚ್ಚೆತ್ತುಕೊಂಡಿತು ಎನ್ನುವ ಚರ್ಚೆಯ ಮಧ್ಯೆ ಕೇರಳದ 5ನೇ ತರಗತಿ ವಿದ್ಯಾರ್ಥಿನಿ ಲಿಡ್ವಿನಾ ಜೋಸೆಫ್ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಎನ್.ವಿ.ರಮಣ ಅವರಿಗೆ ಪತ್ರ ಬರೆದು, ಉನ್ನತ ನ್ಯಾಯಾಲಯವು ಮಧ್ಯಪ್ರವೇಶಿಸಿ ಪರಿಣಾಮಕಾರಿ ಆದೇಶ ನೀಡುವ ಮೂಲಕ ಸಾಂಕ್ರಾಮಿಕ ರೋಗದ ವಿರುದ್ಧದ ಹೋರಾಟದಲ್ಲಿ ಜೀವಗಳನ್ನು ಉಳಿಸಿದೆ ಎಂದು ಶ್ಲಾಘಿಸಿದ್ದಾಳೆ.

ತ್ರಿಶೂರ್‌ನ ಕೇಂದ್ರೀಯ ವಿದ್ಯಾಲಯದ ವಿದ್ಯಾರ್ಥಿನಿ ಜೋಸೆಫ್ ತನ್ನ ಪತ್ರದಲ್ಲಿ ಸುಪ್ರೀಂ ಕೋರ್ಟ್ ಕರ್ತವ್ಯ ನಿರ್ವಹಣೆಯನ್ನು ಚಿತ್ರಿಸುವ ರೇಖಾಚಿತ್ರವನ್ನು ಬಿಡಿಸಿದ್ದಾಳೆ. ಅದರಲ್ಲಿ ನ್ಯಾಯಮೂರ್ತಿಗಳು ಕೊರೊನಾ ವೈರಸ್ ಹೊಡೆದುರುಳಿಸುತ್ತಿರುವುದನ್ನು ಕಾಣಬಹುದು. ಜತೆಗೆ ತ್ರಿವರ್ಣ, ಸಿಂಹದ ಲಾಂಛನ ಮತ್ತು ರಾಷ್ಟ್ರಪಿತನ ನಗುವ ಮೊಗದ ಭಾವಚಿತ್ರವನ್ನು ಬಾಲಕಿ ಬಿಡಿಸಿದ್ದಾಳೆ.

‘ಕೊರೊನಾದಿಂದಾಗಿ ದೆಹಲಿ ಮತ್ತು ದೇಶದ ಇತರ ಭಾಗಗಳಲ್ಲಿ ಸಂಭವಿಸಿದ ಸಾವುಗಳ ಬಗ್ಗೆ ನನಗೆ ತುಂಬಾ ಚಿಂತೆ ಇತ್ತು. ನಮ್ಮ ಗೌರವಾನ್ವಿತ ನ್ಯಾಯಾಲಯವು ಕೋವಿಡ್ -19 ವಿರುದ್ಧದ ಹೋರಾಟದಲ್ಲಿ ಸಾಮಾನ್ಯ ಜನರ ನೋವು ಮತ್ತು ಸಾವಿಗೆ ಪರಿಣಾಮಕಾರಿಯಾಗಿ ಮಧ್ಯಪ್ರವೇಶಿಸಿದೆ ಎನ್ನುವುದನ್ನು ನಾನು ಪತ್ರಿಕೆಗಳಿಂದ ಅರ್ಥಮಾಡಿಕೊಂಡಿದ್ದೇನೆ’ ಎಂದು ಬಾಲಕಿ ಪತ್ರದಲ್ಲಿ ಉಲ್ಲೇಖಿಸಿದ್ದಾಳೆ.

‘ಗೌರವಾನ್ವಿತ ನ್ಯಾಯಾಲಯವು ಆಮ್ಲಜನಕದ ಪೂರೈಕೆಗಾಗಿ ಆದೇಶ ನೀಡಿ, ಅನೇಕ ಜೀವಗಳನ್ನು ಉಳಿಸಿರುವುದಕ್ಕೆ ನಾನು ಸಂತೋಷ ಮತ್ತು ಹೆಮ್ಮೆಪಡುತ್ತೇನೆ. ನ್ಯಾಯಾಲಯವು ಕೋವಿಡ್ -19ನಿಂದ ನಮ್ಮ ದೇಶದಲ್ಲಿ ಸಂಭವಿಸುತ್ತಿದ್ದ ಸಾವಿನ ಪ್ರಮಾಣವನ್ನು ಅದರಲ್ಲೂ ವಿಶೇಷವಾಗಿ ದೆಹಲಿಯಲ್ಲಿ ಸಾವಿನ ಪ್ರಮಾಣ ತಗ್ಗಿಸಲು ಪರಿಣಾಮಕಾರಿ ಕ್ರಮಗಳನ್ನು ಪ್ರಾರಂಭಿಸಿದೆ ಎನ್ನುವುದನ್ನು ನಾನು ಅರ್ಥಮಾಡಿಕೊಂಡಿದ್ದೇನೆ. ಇದಕ್ಕಾಗಿ ನಿಮಗೆ ಗೌರವಪೂರ್ವಕ ಧನ್ಯವಾದಗಳು’ ಎಂದು ಜೋಸೆಫ್, ಮುಖ್ಯನ್ಯಾಯಮೂರ್ತಿ ರಮಣ ಅವರಿಗೆ ಬರೆದ ಪತ್ರದಲ್ಲಿ ಶ್ಲಾಘಿಸಿದ್ದಾಳೆ.

ಪತ್ರಕ್ಕೆ ಪ್ರತಿಕ್ರಿಯಿಸಿ ಬಾಲಕಿಗೆ ಪತ್ರ ಬರೆದಿರುವ ಮುಖ್ಯನ್ಯಾಯಮೂರ್ತಿಗಳು ‘ಮನಮುಟ್ಟುವಂತಿರುವ ಕರ್ತವ್ಯನಿರತ ನ್ಯಾಯಮೂರ್ತಿಗಳ ರೇಖಾಚಿತ್ರ ಒಳಗೊಂಡ ನಿಮ್ಮ ಸುಂದರ ಪತ್ರವನ್ನು ನಾನು ಸ್ವೀಕರಿಸಿದ್ದೇನೆ. ದೇಶದಲ್ಲಿನ ಘಟನೆಗಳ ಬಗ್ಗೆ ನೀವು ನಿಗಾ ಇಟ್ಟಿರುವ ರೀತಿ ಮತ್ತು ಸಾಂಕ್ರಾಮಿಕ ರೋಗದ ಹಿನ್ನೆಲೆಯಲ್ಲಿ ಜನರ ಯೋಗಕ್ಷೇಮಕ್ಕಾಗಿ ನೀವು ತೋರಿರುವ ಕಾಳಜಿಗೆ ನಾನು ನಿಜವಾಗಿಯೂ ಪ್ರಭಾವಿತನಾಗಿದ್ದೇನೆ. ನೀವು ಜಾಗರೂಕರಾಗಿ, ನೀವು ತಿಳಿವಳಿಕೆ ಮತ್ತು ಜವಾಬ್ದಾರಿಯುತ ಪ್ರಜೆಯಾಗಿ ಬೆಳೆಯುವಿರಿ ಎಂಬ ಖಾತ್ರಿ ನನಗಿದೆ. ನೀವು ರಾಷ್ಟ್ರ ನಿರ್ಮಾಣಕ್ಕೆ ಅಪಾರ ಕೊಡುಗೆ ನೀಡುತ್ತೀರಿ’ ಎಂದು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಕೋವಿಡ್: ತಂತ್ರಜ್ಞಾನ ನಿರ್ವಹಣೆಗೆ ಸಮಿತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್–19 ನಿರ್ವಹಣೆಗೆ ಸಂಬಂಧಿಸಿದಂತೆ ರಾಜ್ಯದ ಎಲ್ಲ ಅಪ್ಲಿಕೇಷನ್‌ಗಳು ಮತ್ತು ತಂತ್ರಜ್ಞಾನಗಳನ್ನು ಏಕೀಕೃತಗೊಳಿಸಿ ಕಾರ್ಯನಿರ್ವಹಿಸಲು, ಸಮಿತಿಯೊಂದನ್ನು ರಚಿಸಲಾಗಿದೆ.

ಈ ಸಮಿತಿಗೆ ಹಿರಿಯ ಐಎಎಸ್ ಅಧಿಕಾರಿ ಹಾಗೂ ಕೋವಿಡ್ ವಾರ್ ರೂಮ್ ಉಸ್ತುವಾರಿ ಹೊತ್ತಿರುವ ವಿ.ಪೊನ್ನುರಾಜ್ ಅವರನ್ನು ಅಧ್ಯಕ್ಷರನ್ನಾಗಿ ನೇಮಿಸಲಾಗಿದೆ.

ಸದಸ್ಯರನ್ನಾಗಿ ಡಿ.ರಂದೀಪ್, ಡಾ.ಅರುಂಧತಿ ಚಂದ್ರಶೇಖರ್, ಬಿಸ್ವಜಿತ್ ಮಿಶ್ರಾ, ವಿಪಿನ್ ಸಿಂಗ್, ಕುಮಾರ್ ಪುಷ್ಕರ್, ಹರೀಶ್ ಮತ್ತು ಎಚ್.ಎಸ್.ಶರತ್ ಅವರನ್ನು ನೇಮಿಸಲಾಗಿದೆ.

ಪರಿಹಾರ್ ಪೋರ್ಟಲ್, ಸಂಪರ್ಕಿತರ ಪತ್ತೆ ಮಾಡುವ ಮೊಬೈಲ್ ಆ್ಯಪ್, ಕ್ವಾರಂಟೈನ್ ಆ್ಯಪ್, ಕ್ವಾರಂಟೈನ್ ಅಲರ್ಟ್ ಸಿಸ್ಟಮ್, ಆಸ್ಪತ್ರೆಗಳಲ್ಲಿ ಹಾಸಿಗೆಗಳ ನಿರ್ವಹಣೆಯ ವ್ಯವಸ್ಥೆಯ ಅಪ್ಲಿಕೇಷನ್‌ಗಳು ಸೇರಿ ಇತರ ಎಲ್ಲ ಆ್ಯಪ್ ಮತ್ತು ತಂತ್ರಜ್ಞಾನ ಏಕೀಕೃತಗೊಳಿಸಿ, ಮಾಹಿತಿ ನಿರ್ವಹಣೆ ಸುವ್ಯವಸ್ಥಿತಗೊಳಿಸುವುದು ಈ ಸಮಿತಿಯ ಜವಾಬ್ದಾರಿಯಾಗಿದೆ.

ಸಮಿತಿ ಸಭೆ ಸೇರಲು ಆರಂಭಿಸಿದ ಬಳಿಕ ವಾರಕ್ಕೊಮ್ಮೆ ಸರ್ಕಾರಕ್ಕೆ ವರದಿ ನೀಡಲಿದೆ.

ತಿದ್ದುಪಡಿ

ಆರ್‌ಎಸ್‌ಎಸ್ ಮತ್ತು ಸೇವಾಭಾರತಿ ಸಂಘಟನೆಗಳು ಪೋಲಿಯೊ ನಿರ್ಮೂಲನೆಯಲ್ಲಿ ಮಹತ್ವದ ಪಾತ್ರವಹಿಸಿವೆ ಎಂದು ಕೇಂದ್ರ ಸಚಿವ ಹರ್ಷವರ್ಧನ್ ಅವರು 2019ರ ಮೇ 19ರಂದು ಪತ್ರಿಕಾಗೋಷ್ಠಿಯಲ್ಲಿ ಹೇಳಿದ್ದರು. ಗೂಗಲ್‌ನಲ್ಲಿ ಹುಡುಕಿದಾಗ ಈ ಸುದ್ದಿ ದೊರೆಯುತ್ತಿದೆ. ಔಟ್‌ಲುಕ್ ಜಾಲತಾಣದಲ್ಲೂ ಈ ಸುದ್ದಿ ಲಭ್ಯವಿದೆ. ಪೋಸ್ಟ್‌ಕಾರ್ಡ್ ಕನ್ನಡ ಫೇಸ್‌ಬುಕ್ ಪುಟವು ಪೋಸ್ಟ್ ಮಾಡಿದ್ದ ಸ್ಕ್ರೀನ್‌ಶಾಟ್‌ನಲ್ಲಿ ಇದ್ದ ಈ ವಿವರ ಸರಿಯಾಗಿಯೇ ಇದೆ. ಮಂಗಳವಾರದ ಸಂಚಿಕೆಯಲ್ಲಿ ಪ್ರಕಟವಾಗಿದ್ದ ಫ್ಯಾಕ್ಟ್‌ಚೆಕ್‌ನಲ್ಲಿ ಈ ವಿವರ ತಪ್ಪಾಗಿತ್ತು.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ
9606038256

ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಅವರು ತಮ್ಮ ಪುತ್ರ ರಾಹುಲ್ ಗಾಂಧಿ ಜೊತೆ ಇರುವ ಹಳೆಯ ಚಿತ್ರವೊಂದು ವೈರಲ್ ಆಗಿದೆ. ಸಾಮಾಜಿಕ ಜಾಲತಾಣದಲ್ಲಿ ಸುದ್ದಿಯಾಗಿರುವ ಪ್ರಕಾರ, ಈ ಚಿತ್ರದಲ್ಲಿ ಸೋನಿಯಾ ಜೊತೆ ಇರುವುದು ಉದ್ಯಮಿ ಒಟ್ಟಾವಿಯೊ ಕ್ವಟ್ರೋಚಿ. ಇವರ ಹೆಸರು ಬೋಫೋರ್ಸ್ ಹಗರಣದಲ್ಲಿ ಕೇಳಿಬಂದಿತ್ತು. ರಾಜೀವ್ ಗಾಂಧಿ ನಿಧನಾನಂತರ ಸೋನಿಯಾ ಅವರು ಕ್ವಟ್ರೋಚಿ ಅವರನ್ನು 57 ಬಾರಿ ಭೇಟಿ ಮಾಡಿದ್ದರು ಎಂಬ ಸಂದೇಶ ಹರಿದಾಡುತ್ತಿದೆ.

ಈ ವೈರಲ್ ಚಿತ್ರವನ್ನು ಲಾಜಿಕಲ್ ಇಂಡಿಯನ್ ಹಾಗೂ ಆಲ್ಟ್ ನ್ಯೂಸ್ ಪರಿಶೀಲಿಸಿವೆ. ಈ ಚಿತ್ರವನ್ನು 1996ರ ಏಪ್ರಿಲ್ 8ರಂದು ಪಿಟಿಐ ಸುದ್ದಿಸಂಸ್ಥೆಯ ಸಿಬ್ಬಂದಿ ಸೆರೆಹಿಡಿದಿದ್ದಾರೆ. ಇದನ್ನು ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆ ಪ್ರಕಟಿಸಿದೆ. ವಿಶೇಷ ಭದ್ರತಾ ಪಡೆ (ಎಸ್‌ಪಿಜಿ) ಸಂಸ್ಥಾಪನಾ ದಿನದ ಕಾರ್ಯಕ್ರಮದಲ್ಲಿ ಸೋನಿಯಾ ಅವರು ತಮ್ಮ ಪುತ್ರ ರಾಹುಲ್ ಜೊತೆ ಭಾಗಿಯಾಗಿದ್ದರು ಎಂದು ಚಿತ್ರದ ಅಡಿಬರಹ ಉಲ್ಲೇಖಿಸಿದೆ.

ಬೆರಗಿನ ಬೆಳಕು
ಗುರುರಾಜ ಕರಜಗಿ

ಪ್ರಾಣಿಗಳಿಂದ ಪ್ರೀತಿಯ ಮಾರ್ದನಿ

ಮನುಜರೂಪದಿನಾದರವನು ಪಡೆಯದ ಹೃದಯ |
ವನುರಾಗವನು ಬಿಡಾಲಕೊ ಶುಕಕೊ ಕಪಿಗೋ ||
ಶುನಕಗೊ ಸುರಿದದರ ಮಾರ್ದನಿಯನಾಲಿಪುದು |
ತಣಿವು ಜೀವಸ್ವರದೆ – ಮಂಕುತಿಮ್ಮ || 426 ||

ಪದ-ಅರ್ಥ: ಮನುಜರೂಪದಿನಾದರವನು = ಮನುಜರೂಪದಿಂ(ಮನುಷ್ಯರೂಪ ದಿಂದ) + ಆದರವನು, ಬಿಡಾಲ = ಬೆಕ್ಕು, ಶುಕ = ಗಿಳಿ, ಶುನಕ = ನಾಯಿ, ಸುರಿದದರ = ಸುರಿದು + ಅದರ, ಮಾರ್ದನಿಯನಾಲಿಪುದು = ಮಾರ್ದನಿಯನು(ಮರುದನಿಯನ್ನು) + ಆಲಿಪುದು, ತಣಿವು = ಸಾಂತ್ವನ, ಜೀವಸ್ವರದೆ = ಜೀವ + ಸ್ವರದೆ(ಸ್ವರದಿಂದ)

ವಾಚ್ಯಾರ್ಥ: ಮನುಷ್ಯರಿಂದ ಆದರವನ್ನು ಪಡೆಯದ ಹೃದಯ, ಆ ಅನುರಾಗವನ್ನು, ಬೆಕ್ಕಿಗೋ, ಗಿಳಿಗೋ, ಕೋತಿಗೋ, ನಾಯಿಗೋ ತೋರಿ ಅದರಿಂದ ಸ್ಪಂದನೆಯನ್ನು ಪಡೆಯುವುದು. ಆ ಮತ್ತೊಂದು ಜೀವಸ್ವರದಿಂದ ಮನಸಿಗೆ ಹಿತ, ಸಾಂತ್ವನ.

ವಿವರಣೆ: ನಾವು ಇಂದು ಪ್ರಪಂಚದಲ್ಲಿ ಅನೇಕ ಪ್ರಾಣಿಪ್ರೇಮಿಗಳನ್ನು ಕಂಡಿದ್ದೇವೆ, ಅದರ ಬಗ್ಗೆ ಓದಿದ್ದೇವೆ. ನಾಯಿಗಳ, ಕುದುರೆಗಳ ಪ್ರಾಮಾಣಿಕತೆ, ಬೆಕ್ಕು ಮತ್ತು ಗಿಳಿಗಳ ಬುದ್ಧಿವಂತಿಕೆಯ ಬಗ್ಗೆ ರೋಚಕವಾದ ಕಥೆಗಳನ್ನು ಓದಿದ್ದೇವೆ. ಮನೆಯಲ್ಲಿ ಸಾಕು ಪ್ರಾಣಿಗಳನ್ನು ಇಟ್ಟುಕೊಂಡವರ ಸಂಖ್ಯೆಯೂ ಹೆಚ್ಚಾಗುತ್ತಿದೆ. ಕೆಲವರು ತಮ್ಮ ಗೃಹಗಳಲ್ಲಿ ಸಾಕಿದ ನಾಯಿ ಬೆಕ್ಕುಗಳಿಗೆ ನೀಡುತ್ತಿರುವ ಸೌಕರ್ಯಗಳನ್ನು ನೋಡಿದರೆ, ಅವುಗಳನ್ನು ಮುದ್ದುಮಾಡುವ ಬಗೆಯನ್ನು ಕೇಳಿದಾಗ, ನಾನು ಮನುಷ್ಯನೇಕೆ ಆದೆ, ಆ ಪ್ರಾಣಿಯೇ ಆಗಿದ್ದರೆ ಚೆನ್ನಾಗಿತ್ತಲ್ಲ ಎನ್ನಿಸುತ್ತದೆ ಎಂದೊಬ್ಬ ಕವಿ ಪದ್ಯವನ್ನೇ ಬರೆದಿದ್ದರು.

ನಾನು ಅಮೆರಿಕದಲ್ಲಿ ಒಬ್ಬರ ಮನೆಗೆ ಹೋದಾಗ ಒಂದು ಭಾರೀ ಗಾತ್ರದ ನಾಯಿ ಓಡಿಬಂತು. ನನ್ನೆದೆ ಬಿರಿಯಿತು. ಅದರ ಹಿಂದೆಯೇ ಅದರ ಯಜಮಾನ ಓಡಿಬಂದ, ನಾಯಿಯನ್ನು ಹಿಡಿಯಲಲ್ಲ, ನನಗೆ ಧೈರ್ಯ ನೀಡುವುದಕ್ಕೆ. ‘ಸಾರ್, ಅವನೇನೂ ಮಾಡುವುದಿಲ್ಲ’ ಎಂದ. ನಾನು, ‘ಹೌದಪ್ಪ, ನಿನಗೆ ಗೊತ್ತು, ಅದೇನೂ ಮಾಡುವುದಿಲ್ಲವೆಂದು. ಆದರೆ ನನಗೆ ಗೊತ್ತಿರಲಿಲ್ಲವಲ್ಲ? ಇನ್ನೊಂದು ಕ್ಷಣವಾಗಿದ್ದರೆ ನನಗೆ ಹೃದಯಾಘಾತವೇ ಆಗುತ್ತಿತ್ತು’ ಎಂದೆ. ಮನೆಯಲ್ಲಿ ಅದು ಹೋಗಿ ಹಾಸಿಗೆಯ ಮೇಲೆ ಮಲಗಿತು. ನಾನು ‘ಅದರ ಹೆಸರೇನು?’ ‘ಸಾರ್, ಅದು, ಇದು ಅನ್ನಬೇಡಿ, ಅವನು ನನ್ನ ಮಗ ಇದ್ದ ಹಾಗೆ. ಅವನ ಹೆಸರು ನಾರಾಯಣ. ಇಲ್ಲಿ ಅಮೆರಿಕದ ಜನಕ್ಕೆ ಅನುಕೂಲವಾಗಲಿ ಎಂದು ‘ನಾನ್’ ಎನ್ನುತ್ತೇವೆ’ ಎಂದನಾತ. ನಾರಾಯಣ ಹೆಸರು ಸಾರ್ಥಕವಾಯಿತು! ಅವರ ಪರಿವಾರದವರೆಲ್ಲ ಆ ನಾಯಿಯೊಂದಿಗೆ ಮಾಡಿಕೊಂಡಿದ್ದ ಅವಿನಾ ಸಂಬಂಧ ಮನಸ್ಸು ತುಂಬಿತು.

ಯಾಕೆ ಮನುಷ್ಯರು ಹೀಗೆ ಪ್ರಾಣಿಗಳೊಂದಿಗೆ ಭಾವನಾತ್ಮಕ ಸಂಬಂಧವನ್ನು ಉಳಿಸಿಕೊಳ್ಳುತ್ತಾರೆ? ಒಂದು ರೀತಿಯಲ್ಲಿ ಅದು ಋಣಸಂದಾಯ. ಕೃಷಿಯಲ್ಲಿ, ಮನೆ ಕಾಯುವುದರಲ್ಲಿ, ಮನೆಯಲ್ಲಿ ಇಲಿಗಳ ನಾಶಕ್ಕಾಗಿ ಪ್ರಾಣಿಗಳು ನೀಡಿದ ಸಹಕಾರ ಒಂದು ಕಾರಣವಾದರೆ, ಮೂಕಪ್ರಾಣಿಗಳು ತಮ್ಮ ಜೊತೆಗೆ ಅತ್ಯಂತ ಆಪ್ತವಾದ ಭಾವನೆಗಳನ್ನು ತಮ್ಮ ಚರ್ಯೆಯಿಂದ ಅಭಿವ್ಯಕ್ತಗೊಳಿಸುತ್ತವೆಂಬುದು ಮತ್ತೊಂದು ಕಾರಣ. ಈ ಪ್ರಾಣಿಗಳು ದ್ರೋಹಮಾಡುವುದಿಲ್ಲ, ತಮ್ಮನ್ನು ಆಪತ್ತಿನಲ್ಲಿ ತೊರೆದು ಹೋಗುವುದಿಲ್ಲ, ಹಣಕ್ಕಾಗಿ ಮೋಸಮಾಡುವುದಿಲ್ಲ. ಹೀಗೆ ನಮ್ಮ ಧ್ವನಿಗೆ ಅವುಗಳಿಂದ ಮಾರ್ದನಿಯನ್ನು ಪಡೆದು ಆ ಜೀವಸ್ವರದಿಂದ ಬದುಕಿಗೊಂದು ತಂಪನ್ನು ಪಡೆಯುತ್ತಾರೆ ಜನ. ಮನುಷ್ಯರಿಂದ ಆದರವನ್ನು ಪಡೆಯದವರು ಮಾತ್ರ ಪ್ರಾಣಿಪ್ರಿಯರಾಗುತ್ತಾರೆಂದಲ್ಲ, ಮನುಷ್ಯರಿಂದಲ್ಲದೇ ಪ್ರಾಣಿಗಳಿಂದಲೂ ಪ್ರೇಮವನ್ನು ಅಪೇಕ್ಷಿಸುತ್ತಾರೆ. ❖

ಗುಂಡಣ್ಣ



ದಿನ ಭವಿಷ್ಯ

ಬುಧವಾರ ಜೂನ್ 9, 2021

ಶ್ರೀ ಪ್ಲವ ನಾಮ ಸಂವತ್ಸರ ಉತ್ತರಾಯಣ ವಸಂತ ಋತು ವೈಶಾಖ ಮಾಸ ಕೃಷ್ಣ ಪಕ್ಷ ಮಳೆ ನಕ್ಷತ್ರ ಮೃಗಶಿರ ಚತುರ್ದಶಿ ಗಂ. 17-14 (ಹ. 12-55) ಬುಧವಾರ ನಿತ್ಯ ನಕ್ಷತ್ರ ಕೃತ್ತಿಕಾ ಗಂ. 5-50 (ಬೆ. 8-31) ಸುಕರ್ಮ ನಾಮ ಯೋಗ ಗಂ. 2-15 ಶಕುನಿ ಕರಣ ಗಂ. 17-14 ವಿಷ ಗಂ. 50-6 ಅಮೃತ ಶೇಷ ಗಂ 3-39 : ರಾಹುಕಾಲ: ಮ. ಗಂ. 12-00 ರಿಂದ 1-30 ಗುಳಿಕ ಕಾಲ ಬೆ. ಗಂ 10-30 ರಿಂದ 12-00 ಯಮಗಂಡ ಕಾಲ ಬೆ. ಗಂ 7-30 ರಿಂದ 9-00 ಸೂರ್ಯೋದಯ: 5-56 ಸೂರ್ಯಾಸ್ತ: 6-41 ಅದೃಷ್ಟ ಸಂಖ್ಯೆ 9

ಮೇಷ: ನೂತನ ಉದ್ಯಮದಲ್ಲಿ ಯಶಸ್ಸು ನಿಮ್ಮದಾಗಲಿದೆ. ಕೌಟುಂಬಿಕ ಸಮಸ್ಯೆಗಳು ದೂರವಾಗಿ ನೆಮ್ಮದಿ. ಕೃಷಿಕರಿಗೆ ಕೆಲಸ–ಕಾರ್ಯಗಳಿಗೆ ಅನುಕೂಲಗಳು ಕೂಡಿಬರಲಿವೆ. ಬರಬೇಕಾದ ಹಣದ ವಾಪಾಸಾತಿ.

ವೃಷಭ: ಹಣಕಾಸಿನ ವ್ಯವಹಾರದಲ್ಲಿ ಉತ್ತಮ ಲಾಭ. ವಿದ್ಯಾರ್ಥಿಗಳಿಗೆ ಹೆಚ್ಚಿನ ಒತ್ತಡದ ದಿನವಾಗಲಿದೆ. ತಾಯಿಯ ಮಾತುಗಳ ಮೇಲೆ ವಿಶ್ವಾಸವಿರಲಿ. ದೂರದ ಪ್ರಯಾಣ ಸಾಧ್ಯತೆ. ವೃಥಾ ಖರ್ಚು.

ಮಿಥುನ: ಓದಿನಲ್ಲಿ ಏಕಾಗ್ರತೆ ಅವಶ್ಯ. ವಿದ್ಯಾಭ್ಯಾಸದಲ್ಲಿ ಪ್ರಗತಿಯನ್ನು ಕಾಣುವಿರಿ. ಆರ್ಥಿಕ ಸಬಲತೆ ಕಂಡುಬರುವುದು. ಹೊಸ ಹೊಸ ಯೋಜನೆಗೆ ಚಿಂತನೆ. ಸ್ನೇಹಿತರೊಂದಿಗೆ ದೇವತಾ ದರ್ಶನ ಭಾಗ್ಯ.

ಕರ್ಕಾಟಕ: ಇತರರ ಅಭಿವೃದ್ಧಿಯು ನಿಮ್ಮ ನಿದ್ದೆಗೆಡಿಸುವ ಸಾಧ್ಯತೆ. ಧನ ಧಾನ್ಯಗಳ ಸಂಗ್ರಹದಲ್ಲಿ ಹಿನ್ನಡೆ. ಕ್ರೀಡಾಪಟುಗಳಿಗೆ ಸಾಮರ್ಥ್ಯ ಪ್ರದರ್ಶನಕ್ಕೆ ವೇದಿಕೆ ದೊರಕುವುದು. ಆಸ್ತಿ ಖರೀದಿ ವಿಚಾರದಲ್ಲಿ ಚಿಂತನೆ.

ಸಿಂಹ: ಕೌಟುಂಬಿಕ ಭಿನ್ನಾಭಿಪ್ರಾಯಗಳು ದೂರವಾಗುವವು. ಹೊಸ ಸಂಬಂಧಗಳು ಕೂಡಿಬರುವ ಸಾಧ್ಯತೆ. ವಾಹನ ಚಾಲನೆ ಮಾಡುವಾಗ ಎಚ್ಚರ ಅಗತ್ಯ. ವ್ಯವಹಾರದಲ್ಲಿ ಉತ್ತಮ ಧನಪ್ರಾಪ್ತಿ

ಕನ್ಯಾ: ಹಿರಿಯರ ಸಲಹೆಗಳಿಗೆ ಗೌರವವಿರಲಿ. ವ್ಯವಹಾರದಲ್ಲಿ ಉತ್ತಮ ಪ್ರಗತಿ. ಕೃಷಿಕರಿಗೆ ಕಾರ್ಮಿಕರ ಕೊರತೆ ಉಂಟಾದೀತು. ಅನಾವಶ್ಯಕ ಸುತ್ತಾಟದಿಂದಾಗಿ ಮನಸ್ಸಿನ ನೆಮ್ಮದಿ ಹಾಳಾಗುವ ಸಾಧ್ಯತೆ.

ತುಲಾ: ರಾಜಕಾರಣಕ್ಕೆ ಪ್ರವೇಶಿಸುವ ಒತ್ತಡದಲ್ಲಿರುವಿರಿ. ವೈಯಕ್ತಿಕ ಬದುಕಿನಲ್ಲಿ ಸ್ವಲ್ಪ ಮಟ್ಟಿನ ಏರುಪೇರು ಸಾಧ್ಯತೆ. ಉದ್ಯೋಗದಲ್ಲಿ ಮೇಲಧಿಕಾರಿಗಳ ಪ್ರೋತ್ಸಾಹದಿಂದ ಉತ್ಸಾಹ ಮೂಡಲಿದೆ.

ವೃಶ್ಚಿಕ: ವೈಯಕ್ತಿಕ ಜೀವನದಲ್ಲಿ ಅಭಿವೃದ್ಧಿ ಕಂಡರೂ ಸಾಮಾಜಿಕ ಕಳಂಕದ ಭೀತಿ ಇದೆ. ಸಂದೇಹಾಸ್ಪದ ವ್ಯಕ್ತಿಗಳಿಂದ ದೂರವಿರುವುದು ಒಳ್ಳೆಯದು. ಧಾನ್ಯ ವ್ಯಾಪಾರದಲ್ಲಿ ಉತ್ತಮ ಪ್ರಗತಿ. ಮಂಗಳ ಕಾರ್ಯಗಳಿಗೆ ಮುನ್ನುಡಿ.

ಧನು: ಧಾನ್ಯ ದಿನಸಿ ವ್ಯಾಪಾರಿಗಳಿಗೆ ವ್ಯವಹಾರದಲ್ಲಿ ಅನಾನುಕೂಲ. ಅಪರೂಪದ ವ್ಯಕ್ತಿಗಳ ಆಗಮನ. ಆತ್ಮೀಯರೊಂದಿಗೆ ಸಂತೋಷ ಕೂಟಗಳಲ್ಲಿ ಭಾಗವಹಿಸುವ ಸಾಧ್ಯತೆ. ಮಾದಕ ದ್ರವ್ಯಗಳಿಂದ ದೂರವಿರಿ.

ಮಕರ: ಸ್ವಯಂ ಉದ್ಯೋಗದಲ್ಲಿ ಅಧಿಕ ಲಾಭ. ಹಿರಿಯರ ಆರೋಗ್ಯದಲ್ಲಿ ವ್ಯತ್ಯಯ. ಹೊಸ ವಸ್ತುಗಳ ಖರೀದಿಗೆ ಸೂಕ್ತ ಕಾಲ. ಮಂಗಳ ಕಾರ್ಯಗಳಲ್ಲಿ ತತ್ಪರರಾಗುವಿರಿ. ಸಂಸಾರದಲ್ಲಿ ಸಂತೃಪ್ತಿ.

ಕುಂಭ: ಮಹಿಳಾ ಉದ್ಯೋಗಿಗಳಿಗೆ ಪದೋನ್ನತಿ ಅಥವಾ ಉದ್ಯೋಗದಲ್ಲಿ ಬದಲಾವಣೆ. ವಿವಾಹ ಮಾತುಕತೆ ನಡೆಸುವ ಸಾಧ್ಯತೆ. ವಿಷಯಾಸಕ್ತಿಯಿಂದಾಗಿ ನೆಮ್ಮದಿ ಭಂಗ. ಅಮೂಲ್ಯ ವಸ್ತುಗಳು ಪ್ರಾಪ್ತವಾಗುವ ಸಾಧ್ಯತೆ.

ಮೀನ: ಉನ್ನತ ವ್ಯಾಸಂಗದಲ್ಲಿರುವ ವಿದ್ಯಾರ್ಥಿಗಳಿಗೆ ದುಗುಡದ ಸಾಧ್ಯತೆ. ಮನೆಯಲ್ಲಿ ಸಂತೋಷದ ವಾತಾವರಣ. ಪ್ರೇಮಿಗಳಿಗೆ ಸುದಿನ. ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಸಾಧ್ಯತೆ.

ನಿಮ್ಮ ಜನ್ಮದಿನ 9-ಜೂನ್ ಈ ದಿನ ಅತ್ಯಂತ ಶುಭಕರ. ತರಕಾರಿ, ಹಣ್ಣು ವ್ಯಾಪಾರದಲ್ಲಿ ತೊಡಗಿರುವವರಿಗೆ ಕ್ಲಿಷ್ಟಕರ ಪರಿಸ್ಥಿತಿ ಎದುರಾಗುವ ಸಾಧ್ಯತೆ. ಇತರರ ಪ್ರಭಾವದಿಂದಾಗಿ ನೀವು ನಿಮ್ಮತನವನ್ನು ಕಳೆದುಕೊಳ್ಳುವ ಸಾಧ್ಯತೆ. ಸರ್ಕಾರದ ನೀತಿಯಿಂದಾಗಿ ಉದ್ಯೋಗಿಗಳಿಗೆ ಇಕ್ಕಟ್ಟಿನ ಪ್ರಸಂಗಗಳು ಎದುರಾಗಲಿವೆ.

ಪದಬಂಧ 4622
– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಯಾಗದಲ್ಲಿ ಬಲಿ ಕೊಡುವ ಪ್ರಾಣಿ (4)
3.ಹಿಂದೂ ಸಂವತ್ಸರದಲ್ಲಿ ಮೊದಲನೆಯದು (3)
4.ಬಾಯಿಯ ಮೂಲೆ (4)
6.ಅನಿರೀಕ್ಷಿತ ಘಟನೆ (4)
7.ಸಮಾಧಾನವು ಉಲ್ಟಾ ಆಗಿಬಿಟ್ಟಿದೆಯಲ್ಲಾ? (3)
8.ಪಟದಲ್ಲಿನ ದಾರ ಉಲ್ಟಾ ಇದ್ದರೆ ಈ ಪೇಚಾಟ! (4)
11.ಗಟ್ಟಿಗಿತ್ತಿಯು ಗಣಿಯೊಳಗಿದ್ದಾಳಲ್ಲಾ? (4)
13.ಯಂತ್ರಗಳ ಕಾರ್ಯಾಗಾರ (3)
14.ಕೊನೆಗೆ ಭಾರವುಳ್ಳ ದೌತ್ಯ! (4)

ಮೇಲಿಂದ ಕೆಳಕ್ಕೆ
1.ವನಿತೆ ಸರಿಸಿದ ಪರದೆ! (4)
2.ಶುನಕದ ಹತ್ತಿರವಿರುವ ಗಿಣಿ (2)
3.ಪ್ರಕ್ಷುಬ್ಧ ಸ್ಥಿತಿ (3)
5.ಕೊಪ್ಪರಿಗೆಯು ಉಲ್ಟಾ ಆಗಿದೆಯಲ್ಲಾ? (3)
6.ಆ ಮನೆ ಮುಂದಿರುವ ಗಜ (2)
7.ದಿಟ್ಟತನದಿಂದ ನುಡಿದ ಸತ್ಯ (2)
8.ಉತ್ತರದವರ ಮಂಚ (3)
9.ಪ್ರತಿಫಲಾಕ್ಷೆ ಇಲ್ಲದೆ ಮಾಡಿದ ಸಹಾಯ (4)
10.ರತಿಪತಿಯಿಂದ ಮೂಡಿದ ಆಸೆ (3)
12.ರಾಜನ ಹೆಂಡತಿಯಿಲ್ಲಿ ತಿರುಗಿದ್ದಾಳೆ (2)



4621ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಸವಿನೋಟ 3.ಶಿಲುಬೆ 5.ತಿರುಕ 7.ಒಯ್ಯಾರ 8.ಸಮೂಹಗಾನ 11.ಗಲಾಟೆ 12.ನಡುಕ 15.ಚರಪು 16.ಕೆನೆಹಾಲು

ಮೇಲಿಂದ ಕೆಳಕ್ಕೆ: 1.ಸಮ್ಮತಿ 2.ಟಕ್ಕ 3.ಶಿಶಿರ 4.ಬೆಣ್ಣೆಮಾತು 6.ಕಳಸ 7.ಒಣಹರಟೆ 9.ನವೀನ 10.ಪರಪಂಚ 11.ಗಲ್ಲಿಂಪು 13.ಕನಲು 14.ಶಕೆ

ಸುಡೊಕು 5008

			8		1	9		
	8						3	1
3		1	2		9		5	6
	1	7			8	3		
				2			8	4
8		3	9				6	
1			7		2	4		3
		8		4			1	
	3		1		5			8

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5007 ಸುಡೊಕು

4	9	6	3	7	8	5	2	1
8	5	3	2	1	9	4	7	6
1	7	2	4	6	5	3	9	8
6	1	9	7	2	3	8	4	5
2	8	7	5	4	6	9	1	3
3	4	5	8	9	1	2	6	7
5	6	4	9	3	7	1	8	2
7	2	8	1	5	4	6	3	9
9	3	1	6	8	2	7	5	4

ಕೋವಿಡ್ ವಿರುದ್ಧದ ಹೋರಾಟದ ಮುಂಚೂಣಿ ಕಾರ್ಯಕರ್ತರಿಗೆ ಯಡಿಯೂರಪ್ಪ ಶ್ಲಾಘನೆ

ಆಶಾ ಕಾರ್ಯಕರ್ತೆಯರ ಜತೆ ಬಿಎಸ್‌ವೈ ಸಂವಾದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ವಿವಿಧ ಜಿಲ್ಲೆಗಳ ಆಯ್ದ ಆಶಾ ಕಾರ್ಯಕರ್ತೆಯರ ಜತೆ ಮಂಗಳವಾರ ವಿಡಿಯೊ ಸಂವಾದ ನಡೆಸಿದ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಕೋವಿಡ್ ವಿರುದ್ಧದ ಹೋರಾಟದ ಮುಂಚೂಣಿಯಲ್ಲಿ ಇರುವವರ ಶ್ರಮ ಹಾಗೂ ತ್ಯಾಗವನ್ನು ಶ್ಲಾಘಿಸಿದರು.

'ಕೋವಿಡ್ ನಿಯಂತ್ರಣದಲ್ಲಿ ಆಶಾ ಕಾರ್ಯಕರ್ತೆಯರು ಗಣನೀಯ ಕೆಲಸ ಮಾಡಿದ್ದಾರೆ. ಅಪಾಯಕಾರಿ ಸನ್ನಿವೇಶದಲ್ಲೂ ಪರಿಶ್ರಮದಿಂದ ಕಾರ್ಯನಿರ್ವಹಿಸಿರುವ ಅವರಿಗೆ ರಾಜ್ಯ ಸರ್ಕಾರ ತಲಾ ₹ 3,000 ಸಹಾಯಧನ ನೀಡುತ್ತಿದೆ. ಕೋವಿಡ್ ಲಸಿಕೆ ಪಡೆಯುವಂತೆ ಎಲ್ಲರನ್ನೂ ಮನವೊಲಿಸುವ ಮೂಲಕ ಈ ಹೋರಾಟವನ್ನು ಯಶಸ್ವಿಗೊಳಿಸಬೇಕು' ಎಂದು ಮುಖ್ಯಮಂತ್ರಿ ಮನವಿ ಮಾಡಿದರು.

ಕೋವಿಡ್ ಪರೀಕ್ಷೆ ಮಾಡಿಸಿಕೊಳ್ಳಲು ಮತ್ತು ಲಸಿಕೆ ಹಾಕಿಸಿಕೊಳ್ಳಲು ಜನರು ಭಯದಿಂದ ಹಿಂಜರಿಯುತ್ತಿದ್ದುದು, ಆರೈಕೆ ಕೇಂದ್ರಗಳಿಗೆ ದಾಖಲಾಗಲು ಸೋಂಕಿತರು ಹಿಂದೇಟು ಹಾಕುತ್ತಿದ್ದಾರೆ. ಅವರ ಮನವೊಲಿಸುವಾಗ ಹಾಗೂ ಲಸಿಕಾ ಕೇಂದ್ರಗಳಿಗೆ ಜನರನ್ನು ಕರೆದೊಯ್ಯುವಾಗ ಎದುರಿಸಿದ ಸಮಸ್ಯೆಗಳು ಸೇರಿದಂತೆ ವಿವಿಧ ವಿಚಾರಗಳ ಕುರಿತು ಆಶಾ ಕಾರ್ಯಕರ್ತೆಯರು ಯಡಿಯೂರಪ್ಪ ಅವರೊಂದಿಗೆ ಮಾಹಿತಿ ಹಂಚಿಕೊಂಡರು.

ಮುಖ್ಯಮಂತ್ರಿ ಬಿ.ಎಸ್‌.ಯಡಿಯೂರಪ್ಪ ಮಂಗಳವಾರ ರಾಜ್ಯದ ವಿವಿಧ ಜಿಲ್ಲೆಗಳ ಆಶಾ ಕಾರ್ಯಕರ್ತೆಯರೊಂದಿಗೆ ವೀಡಿಯೋ ಸಂವಾದ ನಡೆಸಿದರು.

ಬೆಳಗಾವಿ ಜಿಲ್ಲೆ ಸುರೇಬಾನ ಗ್ರಾಮದ ಶಾರದಾ ಅವರು ತಮ್ಮ ವ್ಯಾಪ್ತಿಯ ಬಡ ರೋಗಿಗಳ ಚಿಕಿತ್ಸೆಗೆ ದಾನಿಗಳಿಂದ ನೆರವು ಕೊಡಿಸುವ ಪ್ರಯತ್ನ ಮಾಡುತ್ತಿರುವುದನ್ನು ಯಡಿಯೂರಪ್ಪ ಶ್ಲಾಘಿಸಿದರು. ಕೋವಿಡ್‌ಗೆ ಚಿಕಿತ್ಸೆ ಪಡೆಯುತ್ತಿರುವ ಶಿವಮೊಗ್ಗ ಜಿಲ್ಲೆಯ ಹೊಸನಗರ ತಾಲ್ಲೂಕಿನ ಮುಂಬಾರು ಗ್ರಾಮದ ಶಾರದಾ ಕೆ.ವಿ., ಆಸ್ಪತ್ರೆಯಿಂದಲೇ ವಿಡಿಯೊ ಸಂವಾದದಲ್ಲಿ ಪಾಲ್ಗೊಂಡಿದ್ದರು. ಜನರು ಕೋವಿಡ್ ಲಸಿಕೆ ಕುರಿತು ಅನುಮಾನ ವ್ಯಕ್ತಪಡಿಸುತ್ತಿದ್ದಾಗ ಅವರಲ್ಲಿ ವಿಶ್ವಾಸ ಮೂಡಿಸುವುದಕ್ಕಾಗಿ ತಮ್ಮ ಪತಿಗೆ ಮೊದಲಿಗೆ ಲಸಿಕೆ ಕೊಡಿಸಿದ್ದ ವಿಷಯವನ್ನು ರಾಮನಗರದ ಶಿವಲಿಂಗಮ್ಮ ತಿಳಿಸಿದರು.

ತಮ್ಮ ಗ್ರಾಮದಲ್ಲಿ 60 ವರ್ಷಕ್ಕಿಂತ ಹೆಚ್ಚಿನ ವಯಸ್ಸಿನ 120 ಜನರಲ್ಲಿ 115 ಮಂದಿಗೆ ಲಸಿಕೆ ಹಾಕಿಸಿರುವುದಾಗಿ ಕೊಪ್ಪಳ ಜಿಲ್ಲೆ ನವಲಿ ಗ್ರಾಮದ ಲಕ್ಷ್ಮವ್ವ ನಾಯಕ್ ಮಾಹಿತಿ ನೀಡಿದರು.

ಧಾರವಾಡ ಜಿಲ್ಲೆ ಅಮ್ಮಿನಭಾವಿಯ ಪ್ರೇಮಾ ಪ್ರಕಾಶ್ ಕಬ್ಬೂರು, ದಕ್ಷಿಣ ಕನ್ನಡ ಜಿಲ್ಲೆ ಸುಳ್ಯೇರಿಯ ಹೇಮಲತಾ, ವಿಜಯಪುರ ಜಿಲ್ಲೆ ಕಂಬಾಗಿಯ ದೀಪಾ ಬಜ್ಜನವರ್, ಬೆಂಗಳೂರು ನಗರ ಜಿಲ್ಲೆ ಸಬ್ಬಮಂಗಲದ ರತ್ನಮ್ಮ, ಬಳ್ಳಾರಿ ಜಿಲ್ಲೆ ದಬ್ಬೂರಿನ ಪರಿಮಳಾ, ರಾಯಚೂರು ಜಿಲ್ಲೆ ಗಣಮೂರಿನ ಇಂದಿರಾ ಸಂವಾದದಲ್ಲಿ ಪಾಲ್ಗೊಂಡಿದ್ದರು.

ಆರೋಗ್ಯ ಸಚಿವ ಡಾ.ಕೆ. ಸುಧಾಕರ್, ಮುಖ್ಯಮಂತ್ರಿ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಡಾ. ಇ.ವಿ. ರಮಣರೆಡ್ಡಿ, ಮುಖ್ಯಮಂತ್ರಿ ಕಾರ್ಯದರ್ಶಿ ಡಾ. ಎಸ್. ಸೆಲ್ವಕುಮಾರ್, ಆರೋಗ್ಯ ಇಲಾಖೆಯ ಆಯುಕ್ತ ಡಾ.ಕೆ.ವಿ. ತ್ರಿಲೋಕಚಂದ್ರ ಹಾಜರಿದ್ದರು.

ಪ್ರಜಾವಾಣಿ DH DECCAN HERALD
ಕೋವಿಡ್ ಪರಿಹಾರ ನಿಧಿ

ಆಸ್ಪತ್ರೆಗಳ ಮುಂದೆ ಏದುಸಿರು ಬಿಡುವ ರೋಗಿಗಳನ್ನು ಹೊತ್ತುನಿಂತ ಆಂಬುಲೆನ್ಸ್‌ಗಳು, ಆಪ್ತರ ಜೀವ ಉಳಿಸಲು ಪ್ರಾಣವಾಯುವಿಗಾಗಿ ಅಂಗಲಾಚುವವರು, ಚಿತಾಗಾರಗಳ ಮುಂದೆ ಸಾಲು ಸಾಲು ಮೃತದೇಹಗಳು... ರಾಜ್ಯದಲ್ಲಿ ಕಳೆದ ಕೆಲವು ವಾರಗಳಿಂದ ಇಂತಹದ್ದೇ ಹೃದಯವಿದ್ರಾವಕ ನೋಟಗಳು. ಕೋವಿಡ್–19 ಕಾಣಿಸಿಕೊಂಡ ದಿನದಿಂದ ಇಲ್ಲಿಯವರೆಗೂ 27 ಲಕ್ಷಕ್ಕೂ ಅಧಿಕ ಜನ ಕಾಯಿಲೆಪೀಡಿತರಾಗಿದ್ದು, 32 ಸಾವಿರಕ್ಕೂ ಅಧಿಕ ಜನ ಮೃತಪಟ್ಟಿದ್ದಾರೆ. ಈ ಅಂಕಿ–ಸಂಖ್ಯೆಗಳು ಅಧಿಕೃತ ಮಾಹಿತಿಯಷ್ಟೆ. ನೈಜ ಚಿತ್ರಣ ಇನ್ನೂ ಕರಾಳವಾಗಿದೆ. ಎರಡನೇ ಅಲೆ ಪ್ರಾರಂಭವಾಗಿ ಈಗಾಗಲೇ ಎರಡು ತಿಂಗಳಿಗೂ ಅಧಿಕ ಸಮಯ ಕಳೆದಿದೆ.

ಇಂತಹ ಸನ್ನಿವೇಶದಲ್ಲಿ, ಕೋವಿಡ್ ಪರಿಹಾರ ಕಾರ್ಯದಲ್ಲಿ ತೊಡಗಿಸಿಕೊಂಡಿರುವ ಸ್ವಯಂಸೇವಾ ಸಂಸ್ಥೆಗಳಿಗೆ 'ಡೆಕ್ಕನ್ ಹೆರಾಲ್ಡ್' ಹಾಗೂ 'ಪ್ರಜಾವಾಣಿ' ಪತ್ರಿಕೆಗಳು ಬೆಂಬಲ ನೀಡಲು ನಿರ್ಧರಿಸಿವೆ. ನೀವು ನೀಡುವ ದೇಣಿಗೆಯ ಪ್ರತೀ ಪೈಸೆಯೂ ಸಂಕಷ್ಟಕ್ಕೆ ಒಳಗಾಗಿರುವ ಅರ್ಹ ಫಲಾನುಭವಿಗೆ ನೇರವಾಗಿ ಸೇರಿ, ಅವರ ಕಣ್ಣೀರು ಒರೆಸಲು ನೆರವಾಗಲಿದೆ.

₹ 1000 ಮತ್ತು ಅದಕ್ಕಿಂತ ಹೆಚ್ಚಿನ ದೇಣಿಗೆ ನೀಡಿದವರ ಹೆಸರನ್ನು ಪತ್ರಿಕೆಯಲ್ಲಿ ಪ್ರಕಟಸಲಾಗುವುದು. ಈ ದೇಣಿಗೆಗೆ 80ಜಿ ಅನ್ವಯ ಆದಾಯ ತೆರಿಗೆಯಲ್ಲಿ ವಿನಾಯಿತಿ ಸಿಗಲಿದೆ.

ಹೀಗಾಗಿ, ನಿಮ್ಮ ಕೈಲಾದ ದೇಣಿಗೆಯನ್ನು (ಅದರ ಪ್ರಮಾಣ ಎಷ್ಟೇ ಇರಲಿ) ನೀಡಿ ಸಂಕಷ್ಟದಲ್ಲಿ ಸಿಲುಕಿದವರ ಬೆಂಬಲಕ್ಕೆ ನಿಲ್ಲುವ ಮಾನವೀಯ ಕಾರ್ಯದಲ್ಲಿ ಕೈಜೋಡಿಸುವಂತೆ ಕೋರುತ್ತೇವೆ.

ಆನ್‌ಲೈನ್ ಹಣ ವರ್ಗಾವಣೆ ಮೂಲಕ ಡೆಕ್ಕನ್ ಹೆರಾಲ್ಡ್–ಪ್ರಜಾವಾಣಿ ಪರಿಹಾರ ನಿಧಿ ಟ್ರಸ್ಟ್‌ಗೆ ದೇಣಿಗೆ ನೀಡಬಹುದು:
**(Canara Bank, Cantonment Branch;
A/C NO.0404101200385, IFSC CODE : CNRB0000404)**

ಡೆಬಿಟ್/ಕ್ರೆಡಿಟ್ ಕಾರ್ಡ್, ಯುಪಿಐ, ಇ-ವ್ಯಾಲೆಟ್ ಅಥವಾ ನೆಟ್‌ಬ್ಯಾಂಕಿಂಗ್ ಮೂಲಕ ಪಾವತಿಸುವವರು QR ಕೋಡ್ ಸ್ಕ್ಯಾನ್ ಮಾಡಿ ಅಥವಾ ಈ ಕೆಳಗಿನ ಲಿಂಕ್‌ಗೆ ಭೇಟಿ ಮಾಡಿ: **https://bit.ly/3iaryCA**

ದೇಣಿಗೆದಾರರು ತಾವು ನೀಡಿದ ದೇಣಿಗೆ ವಿವರದ ಜತೆಗೆ ಹೆಸರು, ವಿಳಾಸ ಹಾಗೂ ಸಂಪರ್ಕ ಸಂಖ್ಯೆಯನ್ನು dept.finc@printersmysore.co.in ಈ ಇ-ಮೇಲ್‌ಗೆ ಕಳುಹಿಸಲು ವಿನಂತಿ. ಇದರಿಂದ ದೇಣಿಗೆದಾರರಿಗೆ ರಸೀದಿ ಕಳಿಸಲು ಅನುಕೂಲವಾಗುತ್ತದೆ.

ದೇಣಿಗೆ ಕೊಟ್ಟವರ ವಿವರ

ಸಂ	ಹೆಸರು, ವಿಳಾಸ	ದೇಣಿಗೆ ₹ಗಳಲ್ಲಿ
1.	**ಡಾ.ಬಿ.ಯಲ್ಲಪ್ಪ,** ಶ್ರೀರಾಮ್ ಸಮೀಕ್ಷಾ ಅಪಾರ್ಟ್‌ಮೆಂಟ್ಸ್, ಟಿ–8, 1ನೇ ಮಹಡಿ, 107/8, ಕೆವಿಪಿ ನಗರ, ಜಾಲಹಳ್ಳಿ ಪೂರ್ವ, ಬೆಂಗಳೂರು	20,000
2.	**ಅರುಣ್ ತ್ಯಾಗರಾಜನ್,** 102, ಪ್ರೆಸ್ಟೀಜ್ ಆ್ಯಶ್‌ಕ್ರಾಫ್ಟ್, ಲ್ಯಾವೆಲ್ಲೆ ರಸ್ತೆ, 6ನೇ ಕ್ರಾಸ್, ಬೆಂಗಳೂರು	20,000
3.	**ಲೀಲಾವತಿ ಜಿ.ಎಸ್.,** 1307/2, 7ನೇ ಮೇನ್ 12ನೇ ಕ್ರಾಸ್, ವೆಸ್ಟ್ ಆಫ್ ಕಾರ್ಡ್ ರಸ್ತೆ, ಎರಡನೇ ಹಂತ, ಮಹಾಲಕ್ಷ್ಮಿಪುರಂ, ಬೆಂಗಳೂರು	15,000
4.	**ಜಯಶ್ರೀ ತ್ಯಾಗರಾಜನ್,** 102, ಪ್ರೆಸ್ಟೀಜ್ ಆ್ಯಶ್‌ಕ್ರಾಫ್ಟ್, ಲ್ಯಾವೆಲ್ಲೆ ರಸ್ತೆ, 6ನೇ ಕ್ರಾಸ್, ಬೆಂಗಳೂರು	10,000
5.	**ಸೋಮಿರ್ ಕುಮಾರ್ ಮುಖರ್ಜಿ,** ಸಲಾರ್‌ಪುರಿಯಾ ಪ್ಯಾರಡೈಸ್, ನಂ. 31, ಅಗಾ ಅಬ್ಬಾಸ್ ಅಲಿ ರಸ್ತೆ, ಹಲಸೂರು ಕೆರೆ, ಬೆಂಗಳೂರು	10,000
6.	**ಜರ್ನಾ ಮುಖರ್ಜಿ,** ಸಲಾರ್‌ಪುರಿಯಾ ಪ್ಯಾರಡೈಸ್, ನಂ.31, ಅಗಾ ಅಬ್ಬಾಸ್ ಅಲಿ ರಸ್ತೆ, ಹಲಸೂರು ಕೆರೆ, ಬೆಂಗಳೂರು	10,000
7.	**ರೇವತಿ ಪಿ.ಜಿ.,** ನಂ. 109, ಫ್ಲ್ಯಾಟ್ ನಂ.4, ಕಾವೇರಿ ನಗರ ಎಕ್ಸ್‌ಟೆನ್ಷನ್, ಬೆಮೆಲ್ ನಗರ, ಕೆಜಿಎಫ್	10,000
8.	**ಕೆ. ಧ್ರುವ,** 20/2, ಕೇಶವ ಕೃಪಾ, ವಿನಾಯಕ ಲೇಔಟ್, 8ನೇ ಮೇನ್, ಮಲ್ಲೇಶ್ವರಂ, ಬೆಂಗಳೂರು	10,000
9.	**ಡಾ.ಎಂ.ಆರ್. ಗುರುರಾಜ ರಾವ್,** ನಂ. 155, 2ನೇ ಕ್ರಾಸ್, ಆರ್‌ಎಂವಿ ಎರಡನೇ ಹಂತ, ಸಂಜಯನಗರ, ಬೆಂಗಳೂರು	10,000
10.	**ಡಾ. ಸಾರಮ್ಮ ಜೀವ ಬಿಜು ಕರಿಯನ್,** ನಂ. 13, ದರ್ಶನ, 2ನೇ ಕ್ರಾಸ್, ಅಂಜನಪ್ಪ ಲೇಔಟ್, ಹೊರಮಾವು ಮುಖ್ಯರಸ್ತೆ, ಬಾಣಸವಾಡಿ, ಬೆಂಗಳೂರು	5,000
11.	**ಎನ್. ಶೈಲಜಾ,** ನಂ. 301, ಹೂಮಳೆ ಅಪಾರ್ಟ್‌ಮೆಂಟ್, ಬೇಗೂರು, ಅಕ್ಷಯನಗರ, ಬೆಂಗಳೂರು	5,000
12.	**ಲೆಫ್ಟಿನೆಂಟ್ ಕರ್ನಲ್ ತಾ. ಶ್ರೀನಿವಾಸ್,** ಎಫ್–2 ಬಿ, ಮೊದಲನೇ ಮಹಡಿ, ಓಸ್ಬೋರ್ನ್ ಆರ್ಕಿಡ್ಸ್ ಅಪಾರ್ಟ್‌ಮೆಂಟ್ಸ್ 7, ಓಸ್ಬೋರ್ನ್ ರಸ್ತೆ, ಎಸ್‌ಸಿ ಗಾರ್ಡನ್ಸ್, ಬೆಂಗಳೂರು	5,000
13.	**ಶೋಭಾ ಶರ್ಮಾ,** ಬಿ–1008, ಕ್ಯಾರಿನಾಟಾ, ಬ್ರಿಗೇಡ್ ಗಾರ್ಡೇನಿಯಾ, 9ನೇ ಕ್ರಾಸ್, ಜೆ.ಪಿ. ನಗರ, 7ನೇ ಹಂತ, ಬೆಂಗಳೂರು	5,000
14.	**ಎ.ಐ. ಭುವನೇಶ್ವರಿ,** ಫ್ಲ್ಯಾಟ್ ನಂ. 206, ಅಶೋಕ ಪ್ಯಾರಡೈಸ್, ಹೊಗೆಬೈಲ್, ಮಂಗಳೂರು	2,001
15.	**ಕರ್ನಲ್ ರವಿರಾಜ್ ಪಾಟೀಲ್,** ಬೆಂಗಳೂರು	2,000
16.	**ಗುಂಡೂರಾವ್ ಎಚ್.ಎನ್.** 49, ಸೌಪರ್ಣಿಕಾ, 2ನೇ ಕ್ರಾಸ್, ವಿಜಯಶ್ರೀ ಲೇಔಟ್, ಮೈಲಸಂದ್ರ, ಬೆಂಗಳೂರು	2,000
17.	**ರಾಮಮೂರ್ತಿ,** ನಂ.58/3, ಲಕ್ಷ್ಮಿದೇವಮ್ಮ ನಿಲಯ, 3ನೇ ಕ್ರಾಸ್, ಮಲ್ಲತ್ತಹಳ್ಳಿ, ಬೆಂಗಳೂರು	2,000
18.	**ಕೆ.ಎನ್.ಚನ್ನಿಗರಾಜು**, ನಂ.30/62 ಮಲ್ಲೇಶ್ವರ ಎಕ್ಸ್‌ಟೆನ್ಷನ್, ಐಜೂರು, ರಾಮನಗರ	1.503
19.	**ಜಿ.ರಾಮಪ್ಪ, ಚೀಲೂರು ಕಡದಕಟ್ಟೆ** ಹೊನ್ನಾಳಿ ತಾಲ್ಲೂಕು, ದಾವಣಗೆರೆ	1,125
20.	**ಪ್ರಭಾವತಿ ಶಿವಕುಮಾರ ಕಬಡಗಿ,** ಕಬಡಗಿ ಬಿ-54, ಇಂಡಲ ನಗರ, ಸಿಂದೊಳ್ಳಿ, ಬೆಳಗಾವಿ	1.111
21.	**ಡಾ.ಬಿ.ಎಂ.ಬೇವಿನಮರದ,** ಹಾನಗಲ್	1,105
22.	**ಗೀತಾ ಗೀತಾಬಾಯಿ,** ಬೆಂಗಳೂರು	1,010
23.	**ಬಾಲರಾಜು ಜಿ.** ನಂ. 110, 4ನೇ ಕ್ರಾಸ್, ಆರ್.ಕೆ. ಲೇಔಟ್, ಪದ್ಮನಾಭನಗರ, ಬೆಂಗಳೂರು	1,001
24.	**ಗೌಡ ಬಿ.ಎನ್,** ನಂ. 82, 4ನೇ ಮುಖ್ಯ, 4ನೇ ಕ್ರಾಸ್, ವಿದ್ಯಾಪೀಠದ ಹಿಂಭಾಗ, ಬನಶಂಕರಿ 3ನೇ ಹಂತ, ಗುರುರಾಜ ಲೇಔಟ್, ಬೆಂಗಳೂರು	1,000
25.	**ಎಂ.ಚಿತ್ರಾ,** ಫ್ಲ್ಯಾಟ್ ನಂ.003, ನೆಲ ಮಹಡಿ, ಆದಿತ್ಯ ಹಾರ್ಮನಿ ಅಪಾರ್ಟ್‌ಮೆಂಟ್ಸ್, 15ನೇ ಕ್ರಾಸ್, ವಕೀಲ್ ಗಾರ್ಡನ್ ಸಿಟಿ, ತಲಘಟ್ಟಪುರ, ಕನಕಪುರ ಮುಖ್ಯರಸ್ತೆ, ಬೆಂಗಳೂರು	1.000
26.	**ಸ್ವಾಮಿ ಸಿ.ಕೆ.,** ಫ್ಲ್ಯಾಟ್ ನಂ. ಎಸ್ -1, ಅರಿಹಂತ್ ಹೋಮ್ಸ್, 9ನೇ ಕ್ರಾಸ್, ಗುಲ್‌ಮೊಹರ್ ಕಾಲೋನಿ, ಭಾಗ್ಯನಗರ, ಬೆಳಗಾವಿ	1,000
27.	**ಶಶಾಂಕರ್ ಎಸ್,** 3ನೇ ಕ್ರಾಸ್, ಮಾನಸನಗರ, ನಾಗರಬಾವಿ, ಬೆಂಗಳೂರು	1,000
28.	**ಜಿ.ಜ್ವಾಲೇಶ್ ಕುಮಾರ್,** ನಂ. 172/10, 3ನೇ ರಸ್ತೆ ಎ ಕ್ರಾಸ್, ಕತ್ರಿಗುಪ್ಪೆ ಮುಖ್ಯರಸ್ತೆ, ವಿವೇಕಾನಂದ ನಗರ, ಬೆಂಗಳೂರು	1,000
29.	**ಸವಿತಾ ಆರ್. ಸುರೇಂದ್ರ,** ಬೆಂಗಳೂರು	1,000
30.	**ಮಲ್ಲಿಕಾರ್ಜುನ ಪ್ರಭಾ,** 8/9/818/1, ಹಳೆ ಬಸ್‌ನಿಲ್ದಾಣದ ಹಿಂದೆ, ನ್ಯೂಹೌಸಿಂಗ್ ಕಾಲೊನಿ, ಬೀದರ್	1,000
	ಇದುವರೆಗೆ ಸಂಗ್ರಹವಾದ ಒಟ್ಟು ಮೊತ್ತ:	1,00,80,000

ಪ್ರಜಾವಾಣಿ
ಗ್ರೀನ್ ಟಾಕ್ | ಪ್ರಕೃತಿ ಮಡಿಲ ಮಾತು

ಜನ್ಮದಿನ ಇಲ್ಲಿ ನಿತ್ಯ ನೂತನ
ಒಂದು ದಿನವಲ್ಲ, ವರ್ಷದ ಪ್ರತಿ ದಿನವೂ ಇಲ್ಲಿ ಜನ್ಮದಿನ.. ಆದರೆ, ಇದು ಮನುಷ್ಯರದಲ್ಲ, ಪ್ರಾಣಿಗಳದ್ದೂ ಅಲ್ಲ. ಇದಕ್ಕೆ ಕಾರಣ ಯುವ ಸಂಚಲನ...
https://bit.ly/34WD6BH

45 ವರ್ಷ ದಾಟಿದ ಶೇ 13 ಜನರಿಗಷ್ಟೇ ಲಸಿಕೆ

ಒಂದನೇ ಪುಟದಿಂದ

'18ರಿಂದ 44 ವಯೋಮಾನದವರಿಗೆ ಕೇಂದ್ರ ಸರ್ಕಾರವೇ ಲಸಿಕೆ ಪೂರೈಸಲಿದೆ ಎಂದು ಪ್ರಧಾನಿ ಘೋಷಿಸಿದ್ದಾರೆ. ಈ ಉದ್ದೇಶಕ್ಕೆ ಈಗಾಗಲೇ 3 ಕೋಟಿ ಲಸಿಕೆ ಉತ್ಪಾದಕ ಕಂಪನಿಗಳಿಂದ ನೇರವಾಗಿ ಖರೀದಿಸಲು ಸರ್ಕಾರ ಆದೇಶ ನೀಡಿದ್ದು, ಸ್ವಲ್ಪ ಹಣ ಪಾವತಿಸಲಾಗಿದೆ. ಈ ಆದೇಶವನ್ನು ಮರು ಪರಿಶೀಲಿಸಲಾಗುತ್ತಿದೆ' ಎಂದು ಇಲಾಖೆಯ ಅಧಿಕಾರಿಯೊಬ್ಬರು ತಿಳಿಸಿದರು.

ರಾಜ್ಯದಲ್ಲಿ ಲಸಿಕೆ ಅಭಿಯಾನ (ಜೂನ್ 7 ಬೆಳಿಗ್ಗೆ 9 ಗಂಟೆವರೆಗೆ)

ವರ್ಗ	ಒಟ್ಟು ಸಂಖ್ಯೆ	ಎರಡೂ ಡೋಸ್	ಶೇ
ಆರೋಗ್ಯ ಕಾರ್ಯಕರ್ತರು	8,98,458	4,75,719	53
ಮುಂಚೂಣಿ ಕಾರ್ಯಕರ್ತರು	7,61,088	2,18,371	29
45 ದಾಟಿದವರು	1,71,18,336	21,72,363	13
18ರಿಂದ 44	3,26,75,660	20,20,645*	6.2

* ಮೊದಲ ಡೋಸ್ ಪಡೆದವರು

'ಸೋಂಕಿತರು ಸಾಕು ಪ್ರಾಣಿಗಳಿಂದ ದೂರ ಇರಿ'

ಒಂದನೇ ಪುಟದಿಂದ

ಸಾಕು ಪ್ರಾಣಿಗಳಿಗೆ ಲಸಿಕೆ ಹಾಕಿಸಿದ್ದರೂ, ಕೋವಿಡ್ ವ್ಯಕ್ತಿಯ ಸಂಪರ್ಕಕ್ಕೆ ಬಂದರೆ ಅವುಗಳ ಮೇಲೆ 10 ದಿನಗಳ ಕಾಲ ನಿಗಾ ಇಡುವುದು ಸೂಕ್ತ. ಒಂದು ವೇಳೆ ನಾಯಿ ಮತ್ತು ಇತರ ಪ್ರಾಣಿಗಳು ಆರೋಗ್ಯಯುತವಾಗಿ ಕಂಡರೂ, ಅವುಗಳು ಕಚ್ಚಿದರೆ, ತಕ್ಷಣವೇ ಪಿಇಪಿ ತೆಗೆದುಕೊಳ್ಳಬೇಕು ಎಂದೂ ಅವರು ಹೇಳಿದರು.

ಕೋವಿಡ್ ಲಸಿಕೆ ಮತ್ತು ಪಿಇಪಿ ಎರಡೂ ಜೀವ ರಕ್ಷಕ ಲಸಿಕೆಗಳು, ಅನಿವಾರ್ಯ ಎನಿಸಿದರೆ ಎರಡನ್ನೂ ಒಂದೇ ದಿನ ತೆಗೆದುಕೊಳ್ಳಬಹುದಾಗಿದೆ. ಲಸಿಕೆಗಳನ್ನು ಬೇರೆ ಬೇರೆ ಸ್ಥಳಗಳಲ್ಲಿ ತೆಗೆದುಕೊಳ್ಳಬೇಕಾಗುತ್ತದೆ ಎಂದು ಅಶ್ವತ್ಥನಾರಾಯಣ ವಿವರಿಸಿದರು. ಪ್ರಾಣಿಗಳ ಕಡಿತಕ್ಕೆ ಒಳಗಾದ ವ್ಯಕ್ತಿ, ಕೋವಿಡ್ ಲಸಿಕೆ ತೆಗೆದುಕೊಂಡ ಕೈಗೆ ಪಿಇಪಿ ಲಸಿಕೆ ತೆಗೆದುಕೊಳ್ಳಬಾರದು. ಮತ್ತೊಂದು ಕೈಗೆ ತೆಗೆದುಕೊಳ್ಳಬೇಕು. ಒಂದು ವೇಳೆ ಕೋವಿಡ್ ಮೊದಲ ಡೋಸ್ ತೆಗೆದುಕೊಂಡ ನಂತರ ಪ್ರಾಣಿಗಳ ಕಡಿತಕ್ಕೆ ಒಳಗಾದರೆ, ರೇಬೀಸ್ ಲಸಿಕೆ ಪಡೆದ ಒಂದೆರಡು ವಾರಗಳ ಬಳಿಕ ಲಸಿಕೆ ತೆಗೆದುಕೊಳ್ಳಬಹುದು. ಅಲ್ಲಿಯವರೆಗೆ ಕೋವಿಡ್ ನಿಯಮಾವಳಿಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು ಎಂದು ಅವರು ವಿವರಿಸಿದ್ದಾರೆ.

ಪ್ರಜಾವಾಣಿ LIVE
Prajavani.net Prajavani Prajavani
ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರ ಪ್ರಸಾರ
ಪ್ರವಾಸೋದ್ಯಮ ಮತ್ತು ಹೋಟೆಲ್ ಉದ್ಯಮ: ಪುನಶ್ಚೇತನ ಹೇಗೆ?
ಸಂವಾದ
ಸಂವಾದದಲ್ಲಿ ಭಾಗವಹಿಸುವವರು

ಐ.ಎಂ.ವಿಠ್ಠಲಮೂರ್ತಿ
ಐಎಎಸ್ (ನಿವೃತ್ತ) ಮಾಜಿ ಪ್ರಧಾನ ಕಾರ್ಯದರ್ಶಿ, ಪ್ರವಾಸೋದ್ಯಮ ಇಲಾಖೆ

ಎಸ್.ಸುಧಾಕರ ಶೆಟ್ಟಿ
ಮಾಜಿ ಅಧ್ಯಕ್ಷ, ಎಫ್‌ಕೆಸಿಸಿಐ, ಕರ್ನಾಟಕ

ಪಿ.ಸಿ.ರಾವ್
ಅಧ್ಯಕ್ಷ, ಬೃಹತ್ ಬೆಂಗಳೂರು ಹೋಟೆಲ್ಸ್ ಅಸೋಸಿಯೇಶನ್

ಗುರುವಾರ, 10- 6-2021 ಸಮಯ- ಮಧ್ಯಾಹ್ನ 12 ರಿಂದ 1

ಪರಸ್ಪರ ಅಂತರ ಕಾಯ್ದುಕೊಳ್ಳಿ
ಯಾರೊಂದಿಗೂ ಹಸ್ತಲಾಘವ ಮಾಡಬೇಡಿ
ಕೆಮ್ಮುವಾಗ, ಸೀನುವಾಗ ಕರವಸ್ತ್ರದಿಂದ ಮುಚ್ಚಿಕೊಳ್ಳಿ

ಅಲೆಮಾರಿಗಳಿಗೆ ನೆರವು ನೀಡಲು ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್‌ನಿಂದಾಗಿ ತೀವ್ರ ಸಂಕಷ್ಟಕ್ಕೆ ಸಿಲುಕಿರುವ ಅಲೆಮಾರಿಗಳು ಮತ್ತು ಅರೆ ಅಲೆಮಾರಿ ಸಮುದಾಯದ ಜನರಿಗೆ ವಿಪತ್ತು ಪರಿಹಾರ ನಿಧಿಯ ಅನುದಾನವನ್ನು ಬಳಸಿಕೊಂಡು ನೆರವು ನೀಡಬೇಕು ಎಂದು ಕರ್ನಾಟಕ ಅಲೆಮಾರಿ, ಅರೆ ಅಲೆಮಾರಿ ಮತ್ತು ವಿಮುಕ್ತ ಬುಡಕಟ್ಟುಗಳ ಒಕ್ಕೂಟದ ಯುವಜನ ಘಟಕ ರಾಜ್ಯ ಸರ್ಕಾರವನ್ನು ಆಗ್ರಹಿಸಿದೆ.

ಈ ಕುರಿತು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರಿಗೆ ಮನವಿ ಸಲ್ಲಿಸಿರುವ ಒಕ್ಕೂಟದ ಯುವಜನ ಘಟಕದ ಅಧ್ಯಕ್ಷ ಡಾ. ಮಲ್ಲಿಕಾರ್ಜುನ ಬಿ. ಮಾನ್ಪಡೆ ಮತ್ತು ಪ್ರಧಾನ ಕಾರ್ಯದರ್ಶಿ ಕೆ.ಕೆ.ಜಗದೀಶ್, 'ಸರ್ಕಾರ ಅಲೆಮಾರಿ ಕೋಶಕ್ಕೆ ಅಗತ್ಯ ಅನುದಾನ ಒದಗಿಸಿ, ಯೋಜನೆಗಳನ್ನು ರೂಪಿಸಿಲ್ಲ. ಇದರಿಂದಾಗಿ ಸಂಕಷ್ಟದ ಸಂದರ್ಭದಲ್ಲಿ ಅಲೆಮಾರಿ ಜನರಿಗೆ ನೆರವು ಸಿಗುತ್ತಿಲ್ಲ. ವಿಪತ್ತು ಪರಿಹಾರ ನಿಧಿಯ ಮೂಲಕವೇ ಈ ಜನರಿಗೆ ನೆರವು ಒದಗಿಸುವ ಕೆಲಸ ಮಾಡಬೇಕು' ಎಂದು ಬೇಡಿಕೆ ಇಟ್ಟಿದ್ದಾರೆ.

ಅಕಾಲಿಕ ಮಳೆಯಿಂದ ಅಲೆಮಾರಿ ಜನರ ಟೆಂಟ್‌ಗಳಿಗೆ ಹಾನಿಯಾಗಿದೆ. ಇದರಿಂದಾಗಿ ಮಳೆಗಾಲದಲ್ಲಿ ಜೀವನ ಕಳೆಯುವುದು ಕಷ್ಟವಾಗಿದೆ. ಅವರಿಗೆ ಕಾಯಂ ವಸತಿ ವ್ಯವಸ್ಥೆ ಒದಗಿಸುವವರೆಗೂ ಟೆಂಟ್ ನಿರ್ಮಾಣಕ್ಕೆ ಆರ್ಥಿಕ ನೆರವು ನೀಡಬೇಕು. ಬೇಳೆ, ಕಾಳುಗಳು, ಎಣ್ಣೆ, ಮೆಣಸಿನಪುಡಿ, ಉಪ್ಪು ಸೇರಿದಂತೆ ಎಲ್ಲ ಪಡಿತರ ವಸ್ತುಗಳು ಮತ್ತು ಆಹಾರ ಧಾನ್ಯಗಳುಳ್ಳ ಕಿಟ್ ವಿತರಿಸಬೇಕು. ಆರೋಗ್ಯದ ಕುರಿತು ಜಾಗೃತಿ ಮೂಡಿಸಿ ಮಾಸ್ಕ್, ಸ್ಯಾನಿಟೈಸರ್, ಸೋಪ್ ವಿತರಿಸಬೇಕು ಎಂದು ಒತ್ತಾಯಿಸಿದ್ದಾರೆ.

ನಿಧನ ವಾರ್ತೆ

ಪ್ರೊ.ವಿ.ಎಂ.ಶೋಲಾಪುರ್‌ಕರ್

ಮೈಸೂರು: ಚಾಮರಾಜೇಂದ್ರ ದೃಶ್ಯಕಲಾ ಕಾಲೇಜಿನ (ಕಾವಾ) ಮೊದಲ ಡೀನ್ ಹಾಗೂ ಕಲಾವಿದ ಪ್ರೊ.ವಿ.ಎಂ. ಶೋಲಾಪುರ್‌ಕರ್ (89) ವಯೋಸಹಜ ಕಾರಣಗಳಿಂದ ವಿ.ವಿ.ಮೊಹಲ್ಲಾದ ತಮ್ಮ ನಿವಾಸದಲ್ಲಿ ಮಂಗಳವಾರ ನಿಧನರಾದರು. ಪತ್ನಿ, ಇಬ್ಬರು ಪುತ್ರಿಯರು ಹಾಗೂ ಒಬ್ಬ ಪುತ್ರ ಇದ್ದಾರೆ. ಮೃತರ ಅಂತ್ಯಕ್ರಿಯೆಯು ಗೋಕುಲಂನ ಸ್ಮಶಾನದಲ್ಲಿ ನಡೆಯಿತು. ವಿಜಯಪುರದಲ್ಲಿ 1931ರಲ್ಲಿ ಜನಿಸಿದ ಇವರು, ಮುಂಬೈನ ನೂತನ್ ಕಲಾಮಂದಿರ ಹಾಗೂ ಸರ್ ಜೆ.ಜೆ.ಕಲಾಶಾಲೆಯಲ್ಲಿ ಕಲಾ ಶಿಕ್ಷಣ ಪಡೆದರು. ಜೆ.ಜೆ.ಕಲಾಶಾಲೆಯಲ್ಲೇ 1957ರಿಂದ 1979ರವರೆಗೆ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸಿದ್ದರು. ನಂತರ ಮೈಸೂರಿಗೆ ಬಂದು, ಕಾವಾ ಕಾಲೇಜಿನ ಮೊದಲ ಡೀನ್ ಆಗಿ 1982ರಿಂದ 1988ರವರೆಗೆ ಕಾರ್ಯನಿರ್ವಹಿಸಿದ್ದರು. ನಿವೃತ್ತರಾದ ಬಳಿಕ ಇಲ್ಲಿಯೇ ನೆಲೆ ನಿಂತರು.

ಆಸ್ಪತ್ರೆ ಸಿಬ್ಬಂದಿಗೆ ತಿಂಡಿ, ಬಿಸ್ಕತ್ ಪೊಟ್ಟಣ ವಿತರಿಸುತ್ತಿರುವುದು

'ಈಶಾ ಪ್ರತಿಷ್ಠಾನ' ನೆರವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸದ್ಗುರು ಜಗ್ಗಿ ವಾಸುದೇವ ನೇತೃತ್ವದ ಈಶಾ ಪ್ರತಿಷ್ಠಾನ ರಾಜ್ಯದ ವಿವಿಧ ಜಿಲ್ಲೆಗಳ ಆಸ್ಪತ್ರೆಗಳಲ್ಲಿ ಕೋವಿಡ್ ರೋಗಿಗಳನ್ನು ಪ್ರಾಣ ಉಳಿಸಲು ಶ್ರಮಿಸುತ್ತಿರುವ ವೈದ್ಯಕೀಯ ಸಿಬ್ಬಂದಿ, ಪೊಲೀಸರು, ಅಲೆಮಾರಿ ಜನಾಂಗ ಮತ್ತು ಗಿರಿಜನರಿಗೆ ನೆರವು ನೀಡುತ್ತಿದೆ.

ಬೆಂಗಳೂರು, ಮೈಸೂರು, ಮಂಡ್ಯ, ಮಂಗಳೂರು, ಉಡುಪಿ, ಚಿಕ್ಕಮಗಳೂರು, ಚಿಕ್ಕಬಳ್ಳಾಪುರ ಮತ್ತು ಚಾಮರಾಜನಗರ ಜಿಲ್ಲೆಗಳ 45 ಪ್ರಮುಖ ಸರ್ಕಾರಿ ಆಸ್ಪತ್ರೆಗಳ ವೈದ್ಯಕೀಯ ಸಿಬ್ಬಂದಿಗೆ ತಿಂಡಿ ಮತ್ತು ಹಣ್ಣಿನ ರಸವನ್ನು ನೀಡಲಾಗುತ್ತಿದೆ ಎಂದು ಪ್ರತಿಷ್ಠಾನದ ಪ್ರಕಟಣೆ ತಿಳಿಸಿದೆ.

ಕಳೆದ 45 ದಿನಗಳಲ್ಲಿ 4 ಲಕ್ಷ ಪೊಟ್ಟಣಗಳಷ್ಟು ಹಣ್ಣಿನ ರಸ, ತಿಂಡಿ, ಬಿಸ್ಕತ್ ವಿತರಿಸಲಾಗಿದೆ. ಈ ಕಾರ್ಯವನ್ನು ಜುಲೈ 1 ರವರೆಗೂ ನಡೆಯಲಿದೆ. ವೈದ್ಯಕೀಯ ಸಿಬ್ಬಂದಿ ಅಲ್ಲದೆ, ಕರ್ತವ್ಯದಲ್ಲಿರುವ ಪೊಲೀಸರಿಗೂ ವಿತರಿಸಲಾಗುತ್ತಿದೆ.

ಚಿಕ್ಕಬಳ್ಳಾಪುರದಲ್ಲಿ ಸ್ಥಾಪನೆಗೊಳ್ಳುತ್ತಿರುವ ಸರ್ಕಾರಿ ಆಸ್ಪತ್ರೆಗೆ ವೈದ್ಯಕೀಯ ಉಪಕರಣಗಳು, ರೋಗಿಗಳ ಆರೈಕೆಗೆ ಅಗತ್ಯವಿರುವ ವಸ್ತುಗಳು, ಇಸಿಜಿ ಮತ್ತು ವೈದ್ಯಕೀಯ ಸೇವಾ ಸಾಧನಗಳನ್ನು ವಿತರಿಸಲಾಗಿದೆ. ಚಿಕ್ಕಬಳ್ಳಾಪುರ ಮತ್ತು ಸುತ್ತಮುತ್ತಲಿನ ತಾಲ್ಲೂಕುಗಳಲ್ಲಿ 550 ಅಲೆಮಾರಿ ಮತ್ತು ಅರೆ ಅಲೆಮಾರಿ ಬುಡಕಟ್ಟಿನ ಕುಟುಂಬಗಳಿಗೆ 1,600 ಪಡಿತರ ಮತ್ತು ಅಗತ್ಯ ವಸ್ತುಗಳನ್ನು ವಿತರಿಸಲಾಯಿತು.

ಪ್ರತಿಷ್ಠಾನದ ವತಿಯಿಂದ 250 ವೈದ್ಯರು ಕಳೆದ ತಿಂಗಳಿಂದ ಸ್ವಯಂ ಸೇವಕರಾಗಿ ಬಿಬಿಎಂಪಿ ಮತ್ತು ಆರೋಗ್ಯ ಇಲಾಖೆಯ ಸಹಯೋಗದೊಂದಿಗೆ ಕೋವಿಡ್ ರೋಗಿಗಳು ಮತ್ತು ಅವರ ಕುಟುಂಬದವರಿಗೆ ಸೇವೆ ಸಲ್ಲಿಸುತ್ತಿದ್ದಾರೆ. ಎಂದು ಪ್ರತಿಷ್ಠಾನ ತಿಳಿಸಿದೆ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

ಉದ್ಯೋಗಾವಕಾಶ

General

WORK FROM home, earn upto 30k, training online, fees 1050 - 7605058339

ಭವಿಷ್ಯ

Astrology

ಒಂದೇ ಕರೆಯಲ್ಲಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೇಷಲಿಸ್ಟ್ 100% ಗ್ಯಾರಂಟಿ ಪರಿಹಾರ ಪಂಡಿತ್.ಕೃಷ್ಣಪ್ರಸಾದ್.ಉಚಿತ ಭವಿಷ್ಯ ಖಚಿತ ಪರಿಹಾರ ಶ್ರೀಕ್ಷೇತ್ರ ಧರ್ಮಸ್ಥಳ, 7022443071

ಸ್ತ್ರೀಪುರುಷ ವಶಕ್ಕೆ ''ಕೇರಳ ಕಾಶ್ಮೋರ'' ಪೂಜಾ ಶಕ್ತಿಯಿಂದ 'ರತಿ ಕಾಮರಾಜ' ಮಂತ್ರದಿಂದ ಕೇವಲ 24 ಘಂಟೆಗಳಲ್ಲಿ ಪರಿಹಾರ ನೀಡಲಾಗುವುದು. 9686007334

For Online Classified Booking
Name Change / Education / Property / Job / Services and many more contact
9880856233
9886213331
dhclassifieds.com

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ವೈಕುಂಠ ಸಮಾರಾಧನೆ

ಎಚ್.ಸಿ.ಚೆನ್ನಯ್ಯ (1936–2021)
ಎಂಜಿನಿಯರ್ ಪಿ.ಡಬ್ಲ್ಯು.ಡಿ (ನಿ)
ಇವರು 30–05–2021 ಭಾನುವಾರ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ.
ತತ್ಸಂಬಂಧವಾಗಿ:
ವೈಕುಂಠ ಸಮಾರಾಧನೆಯನ್ನು ದಿನಾಂಕ 10–06–2021 ಗುರುವಾರ ಸ್ವಗೃಹದಲ್ಲಿ ನೆರವೇರಿಸಲಾಗುವುದು.
ಸ್ಥಳ:
#693/18, 5ನೇ ಮುಖ್ಯ ರಸ್ತೆ, 11ನೇ ಅಡ್ಡ ರಸ್ತೆ, ಎಂ. ಸಿ. ಲೇಔಟ್, ವಿಜಯನಗರ, ಬೆಂಗಳೂರು–40
ಸಮಯ: ಮಧ್ಯಾಹ್ನ 12 ಗಂಟೆ
ತಾವು ಆಗಮಿಸಿ ಮೃತರ ಆತ್ಮಕ್ಕೆ ಶಾಂತಿ ಕೋರಬೇಕಾಗಿ ವಿನಂತಿ.
ಪತ್ನಿ, ಮಕ್ಕಳು, ಮೊಮ್ಮಕ್ಕಳು, ಅಳಿಯಂದಿರು ಮತ್ತು ಸಹೋದರರು ಹಾಗೂ ಬಿ.ಟಿ.ರಮೇಶ್ ಮತ್ತು ಸಹೋದರರು
+ 91 88808 99999

ಚಿರಸ್ಮರಣೆ

ದಿ॥ ಕೆ. ಹಿರಣ್ಣಗೌಡರು
ಗಾಂಡ್ಲಹಳ್ಳಿ, ಶ್ರೀನಿವಾಸಪುರ ತಾ॥ ಕೋಲಾರ ಜಿಲ್ಲೆ.
ಇಂದಿಗೆ ನೀವು ನಮ್ಮನ್ನಗಲಿ 14 ವರ್ಷಗಳಾದವು
ನಿಮ್ಮ ಆಶೀರ್ವಾದ ಸದಾ ನಮ್ಮ ಮೇಲಿರಲಿ ಎಂದು ಆಶಿಸುವ,
ತಮ್ಮ ದುಃಖತಪ್ತ ಪತ್ನಿ ಚೌಡಮ್ಮ ಮತ್ತು ಮಕ್ಕಳು, ಸೊಸೆಯಂದಿರು, ಅಳಿಯಂದಿರು ಹಾಗೂ ಮೊಮ್ಮಕ್ಕಳು.

FOR CLASSIFIED ADVERTISEMENTS
EDUCATION
Contact:
Santhosh: 9880856233
Vishal : 9845114560
Ravi : 9606912256

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Tanveer : 9886213331
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ scan the QR code ಸ್ಕ್ಯಾನ್ ಮಾಡಿ ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಪುತ್ತೂರಿನ ತಮ್ಮ ಜಮೀನಿನಲ್ಲಿ ಕೆಲಸ ಮಾಡುತ್ತಿರುವ ಕೆ.ಎಂ. ನಟರಾಜ್

ಹೆಚ್ಚುವರಿ ಸಾಲಿಸಿಟರ್ ಜನರಲ್ ಕೃಷಿ ಪ್ರೀತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸುಪ್ರೀಂ ಕೋರ್ಟ್ ಹೆಚ್ಚುವರಿ ಸಾಲಿಸಿಟರ್ ಜನರಲ್ ಆಗಿರುವ ಕೆ.ಎಂ. ನಟರಾಜ್ ಅವರು ಉನ್ನತ ಹುದ್ದೆಯಲ್ಲಿದ್ದರೂ ತಮ್ಮ ಜಮೀನಿನಲ್ಲಿ ಕೃಷಿ ಮಾಡುವ ಕಾಯಕ ಮರೆತಿಲ್ಲ. ಸುಪ್ರೀಂ ಕೋರ್ಟ್ ರಜೆ ಅವಧಿಯಲ್ಲಿ ತಮ್ಮ ಕೃಷಿ ಪ್ರೀತಿ ಮುಂದುವರಿಸಿದ್ದಾರೆ.

ಪುತ್ತೂರು ತಾಲ್ಲೂಕಿನ ಈಶ್ವರ ಮಂಗಲದ ಕೊನೆತೋಟ ಮಹಾಬಲೇಶ್ವರ ನಟರಾಜ್ ಅವರು ಕೃಷಿ ಕುಟುಂಬದಲ್ಲಿ ಹುಟ್ಟಿ ಬೆಳೆದು ವಕೀಲ ವೃತ್ತಿಯಲ್ಲಿ ದೇಶದಲ್ಲೇ ಹೆಸರು ಮಾಡಿದ್ದಾರೆ. ಮಂಗಳೂರಿನ ಎಸ್‌ಡಿಎಂ ಕಾನೂನು ಕಾಲೇಜಿನಲ್ಲಿ ಕಾನೂನು ಪದವಿ ಪಡೆದ ಇವರು ಹೆಚ್ಚುವರಿ ಅಡ್ವೊಕೇಟ್ ಜನರಲ್ ಆಗಿ, ದಕ್ಷಿಣ ವಲಯ ಹೆಚ್ಚುವರಿ ಸಾಲಿಸಿಟರ್ ಜನರಲ್ ಆಗಿ ಕೆಲಸ ಮಾಡಿದ ಅನುಭವ ಹೊಂದಿದ್ದಾರೆ.

ಕೆ.ಎಂ. ನಟರಾಜ್ ಅವರು ರೈತನಾಗಿ ಕೆಲಸ ಮಾಡುತ್ತಿರುವುದು

1989ರಿಂದ 1990ರ ನವೆಂಬರ್ ತನಕ ಲೋಕಾಯುಕ್ತ ನಿವೃತ್ತ ನ್ಯಾಯಮೂರ್ತಿ ಎನ್. ಸಂತೋಷ ಹೆಗ್ಡೆ ಅವರು ಹೆಚ್ಚುವರಿ ಸಾಲಿಸಿಟರ್ ಜನರಲ್ ಆಗಿ ಕಾರ್ಯ ನಿರ್ವಹಿಸಿದ್ದರು. ಅವರ ಬಳಿಕ ಈ ಹುದ್ದೆಗೆ ಏರಿದ ಕನ್ನಡಿಗ ಎಂದರೆ ಕೆ.ಎಂ. ನಟರಾಜ್ ಅವರು.

ಸುಪ್ರೀಂ ಕೋರ್ಟ್‌ಗೆ ಸದ್ಯ ರಜೆ ಇರುವ ಕಾರಣ ಕಳೆದ ಕೆಲ ದಿನಗಳಿಂದ ತಮ್ಮ ಕುಟುಂಬ ಸಮೇತ ಹುಟ್ಟೂರು ಈಶ್ವರಮಂಗಲದಲ್ಲಿ ತಂಗಿದ್ದಾರೆ. ಈಗ ಗದ್ದೆಯಲ್ಲಿ ಭತ್ತ ನಾಟಿ ಮಾಡುವ ಸಮಯ. ಆದ್ದರಿಂದ ಜಮೀನಿನಲ್ಲಿ ಕೃಷಿ ಕೆಲಸದಲ್ಲಿ ಮಗ್ನರಾಗಿದ್ದಾರೆ.

ಟ್ರ್ಯಾಕ್ಟರ್ ಚಾಲನೆ ಮಾಡಿಕೊಂಡು ಗದ್ದೆ ಉಳುಮೆ ಮಾಡುವುದು, ಕೆಸರು ಗದ್ದೆಯನ್ನು ನಾಟಿಗೆ ಹದ ಮಾಡುವ ಕಾರ್ಯದಲ್ಲಿ ನಟರಾಜ್ ತೊಡಗಿಕೊಂಡಿದ್ದಾರೆ. ಟಿಲ್ಲರ್‌ನೊಂದಿಗೆ ಕೆಸರು ಗದ್ದೆಗೆ ಇಳಿದು ದುಡಿಯುತ್ತಿದ್ದಾರೆ.

'ವಿದ್ಯಾವಂತರಾದ ಕೂಡಲೇ ಕೃಷಿ ಕೈಬಿಡುವ ಇಂದಿನ ಯುವಕರಿಗೆ ನಟರಾಜ್ ಅವರು ಮಾದರಿಯಾಗಿ ನಿಂತಿದ್ದಾರೆ. ಎಷ್ಟೇ ಎತ್ತರಕ್ಕೆ ಬೆಳೆದರೂ ಮೂಲ ವೃತ್ತಿಯನ್ನು ಮರೆಯಬಾರದು ಎಂಬುದನ್ನು ಯುವ ಸಮೂಹ ಇವರಿಂದ ಕಲಿಯಬೇಕು' ಎಂದು ಸ್ಥಳೀಯರು ಹೇಳುತ್ತಾರೆ.

ಸಂಕ್ಷಿಪ್ತ ಸುದ್ದಿ

ಜುಲೈನಲ್ಲೇ ಮುಂಗಾರು ಅಧಿವೇಶನ: ಜೋಶಿ

ನವದೆಹಲಿ: 'ಮುಂಗಾರು ಅಧಿವೇಶನವು ಜುಲೈ ತಿಂಗಳಲ್ಲಿ ಸುಗಮವಾಗಿ ನಡೆಯುವ ವಿಶ್ವಾಸವಿದೆ' ಎಂದು ಸಂಸದೀಯ ವ್ಯವಹಾರಗಳ ಸಚಿವ ಪ್ರಲ್ಹಾದ ಜೋಶಿ ಮಂಗಳವಾರ ತಿಳಿಸಿದ್ದಾರೆ.

ಕೋವಿಡ್–19 ಸಾಂಕ್ರಾಮಿಕ ಕಾಯಿಲೆ ಆರಂಭವಾದ ಬಳಿಕ ಸಂಸತ್ತಿನ ಮೂರು ಅಧಿವೇಶನಗಳನ್ನು ಮೊಟಕುಗೊಳಿಸಲಾಗಿತ್ತು. ಕಳೆದ ವರ್ಷ ಚಳಿಗಾಲದ ಅಧಿವೇಶನವನ್ನು ರದ್ದುಪಡಿಸಲಾಗಿತ್ತು.

ಕೇರಳ: ಸುಧಾಕರನ್ ಕಾಂಗ್ರೆಸ್ ಅಧ್ಯಕ್ಷ

ತಿರುವನಂತಪುರ: ಕೇರಳ ಪ್ರದೇಶ ಕಾಂಗ್ರೆಸ್ ಸಮಿತಿ (ಕೆಪಿಸಿಸಿ) ಅಧ್ಯಕ್ಷರಾಗಿ ಸಂಸದ ಕೆ.ಸುಧಾಕರನ್ ಅವರನ್ನು ನೇಮಿಸಲಾಗಿದೆ.

ಇದುವರೆಗೆ ಮುಲ್ಲಪ್ಪಲ್ಲಿ ರಾಮಚಂದ್ರನ್ ಅವರು ಅಧ್ಯಕ್ಷರಾಗಿದ್ದರು. ಪಕ್ಷದಲ್ಲಿನ ಗುಂಪುಗಾರಿಕೆ ತಡೆಯುವ ನಿಟ್ಟಿನಲ್ಲಿ ಈ ಬದಲಾವಣೆ ಮಾಡಲಾಗಿದೆ ಎನ್ನುವ ಸಂದೇಶವನ್ನು ವರಿಷ್ಠರು ನೀಡಿದ್ದಾರೆ ಎಂದು ಹೇಳಲಾಗಿದೆ.

ವಿರೋಧ ಪಕ್ಷದ ನಾಯಕನ ಸ್ಥಾನಕ್ಕೆ ಹಿರಿಯ ನಾಯಕ ರಮೇಶ್ ರಮೇಶ್ ಚೆನ್ನಿತ್ತಲ ಅವರನ್ನು ಬದಲಾಯಿಸಿ, ವಿ.ಡಿ. ಸತೀಸನ್ ಅವರನ್ನು ಇತ್ತೀಚೆಗಷ್ಟೇ ನೇಮಿಸಲಾಗಿತ್ತು. ಈ ಬೆಳವಣಿಗೆ ಬೆನ್ನಲ್ಲೇ ಅಧ್ಯಕ್ಷರ ಬದಲಾವಣೆ ನಡೆದಿದೆ.

ಎಐಸಿಸಿ ಪ್ರಧಾನ ಕಾರ್ಯದರ್ಶಿ ತಾರೀಕ್ ಅನ್ವರ್ ಅವರು ನೀಡಿದ ವರದಿ ಅನ್ವಯ ಸುಧಾಕರನ್ ಅವರನ್ನು ಕೆಪಿಸಿಸಿ ಅಧ್ಯಕ್ಷರನ್ನಾಗಿ ಮಾಡಲಾಗಿದೆ.

ಬಾಯಾರಿಕೆಯಿಂದ ಜೀವತೆತ್ತ ಬಾಲಕಿ

ಜೋಧ್‌ಪುರ (ಪಿಟಿಐ): ರಾಜಸ್ಥಾನದ ಜಲೋರ್ ಜಿಲ್ಲೆಯ ರಾಣಿವಾರಾದಲ್ಲಿ ಐದು ವರ್ಷದ ಬಾಲಕಿಯೊಬ್ಬಳು ಬಾಯಾರಿಕೆಯಿಂದ ಸಾವನ್ನಪ್ಪಿದ್ದರೆ, ಆಕೆಯ ಅಜ್ಜಿ ಪ್ರಜ್ಞಾಹೀನ ಸ್ಥಿತಿಯಲ್ಲಿದ್ದಾರೆ ಎಂದು ಪೊಲೀಸರು ಮಂಗಳವಾರ ತಿಳಿಸಿದ್ದಾರೆ.

ರೋಡಾ ಗ್ರಾಮದಲ್ಲಿ ಕುಟುಂಬ ಸದಸ್ಯರನ್ನು ನೋಡಲು ಸುಖಿ (60) ಮತ್ತು ಅವರ ಮೊಮ್ಮಗಳು ಮಂಜು (5) ಕಾಲ್ನಡಿಗೆಯಲ್ಲಿ ಹೋಗುತ್ತಿದ್ದಾಗ ಈ ಘಟನೆ ನಡೆದಿದೆ ಎಂದು ಠಾಣಾಧಿಕಾರಿ ಪದ್ಮಾ ರಾಮ್ ತಿಳಿಸಿದ್ದಾರೆ.

ದಾರಿಯಲ್ಲಿರುವಾಗ ಅವರಿಗೆ ಬಾಯಾರಿಕೆಯಾಗಿದೆ. ಆದರೆ ಸ್ಥಳದಲ್ಲಿ ಜನವಸತಿ ಇಲ್ಲದ ಕಾರಣ ಸುತ್ತ ಎಲ್ಲೂ ನೀರು ಸಿಕ್ಕಿಲ್ಲ. ನಂತರ, ಕೆಲವರು ಈ ಇಬ್ಬರು ಸಣ್ಣ ಬೆಟ್ಟದ ಮೇಲಿರುವುದನ್ನು ಗುರುತಿಸಿ ಗ್ರಾಮದ ಸರಪಂಚರಿಗೆ ಮಾಹಿತಿ ನೀಡಿದ್ದು, ಅವರು ಪೊಲೀಸರಿಗೆ ಮಾಹಿತಿ ನೀಡಿದ್ದಾರೆ.

ಸಂಸದೆ ನವನೀತ್ ಜಾತಿ ಪ್ರಮಾಣಪತ್ರ ರದ್ದು

ಮುಂಬೈ (ಪಿಟಿಐ): ಅಮರಾವತಿ ಲೋಕಸಭಾ ಕ್ಷೇತ್ರದ ಪಕ್ಷೇತರ ಸದಸ್ಯೆ ನವನೀತ್ ಕೌರ್ ರಾಣಾ ಅವರಿಗೆ ನೀಡಿರುವ ಪರಿಶಿಷ್ಟ ಜಾತಿ ಪ್ರಮಾಣಪತ್ರವನ್ನು ಬಾಂಬೆ ಹೈಕೋರ್ಟ್ ಮಂಗಳವಾರ ರದ್ದುಪಡಿಸಿ, ಅವರಿಗೆ ₹2 ಲಕ್ಷ ದಂಡ ವಿಧಿಸಿದೆ.

ನ್ಯಾಯಮೂರ್ತಿಗಳಾದ ಆರ್.ಡಿ. ಧನುಕಾ ಮತ್ತು ವಿ.ಜಿ. ಬಿಶ್ತ್ ಅವರಿದ್ದ ಬಾಂಬೆ ಹೈಕೋರ್ಟ್‌ನ ನಾಗ್ಪುರ ಪೀಠವು ಈ ತೀರ್ಪು ನೀಡಿದ್ದು, ದಂಡದ ಮೊತ್ತ ₹2 ಲಕ್ಷವನ್ನು ಮಹಾರಾಷ್ಟ್ರ ಕಾನೂನು ಸೇವೆಗಳ ಪ್ರಾಧಿಕಾರಕ್ಕೆ ಎರಡು ವಾರಗಳ ಒಳಗೆ ಪಾವತಿಸುವಂತೆ ಗಡುವು ನೀಡಿದೆ.

ಮಗನಿಂದಲೇ ತಾಯಿಗೆ ದಿಗ್ಬಂಧನ

ಕೊಯಮತ್ತೂರು, ತಮಿಳುನಾಡು (ಪಿಟಿಐ): 95 ವರ್ಷದ ವೃದ್ಧೆಗೆ ಸ್ವಂತ ಮಗನೇ ಹದಿನೈದು ದಿನಗಳಿಂದ ಅನ್ನ ನೀರು ನೀಡದೆ ಆಕೆಯನ್ನು ಶೌಚಗೃಹದಲ್ಲಿ ಬಂಧಿಸಿಟ್ಟು ಅಮಾನವೀಯವಾಗಿ ನಡೆಸಿಕೊಂಡ ಆಘಾತಕಾರಿ ಘಟನೆ ಹತ್ತಿರದ ಸೇಲಂ ಜಿಲ್ಲೆಯಲ್ಲಿ ಬೆಳಕಿಗೆ ಬಂದಿದೆ.

ವೃದ್ಧೆಯ ನರಳಾಟ ಗಮನಿಸಿದ ನೆರೆಯೊರೆಯವರು ಜಿಲ್ಲಾಧಿಕಾರಿಗೆ ಮಾಹಿತಿ ನೀಡಿದ್ದು, ವೃದ್ಧೆಯನ್ನು ಅಧಿಕಾರಿಗಳು ಭಾನುವಾರ ರಕ್ಷಿಸಿದ್ದಾರೆ. ನಾಲ್ಕು ಮಕ್ಕಳ ತಾಯಿಯಾಗಿರುವ ರಾಧಾ ಎಂಬ ನತದೃಷ್ಟ ವೃದ್ಧೆಯನ್ನು ಸರ್ಕಾರೇತರ ಸಂಸ್ಥೆಯ ವೃದ್ಧಾಶ್ರಮಕ್ಕೆ ಕರೆದೊಯ್ದಿದ್ದು, ಅಲ್ಲಿ ಆಕೆಗೆ ಚಿಕಿತ್ಸೆ ನೀಡಿ, ಆಹಾರ ಕೊಡಲಾಗುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಪಂಜಾಬಿ ಗಾಯಕ ಖಾತೆಗೆ ಟ್ವಿಟರ್ ತಡೆ

ನವದೆಹಲಿ: ಪಂಜಾಬಿ ಗಾಯಕ ಜಾಝಿ ಬಿ ಮತ್ತು ಹಿಪ್-ಹಾಪ್ ಕಲಾವಿದ ಎಲ್-ಫ್ರೆಷ್ ಇಬ್ಬರ ಖಾತೆಗಳಿಗೆ ಟ್ವಿಟರ್ ನಿರ್ಬಂಧ ವಿಧಿಸಿದೆ.

ರೈತರ ಪ್ರತಿಭಟನೆಗೆ ಬೆಂಬಲ ಸೂಚಿಸಿ ಇವರು ಟ್ವೀಟ್ ಮಾಡಿದ್ದರು. ಜಾಝಿ ಬಿ ಸೇರಿದಂತೆ ನಾಲ್ಕು ಖಾತೆಗಳಿಗೆ ನಿರ್ಬಂಧ ವಿಧಿಸುವಂತೆ ಕೇಂದ್ರ ಸರ್ಕಾರ ಸೂಚಿಸಿತ್ತು.

'ಟ್ವಿಟರ್ ನಿಯಮಗಳನ್ನು ಉಲ್ಲಂಘಿಸಿದರೆ ವಿಷಯಗಳನ್ನು ತೆಗೆದು ಹಾಕಲಾಗುತ್ತದೆ' ಎಂದು ಟ್ವಿಟರ್ ವಕ್ತಾರರು ತಿಳಿಸಿದ್ದಾರೆ

ಪ್ರಮಾಣಪತ್ರದ ತಪ್ಪು ಮಾಹಿತಿಗೆ 2 ವರ್ಷ ಸಜೆ: ಮುಖ್ಯ ಚುನಾವಣಾ ಆಯುಕ್ತರ ಪತ್ರ

ಚುನಾವಣಾ ಸುಧಾರಣೆ: ಕ್ರಮಕ್ಕೆ ಮನವಿ

ನವದೆಹಲಿ (ಪಿಟಿಐ): ಕೇಂದ್ರ ಚುನಾವಣಾ ಆಯುಕ್ತ ಸುಶೀಲ್ ಚಂದ್ರ ಅವರು ಕೇಂದ್ರ ಕಾನೂನು ಸಚಿವ ರವಿಶಂಕರ್ ಪ್ರಸಾದ್ ಅವರಿಗೆ ಪತ್ರ ಬರೆದಿದ್ದು, ಕೇಂದ್ರ ಸರ್ಕಾರದ ಮುಂದೆ ಬಾಕಿ ಇರುವ ಚುನಾವಣಾ ಸುಧಾರಣಾ ಪ್ರಸ್ತಾವ ಕುರಿತು ಶೀಘ್ರದಲ್ಲಿ ಕ್ರಮ ಕೈಗೊಳ್ಳಲು ಮನವಿ ಮಾಡಿದ್ದಾರೆ.

ಸುಶೀಲ್ ಚಂದ್ರ

ರವಿಶಂಕರ್ ಪ್ರಸಾದ್

ಪ್ರಸ್ತಾವಗಳ ಬಗ್ಗೆ ಕಾನೂನು ಸಚಿವಾಲಯ ಶೀಘ್ರದಲ್ಲೇ ಕ್ರಮ ತೆಗೆದುಕೊಳ್ಳುವ ವಿಶ್ವಾಸವಿದೆ ಎಂದು ಚಂದ್ರ ಹೇಳಿದ್ದಾರೆ.

ಚುನಾವಣೆ ವೇಳೆ ಆಯೋಗಕ್ಕೆ ಸಲ್ಲಿಸುವ ಪ್ರಮಾಣಪತ್ರದಲ್ಲಿ ತಪ್ಪು ಮಾಹಿತಿ ನೀಡಿದ ಅಭ್ಯರ್ಥಿಯನ್ನು ಎರಡು ವರ್ಷ ಜೈಲಿಗೆ ಕಳಿಸುವ ವಿಚಾರವು ಪ್ರಸ್ತಾವನೆಗಳಲ್ಲಿ ಪ್ರಮುಖವಾದುದು. ಪ್ರಸ್ತುತ ಈ ಅಪರಾಧಕ್ಕೆ ಆರು ತಿಂಗಳು ಸಜೆ ಇದ್ದು, ಶಿಕ್ಷೆಯ ಅವಧಿಯನ್ನು ಎರಡು ವರ್ಷಕ್ಕೆ ಹೆಚ್ಚಿಸುವ ಉದ್ದೇಶವಿದೆ. ಅಭ್ಯರ್ಥಿಯು ಎರಡು ವರ್ಷ ಜೈಲಿನಲ್ಲಿದ್ದರೆ, ಅವರು ಮುಂದಿನ ಆರು ವರ್ಷ ಚುನಾವಣೆಗೆ ಸ್ಪರ್ಧಿಸುವಂತಿಲ್ಲ.

ಈಗಿರುವ ಆರು ತಿಂಗಳ ಸೆರೆವಾಸದಿಂದ ಅಭ್ಯರ್ಥಿಯನ್ನು ಚುನಾವಣಾ ಸ್ಪರ್ಧೆಯಿಂದ ಅನರ್ಹಗೊಳಿಸಲು ಆಗುವುದಿಲ್ಲ ಎಂದು ಚಂದ್ರ ತಿಳಿಸಿದ್ದಾರೆ.

'ಕಾಸಿಗಾಗಿ ಸುದ್ದಿ'ಯನ್ನು ಪ್ರಜಾ ಪ್ರಾತಿನಿಧ್ಯ ಕಾಯ್ದೆಯಡಿ ಚುನಾವಣಾ ಅಪರಾಧವನ್ನಾಗಿ ಪರಿಗಣಿಸಲು ಚುನಾವಣಾ ಆಯೋಗ ಪ್ರಸ್ತಾವ ಇರಿಸಿದೆ. ಚುನಾವಣಾ ಪ್ರಚಾರದ ಅಂತ್ಯದ ಸಮಯ ಮತ್ತು ಮತದಾನದ ದಿನದ ನಡುವಿನ 'ಮೌನ ಅವಧಿಯಲ್ಲಿ' ಪತ್ರಿಕೆಗಳಲ್ಲಿ ರಾಜಕೀಯ ಜಾಹೀರಾತುಗಳನ್ನು ನಿಷೇಧಿಸಲು ಪ್ರಸ್ತಾವ ಇಟ್ಟಿದೆ. ಹೀಗೆ ಮಾಡುವುದರಿಂದ ಮತದಾರರು ಪ್ರಭಾವಿತರಾಗುವುದಿಲ್ಲ ಮತ್ತು ಮುಕ್ತ ಮನಸ್ಸಿನಿಂದ ತಮ್ಮ ಹಕ್ಕು ಚಲಾಯಿಸುತ್ತಾರೆ ಎಂಬುದು ಆಯೋಗದ ಅಭಿಮತ. ಇದನ್ನು ಜಾರಿಗೆ ತರಬೇಕಾದರೆ, ಪ್ರಜಾ ಪ್ರಾತಿನಿಧ್ಯ ಕಾಯ್ದೆಯಲ್ಲಿ ಬದಲಾವಣೆ ತರಬೇಕಿದೆ. ಚುನಾವಣಾ ಸುಧಾರಣೆ ಕುರಿತು ನೇಮಿಸಿದ್ದ ಸಮಿತಿಯು ಜಾಹೀರಾತು ನಿಷೇಧಿಸುವಂತೆ ಶಿಫಾರಸು ಮಾಡಿತ್ತು.

ಪ್ರಸ್ತುತ, ಎಲೆಕ್ಟ್ರಾನಿಕ್ ಮಾಧ್ಯಮಗಳಿಗೆ ಮತದಾನದ 48 ಗಂಟೆಗಳ ಮೊದಲು ಚುನಾವಣಾ ಪ್ರಚಾರ ಕುರಿತ ಸುದ್ದಿ ಪ್ರಸಾರ ಮಾಡುವುದನ್ನು ನಿರ್ಬಂಧಿಸಲಾಗಿದೆ. ಮುದ್ರಣ ಮಾಧ್ಯಮವನ್ನು ಕಾಯ್ದೆಯ ಸೆಕ್ಷನ್ 126ರ ವ್ಯಾಪ್ತಿಗೆ ತರಲು ಸಮಿತಿ ಶಿಫಾರಸು ಮಾಡಿತ್ತು.

ಆಧಾರ್ ಸಂಖ್ಯೆ ಜೋಡಣೆಗೆ ಮರುಜೀವ

ಸರ್ಕಾರದ ಮುಂದೆ ಬಾಕಿ ಇರುವ ಮತ್ತೊಂದು ಪ್ರಮುಖ ಪ್ರಸ್ತಾವ ಎಂದರೆ, ಮತದಾರರ ಪಟ್ಟಿಯನ್ನು ಆಧಾರ್ ಜೊತೆ ಬೆಸೆಯುವುದು. ಹೀಗೆ ಮಾಡುವುದರಿಂದ ಒಬ್ಬ ಮತದಾರ ವಿವಿಧ ಸ್ಥಳಗಳಲ್ಲಿ ಹಲವು ಗುರುತಿನ ಪತ್ರಗಳನ್ನು ಮಾಡಿಕೊಳ್ಳುವುದಕ್ಕೆ ಕಡಿವಾಣ ಬೀಳಲಿದೆ.

ಈ ಬಗ್ಗೆ ಇತ್ತೀಚೆಗೆ ಲೋಕಸಭೆಗೆ ಲಿಖಿತ ಉತ್ತರ ನೀಡಿದ್ದ ಸಚಿವ ರವಿಶಂಕರ್ ಪ್ರಸಾದ್, ಚುನಾವಣಾ ಆಯೋಗದ ಈ ಪ್ರಸ್ತಾವವು ಸರ್ಕಾರದ ಪರಿಶೀಲನೆಯಲ್ಲಿದ್ದು, ಇದಕ್ಕೆ ಚುನಾವಣಾ ಕಾಯ್ದೆಯಲ್ಲಿ ಅಗತ್ಯ ತಿದ್ದುಪಡಿ ಮಾಡಬೇಕಿದೆ ಎಂದು ತಿಳಿಸಿದ್ದರು.

2019ರ ಆಗಸ್ಟ್‌ನಲ್ಲಿ ಕಳುಹಿಸಲಾದ ಪ್ರಸ್ತಾವನೆಯ ಪ್ರಕಾರ, ಮತದಾರರ ನೋಂದಣಿ ಪಟ್ಟಿಗೆ ಹೆಸರು ಸೇರಿಸಲು ಅರ್ಜಿ ಸಲ್ಲಿಸುವವರು ಹಾಗೂ ಪ್ರಸ್ತುತ ಮತದಾರ ಆಗಿರುವವರ ಆಧಾರ್ ಸಂಖ್ಯೆಯನ್ನು ಪಡೆದುಕೊಳ್ಳಲು ಚುನಾವಣಾ ನೋಂದಣಿ ಅಧಿಕಾರಿಗಳಿಗೆ ಅಧಿಕಾರ ನೀಡುವಂತೆ ಕಾನೂನಿನ ತಿದ್ದುಪಡಿ ಆಗಬೇಕಿದೆ.

ಆದರೆ, ಆಧಾರ್ ಸಂಖ್ಯೆಯನ್ನು ಚುನಾವಣಾ ದತ್ತಾಂಶದೊಂದಿಗೆ ಜೋಡಿಸುವ ಚುನಾವಣಾ ಆಯೋಗದ ಯೋಜನೆಗೆ 2015ರ ಆಗಸ್ಟ್‌ನಲ್ಲಿ ಸುಪ್ರೀಂ ಕೋರ್ಟ್ ಆಧಾರ್ ಕುರಿತು ನೀಡಿದ್ದ ಆದೇಶವು ತಡೆ ಒಡ್ಡಿತ್ತು. ಆಯೋಗವು ತನ್ನ ನ್ಯಾಷನಲ್ ಎಲೆಕ್ಟೋರಲ್ ರೋಲ್ ಪ್ಯೂರಿಫಿಕೇಷನ್ ಅಂಡ್ ಅಥೆಂಟಿಕೇಷನ್ ಪ್ರೋಗ್ರಾಂ (ಎನ್‌ಇಆರ್‌ಪಿಎಪಿ) ಭಾಗವಾಗಿ ಆಧಾರ್ ಸಂಖ್ಯೆಯನ್ನು ಸಂಗ್ರಹಿಸುತ್ತಿತ್ತು.

ಮತದಾರರ ಪಟ್ಟಿಯಲ್ಲಿ ಸೇರಿರುವ ಒಬ್ಬರದೇ ಅನೇಕ ನಮೂದುಗಳನ್ನು ಪರಿಶೀಲಿಸಿ ಅದನ್ನು ಸರಿಪಡಿಸಲು ಮತ್ತು ಪಟ್ಟಿಯನ್ನು ದೋಷರಹಿತವಾಗಿಸಲು ಈ ಮಹತ್ವಾಕಾಂಕ್ಷೆಯ ಯೋಜನೆಯನ್ನು ಆಯೋಗ ಪ್ರಾರಂಭಿಸಿತ್ತು. ಆದರೆ ಆಧಾರ್ ಸಂಖ್ಯೆಯನ್ನು ಸಂಗ್ರಹಿಸಲು ಕಾನೂನಿನ ಅನುಮತಿ ಅಗತ್ಯ ಎಂದು ಸುಪ್ರೀಂ ಕೋರ್ಟ್ ಆದೇಶ ಸ್ಪಷ್ಟಪಡಿಸಿದ್ದರಿಂದ, ಆಯೋಗವು ಚುನಾವಣಾ ಕಾನೂನಿನಲ್ಲಿ ಬದಲಾವಣೆಗಳನ್ನು ಪ್ರಸ್ತಾಪಿಸಿದೆ ಎಂದು ಸಮಿತಿಯ ಸದಸ್ಯರೊಬ್ಬರು ಇತ್ತೀಚೆಗೆ ವಿವರಿಸಿದ್ದರು.

'ಸಹಜೀವನ: ಸರಿಯೇ ಎಂದು ನಿರ್ಧರಿಸುವುದು ಕೋರ್ಟ್ ಕೆಲಸವಲ್ಲ'

ಚಂಡೀಗಢ (ಪಿಟಿಐ): ಮದುವೆಯ ಪವಿತ್ರ ಬಂಧನವಿಲ್ಲದೇ ಯುವ ಜೋಡಿಯು ಸಹಜೀವನ ನಡೆಸಬಹುದೇ, ಬೇಡವೇ ಎಂಬುದನ್ನು ನಿರ್ಧರಿಸುವುದು ಕೋರ್ಟ್ ಕೆಲಸವಲ್ಲ ಎಂದು ಪಂಜಾಬ್ ಮತ್ತು ಹರಿಯಾಣ ಹೈಕೋರ್ಟ್ ಅಭಿಪ್ರಾಯಪಟ್ಟಿದೆ. ಅಲ್ಲದೆ, ಸಹಜೀವನ ನಡೆಸಲು ಬಯಸಿದ್ದ ಜೋಡಿಗೆ ರಕ್ಷಣೆ ಒದಗಿಸಲೂ ಆದೇಶಿಸಿದೆ.

ನಮಗೆ ರಕ್ಷಣೆಯನ್ನು ಒದಗಿಸಬೇಕು ಮತ್ತು ಕುಟುಂಬದ ಸದಸ್ಯರಿಂದ ಮುಕ್ತವಾಗಿರಲು ಅವಕಾಶ ಕಲ್ಪಿಸಬೇಕು ಎಂದು ಕೋರಿ ಪಂಜಾಬ್‌ನ ಬತಿಂಡಾದ 17 ವರ್ಷದ ಹುಡುಗಿ ಮತ್ತು 20 ವರ್ಷದ ಯುವಕ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ಏಕಸದಸ್ಯ ಪೀಠ ಈ ಕುರಿತು ಆದೇಶವನ್ನು ಹೊರಡಿಸಿತು.

ಪಂಜಾಬ್, ಹರಿಯಾಣ, ರಾಜಸ್ಥಾನ, ಉತ್ತರ ಪ್ರದೇಶ ರಾಜ್ಯಗಳಲ್ಲಿ ಮರ್ಯಾದೆಗೇಡು ಹತ್ಯೆ ಪ್ರಚಲಿತವಾಗಿದೆ. ಹೀಗಾಗಿ, ಇಂಥ ಜೋಡಿಗಳಿಗೆ ರಕ್ಷಣೆ ಒದಗಿಸುವುದು ಆಯಾ ರಾಜ್ಯಗಳಿಗೆ ಬಿಟ್ಟಿದ್ದು ಎಂದೂ ಹೇಳಿತು.

'ಹುಡುಗಿಯ ಪೋಷಕರು ತಾವು ನೋಡಿದ ಹುಡುಗನ ಮದುವೆ ಆಗಬೇಕು ಎಂದು ಬಯಸುತ್ತಿದ್ದಾರೆ. ಅವರಿಗೆ ನಮ್ಮ ಬಾಂಧವ್ಯ ತಿಳಿದಿಲ್ಲ. ಈಗ ಹುಡುಗಿ ಮನೆಯಿಂದ ಹೊರಗೆ ಬಂದಿದ್ದಾಳೆ. ನಾವು ರಕ್ಷಣೆ ಕೋರಿ ಬತಿಂಡಾ ಪೊಲೀಸ್ ವರಿಷ್ಠರಿಗೆ ಮನವಿ ಸಲ್ಲಿಸಿದೆವು. ಅದಕ್ಕೆ ಸ್ಪಂದನೆ ಸಿಗಲಿಲ್ಲ' ಎಂದು ಯುವಜೋಡಿ ಅರ್ಜಿ ಸಲ್ಲಿಸಿತ್ತು.

ಪಂಜಾಬ್ ಸರ್ಕಾರವನ್ನು ಪ್ರತಿನಿಧಿಸಿದ್ದ ಅಡ್ವೋಕೇಟ್ ಜನರಲ್ ಅವರು, ಈಗ ರಕ್ಷಣೆಯನ್ನು ಕೋರಿರುವ ಜೋಡಿಗೆ ಮದುವೆ ಆಗಿಲ್ಲ. ಪರಸ್ಪರ ಇಚ್ಛೆಸಿ ಸಹಜೀವನ ನಡೆಸುತ್ತಿದ್ದಾರೆ. ಕೆಳಹಂತದ ಕೋರ್ಟ್‌ಗಳು ಇಂತಹ ಪ್ರಕರಣಗಳನ್ನು ಈ ಹಿಂದೆ ವಜಾ ಮಾಡಿವೆ ಎಂಬುದನ್ನು ಪೀಠದ ಗಮನಕ್ಕೆ ತಂದರು.

'ರಕ್ಷಣೆ ನಿರಾಕರಿಸುವುದು ನ್ಯಾಯಯುತವಲ್ಲ. ಆಗ ಕೋರ್ಟ್ ತನ್ನ ಕರ್ತವ್ಯ ಮಾಡಬೇಕಾಗುತ್ತದೆ. ಸಂವಿಧಾನದ ವಿಧಿ 21ರಲ್ಲಿ ಹೇಳಿರುವಂತೆ ಜನರ ಜೀವನ, ಸ್ವಾತಂತ್ರದ ಹಕ್ಕು ರಕ್ಷಿಸಬೇಕಾಗುತ್ತದೆ' ಎಂದು ಜೂನ್ 3ರಂದು ಹೊರಡಿಸಲಾದ ಆದೇಶದಲ್ಲಿ ನ್ಯಾಯಮೂರ್ತಿ ಸಂತ್ ಪ್ರಕಾಶ್ ತಿಳಿಸಿದ್ದಾರೆ.

ಕೋವಿಡ್: ಅನಾಥ ಮಕ್ಕಳಿಗೆ ಸೌಲಭ್ಯ ರಾಜ್ಯಗಳಿಗೆ ಸುಪ್ರೀಂ ಕೋರ್ಟ್ ಸೂಚನೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಕೋವಿಡ್‌ನಿಂದಾಗಿ ತಂದೆ, ತಾಯಿಯನ್ನು ಕಳೆದುಕೊಂಡು ಅನಾಥರಾಗಿರುವ ಮಕ್ಕಳನ್ನು ತ್ವರಿತವಾಗಿ ಗುರುತಿಸಿ, ಅವರ ಶಿಕ್ಷಣಕ್ಕೆ ಸಹಕಾರ ಸೇರಿದಂತೆ ಪ್ರಾಥಮಿಕ ಅಗತ್ಯಗಳನ್ನು ಈಡೇರಿಸಲು ತುರ್ತು ಕ್ರಮವಹಿಸಬೇಕು ಎಂದು ಸುಪ್ರೀಂ ಕೋರ್ಟ್ ಮಂಗಳವಾರ ರಾಜ್ಯಗಳಿಗೆ ನಿರ್ದೇಶನ ನೀಡಿದೆ.

ನ್ಯಾಯಮೂರ್ತಿಗಳಾದ ಎಲ್. ನಾಗೇಶ್ವರರಾವ್ ಮತ್ತು ಅನಿರುದ್ಧ ಬೋಸ್ ಅವರಿದ್ದ ನ್ಯಾಯಪೀಠವು ಈ ಸಂಬಂಧ ಕೆಲ ನಿರ್ದೇಶನಗಳನ್ನೂ ನೀಡಿತು. ವಿವಿಧ ಯೋಜನೆಗಳಡಿ ಅಗತ್ಯ ಹಣಕಾಸು ನೆರವು ಒದಗಿಸಲು ರಾಜ್ಯಗಳು ಕ್ರಮವಹಿಸಬೇಕು ಎಂದು ಆದೇಶಿಸಿದೆ.

ಅನಾಥವಾಗಿರುವ ಮಕ್ಕಳನ್ನು ತ್ವರಿತಗತಿಯಲ್ಲಿ ಸಂಪರ್ಕಿಸಲು ಜಿಲ್ಲಾ ಮಕ್ಕಳ ಹಕ್ಕುಗಳ ರಕ್ಷಣಾಧಿಕಾರಿ ಕಾರ್ಯಪ್ರವೃತ್ತರಾಗಬೇಕು. ಜಿಲ್ಲಾ ಮಕ್ಕಳ ರಕ್ಷಣಾ ಘಟಕವು ಪಡಿತರ, ಆಹಾರ, ವೈದ್ಯಕೀಯ ನೆರವು, ಬಟ್ಟೆ ಸೇರಿದಂತೆ ಎಲ್ಲ ಅಗತ್ಯಗಳನ್ನು ಈಡೇರಿಸಬೇಕು ಎಂದು ಸೂಚಿಸಿತು.

ಅಮಿಕಸ್ ಕ್ಯೂರಿ ಗೌರವ್ ಅಗರವಾಲ್ ಅವರ ಸಲಹೆಯನ್ನು ಪರಿಗಣಿಸಿದ ನ್ಯಾಯಪೀಠವು, ಸರ್ಕಾರಿ ಶಾಲೆಗಳೇ ಅಲ್ಲದೆ ಖಾಸಗಿ ಶಾಲೆಗಳಲ್ಲಿಯೂ ಶಿಕ್ಷಣ ಮುಂದುವರಿಸಲು ಕ್ರಮವಹಿಸಬೇಕು ಎಂದು ಸಲಹೆ ಮಾಡಿತು.

ಸ್ವಯಂಪ್ರೇರಿತವಾಗಿ ತೆಗೆದುಕೊಂಡಿರುವ ಪ್ರಕರಣ ಕುರಿತ ಆದೇಶದಲ್ಲಿ ಮಾರ್ಚ್ 2020ರ ನಂತರ ಕೋವಿಡ್ ಸೋಂಕಿನಿಂದಾಗಿ ತಂದೆ–ತಾಯಿ ಕಳೆದುಕೊಂಡು ಅನಾಥವಾಗಿರುವ ಮಕ್ಕಳನ್ನು ಗುರುತಿಸಬೇಕು. ಯಾವುದೇ ವಿಳಂಬವಿಲ್ಲದೆ ಎನ್‌ಸಿಪಿಸಿಆರ್ ವೆಬ್‌ಸೈಟ್‌ನಲ್ಲಿ ವಿವರಗಳನ್ನು ಪ್ರಕಟಿಸಬೇಕು ಎಂದು ಸೂಚಿಸಿತು.

ಇಂತಹ ಮಕ್ಕಳನ್ನು ಗುರುತಿಸಲು ಮಕ್ಕಳ ಸಹಾಯವಾಣಿ 1098, ಆರೋಗ್ಯ ಅಧಿಕಾರಿಗಳು, ಪಂಚಾಯತ್ ರಾಜ್ ಸಂಸ್ಥೆಗಳು, ಪೊಲೀಸ್ ಇಲಾಖೆ, ಎನ್‌ಜಿಒ ಹೀಗೆ ಎಲ್ಲರ ಸಹಕಾರ ಪಡೆಯಬಹುದು ಎಂದು ತಿಳಿಸಿದರು.

ರಾಷ್ಟ್ರೀಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ (ಎನ್‌ಸಿಪಿಸಿಆರ್) ನ ವೆಬ್‌ನಲ್ಲಿ ಜೂನ್ 5, 2021ರಂದು ಇದ್ದಂತೆ 3,621 ಮಕ್ಕಳು ಅನಾಥರಾಗಿದ್ದಾರೆ. 26,176 ಮಕ್ಕಳು ತಂದೆ ಅಥವಾ ತಾಯಿ ಕಳೆದುಕೊಂಡಿದ್ದಾರೆ. 274 ಮಕ್ಕಳನ್ನು ಏಪ್ರಿಲ್ 2020ರಿಂದ ಅನಾಥವಾಗಿ ಬಿಡಲಾಗಿದೆ ಎಂಬ ಅಂಶವನ್ನು ಪೀಠ ಪರಿಗಣಿಸಿತು.

ಮಕ್ಕಳ ಕಾನೂನು ಬಾಹಿರ ದತ್ತು: ಕ್ರಮ

ನವದೆಹಲಿ: ಕೋವಿಡ್–19 ಸಂದರ್ಭದಲ್ಲಿ ಅನಾಥರಾದ ಮಕ್ಕಳನ್ನು ಕಾನೂನುಬಾಹಿರವಾಗಿ ದತ್ತು ಪಡೆದುಕೊಳ್ಳುತ್ತಿರುವ ವ್ಯಕ್ತಿಗಳು ಮತ್ತು ಸರ್ಕಾರೇತರ ಸಂಸ್ಥೆಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಎಲ್ಲ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಸುಪ್ರೀಂ ಕೋರ್ಟ್ ನಿರ್ದೇಶನ ನೀಡಿದೆ.

ಕೇಂದ್ರೀಯ ದತ್ತು ಸಂಪನ್ಮೂಲ ಪ್ರಾಧಿಕಾರದ ಅನುಮೋದನೆ ಇಲ್ಲದೆಯೇ ದತ್ತು ಸ್ವೀಕಾರಕ್ಕೆ ಅವಕಾಶ ಇಲ್ಲ ಎಂದು ಹೇಳಿದೆ.

ಬಾಲ ನ್ಯಾಯ ಕಾಯ್ದೆ–2015 ಹಾಗೂ ಅನಾಥ ಮಕ್ಕಳಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ರೂಪಿಸಿರುವ ಯೋಜನೆಗಳ ಬಗ್ಗೆ ವ್ಯಾಪಕ ಪ್ರಚಾರ ಕೈಗೊಳ್ಳಬೇಕು ಎಂದು ನ್ಯಾಯಮೂರ್ತಿಗಳಾದ ಎಲ್.ಎನ್. ರಾವ್ ಮತ್ತು ಅನಿರುದ್ಧ ಬೋಸ್ ಅವರನ್ನೊಳಗೊಂಡ ಪೀಠವು ಸೂಚಿಸಿದೆ.

ಕೊಯಮತ್ತೂರಿನ ಟಾಪ್‌ಸ್ಲಿಪ್ ಆನೆ ಶಿಬಿರದಲ್ಲಿ ಮಂಗಳವಾರ ಪಶುವೈದ್ಯರು ಆನೆಯಿಂದ ಕೋವಿಡ್–19 ಪರೀಕ್ಷೆಗಾಗಿ ಗಂಟಲು ಮಾದರಿ ಸಂಗ್ರಹಿಸಿದರು –ಪಿಟಿಐ ಚಿತ್ರ.

ವೈಷ್ಣೋದೇವಿ ದೇಗುಲ: ಬೆಂಕಿ ಅವಘಡ

ಜಮ್ಮು (ಪಿಟಿಐ): ಇಲ್ಲಿನ ಪ್ರಸಿದ್ಧ ಧಾರ್ಮಿಕಸ್ಥಳ ಮಾತಾ ವೈಷ್ಣೋದೇವಿ ದೇವಾಲಯ ಸಂಕೀರ್ಣದಲ್ಲಿ ಮಂಗಳವಾರ ಅಗ್ನಿ ಅವಘಡ ಸಂಭವಿಸಿದೆ. ಇದಕ್ಕೆ ವಿದ್ಯುತ್ ಶಾರ್ಟ್ ಸರ್ಕೀಟ್ ಕಾರಣ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸಂಜೆ 4.15ರ ಸುಮಾರಿಗೆ ದೇಗುಲದ ನಗದು ಎಣಿಕೆ ಕೋಣೆಯಲ್ಲಿ ಬೆಂಕಿ ಕಾಣಿಸಿಕೊಂಡಿತ್ತು. ನಗದು ಕೌಂಟರ್ ಭಾಗಶಃ ಸುಟ್ಟಿದೆ. ಉಳಿದಂತೆ ಯಾವುದೇ ಅನಾಹುತ ವರದಿಯಾಗಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಫ್ರಾನ್ಸ್ ಅಧ್ಯಕ್ಷರ ಕಪಾಳಕ್ಕೆ ಏಟು

ಪ್ಯಾರಿಸ್ (ಎಎಫ್‌ಪಿ): ಆಗ್ನೇಯ ಫ್ರಾನ್ಸ್‌ಗೆ ಮಂಗಳವಾರ ಪ್ರವಾಸಕ್ಕೆ ತೆರಳಿದ್ದ ಫ್ರಾನ್ಸ್ ಅಧ್ಯಕ್ಷ ಎಮ್ಯಾನುಯೆಲ್ ಮ್ಯಾಕ್ರನ್ ಅವರಿಗೆ ವ್ಯಕ್ತಿಯೊಬ್ಬ ಕಪಾಳಕ್ಕೆ ಹೊಡೆದ್ದಾರೆ. ಈ ಕುರಿತ ಚಿತ್ರಗಳು ಜಾಲತಾಣದಲ್ಲಿ ವೈರಲ್ ಆಗಿವೆ.

ವಿಡಿಯೊದಲ್ಲಿ ಇದ್ದಂತೆ ಅಧ್ಯಕ್ಷರು ವ್ಯಕ್ತಿಯೊಬ್ಬನನ್ನು ಸ್ವಾಗತಿಸಲು ಕೈಚಾಚಿದ್ದಾರೆ. ಆಗ ವ್ಯಕ್ತಿ ಹಲ್ಲೆ ಮಾಡಿದ್ದಾನೆ. ಪೊಲೀಸರು ಇಬ್ಬರನ್ನು ಬಂಧಿಸಿದ್ದಾರೆ.

ವೈದ್ಯ ಪರಿಕರ: ಕಡಿಮೆ ಜಿಎಸ್‌ಟಿಗೆ ಸಲಹೆ

ನವದೆಹಲಿ (ಪಿಟಿಐ): ಕೋವಿಡ್ ಲಸಿಕೆ, ವೆಂಟಿಲೇಟರ್ ಮತ್ತು ಇತರ ವೈದ್ಯಕೀಯ ಪರಿಕರಗಳಿಗೆ ಶೇ 0.1ರಷ್ಟು ಜಿಎಸ್‌ಟಿ ಮತ್ತು ಎಸ್‌ಜಿಎಸ್‌ಟಿ ವಿಧಿಸಬೇಕು ಎಂದು ಬಿಜೆಪಿ ನಾಯಕ ಸುಶೀಲ್ ಮೋದಿ ಸಲಹೆ ನೀಡಿದ್ದಾರೆ. ಇದರಿಂದ ಪಿಡುಗಿನ ಸಂದರ್ಭದಲ್ಲಿ ಜನರಿಗೆ ನೆರವಾಗಲಿದೆ. ಕೈಗೆಟುಕುವ ದರದಲ್ಲಿ ಲಭ್ಯವಾಗಲಿವೆ ಎಂದು ಹೇಳಿದ್ದಾರೆ.

'ಆಮ್ಲಜನಕ ಪೂರೈಕೆ ಸ್ಥಗಿತ'ಗೊಳಿಸಿದ ವಿಡಿಯೊ ವೈರಲ್

ಅಣಕು ಕಾರ್ಯಾಚರಣೆ ವೇಳೆ 22 ಕೋವಿಡ್ ರೋಗಿಗಳ ಬಲಿ?

ಪ್ರಜಾವಾಣಿ ವಾರ್ತೆ

ಲಖನೌ: ಉತ್ತರ ಪ್ರದೇಶದ ಆಗ್ರಾದಲ್ಲಿನ ಆಸ್ಪತ್ರೆ ಒಂದರಲ್ಲಿ 'ಆಮ್ಲಜನಕ ಕೊರತೆಯ ಅಣಕು ಕಾರ್ಯಾಚರಣೆ'ಯ ಕಾರಣ 22 ಕೋವಿಡ್ ರೋಗಿಗಳು ಮೃತಪಟ್ಟಿರುವ ಸಾಧ್ಯತೆ ಇದೆ ಎಂಬುದರ ಬಗ್ಗೆ ಸಾಮಾಜಿಕ ಜಾಲತಾಣಗಳಲ್ಲಿ ಚರ್ಚೆಯಾಗುತ್ತಿದೆ. 'ಆಮ್ಲಜನಕ ಪೂರೈಕೆಯನ್ನು ನಿಲ್ಲಿಸಿದೆವು, 22 ರೋಗಿಗಳು ನೀಲಿ ಬಣ್ಣಕ್ಕೆ ತಿರುಗಿದರು' ಎಂದು ಆಸ್ಪತ್ರೆಯ ಮಾಲೀಕ ಹೇಳುತ್ತಿರುವ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ. ವಿಡಿಯೊದಲ್ಲಿರುವ ಮಾಹಿತಿ ಬಗ್ಗೆ ತನಿಖೆ ನಡೆಸಲು ಉತ್ತರ ಪ್ರದೇಶ ಸರ್ಕಾರ ಆದೇಶಿಸಿದೆ.

ಮಂಗಳವಾರ ಬೆಳಿಗ್ಗೆ ಈ ವಿಡಿಯೊ ವೈರಲ್ ಆಗಿದೆ. ಆಸ್ಪತ್ರೆಯ ಮಾಲೀಕ, ವ್ಯಕ್ತಿಯೊಬ್ಬರಿಗೆ 'ಆಮ್ಲಜನಕ ಕೊರತೆಯ ಅಣಕು ಕಾರ್ಯಾಚರಣೆ'ಯನ್ನು ವಿವರಿಸುತ್ತಿರುವ ದೃಶ್ಯ ಆ ವಿಡಿಯೊದಲ್ಲಿ ಇದೆ. ಇದೇ ವಿಡಿಯೊಗೆ ಸಂಬಂಧಿಸಿದ ಧ್ವನಿ ಮುದ್ರಣವೂ ವೈರಲ್ ಆಗಿದೆ. ಇದೇ ದೃಶ್ಯಗಳಿರುವ ಹಲವು ವಿಡಿಯೊಗಳು ವೈರಲ್ ಆಗಿವೆ. ಏಪ್ರಿಲ್ 26ರಂದು ಈ ಕಾರ್ಯಾಚರಣೆ ನಡೆಸಲಾಗಿತ್ತು ಎಂಬ ವಿವರ ವಿಡಿಯೊದಲ್ಲಿ ಇದೆ. ಅದೇ ಅವಧಿಯಲ್ಲಿ ದೇಶದಾದ್ಯಂತ ವೈದ್ಯಕೀಯ ಆಮ್ಲಜನಕದ ಕೊರತೆ ಉಂಟಾಗಿತ್ತು.

ವಿಡಿಯೊ ವೈರಲ್ ಆದ ನಂತರ ಆಸ್ಪತ್ರೆಯಲ್ಲಿದ್ದ ರೋಗಿಗಳನ್ನು ಬೇರೆ ಆಸ್ಪತ್ರೆಗಳಿಗೆ ದಾಖಲಿಸಲಾಗಿದೆ. ಆಸ್ಪತ್ರೆಯನ್ನು ಸೀಲ್‌ಡೌನ್ ಮಾಡಲಾಗಿದೆ.

'ಆಸ್ಪತ್ರೆಯಲ್ಲಿ ಆಮ್ಲಜನಕದ ಕೊರತೆಯಾಗಿತ್ತು. ಮುಖ್ಯಮಂತ್ರಿ ಬಂದರೂ ಆಮ್ಲಜನಕ ದೊರೆಯುವುದಿಲ್ಲ. ರೋಗಿಗಳನ್ನು ಬೇರೆ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಎಂದು ಹೇಳಿದರೂ, ರೋಗಿಗಳ ಸಂಬಂಧಿಕರು ಅದಕ್ಕೆ ಒಪ್ಪಲಿಲ್ಲ. ಆಗ ಆಮ್ಲಜನಕ ಕೊರತೆಯ ಅಣಕು ಕಾರ್ಯಾಚರಣೆ ನಡೆಸಿದೆವು' ಎಂದು ಆಸ್ಪತ್ರೆ ಮಾಲೀಕ ಹೇಳಿದ್ದಾರೆ.

'ಏಪ್ರಿಲ್ 26ರಂದು ಆಸ್ಪತ್ರೆಯಲ್ಲಿ 96 ಕೋವಿಡ್ ರೋಗಿಗಳಿಗೆ ಆಮ್ಲಜನಕ ಪೂರೈಸಲಾಗುತ್ತಿತ್ತು. ಬೆಳಿಗ್ಗೆ 7 ಗಂಟೆಗೆ ಆಮ್ಲಜನಕ ಪೂರೈಕೆ ಸ್ಥಗಿತಗೊಳಿಸಿದೆವು. ಯಾರೆಲ್ಲಾ ಬದುಕುತ್ತಾರೆ ಎಂದು ನೋಡಬೇಕು ಎಂದುಕೊಂಡಿದ್ದೆವು. ಐದೇ ನಿಮಿಷದಲ್ಲಿ 22 ಕೋವಿಡ್ ರೋಗಿಗಳ ದೇಹ ನೀಲಿ ಬಣ್ಣಕ್ಕೆ ತಿರುಗಿತು. ಅವರನ್ನು ಪ್ರತ್ಯೇಕವಾಗಿರಿಸಿದೆವು' ಎಂದು ಆಸ್ಪತ್ರೆ ಮಾಲೀಕ ಹೇಳಿದ್ದಾರೆ.

'ಆನಂತರ ನಿಮ್ಮದೇ ಆಮ್ಲಜನಕದ ಸಿಲಿಂಡರ್ ತನ್ನಿ ಎಂದು ರೋಗಿಗಳ ಸಂಬಂಧಿಕರಿಗೆ ಹೇಳಿದೆವು. ಅದು ತುಂಬಾ ಒಳ್ಳೆಯ ಪ್ರಯೋಗವಾಗಿತ್ತು' ಎಂದು ಮಾಲೀಕ ಹೇಳುತ್ತಿರುವುದು ವಿಡಿಯೊದಲ್ಲಿ ದಾಖಲಾಗಿದೆ.

ಏಪ್ರಿಲ್ 26ರಂದು ಆ ಆಸ್ಪತ್ರೆಯಲ್ಲಿ ನಾಲ್ವರು ಕೋವಿಡ್ ರೋಗಿಗಳು ಮೃತಪಟ್ಟಿದ್ದಾರೆ ಎಂದು ಅಧಿಕೃತ ದಾಖಲೆಗಳು ಹೇಳುತ್ತವೆ. ಜಿಲ್ಲಾಡಳಿತದ ಅಧಿಕಾರಿಗಳೂ ಇದನ್ನೇ ದೃಢಪಡಿಸಿದ್ದಾರೆ. ಆದರೆ ಆಸ್ಪತ್ರೆ ಮಾಲೀಕ ಹೇಳಿರುವಂತೆ 22 ಜನರು ಮೃತಪಟ್ಟಿದ್ದಾರೆಯೇ, ಇಲ್ಲವೇ ಎಂಬುದು ದೃಢಪಟ್ಟಿಲ್ಲ. ಈ ಬಗ್ಗೆ ತನಿಖೆ ನಡೆಸಲು ಉತ್ತರ ಪ್ರದೇಶ ಸರ್ಕಾರ ಆದೇಶಿಸಿದೆ.

> **ಈ ಪ್ರಕರಣದಲ್ಲಿ ತಪ್ಪಿತಸ್ಥರಿಗೆ ಕಠಿಣ ಶಿಕ್ಷೆಯಾಗಬೇಕು. ಬಿಜೆಪಿಯ ಜನರಿಗೆ ಮನುಷ್ಯತ್ವವೂ ಇಲ್ಲ, ಅವರ ಬಳಿ ಆಮ್ಲಜನಕವೂ ಇಲ್ಲ**
> **ರಾಹುಲ್ ಗಾಂಧಿ,** ಕಾಂಗ್ರೆಸ್ ಸಂಸದ

> **ಈ ಬಗ್ಗೆ ತನಿಖೆ ನಡೆಸಲು ಆದೇಶಿಸಲಾಗಿದೆ. ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳುತ್ತೇವೆ**
> **ಜೈ ಪ್ರತಾಪ್ ಸಿಂಗ್,** ಉತ್ತರ ಪ್ರದೇಶ ಆರೋಗ್ಯ ಸಚಿವ

ಗಾಂಧೀಜಿ ಮರಿ ಮೊಮ್ಮಗಳಿಗೆ ಜೈಲು

ಜೊಹಾನ್ಸ್‌ಬರ್ಗ್: ವಂಚನೆ, ನಕಲಿ ದಾಖಲೆ ಸೃಷ್ಟಿಸಿದ ಆರೋಪದಲ್ಲಿ ಮಹಾತ್ಮ ಗಾಂಧೀಜಿ ಅವರ ಮರಿ ಮೊಮ್ಮಗಳು ಆಶಿಶ್ ಲತಾ ರಾಮ್‌ಗೋಬಿನ್ ಅವರಿಗೆ ದಕ್ಷಿಣ ಆಫ್ರಿಕಾದ ಡರ್ಬನ್ ನ್ಯಾಯಾಲಯ ಏಳು ವರ್ಷಗಳ ಜೈಲು ಶಿಕ್ಷೆ ವಿಧಿಸಿದೆ.

ಆರು ದಶಲಕ್ಷ ಆಫ್ರಿಕನ್ ರಾಂಡ್ (ಅಂದಾಜು ₹3.22 ಕೋಟಿ) ವಂಚಿಸಿದ ಪ್ರಕರಣದಲ್ಲಿ ಆಶಿಶ್ ಲತಾ (56) ಅವರಿಗೆ ಈ ಶಿಕ್ಷೆ ವಿಧಿಸಲಾಗಿದೆ.

ಮಾನವ ಹಕ್ಕುಗಳ ಹೋರಾಟಗಾರ್ತಿ ಇಳಾ ಗಾಂಧಿ ಮತ್ತು ಮೇವಾ ರಾಮ್‌ಗೋಬಿನ್ ಅವರ ಪುತ್ರಿ ಆಶಿಶ್ ಲತಾ ರಾಮ್‌ಗೋಬಿನ್. ಸ್ವಯಂ ಉದ್ಯೋಗ ಕೈಗೊಂಡಿರುವ ಆಶಿಶ್ ಲತಾ ಅವರಿಗೆ ಇಬ್ಬರು ಮಕ್ಕಳಿದ್ದಾರೆ.

ಎಸ್.ಆರ್. ಮಹಾರಾಜ್ ಉದ್ಯಮಿಯನ್ನು ವಂಚಿಸಿದ ಆರೋಪದಲ್ಲಿ ಅವರ ವಿರುದ್ಧ ಪ್ರಕರಣ ದಾಖಲಾಗಿತ್ತು.

ಭಾರತದಲ್ಲಿ ಅಸ್ತಿತ್ವದಲ್ಲಿಯೇ ಇಲ್ಲದ ಕಂಪನಿಯೊಂದರ ಆಮದು ಮತ್ತು ಕಸ್ಟಮ್ಸ್ ಸುಂಕಗಳನ್ನು ತೆರವುಗೊಳಿಸುವುದಕ್ಕಾಗಿ ಮಹಾರಾಜ್ ಅವರಿಂದ ಆಶಿಶ್ ಲತಾ 62 ಲಕ್ಷ ರಾಂಡ್ ಅನ್ನು ಮುಂಗಡ ಪಡೆದುಕೊಂಡಿದ್ದರು. ಜತೆಗೆ ಅವರಿಗೆ ಲಾಭದಲ್ಲಿ ಷೇರು ನೀಡುವ ಭರವಸೆ ನೀಡಿದ್ದರು.

'ಮೀಸಲಾತಿ: ಶೇ 50ರ ಮಿತಿ ಸಡಿಲಿಸಿ'

ನವದೆಹಲಿ: ಮೀಸಲಾತಿ ಸೌಲಭ್ಯಕ್ಕೆ ಈಗ ಇರುವ ಶೇ 50ರ ಮಿತಿಯನ್ನು ಸಡಿಲಿಸಬೇಕು ಎಂದು ಮಹಾರಾಷ್ಟ್ರ ಮುಖ್ಯಮಂತ್ರಿ ಉದ್ಧವ್ ಠಾಕ್ರೆ ಒತ್ತಾಯಿಸಿದ್ದಾರೆ. ಮಂಗಳವಾರ ಇಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರನ್ನು ಭೇಟಿ ಆಗಿದ್ದ ಅವರು, ಇದು ಒಳಗೊಂಡಂತೆ 12 ಬೇಡಿಕೆಗಳ ಬಗ್ಗೆ ಗಮನಸೆಳೆದರು.

ರಾಜ್ಯದಲ್ಲಿ ಮರಾಠಾ ಸಮುದಾಯದವರಿಗೆ ಮೀಸಲಾತಿ ಕಲ್ಪಿಸಲು ಇದು ಅಗತ್ಯ ಎಂದು ಪ್ರತಿಪಾದಿಸಿದ್ದಾರೆ. ಅಲ್ಲದೆ, ಮಹಾರಾಷ್ಟ್ರಕ್ಕೆ ಬಾಕಿ ಉಳಿದಿರುವ ಜಿಎಸ್‌ಟಿ ತೆರಿಗೆ ಹಾಗೂ ಚಂಡಮಾರುತ ಪರಿಹಾರ ಕಾರ್ಯಕ್ಕಾಗಿ ಆರ್ಥಿಕ ನೆರವು ಒದಗಿಸಬೇಕು ಎಂಬ ಬೇಡಿಕೆಗಳನ್ನು ಪ್ರಮುಖವಾಗಿ ಪ್ರಸ್ತಾಪಿಸಿದ್ದಾರೆ.

ಭೇಟಿ ಸಂದರ್ಭದಲ್ಲಿ ಉಪ ಮುಖ್ಯಮಂತ್ರಿ ಅಜಿತ್ ಪವಾರ್ ಮತ್ತು ಲೋಕೋಪಯೋಗಿ ಸಚಿವ ಅಶೋಕ್ ಚವಾಣ್ ಅವರು ಇದ್ದರು. ಕೇಂದ್ರ ಸರ್ಕಾರ ಮಹಾರಾಷ್ಟ್ರಕ್ಕೆ ₹ 24,306 ಕೋಟಿ ಜಿಎಸ್‌ಟಿ ಬಾಕಿ ನೀಡಬೇಕಾಗಿದೆ. ಈ ಹಣ ವರ್ಗಾಯಿಸಲು ಕ್ರಮವಹಿಸಬೇಕು ಎಂದು ಠಾಕ್ರೆ ಕೋರಿದರು.

ಮೋದಿ–ಠಾಕ್ರೆ ಗೋಪ್ಯ ಚರ್ಚೆ

ನವದೆಹಲಿ: ಉದ್ಧವ್ ಠಾಕ್ರೆ ಅವರು ಪ್ರಧಾನಿ ನರೇಂದ್ರ ಮೋದಿ ಅವರನ್ನು ಇಲ್ಲಿ ಪ್ರತ್ಯೇಕವಾಗಿ ಭೇಟಿಯಾಗಿ ಚರ್ಚಿಸಿದ್ದು, ರಾಜಕೀಯ ವಲಯದಲ್ಲಿ ಕುತೂಹಲ ಕೆರಳಿಸಿದೆ.

'ನಾವು ಅಧಿಕಾರ ಹಂಚಿಕೊಳ್ಳದಿರಬಹುದು. ಹಾಗೆಂದು, ಸಂಬಂಧವನ್ನೂ ಕಡಿದುಕೊಳ್ಳಬೇಕೇ?' ಎಂದು ಬಳಿಕ ಸುದ್ದಿಗೋಷ್ಠಿಯಲ್ಲಿ ಠಾಕ್ರೆ ಈ ಭೇಟಿಯನ್ನು ಸಮರ್ಥಿಸಿಕೊಂಡರು.

'ನಾನೊಬ್ಬನೇ ಪ್ರತ್ಯೇಕವಾಗಿ ನರೇಂದ್ರ ಮೋದಿ ಅವರನ್ನು ಭೇಟಿಯಾದರೆ ತಪ್ಪೇನಿದೆ? ನಾನು ನವಾಜ್ ಷರೀಫ್ ಅವರನ್ನು ಭೇಟಿ ಮಾಡುತ್ತಿಲ್ಲವಲ್ಲ?' ಎಂದೂ ಪ್ರಶ್ನಿಸಿದರು. 2019ರಲ್ಲಿ ಬಿಜೆಪಿ ಜೊತೆಗೂಡಿ ವಿಧಾನಸಭೆ ಚುನಾವಣೆ ಎದುರಿಸಿದ್ದ ಶಿವಸೇನೆ ಫಲಿತಾಂಶದ ಬಳಿಕ ಸಂಪರ್ಕ ಕಡಿದುಕೊಂಡಿತ್ತು. ಎನ್‌ಸಿಪಿ, ಕಾಂಗ್ರೆಸ್ ಜೊತೆಗೂಡಿ ಸರ್ಕಾರ ರಚಿಸಿತ್ತು.

'ಲಸಿಕೆ: ಕೇಂದ್ರಕ್ಕೆ ಹೆಡ್‌ಲೈನ್ ಬಗ್ಗೆಯೇ ಆಸಕ್ತಿ'

ನವದೆಹಲಿ: ಕೋವಿಡ್ ಲಸಿಕೆ ನೀಡುವ ವಿಷಯದಲ್ಲಿ ಕೇಂದ್ರ ಸರ್ಕಾರಕ್ಕೆ ಹೆಡ್‌ಲೈನ್‌ಗಳ ಬಗ್ಗೆ ಆಸಕ್ತಿಯೇ ಹೊರತು, ಡೆಡ್‌ಲೈನ್ ಬಗ್ಗೆ ಅಲ್ಲ ಎಂದು ಕಾಂಗ್ರೆಸ್ ಮಂಗಳವಾರ ಚಾಟಿ ಬೀಸಿದೆ.

ಈ ವರ್ಷಾಂತ್ಯದ ವೇಳೆಗೆ ಸರ್ವರಿಗೂ ಲಸಿಕೆ ನೀಡುವ ಕುರಿತ ಕಾರ್ಯಸೂಚಿ ಮತ್ತು ಲಸಿಕೆ ನೀತಿ ಕುರಿತಂತೆ ಸ್ಪಷ್ಟನೆ ನೀಡಲು ಸಂಸತ್ ಅಧಿವೇಶನ ಕರೆಯಬೇಕು ಎಂದು ಆಗ್ರಹಪಡಿಸಿದೆ.

ಕಾಂಗ್ರೆಸ್ ನಾಯಕ ಜೈರಾಂ ರಮೇಶ್ ಅವರು, ಎಲ್ಲ ಭಾರತೀಯರಿಗೂ ಉಚಿತವಾಗಿ ಲಸಿಕೆ ಸಿಗಬೇಕು. ಇದಕ್ಕಾಗಿ ಕೋವಿನ್‌ನಲ್ಲಿ ನೋಂದಣಿ ಮಾಡುವುದನ್ನು ಕಡ್ಡಾಯ ಮಾಡಬಾರದು. ಏಕೆಂದರೆ, ಡಿಜಿಟಲ್ ಸೌಲಭ್ಯವಿಲ್ಲದವರೂ ದೇಶದಲ್ಲಿ ಸಾಕಷ್ಟು ಮಂದಿ ಇದ್ದಾರೆ ಎಂದು ಪ್ರತಿಪಾದಿಸಿದರು.

ರಾಜ್ಯಗಳಿಗೆ ಲಸಿಕೆಯನ್ನು ಹಂಚಿಕೆ ಮಾಡುವಾಗ ಪಾರದರ್ಶಕತೆಯನ್ನು ಕಾಯ್ದುಕೊಳ್ಳಬೇಕು. ಅಲ್ಲದೆ, ಲಸಿಕೆ ನೀತಿ ಕುರಿತ ಚರ್ಚೆ ಹಾಗೂ ಇದಕ್ಕಾಗಿ ಮಾಡಬೇಕಾದ ವೆಚ್ಚಕ್ಕೆ ಅನುಮೋದನೆ ಪಡೆದುಕೊಳ್ಳಲು ಸಂಸತ್ತಿನ ಅಧಿವೇಶನವನ್ನು ಕರೆಯಬೇಕು ಎಂದು ಒತ್ತಾಯಿಸಿದ್ದಾರೆ.

ಲಸಿಕೆ ವಿತರಣೆಯಲ್ಲಿ ಯಾವುದೇ ತಾರತಮ್ಯಕ್ಕೆ ಅವಕಾಶ ಇಲ್ಲದಂತೆ ಒಕ್ಕೂಟ ಆಡಳಿತದ ಸಹಕಾರ ತತ್ವವನ್ನು ಕೇಂದ್ರ ಸರ್ಕಾರ ಪಾಲಿಸಬೇಕು ಎಂದು ಒತ್ತಾಯಿಸಿದರು.

'ಈ ಸರ್ಕಾರಕ್ಕೆ ಹೆಡ್‌ಲೈನ್ ಮೇಲೆ ಆಸಕ್ತಿ, ಡೆಡ್‌ಲೈನ್ ಮೇಲೆ ಅಲ್ಲ' ಎಂದು ಆನ್‌ಲೈನ್ ಸುದ್ದಿಗೋಷ್ಠಿಯಲ್ಲಿ ಟೀಕಿಸಿದ ಅವರು, ಸರ್ವರಿಗೂ ಈ ವರ್ಷದ ಡಿಸೆಂಬರ್ ಅಂತ್ಯದ ವೇಳೆಗೆ ಲಸಿಕೆಯನ್ನು ನೀಡುವುದರ ಕುರಿತು ರೂಪಿಸಿರುವ ಕಾರ್ಯಸೂಚಿ, ನೀತಿಯನ್ನು ಬಹಿರಂಗಪಡಿಸಬೇಕು ಎಂದು ಒತ್ತಾಯಿಸಿದರು.

ಪ್ರಧಾನಿ ವಿರುದ್ಧ ನೇರ ಹರಿಹಾಯ್ದ ಅವರು, ಪ್ರಧಾನಮಂತ್ರಿಯವರು ನಿದ್ರೆಯಲ್ಲಿದ್ದರು. ಸುಪ್ರೀಂ ಕೋರ್ಟ್ ಮಧ್ಯಪ್ರವೇಶಿಸಿದ ಬಳಿಕ ಈಗ ಕುಂಭಕರ್ಣನ ನಿದ್ರೆಯಿಂದ ಎದ್ದಿದ್ದಾರೆ. ಈಗಿನದು ಒಬ್ಬ ವ್ಯಕ್ತಿಯ ಅಹಂ ಮತ್ತು ವೈಫಲ್ಯದಿಂದಾಗಿ ಮೂಡಿರುವ ಬಿಕ್ಕಟ್ಟು. ಇದರ ಪರಿಣಾಮವನ್ನು ದೇಶವೇ ಎದುರಿಸುತ್ತಿದೆ ಎಂದು ಹೇಳಿದರು.

> **ಡಿಸೆಂಬರ್ ಅಂತ್ಯದ ವೇಳೆಗೆ 100 ಕೋಟಿ ಜನರಿಗೆ ಲಸಿಕೆ ನೀಡಬೇಕಾದರೆ ಪ್ರತಿದಿನವೂ ಕನಿಷ್ಠ 80 ಲಕ್ಷ ಡೋಸ್ ಲಸಿಕೆ ಅಗತ್ಯ. ಈ ಗುರಿ ಸಾಧಿಸಲು ಕಾರ್ಯಸೂಚಿ, ನೀತಿ ಏನು? ಲಸಿಕೆಗಳು ಎಲ್ಲಿಂದ ಬರುತ್ತವೆ?**
> **ಜೈರಾಂ ರಮೇಶ್,** ಕಾಂಗ್ರೆಸ್ ಮುಖಂಡ

ಸೆಬಿ ಆದೇಶ ಪ್ರಶ್ನಿಸಲಿರುವ ಫ್ರ್ಯಾಂಕ್ಲಿನ್ ಟೆಂಪಲ್‌ಟನ್

ನವದೆಹಲಿ (ಪಿಟಿಐ): ಸಾಲಪತ್ರ ಆಧಾರಿತ ಆರು ಮ್ಯೂಚುವಲ್ ಫಂಡ್ ಯೋಜನೆಗಳನ್ನು 2020ರಲ್ಲಿ ಸ್ಥಗಿತಗೊಳಿಸಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಯು (ಸೆಬಿ) ತನ್ನ ವಿರುದ್ಧ ನೀಡಿರುವ ಆದೇಶವನ್ನು ಪ್ರಶ್ನಿಸಿ ಎಸ್‌ಎಟಿ ಕದ ತಟ್ಟುವುದಾಗಿ ಫ್ರ್ಯಾಂಕ್ಲಿನ್ ಟೆಂಪಲ್‌ಟನ್ ಆಸ್ತಿ ನಿರ್ವಹಣಾ ಕಂಪನಿ ಹೇಳಿದೆ.

ಫ್ರ್ಯಾಂಕ್ಲಿನ್ ಟೆಂಪಲ್‌ಟನ್ ಆಸ್ತಿ ನಿರ್ವಹಣಾ ಕಂಪನಿಯು ಸಾಲಪತ್ರ ಆಧಾರಿತ ಹೊಸ ಯೋಜನೆಗಳನ್ನು ಎರಡು ವರ್ಷಗಳವರೆಗೆ ಆರಂಭಿಸುವಂತಿಲ್ಲ, ಆರು ಮ್ಯೂಚುವಲ್ ಫಂಡ್ ಯೋಜನೆಗಳನ್ನು ಸ್ಥಗಿತಗೊಳಿಸಿದ ಪ್ರಕರಣದಲ್ಲಿ ನಿಯಮಗಳನ್ನು ಉಲ್ಲಂಘಿಸಿದ್ದಕ್ಕಾಗಿ ₹ 5 ಕೋಟಿ ದಂಡ ಪಾವತಿಸಬೇಕು ಎಂದು ಸೆಬಿ ಸೋಮವಾರ ಆದೇಶಿಸಿದೆ.

ಸ್ಥಗಿತಗೊಳಿಸಿರುವ ಆರು ಫಂಡ್‌ಗಳಿಗಾಗಿ ಸಂಗ್ರಹಿಸಿದ ಹೂಡಿಕೆ ನಿರ್ವಹಣೆ ಹಾಗೂ ಸಲಹಾ ಶುಲ್ಕವನ್ನು ಹೂಡಿಕೆದಾರರಿಗೆ ಬಡ್ಡಿ ಸಹಿತ ಹಿಂದಿರುಗಿಸಬೇಕು ಎಂದು ಕೂಡ ಸೆಬಿ ತಾಕೀತು ಮಾಡಿದೆ. ಹೀಗೆ ಹಿಂದಿರುಗಿಸಬೇಕಿರುವ ಶುಲ್ಕ ಮತ್ತು ಬಡ್ಡಿಯ ಮೊತ್ತ ₹ 512 ಕೋಟಿಗಿಂತ ಹೆಚ್ಚು.

'ಸೆಬಿ ಆದೇಶದಲ್ಲಿ ಹೇಳಿರುವ ಮಾತುಗಳನ್ನು ನಾವು ಒಪ್ಪುವುದಿಲ್ಲ. ಆದೇಶ ಪ್ರಶ್ನಿಸಿ ಮೇಲ್ಮನವಿ ನ್ಯಾಯಮಂಡಳಿಗೆ ಅರ್ಜಿ ಸಲ್ಲಿಸಲಿದ್ದೇವೆ' ಎಂದು ಫ್ರ್ಯಾಂಕ್ಲಿನ್ ಟೆಂಪಲ್‌ಟನ್ ಕಂಪನಿಯು ವಕ್ತಾರರೊಬ್ಬರು ತಿಳಿಸಿದರು.

ಸ್ಥಗಿತಗೊಂಡ ಆರು ಮ್ಯೂಚುವಲ್ ಫಂಡ್‌ಗಳಲ್ಲಿ ಒಟ್ಟು ₹ 25 ಸಾವಿರ ಕೋಟಿ ಹಣ ಇತ್ತು. ಈ ವರ್ಷದ ಏಪ್ರಿಲ್ 30ರವರೆಗೆ ಹೂಡಿಕೆದಾರರಿಗೆ ಒಟ್ಟು ₹ 14,572 ಕೋಟಿ ಹಿಂದಿರುಗಿಸಲಾಗಿದೆ.

'ರಾಜ್ಯಗಳ ಬಳಿ 1.19 ಕೋಟಿ ಲಸಿಕೆ ಲಭ್ಯ'

ನವದೆಹಲಿ: 'ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ 1.19 ಕೋಟಿಗೂ ಹೆಚ್ಚು ಕೋವಿಡ್ ಲಸಿಕೆಯ ಡೋಸ್‌ಗಳು ಲಭ್ಯವಿದೆ' ಎಂದು ಕೇಂದ್ರ ಆರೋಗ್ಯ ಸಚಿವಾಲಯವು ಮಂಗಳವಾರ ತಿಳಿಸಿದೆ.

'ಈವರೆಗೆ ಕೇಂದ್ರವು ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಉಚಿತವಾಗಿ 24 ಕೋಟಿಗೂ ಹೆಚ್ಚು ಡೋಸ್‌ಗಳನ್ನು ವಿತರಣೆ ಮಾಡಿದೆ. ಇದರಲ್ಲಿ ಪೋಲಾಗಿರುವ ಲಸಿಕೆ ಸೇರಿ ಒಟ್ಟು 23.47 ಕೋಟಿ ಡೋಸ್‌ಗಳನ್ನು ಉಪಯೋಗಿಸಲಾಗಿದೆ. ಇನ್ನೂ 1.19 ಕೋಟಿ ಡೋಸ್‌ಗಳು ಬಾಕಿ ಉಳಿದಿವೆ' ಎಂದು ಸಚಿವಾಲಯ ಹೇಳಿದೆ.

ಮದ್ದಿಲ್ಲದ ಬಿಜೆಪಿ 'ಅಂತಯುದ್ಧ'

ಒಂದನೇ ಪುಟದಿಂದ

ಟ್ವೀಟ್‌ನಲ್ಲಿ ಏನಿದೆ: 'ಕಳೆದ 3 ದಿನದಿಂದ ಮಾಧ್ಯಮದಲ್ಲಿ ಬರುತ್ತಿರುವ ಹೇಳಿಕೆಗಳು ಪಕ್ಷದ ಹಿತದೃಷ್ಟಿಯಿಂದ ಒಳಿತಲ್ಲ. ಈ ಅಭಿಪ್ರಾಯಗಳು ಎಲ್ಲ ಶಾಸಕರು ಮತ್ತು ಕಾರ್ಯಕರ್ತರ ಅಭಿಪ್ರಾಯವೂ ಅಲ್ಲ. ನಮ್ಮ ಅಭಿಪ್ರಾಯಗಳನ್ನು ಮಾಧ್ಯಮದ ಮುಂದೆ ಹೇಳಲು ಸಾಧ್ಯವಿಲ್ಲವಾದ್ದರಿಂದ, ಪಕ್ಷದ ವರಿಷ್ಠರು ಅಭಿಪ್ರಾಯ ಆಲಿಸಲು ಪ್ರತ್ಯೇಕ ವ್ಯವಸ್ಥೆ ಮಾಡಬೇಕು' ಎಂದು ಅವರು ಅಧ್ಯಕ್ಷ ನಳಿನ್ ಕುಮಾರ್ ಕಟೀಲ್, ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ. ರವಿ ಅವರಿಗೆ ಟ್ವೀಟ್ ಟ್ಯಾಗ್ ಮಾಡಿದ್ದಾರೆ.

'ಶಾಸಕಾಂಗ ಪಕ್ಷದ ಸಭೆಯನ್ನು ಕರೆಯಿರಿ' ಎಂದು ಅವರು ನೇರವಾಗಿ ಹೇಳಿಲ್ಲ. ಮುಖ್ಯಮಂತ್ರಿ ಯಡಿಯೂರಪ್ಪ ನಾಯಕತ್ವದ ಬಗ್ಗೆಯೂ ಪ್ರಸ್ತಾಪಿಸದೇ, ಶಾಸಕರ ಅಭಿಪ್ರಾಯ ಹಂಚಿಕೊಳ್ಳಲು ಪ್ರತ್ಯೇಕ ವ್ಯವಸ್ಥೆ ಮಾಡಬೇಕೆಂದು ಅವರು ಬೇಡಿಕೆ ಮಂಡಿಸಿರುವುದು ನಾನಾ ರೀತಿಯ ಚರ್ಚೆಗಳಿಗೆ ದಾರಿ ಮಾಡಿಕೊಟ್ಟಿದೆ.

'ಬಿಜೆಪಿ ಎಂದರೆ ಸದಾ ಹೇಳಿಕೆ ನೀಡುವ ಮೂಲಕ ವಿವಾದ ಸೃಷ್ಟಿಸುವ ಎಂ.ಪಿ.ರೇಣುಕಾಚಾರ್ಯ ಅವರೂ ಅಲ್ಲ, ದೆಹಲಿಗೆ ದೂರು ಹೇಳಲು ಹೋಗುವ ಸಿ.ಪಿ.ಯೋಗೇಶ್ವರ್ ಅಥವಾ ಬೇರೆಯವರೂ ಅಲ್ಲ. ಇವರಿಂದ ಪಕ್ಷದ ಬಗ್ಗೆ ತಪ್ಪು ಸಂದೇಶಗಳು ರವಾನೆಯಾಗುತ್ತವೆ. ನಮ್ಮಂತ ಬಹಳಷ್ಟು ಶಾಸಕರು ಸುಮ್ಮನಿದ್ದೇವೆ ಎಂಬ ಮಾತ್ರಕ್ಕೆ ನಮ್ಮಲ್ಲಿ ಭಾವನೆಗಳಿಲ್ಲ ಎಂದಲ್ಲ. ನಮ್ಮ ನೋವುಗಳನ್ನು ಮತ್ತು ಅಭಿಪ್ರಾಯಗಳನ್ನೂ ವರಿಷ್ಠರು ಕೇಳಬೇಕು' ಎಂದು ಸುನಿಲ್ ತಮ್ಮ ಆಪ್ತರ ಬಳಿ ಹೇಳಿಕೊಂಡಿದ್ದಾರೆ ಎನ್ನಲಾಗಿದೆ.

'ಕೆಲವೇ ಶಾಸಕರು ಪಕ್ಷ ಮತ್ತು ನಾಯಕರನ್ನು ತಮ್ಮ ತಾಳಕ್ಕೆ ತಕ್ಕಂತೆ ಕುಣಿಸುವುದು ಸರಿಯಲ್ಲ. ಇಂತಹ ನಡವಳಿಕೆಗಳಿಂದ ಪಕ್ಷಕ್ಕಾಗಿ ಹಲವು ದಶಕಗಳಿಂದ ದುಡಿದ ಕಾರ್ಯಕರ್ತರ ಮಧ್ಯೆ ತಪ್ಪು ಸಂದೇಶಗಳು ರವಾನೆಯಾಗುತ್ತಿದೆ. ಇದನ್ನು ಸರಿಪಡಿಸುವುದು. ಎಲ್ಲ ಶಾಸಕರ ಅಭಿಪ್ರಾಯವನ್ನು ಏಕ ರೀತಿಯಲ್ಲಿ ಪರಿಗಣಿಸುವ ಕೆಲಸ ಆಗಬೇಕು. ಇದಕ್ಕಾಗಿ ಸಭೆ ಅಗತ್ಯ' ಎಂಬುದಾಗಿ ತಿಳಿಸಿದ್ದಾರೆ ಎಂದು ಹೇಳಲಾಗಿದೆ.

> **ಯಡಿಯೂರಪ್ಪ ಅವರು ಈ ಅವಧಿಗೆ ಮಾತ್ರವಲ್ಲ, ಮುಂದಿನ ಅವಧಿಗೂ ಮುಖ್ಯಮಂತ್ರಿಯಾಗಿ ಮುಂದುವರೆಯಲಿದ್ದಾರೆ**
> **ಗೋವಿಂದ ಕಾರಜೋಳ,** ಉಪಮುಖ್ಯಮಂತ್ರಿ

ಇಸ್ರೇಲ್: ಪ್ರಧಾನಿ ನೇತನ್ಯಾಹು ಅಧಿಕಾರ ಅಂತ್ಯ?

ಜೆರುಸಲೆಂ (ರಾಯಿಟರ್ಸ್): ಇಸ್ರೇಲ್ ಪ್ರಧಾನಿ ಬೆಂಜಮಿನ್ ನೇತನ್ಯಾಹು ಅವರ ಸುದೀರ್ಘ ಅವಧಿಯ ಅಧಿಕಾರದ ಪರ್ವ ಭಾನುವಾರ ಅಂತ್ಯಗೊಳ್ಳುವ ಸಂಭವವಿದೆ. ದೇಶದ ಸಂಸತ್ತು ಅಂದು, ವಿಭಿನ್ನ ಪಕ್ಷಗಳು ಒಟ್ಟುಗೂಡಿ ಸರ್ಕಾರ ರಚಿಸುವುದಕ್ಕೆ ಸಹಮತ ವ್ಯಕ್ತಪಡಿಸುವ ಸಾಧ್ಯತೆ ನಿಚ್ಚಳವಾಗಿವೆ.

'ಹಾಗೆಯೇ ಆಗುತ್ತದೆ' ಎಂದು ವಿರೋಧಪಕ್ಷದ ನಾಯಕ, ಸೆಂಟ್ರಿಸ್ಟ್ ಯೆಷ್ ಅಟಿಡ್ ಪಕ್ಷದ ಯಯಿರ್ ಲ್ಯಾಪಿಡ್ ಅವರು ಟ್ವೀಟ್ ಮಾಡಿದ್ದಾರೆ. ಜನಪ್ರತಿನಿಧಿಗಳ ಸಭೆಯ ಸ್ಪೀಕರ್ ಅವರು ಜೂನ್ 13ರಂದು ವಿಶೇಷ ಅಧಿವೇಶನ ಕರೆದಿದ್ದಾರೆ. ನೇತನ್ಯಾಹು ಅವರು 2009ರಿಂದಲೂ ಅಧಿಕಾರದಲ್ಲಿದ್ದಾರೆ.

ಚೀನಾ ಕಂಪನಿ ಪ್ರಾಯೋಜಕತ್ವ ಕೈಬಿಟ್ಟ ಐಒಎ

ನವದೆಹಲಿ (ಪಿಟಿಐ): ಭಾರತ ಒಲಿಂಪಿಕ್ ಸಂಸ್ಥೆಯು (ಐಒಎ), ಚೀನಾ ಮೂಲದ ಕಂಪನಿ ಲಿ ನಿಂಗ್‌ನೊಂದಿಗಿನ ಪ್ರಾಯೋಜಕತ್ವ ಒಪ್ಪಂದವನ್ನು ಕೈಬಿಡಲು ನಿರ್ಧರಿಸಿದೆ. ಈ ಬಾರಿಯ ಟೋಕಿಯೊ ಒಲಿಂಪಿಕ್ಸ್‌ಗೆ ತೆರಳುವ ಅಥ್ಲೀಟ್‌ಗಳು ಯಾವುದೇ ಕಂಪನಿಯ ಪ್ರಾಯೋಜಕತ್ವ ಇಲ್ಲದ ಪೋಷಾಕು ಧರಿಸಲಿದ್ದಾರೆ ಎಂದು ಸಂಸ್ಥೆಯು ಮಂಗಳವಾರ ತಿಳಿಸಿದೆ.

ಟೋಕಿಯೊ ಕೂಟಕ್ಕಾಗಿ ಲಿ ನಿಂಗ್ ವಿನ್ಯಾಸಗೊಳಿಸಿದ ಉಡುಪುಗಳನ್ನು ಐಒಎ ಕಳೆದ ವಾರ ಅನಾವರಣಗೊಳಿಸಿತ್ತು. ಇದಕ್ಕೆ ಬಹಳಷ್ಟು ಜನ ಟೀಕೆ ವ್ಯಕ್ತಪಡಿಸಿದ್ದರು. ಕ್ರೀಡಾಕೂಟಕ್ಕೆ ಚೀನಾದ ಪ್ರಾಯೋಜಕರನ್ನು ಸೇರಿಸದಂತೆ ಕ್ರೀಡಾ ಸಚಿವಾಲಯವು ಐಒಎಗೆ ಸೂಚಿಸಿತ್ತು ಎಂದು ತಿಳಿದುಬಂದಿದೆ.

ಫ್ರೆಂಚ್ ಓಪನ್ ಟೆನಿಸ್ ಟೂರ್ನಿ: ನಾಲ್ಕರ ಘಟ್ಟಕ್ಕೆ ಪಾವ್ಲಿಚೆಂಕೊವಾ, ಜ್ವೆರೆವ್

ಸೆಮಿಫೈನಲ್‌ಗೆ ಜಿಡಾನ್ಸೆಕ್

ಪ್ಯಾರಿಸ್ (ರಾಯಿಟರ್ಸ್): ಅಮೋಘ ಆಟವಾಡಿದ ತಮಾರ ಜಿಡಾನ್ಸೆಕ್ ಫ್ರೆಂಚ್ ಓಪನ್ ಟೆನಿಸ್ ಟೂರ್ನಿಯ ಸೆಮಿಫೈನಲ್‌ಗೆ ಪ್ರವೇಶಿಸಿದರು. ಇದರೊಂದಿಗೆ ಗ್ಲ್ಯಾನ್‌ಸ್ಲಾಮ್ ಟೂರ್ನಿಯೊಂದರ ನಾಲ್ಕರ ಘಟ್ಟ ಪ್ರವೇಶಿಸಿದ ಸ್ಲೋವೆನಿಯಾದ ಮೊಟ್ಟಮೊದಲ ಆಟಗಾರ್ತಿಯೆಂಬ ಗೌರವಕ್ಕೆ ಪಾತ್ರರಾದರು.

ಮಂಗಳವಾರ ನಡೆದ ಮಹಿಳೆಯರ ಸಿಂಗಲ್ಸ್ ವಿಭಾಗದ ಎಂಟರ ಘಟ್ಟದ ಪಂದ್ಯದಲ್ಲಿ ತಮಾರ 7-5, 4-6, 8-6ರಿಂದ ಸ್ಪೇನ್‌ನ ಪೌಲಾ ಬಡೋಸಾ ಅವರನ್ನು ಮಣಿಸಿದರು.

ಈ ಇಬ್ಬರೂ ಆಟಗಾರ್ತಿಯರು ಮೊದಲ ಬಾರಿ ಗ್ರ್ಯಾನ್‌ಸ್ಲಾಮ್ ಟೂರ್ನಿಯೊಂದರ ಕ್ವಾರ್ಟರ್‌ಫೈನಲ್ ತಲುಪಿದ್ದರು. ವಿಶ್ವ ಕ್ರಮಾಂಕದಲ್ಲಿ 85ನೇ ಸ್ಥಾನದಲ್ಲಿರುವ ತಮಾರ ಮೊದಲ ಸೆಟ್ ಗೆದ್ದುಕೊಂಡು, ಎರಡನೇ ಸೆಟ್‌ನಲ್ಲಿ ಆರಂಭದಲ್ಲೇ 4-2 ಮುನ್ನಡೆಯಲ್ಲಿದ್ದರು. ಆದರೆ ತಿರುಗೇಟು ನೀಡಿದ 35ನೇ ಕ್ರಮಾಂಕದ ಬಡೋಸಾ ಸತತ ಆರು ಗೇಮ್‌ಗಳನ್ನು ಗಳಿಸಿ ಎರಡನೇ ಸೆಟ್ ತಮ್ಮದಾಗಿಸಿಕೊಂಡರು.

ಜಯದ ಸಂಭ್ರಮದಲ್ಲಿ ತಮಾರ ಜಿಡಾನ್ಸೆಕ್–ರಾಯಿಟರ್ಸ್ ಚಿತ್ರ

ಆವೆಮಣ್ಣಿನ ಅಂಗಳದಲ್ಲಿ ಸತತ ಒಂಬತ್ತು ಪಂದ್ಯಗಳನ್ನು ಗೆದ್ದಿದ್ದ ಬಡೋಸಾ, ನಿರ್ಣಾಯಕ ಮೂರನೇ ಸೆಟ್‌ನಲ್ಲಿ 2-0 ಮುನ್ನಡೆ ಸಾಧಿಸಿದಾಗ ಪ್ರಾಬಲ್ಯ ಸಾಧಿಸುತ್ತಾರೆ ಎಂದು ನಿರೀಕ್ಷಿಸಲಾಗಿತ್ತು. ಆದರೆ 6-6 ಸಮಬಲ ಸಾಧಿಸುವಲ್ಲಿ ಯಶಸ್ವಿಯಾದ ತಮಾರ, ಮೂರು ಬ್ರೇಕ್ ಪಾಯಿಂಟ್ ಉಳಿಸಿಕೊಂಡರು. ಕೊನೆಯಲ್ಲಿ ಎರಡು ಗೇಮ್ ಗೆದ್ದುಕೊಂಡ ಅವರು ಗೆಲುವಿನ ಸಂಭ್ರಮದಲ್ಲಿ ಮಿಂದೆದ್ದರು. ಬಡೋಸಾ ಎರಡು ಲೋಪಗಳನ್ನು ಎಸಗಿದ್ದೂ ಸ್ಲೋವೆನಿಯಾ ಆಟಗಾರ್ತಿಗೆ ನೆರವಾಯಿತು.

ತಮಾರ ಅವರು ನಾಲ್ಕರ ಘಟ್ಟದ ಪಂದ್ಯದಲ್ಲಿ ಅನುಭವಿ ಆಟಗಾರ್ತಿ ಅನಸ್ತೇಸಿಯಾ ಪಾವ್ಲಿಚೆಂಕೊವಾ ಅವರನ್ನು ಎದುರಿಸಲಿದ್ದಾರೆ.

ಪಾವ್ಲಿಚೆಂಕೊವಾ, ಅಲೆಕ್ಸಾಂಡರ್ ಜ್ವೆರೆವ್ ಜಯಭೇರಿ: ಕಜಕಸ್ತಾನದ ಎಲೆನಾ ರಿಬಾಕಿನಾ ಎದುರು 6-7, 6-2, 9-7ರಿಂದ ಜಯಿಸಿದ ರಷ್ಯಾದ ಅನಸ್ತೇಸಿಯಾ ಪಾವ್ಲಿಚೆಂಕೊವಾ ಸೆಮಿಫೈನಲ್ ತಲುಪಿದರು. ತಮ್ಮ 52ನೇ ಯತ್ನದಲ್ಲಿ ಅವರು ಮೊದಲ ಬಾರಿ ಗ್ರ್ಯಾನ್‌ಸ್ಲಾಮ್ ಟೂರ್ನಿಯೊಂದರ ನಾಲ್ಕರ ಘಟ್ಟಕ್ಕೆ ಲಗ್ಗೆಯಿಟ್ಟರು.

ಪುರುಷರ ಸಿಂಗಲ್ಸ್ ವಿಭಾಗದ ಕ್ವಾರ್ಟರ್‌ಫೈನಲ್ ಹಣಾಹಣಿಯಲ್ಲಿ ಸ್ಪೇನ್‌ನ ಅಲೆಜಾಂಡ್ರೊ ಡೇವಿಡೊವಿಚ್ ಫೊಕಿನಾ ಎದುರು 6-4, 6-1, 6-1ರಿಂದ ಗೆದ್ದ ಜರ್ಮನಿಯ ಅಲೆಕ್ಸಾಂಡರ್ ಜ್ವೆರೆವ್ ಕೂಡ ನಾಲ್ಕರ ಘಟ್ಟ ತಲುಪಿದರು.

ಗೋಲು ಗಳಿಕೆ: ಮೆಸ್ಸಿ ಹಿಂದಿಕ್ಕಿದ ಚೆಟ್ರಿ

ದೋಹಾ (ಪಿಟಿಐ): ಅಂತರರಾಷ್ಟ್ರೀಯ ಫುಟ್‌ಬಾಲ್‌ನಲ್ಲಿ 74ನೇ ಗೋಲು ಗಳಿಸುವ ಮೂಲಕ ಭಾರತ ತಂಡದ ನಾಯಕ ಸುನಿಲ್ ಚೆಟ್ರಿ ಅರ್ಜೆಂಟೀನಾದ ತಾರೆ ಲಯೊನೆಲ್ ಮೆಸ್ಸಿ ಅವರನ್ನು ಹಿಂದಿಕ್ಕಿದ್ದಾರೆ. ಈಗ ಆಡುತ್ತಿರುವ ಆಟಗಾರರ ಪೈಕಿ ಹೆಚ್ಚು ಗೋಲು ಗಳಿಸಿರುವವರ ಪಟ್ಟಿಯಲ್ಲಿ ಚೆಟ್ರಿ ಎರಡನೇ ಸ್ಥಾನಕ್ಕೇರಿದ್ದಾರೆ.

ವಿಶ್ವಕಪ್ ಮತ್ತು ಏಷ್ಯಾಕಪ್ ಫುಟ್‌ಬಾಲ್ ಅರ್ಹತಾ ಟೂರ್ನಿಯಲ್ಲಿ ಸೋಮವಾರ ಬಾಂಗ್ಲಾದೇಶ ಎದುರು ಅಲ್ ಸದ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಭಾರತದ ಚೆಟ್ರಿ ಈ ಸಾಧನೆ ಮಾಡಿದರು. ಅವರು ಗಳಿಸಿದ ಎರಡು ಗೋಲುಗಳ ಬಲದಿಂದ ಭಾರತ 2-0ಯಿಂದ ಬಾಂಗ್ಲಾವನ್ನು ಮಣಿಸಿತ್ತು.

ಸುನಿಲ್ ಚೆಟ್ರಿ–ಪಿಟಿಐ ಚಿತ್ರ

ಸಕ್ರಿಯ ಆಟಗಾರರ ಪೈಕಿ ಅತಿ ಹೆಚ್ಚು ಅಂತರರಾಷ್ಟ್ರೀಯ ಗೋಲು ಗಳಿಸಿದ ಐವರು

ಆಟಗಾರ	ದೇಶ	ಗೋಲು
ಕ್ರಿಸ್ಟಿಯಾನೊ ರೊನಾಲ್ಡೊ	ಪೋರ್ಚುಗಲ್	103
ಸುನಿಲ್ ಚೆಟ್ರಿ	ಭಾರತ	74
ಅಲಿ ಮಬ್‌ಖೌತ್	ಯುಎಇ	73
ಲಯೊನೆಲ್ ಮೆಸ್ಸಿ	ಅರ್ಜೆಂಟೀನಾ	72
ರಾಬರ್ಟ್ ಲೆವಾಂಡೊಸ್ಕಿ	ಪೋಲೆಂಡ್	66

ಅತಿ ಹೆಚ್ಚು ಗೋಲು ಗಳಿಸಿದ (ಸಾರ್ವಕಾಲಿಕ) ಆಟಗಾರರು

ಆಟಗಾರ	ದೇಶ	ಗೋಲು
ಅಲಿ ದೇಯಿ	ಇರಾನ್	109
ಕ್ರಿಸ್ಟಿಯಾನೊ ರೊನಾಲ್ಡೊ	ಪೋರ್ಚುಗಲ್	103
ಮೊಖ್ತರ್ ದಹಾರಿ	ಮಲೇಷ್ಯಾ	89
ಫೆರೆನ್ಸ್ ಪುಸ್ಕಾಸ್	ಹಂಗರಿ	84
ಗಾಡ್‌ಫ್ರೆ ಚಿತಾಲು	ಜಾಂಬಿಯಾ	79
ಹುಸೇನ್ ಸಯೀದ್	ಇರಾಕ್	78
ಪೆಲೆ	ಬ್ರೆಜಿಲ್	77
ಸ್ಯಾಂಡೊರ್ ಕೊಕ್ಸಿಸ್	ಹಂಗರಿ	75
ಕುನಿಶಿಗೆ ಕಮಮೊಟೊ	ಜಪಾನ್	75
ಬಶರ್ ಅಬ್ದುಲ್ಲಾ	ಕುವೈತ್	75
ಸುನಿಲ್ ಚೆಟ್ರಿ	ಭಾರತ	74

ಒಲಿಂಪಿಕ್ ಅರ್ಹತಾ ಸ್ಪರ್ಧೆಗೆ ಶ್ರೀಹರಿ

ಅಹಮದಾಬಾದ್/ಬೆಂಗಳೂರು: ಕರ್ನಾಟಕದ ಶ್ರೀಹರಿ ನಟರಾಜ್ ಸೇರಿದಂತೆ ಭಾರತದ ಮೂವರು ಈಜುಪಟುಗಳಿಗೆ ಸರ್ಬಿಯಾದ ಬೆಲ್‌ಗ್ರೇಡ್ ಟ್ರೋಫಿ ಮತ್ತು ಇಟಲಿಯಲ್ಲಿ ನಡೆಯಲಿರು ಸೆಟ್ಟಿ ಕೊಲಿ ಟ್ರೋಫಿ ಒಲಿಂಪಿಕ್ ಅರ್ಹತಾ ಟೂರ್ನಿಗೆ ತೆರಳು ಅನುಮತಿ ನೀಡಲಾಗಿದೆ.

ಫಿನಾ ಮಾನ್ಯತೆ ಪಡೆದಿರುವ ಈ ಸ್ಪರ್ಧೆಯು ಇದೇ 19 ಮತ್ತು 20ರಂದು ನಡೆಯಲಿದೆ.

ತಂಡಗಳು: ಬೆಲ್‌ಗ್ರೇಡ್ ಟ್ರೋಫಿ: ಶ್ರೀಹರಿ ನಟರಾಜನ್ (50ಮೀ, 200 ಮೀ ಫ್ರೀಸ್ಟೈಲ್), ಸಾಜನ್ ಪ್ರಕಾಶ್ (100, 200 ಮೀ ಬಟರ್‌ಫ್ಲೈ, 200ಮೀ ಫ್ರೀಸ್ಟೈಲ್), ಮಾನಾ ಪಟೇಲ್ (100ಮೀ ಬ್ಯಾಕ್‌ಸ್ಟ್ರೋಕ್), ಕೆನಿಶಾ ಗುಪ್ತಾ (50ಮೀ, 100ಮೀ ಫ್ರೀಸ್ಟೈಲ್), ತನೀಶ್ ಮ್ಯಾಥ್ಯೂ (100ಮೀ, 200ಮೀ ಬಟರ್‌ಫ್ಲೈ, 200 ಫ್ರೀಸ್ಟೈಲ್), ಆರ್ಯನ್ ನೆಹ್ರಾ (200ಮೀ, 400 ಮೀ, 1500 ಮೀಫ್ರೀಸ್ಟೈಲ್), ಶಾನ್ ಗಂಗೂಲಿ (200ಮೀ, 400ಮೀ ವೈಯಕ್ತಿಕ ಮೆಡ್ಲೆ, 100, 200ಮೀ ಬಟರ್‌ಫ್ಲೈ).

ರೋಮ್ ಸೆಟ್ಟಿ ಕೊಲಿ ಟ್ರೋಫಿ: ಶ್ರೀಹರಿ ನಟರಾಜನ್ (50ಮೀ, 100ಮೀ ಬ್ಯಾಕ್‌ಸ್ಟ್ರೋಕ್), ಸಾಜನ್ ಪ್ರಕಾಶ್ (100, 200ಮೀ ಬಟರ್‌ಫ್ಲೈ, 200 ಮೀ ಫ್ರೀಸ್ಟೈಲ್), ಮಾನಾ ಪಟೇಲ್ (100 ಮೀ ಬ್ಯಾಕ್‌ಸ್ಟ್ರೋಕ್), ಕೆನಿಶಾ ಗುಪ್ತಾ (50 ಮೀ, 100ಮೀ ಫ್ರೀಸ್ಟೈಲ್), ತನೀಷ್ ಮ್ಯಾಥ್ಯೂ (200 ಮೀ ಫ್ರೀಸ್ಟೈಲ್, 200ಮೀ ಬಟರ್‌ಫ್ಲೈ).

ಫುಟ್‌ಬಾಲ್ ಆಟಗಾರ ಸಿಗಮಣಿ ನಿಧನ

ಸಿಗಮಣಿ

ಬೆಂಗಳೂರು: ಕರ್ನಾಟಕ ಫುಟ್‌ಬಾಲ್ ತಂಡದ ಮಾಜಿ ಆಟಗಾರ ಸಿಗಮಣಿ (72) ಅವರು ಮಂಗಳವಾರ ಕೋವಿಡ್‌ನಿಂದಾಗಿ ನಿಧನರಾದರು. ಅವರಿಗೆ ಪತ್ನಿ, ಇಬ್ಬರು ಪುತ್ರರು ಮತ್ತು ಒಬ್ಬ ಪುತ್ರಿ ಇದ್ದಾರೆ.

ಎಂಇಜಿ ಪರ ಆಡಿದ್ದ ಅವರು, 1978ರಲ್ಲಿ ಮತ್ತು 1979ರಲ್ಲಿ ಸಂತೋಷ್ ಟ್ರೋಫಿ ಟೂರ್ನಿಗಳಲ್ಲಿ ರಾಜ್ಯ ತಂಡವನ್ನು ಪ್ರತಿನಿಧಿಸಿದ್ದರು.

ಗುವಾಹಟಿಯಲ್ಲಿ 1977ರಲ್ಲಿ ರಷ್ಯಾ ತಂಡದ ಎದುರು ಭಾರತ ಇಲೆವನ್ ಪರವೂ ಕಣಕ್ಕಿಳಿದಿದ್ದರು.

ಟೋಕಿಯೊದಲ್ಲಿ ಭಾರತಕ್ಕೆ ಇಬ್ಬರು ಧ್ವಜಧಾರಿಗಳು?

ನವದೆಹಲಿ (ಪಿಟಿಐ): ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಭಾರತ ತಂಡದಲ್ಲಿ ಧ್ವಜಧಾರಿ ಗೌರವವು ಇಬ್ಬರಿಗೆ ಲಭಿಸುವ ಸಾಧ್ಯತೆ ಇದೆ.

ಇದೇ ಮೊದಲ ಬಾರಿಗೆ ಪುರುಷ ಮತ್ತು ಮಹಿಳೆಯರ ವಿಭಾಗಗಳಲ್ಲಿ ತಲಾ ಒಬ್ಬರಿಗೆ ರಾಷ್ಟ್ರೀಯ ಧ್ವಜ ಹಿಡಿದು ಉದ್ಘಾಟನೆ ಕಾರ್ಯಕ್ರಮದಲ್ಲಿ ತಂಡವನ್ನು ಮುನ್ನಡೆಸುವ ಗೌರವ ಸಿಗಬಹುದು ಎಂದು ಭಾರತ ಒಲಿಂಪಿಕ್ ಸಂಸ್ಥೆ (ಐಒಸಿ) ಮುಖ್ಯಸ್ಥ ನರೀಂದರ್ ಬಾತ್ರಾ ತಿಳಿಸಿದ್ದಾರೆ.

'ಈ ವಿಷಯವನ್ನು ಇನ್ನೂ ತೀರ್ಮಾನಿಸಿಲ್ಲ. ಆದರೆ ಈ ರೀತಿ ಒಂದು ಯೋಚನೆಯಂತೂ ಇದೆ. ಲಿಂಗ ತಾರತಮ್ಯವನ್ನು ಪರಿಹರಿಸಲು ಇದು ಸೂಕ್ತ ನಡೆ ಎಂಬ ಚಿಂತನೆ ನಮ್ಮದು. ಒಬ್ಬ ಪುರುಷ ಮತ್ತು ಒಬ್ಬ ಮಹಿಳಾ ಅಥ್ಲೀಟ್‌ಗೆ ಧ್ವಜಗೌರವ ನೀಡಲು ಯೋಚಿಸಲಾಗುತ್ತಿದೆ' ಎಂದು ಅವರು ತಿಳಿಸಿದ್ದಾರೆ.

2016ರ ರಿಯೊ ಒಲಿಂಪಿಕ್ಸ್‌ನಲ್ಲಿ ಶೂಟಿಂಗ್ ತಾರೆ ಅಭಿನವ್ ಬಿಂದ್ರಾ ಅವರು ಧ್ವಜಧಾರಿಯಾಗಿದ್ದರು. ಪ್ರತಿಬಾರಿಯೂ ಒಬ್ಬರಿಗೆ ಮಾತ್ರ ಈ ಅವಕಾಶ ನೀಡಲಾಗುತ್ತಿತ್ತು.

ಸಂಕ್ಷಿಪ್ತ ಸುದ್ದಿ

ನಾಳೆಯಿಂದ ಕ್ರೀಡಾಪಟುಗಳಿಗೆ ಲಸಿಕೆ ಅಭಿಯಾನ

ಬೆಂಗಳೂರು: ರಾಜ್ಯದ ಕ್ರೀಡಾಪಟುಗಳು, ಕೋಚ್‌ಗಳು ಹಾಗೂ ಕ್ರೀಡಾ ಸಂಸ್ಥೆಗಳ ಅಧಿಕಾರಿಗಳಿಗೆ ಇದೇ 10 ಹಾಗೂ 11ರಂದು ಕೋವಿಡ್ ಲಸಿಕೆ ನೀಡಲಾಗುವುದು. ಬೆಂಗಳೂರಿನ ಕಂಠೀರವ ಕ್ರೀಡಾಂಗಣ, ಎಲ್ಲ ಜಿಲ್ಲಾ, ಪಟ್ಟಣ ಹಾಗೂ ತಾಲ್ಲೂಕು ಕೇಂದ್ರಗಳಲ್ಲಿ ಕ್ರೀಡಾವರ್ಗದವರಿಗೆ ಲಸಿಕೆ ನೀಡುವ ವ್ಯವಸ್ಥೆ ಮಾಡಲಾಗಿದೆ.

'ಕಂಠೀರವ ಕ್ರೀಡಾಂಗಣದಲ್ಲಿ ಗುರುವಾರ ಬೆಳಿಗ್ಗೆ 11.30ಕ್ಕೆ ಲಸಿಕೆ ನೀಡುವ ಕಾರ್ಯ ಆರಂಭವಾಗಲಿದೆ. ರಾಜ್ಯದ ಎಲ್ಲೆಡೆಯೂ ಕ್ರೀಡಾಪಟುಗಳಿಗೆ ವ್ಯವಸ್ಥೆ ಕಲ್ಪಿಸಲಾಗಿದೆ. ಎಲ್ಲರೂ ಇದರ ಸದುಪಯೋಗ ಪಡೆದುಕೊಳ್ಳಬೇಕು. ಲಸಿಕೆ ಪಡೆಯುವವರು ತಮ್ಮ ಆಧಾರ್ ಕಾರ್ಡ್‌ನೊಂದಿಗೆ ಹಾಜರಿರಬೇಕು. ಸರ್ಕಾರವು ಉಚಿತ ಲಸಿಕಾ ವ್ಯವಸ್ಥೆ ಮಾಡಿರುವುದು ಅಭಿನಂದನೀಯ' ಎಂದು ಕರ್ನಾಟಕ ಒಲಿಂಪಿಕ್ ಸಂಸ್ಥೆ (ಕೆಒಎ) ಅಧ್ಯಕ್ಷ ಕೆ.ಗೋವಿಂದರಾಜ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಡಬ್ಲ್ಯುಟಿಸಿ ಫೈನಲ್: ಇಲ್ಲಿಂಗ್‌ವರ್ಥ್, ಗೌ ಅಂಪೈರ್

ದುಬೈ (ಪಿಟಿಐ): ಇದೇ18ರಂದು ನಡೆಯಲಿರುವ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಫೈನಲ್ ಪಂದ್ಯದಲ್ಲಿ ಇಂಗ್ಲೆಂಡ್‌ನ ರಿಚರ್ಡ್ ಇಲ್ಲಿಂಗ್‌ವರ್ಥ್ ಮತ್ತು ಮೈಕೆಲ್ ಗೌ ಅಂಪೈರ್ ಆಗಿ ಕಾರ್ಯನಿರ್ವಹಿಸುವರು. ಇಂಗ್ಲೆಂಡ್ ತಂಡದ ಮಾಜಿ ಆರಂಭಿಕ ಆಟಗಾರ ಕ್ರಿಸ್ ಬ್ರಾಡ್ ಅವರು ಪಂದ್ಯ ರೆಫರಿಯಾಗಿ ನೇಮಕವಾಗಿದ್ದಾರೆ.

'ತೆರಿಗೆ ಹೊರೆ: ತಗ್ಗಿದ ಖರೀದಿ ಸಾಮರ್ಥ್ಯ'

ಮುಂಬೈ (ಪಿಟಿಐ): ಕುಟುಂಬಗಳ ಮೇಲೆ ಪರೋಕ್ಷ ತೆರಿಗೆ ಹೊರೆಯು ಹೆಚ್ಚುತ್ತಿರುವುದರಿಂದ, ಕುಟುಂಬಗಳು ಖರೀದಿಗಾಗಿ ಹೆಚ್ಚು ವೆಚ್ಚ ಮಾಡುವುದಕ್ಕೆ ಅಡ್ಡಿಯಾಗಿದೆ ಎಂದು ದೇಶಿ ರೇಟಿಂಗ್ಸ್ ಸಂಸ್ಥೆ 'ಇಂಡಿಯಾ ರೇಟಿಂಗ್ಸ್' ಹೇಳಿದೆ.

2009-10ನೇ ಹಣಕಾಸು ವರ್ಷದಲ್ಲಿ ಕುಟುಂಬವೊಂದರ ಮೇಲಿನ ಒಟ್ಟಾರೆ ತೆರಿಗೆ ಹೊರೆಯು ಶೇಕಡ 60ರಷ್ಟು ಇತ್ತು. ಇದು ಸದ್ಯ ಶೇ 75ಕ್ಕೆ ಏರಿಕೆ ಆಗಿದೆ. ಇಂಧನದ ಮೇಲೆ ಗರಿಷ್ಠ ಪ್ರಮಾಣದಲ್ಲಿ ಎಕ್ಸೈಸ್ ಸುಂಕ ವಿಧಿಸುತ್ತಿರುವುದು ಮತ್ತು ಕಾರ್ಪೊರೇಟ್ ತೆರಿಗೆ ದರ ಕಡಿತ ಮಾಡಿರುವುದರಿಂದಾಗಿ ಕುಟುಂಬಗಳ ಮೇಲಿನ ತೆರಿಗೆ ಹೊರೆಯಲ್ಲಿ ಈ ಪ್ರಮಾಣದ ಏರಿಕೆ ಆಗಿದೆ ಎಂದು ಸಂಸ್ಥೆಯು ಹೇಳಿದೆ.

ಉದ್ಯೋಗ ಸೃಷ್ಟಿ ಮತ್ತು ವಿದೇಶಿ ನೇರ ಬಂಡವಾಳ ಆಕರ್ಷಣೆಯ ಉದ್ದೇಶದಿಂದ ಕಾರ್ಪೊರೇಟ್ ತೆರಿಗೆ ದರ ಕಡಿತ ಮಾಡಲಾಗಿದೆ. ಆದರೆ, ಕಾರ್ಪೊರೇಟ್ ವಲಯಕ್ಕೆ ಸಿಗುತ್ತಿರುವ ಇಂತಹ ಯಾವುದೇ ಪ್ರಯೋಜನ ಗ್ರಾಹಕರಿಗೆ ಸಿಗುತ್ತಿಲ್ಲ ಎಂದು ಅದು ಹೇಳಿದೆ.

ಕುಟುಂಬಗಳ ಮೇಲೆ ಬೀಳುತ್ತಿರುವ ತೆರಿಗೆ ಹೊರೆಯಿಂದಾಗಿ ಖರೀದಿ ಸಾಮರ್ಥ್ಯದಲ್ಲಿನ ಚೇತರಿಕೆಯು ತಡವಾಗಬಹುದು ಎಂದು ಅದು ಎಚ್ಚರಿಕೆ ನೀಡಿದೆ. ಪೆಟ್ರೋಲ್, ಡೀಸೆಲ್ ಮೇಲಿನ ಎಕ್ಸೈಸ್ ಸುಂಕ ಏರಿಕೆಯ ಮೂಲಕ ಪರೋಕ್ಷ ತೆರಿಗೆ ಹೆಚ್ಚಿಸಿದ ಪರಿಣಾಮವಾಗಿ, ಪೆಟ್ರೋಲ್, ಡೀಸೆಲ್ ದರಗಳು ದಾಖಲೆಯ ಮಟ್ಟವನ್ನು ತಲುಪಿವೆ. ಇದರಿಂದಾಗಿ ಕುಟುಂಬವೊಂದರ ಉಳಿತಾಯ–ಖರ್ಚಿನ ಲೆಕ್ಕಾಚಾರದ ಮೇಲೆ ನೇರ ಮತ್ತು ಪರೋಕ್ಷ ಪರಿಣಾಮ ಬೀರಿದೆ ಎಂದು ಹೇಳಿದೆ.

ಷೇರುಪೇಟೆ ವಹಿವಾಟು ▼ 53

52,328 ಹಿಂದಿನ ಅಂತ್ಯ — 52,275 ಇಂದಿನ ಅಂತ್ಯ



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	15,751
ಇಂದಿನ ಅಂತ್ಯ	15,740
▼	11
ದಿನದ ಕನಿಷ್ಠ	15,680

ವಿನಿಮಯ ದರ

$ ಡಾಲರ್	72.89
£ ಪೌಂಡ್	103.06
€ ಯುರೊ	88.76
¥ ಯೆನ್ (100ಕ್ಕೆ)	67

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹550
12 ಮೊಟ್ಟೆಗೆ	₹72
ಮೈಸೂರು	
100 ಮೊಟ್ಟೆಗೆ	₹550

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1490 (1470)
ಸೋಯಾ (ರಿಫೈನ್ಡ್)	₹1415 (1420)
ಸೂರ್ಯಕಾಂತಿ (ರಿಫೈನ್ಡ್)	₹1500 (1510)
ಪಾಮೋಲಿನ್	₹1240 (1255)

ಪ್ರಶ್ನೋತ್ತರ

ಯು.ಪಿ.ಪುರಾಣಿಕ್
ಬ್ಯಾಂಕಿಂಗ್–ಹಣಕಾಸು ತಜ್ಞ
uppuranik@gmail.com
ಮೊ: 9448015300

ಕಿರಣ್, ಬೆಂಗಳೂರು

- **ಪ್ರಶ್ನೆ:** ನನ್ನ ವಯಸ್ಸು 44 ವರ್ಷ. ನಾನು ವ್ಯಾಪಾರಿ. ನನ್ನ ತಂದೆಯ ಬಳಿ ತುಮಕೂರು ಸಮೀಪ ಆರು ಎಕರೆ ಕೃಷಿ ಜಮೀನಿದೆ. ಅದನ್ನು ಮಾರಾಟ ಮಾಡಿ ಬೇರೆ ಕೃಷಿ ಜಮೀನು ಕೊಳ್ಳಬಹುದೇ ಅಥವಾ ನಿವೇಶನ ಕೊಳ್ಳಬಹುದೇ? ಬಂಡವಾಳ ವೃದ್ಧಿ ತೆರಿಗೆ ವಿಚಾರದಲ್ಲಿ ಮಾಹಿತಿ ಇಲ್ಲ.

ಉತ್ತರ: ಸೆಕ್ಷನ್ 54 ಬಿ ಆಧಾರದಲ್ಲಿ ಬಂಡವಾಳ ವೃದ್ಧಿ ತೆರಿಗೆ ಉಳಿಸಲು, ಕೃಷಿ ಜಮೀನು ಮಾರಾಟದಿಂದ ಬಂದ ಸಂಪೂರ್ಣ ಹಣವನ್ನು ಎರಡು ವರ್ಷಗಳ ಒಳಗೆ ತೊಡಗಿಸಿ ಇನ್ನೊಂದು ಕೃಷಿ ಜಮೀನು ಕೊಳ್ಳಬಹುದು. ಆದರೆ, ನಿವೇಶನ ಕೊಳ್ಳುವಂತಿಲ್ಲ. ಹೀಗೆ ಕೊಂಡ ಕೃಷಿ ಜಮೀನನ್ನು ಖರೀದಿಸಿದ ತಾರೀಕಿನಿಂದ ಮೂರು ವರ್ಷಗಳೊಳಗೆ ಮಾರಾಟ ಮಾಡುವಂತಿಲ್ಲ. ನಿಮಗೆ ಇನ್ನೂ ಹೆಚ್ಚಿನ ಮಾಹಿತಿ ಬೇಕಾಗಿದ್ದರೆ ನನಗೆ ಕರೆ ಮಾಡಿ.

ಸುಶ್ಮಿತಾ, ಊರುಬೇಡ

- **ಪ್ರಶ್ನೆ:** ನಾನು, ನನ್ನ ಪತಿ ಇಬ್ಬರೂ ಐ.ಟಿ. ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದೇವೆ. ನನ್ನ ವಯಸ್ಸು 27. ಪತಿಯ ವಯಸ್ಸು 32. ನಮಗೆ ಕ್ರಮವಾಗಿ ತಿಂಗಳಿಗೆ ₹ 80 ಸಾವಿರ ಹಾಗೂ ₹ 1.20 ಲಕ್ಷ ಸಂಬಳ ಬರುತ್ತಿದೆ. ನಾಲ್ಕು ವರ್ಷ ವಯಸ್ಸಿನ ಒಂದು ಹೆಣ್ಣು ಮಗು ಇದೆ. ತೆರಿಗೆ ಉಳಿಸಲು, ಮುಂದಿನ ಭವಿಷ್ಯಕ್ಕೆ ಉತ್ತಮ ಉಳಿತಾಯ ಯೋಜನೆ ತಿಳಿಸಿ. ನನಗೆ ಪಿತ್ರಾರ್ಜಿತ ಆಸ್ತಿ ಬರುವುದಿದೆ. ಕೆಲವು ವೈಯಕ್ತಿಕ ಹಣಕಾಸಿನ ವಿಚಾರಗಳಿಗೆ ಸಂಪರ್ಕಿಸಬಹುದೇ?

ಉತ್ತರ: ನಿಮ್ಮ ಇದುವರೆಗಿನ ಉಳಿತಾಯ ಅಥವಾ ಹೂಡಿಕೆ ಬಗ್ಗೆ ತಿಳಿಸಿಲ್ಲ. ನಿಮ್ಮ ದೂರವಾಣಿ ಸಂಖ್ಯೆ ಕೂಡಾ ನೀಡಿಲ್ಲ. ಮನೆ ಬಾಡಿಗೆ, ಪೆಟ್ರೋಲ್, ಮನೆ ಖರ್ಚು, ಆದಾಯ ತೆರಿಗೆ ಹಾಗೂ ಇನ್ನಿತರ ವೈಯಕ್ತಿಕ ಖರ್ಚುಗಳಿಗೆ ಗರಿಷ್ಠ ₹ 75 ಸಾವಿರ ತೆಗೆದಿಟ್ಟು ಉಳಿದ ₹ 1.25 ಲಕ್ಷ ನೀವು ಉಳಿತಾಯ ಮಾಡಬಹುದು. ಸೆಕ್ಷನ್ 80ಸಿ ಆಧಾರದ ಮೇಲೆ ಪಿಪಿಎಫ್ ಹಾಗೂ ಜೀವ ವಿಮೆಯಲ್ಲಿ ಇಬ್ಬರೂ ಗರಿಷ್ಠ ₹ 1.50 ಲಕ್ಷ ಹೂಡಿಕೆ ಮಾಡಿ. ಹಾಗೆಯೇ ಎನ್‌ಪಿಎಸ್‌ನಲ್ಲಿ ಕನಿಷ್ಠ ₹ 50 ಸಾವಿರ ಹೂಡಿಕೆ ಮಾಡಿ. ನಿಮಗೆ ಸೆಕ್ಷನ್ 16 (1ಎ) ಆಧಾರದ ಮೇಲೆ ₹ 50 ಸಾವಿರ ಸ್ಟ್ಯಾಂಡರ್ಡ್ ಡಿಡಕ್ಷನ್ ಇದೆ. ಒಟ್ಟಿನಲ್ಲಿ ಸೆಕ್ಷನ್ 80ಸಿ, 80ಸಿಸಿಡಿ (1ಬಿ) ಮತ್ತು 16 (1ಎ) ಆಧಾರದ ಮೇಲೆ ₹ 2.50 ಲಕ್ಷ ನಿಮ್ಮ ಒಟ್ಟು ಆದಾಯದಿಂದ ಕಳೆದು ತೆರಿಗೆ ಸಲ್ಲಿಸಬಹುದು. ಕಂಪನಿಯಿಂದ ಆರೋಗ್ಯ ವಿಮೆ ಸವಲತ್ತು ಇದ್ದಲ್ಲಿ ವಾರ್ಷಿಕ ₹ 25 ಸಾವಿರ ಕಂತು ತುಂಬಿ ಸೆಕ್ಷನ್ 80ಡಿ ಆಧಾರದ ಮೇಲೆ ಪ್ರತ್ಯೇಕವಾಗಿ ವಿನಾಯಿತಿ ಪಡೆಯಬಹುದು. ಮಗಳ ಸಲುವಾಗಿ ಸುಕನ್ಯಾ ಸಮೃದ್ಧಿ ಯೋಜನೆಯಲ್ಲಿ ವಾರ್ಷಿಕವಾಗಿ ₹ 1.5 ಲಕ್ಷ ತುಂಬಲು ಪ್ರಾರಂಭಿಸಿ ಹಾಗೂ ಕನಿಷ್ಠ 20 ಗ್ರಾಂ ಬಂಗಾರದ ನಾಣ್ಯ ಈ ವರ್ಷದಿಂದಲೇ ಖರೀದಿಸಲು ಆರಂಭಿಸಿ. ಈ ಪ್ರಕ್ರಿಯೆ ಮಗಳ ಮದುವೆ ತನಕ ಮುಂದುವರಿಸಿ. ಇದೇ ವೇಳೆ, ಸಾಧ್ಯವಾದರೆ ಗೃಹ ಸಾಲ ಪಡೆದು ಸ್ವಂತ ಮನೆ ಮಾಡಿಕೊಳ್ಳಲು ಆಲೋಚಿಸಿ. ಗೃಹ ಸಾಲದ ಬಡ್ಡಿಯನ್ನು ಸೆಕ್ಷನ್ 24(ಬಿ) ಆಧಾರದ ಮೇಲೆ ಗರಿಷ್ಠ ₹ 2 ಲಕ್ಷ ಒಟ್ಟು ಆದಾಯದಿಂದ ಕಳೆದು ತೆರಿಗೆ ಸಲ್ಲಿಸಬಹುದು. ಇನ್ನೂ ಹೆಚ್ಚಿನ ಮಾಹಿತಿಯ ಅವಶ್ಯವಿದ್ದರೆ ಮಾತ್ರ ಕರೆ ಮಾಡಿ.

ಆಂಜನಪ್ಪ, ರಾಮನಗರ

- **ಪ್ರಶ್ನೆ:** ನನಗೆ ರಾಮನಗರದ ಸಮೀಪ 8 ಎಕರೆ ಕೃಷಿ ಜಮೀನಿದೆ. ಇದು ಪಿತ್ರಾರ್ಜಿತ. ನಮಗೆ ಮೂವರು ಮಕ್ಕಳು. 8 ಎಕರೆ ಮಾರಾಟ ಮಾಡಿದರೆ ಸರಿಸುಮಾರು ₹ 1.5 ಕೋಟಿ ಸಿಗಬಹುದು. ಕೃಷಿ ಜಮೀನು ಮಾರಾಟ ಮಾಡಿದರೆ ತೆರಿಗೆ ಬರುವುದಿಲ್ಲ ಎಂಬುದಾಗಿ ಸ್ನೇಹಿತರು ಹೇಳುತ್ತಾರೆ. ಒಂದು ವೇಳೆ ತೆರಿಗೆ ಕೊಡಬೇಕಾದರೆ ಮೂವರು ಮಕ್ಕಳ ಹೆಸರಿನಲ್ಲಿ ಪ್ರತ್ಯೇಕವಾಗಿ ₹ 50 ಲಕ್ಷ ಬಾಂಡ್‌ನಲ್ಲಿ ಇರಿಸಬಹುದೇ?

ಉತ್ತರ: ಸೆಕ್ಷನ್ 48 ಆಧಾರದ ಮೇಲೆ ಕೃಷಿ ಜಮೀನು ಮಾರಾಟ ಮಾಡಿದಾಗ ಬಂಡವಾಳ ವೃದ್ಧಿ ತೆರಿಗೆ ಬಾರದೇ ಇದ್ದರೂ ನಿಮ್ಮ ಆಸ್ತಿ ರಾಮನಗರಕ್ಕೆ ಸಮೀಪ ಇರುವುದರಿಂದ ಮಾರಾಟ ಮಾಡಿದಾಗ ತೆರಿಗೆ ಕೊಡಬೇಕಾಗುತ್ತದೆ. ನಿಮ್ಮ ಆಸ್ತಿ ಪಿತ್ರಾರ್ಜಿತ ಆಗಿದ್ದು, ಮಕ್ಕಳಿಗೆ ಸಮಾನ ಹಕ್ಕು ಬರುವುದರಿಂದ ಮೂವರು ಮಕ್ಕಳ ಹೆಸರಿನಲ್ಲಿ ಗರಿಷ್ಠ ₹ 50 ಲಕ್ಷದ ಎನ್‌ಎಚ್‌ಎಐ ಅಥವಾ ಆರ್‌ಇಸಿ ಬಾಂಡ್‌ನಲ್ಲಿ ತೊಡಗಿಸಿದರೆ ತೆರಿಗೆ ಬರುವುದಿಲ್ಲ. ಆಸ್ತಿ ಮಾರಾಟ ಮಾಡಿ ಬರುವ ಹಣ ಚೆಕ್ ಅಥವಾ ಡಿ.ಡಿ. ಮೂಲಕ ಪ್ರತ್ಯೇಕವಾಗಿ ಮಕ್ಕಳ ಹೆಸರಿನಲ್ಲಿಯೇ ಪಡೆಯಬೇಕಾಗುತ್ತದೆ. ನಿಮಗೊಂದು ಕಿವಿಮಾತು. ಜಮೀನು ಮಾರಾಟ ಮಾಡುವಾಗ ದೊಡ್ಡ ಮೊತ್ತ ಬಂದ ಹಾಗೆ ಕಂಡರೂ ಮುಂದೆ ಜಮೀನು ಬೇಕಾದಲ್ಲಿ ಕೊಳ್ಳಲು ಸಾಧ್ಯವಿಲ್ಲ. ಅತೀ ಅವಶ್ಯಕತೆ ಇದ್ದರೆ ಮಾತ್ರ ಜಮೀನು ಮಾರಾಟ ಮಾಡಿ.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ. ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು–560001.
ಇ–ಮೇಲ್: businessdesk@prajavani.co.in

ಪೌಷ್ಟಿಕ ಆಹಾರ ಸೇವಿಸಿ

ಮುಂಬೈ ಧಾರಣೆ

ಶೇಂಗಾ

8-6-2021

ಜಾವಾ 70/80(ಹೊಸ)	10050-10100
ಜಾವಾ 80/90(ಹೊಸ)	9250-9300
ದಪ್ಪ ಮಧ್ಯಪ್ರದೇಶ(ಹೊಸ)	10400-10500
ದಪ್ಪ ಗುಜರಾತ್(ಹೊಸ)	9600-9700

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1500 (1480)
ಒಂದು ವಾರದ ಡೆಲಿವರಿ	1495 (1475)
ಸೋಯಾ ಕಚ್ಚಾ	1390 (1395)
ಪಾಮ್ ವಾರದ ಡೆಲಿವರಿ	1238 (1253)
ಸೂರ್ಯಕಾಂತಿ ಎಣ್ಣೆ ಕಚ್ಚಾ	1460 (1460)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10 ಗ್ರಾಂ 48,875 (48,700)
ಬೆಳ್ಳಿ ಕೆ.ಜಿ 71,400 (70,900)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಊಹಿಸಿ...ಗಳಿಸಿ!
ಪ್ರಜಾವಾಣಿ ಅಂಗೈಯಲ್ಲಿ ಅದೃಷ್ಟ
11 ರಿಂದ 25 ರಲ್ಲಿ ಯಾವ 4 ಬೆಸ ಸಂಖ್ಯೆಗಳು ನಾಳೆ ಪ್ರಕಟವಾಗಲಿವೆ
ನಮ್ಮ ಹಾಗೂ ನಿಮ್ಮ ಉತ್ತರ ಒಂದೇ ಇದ್ದರೆ, ನಂತರ ನಡೆಯುವ ಲಕ್ಕಿ ಡ್ರಾನಲ್ಲಿ ಬಹುಮಾನ ಪಡೆಯುವಿರಿ.
www.bit.ly/adhrusta ಗೆ ಲಾಗಿನ್ ಆಗಿ, ಸಂಜೆ 6 ಗಂಟೆಯೊಳಗೆ ನಿಮ್ಮ ಉತರ ಕಳುಹಿಸಿ
ಬಂಪರ್ ಬಹುಮಾನ* ₹25000 ಮೌಲ್ಯದ ಗೋಲ್ಡ್ ವೌಚರ್
ಹಿಂದಿನ ಪ್ರಶ್ನೆಗೆ ಉತ್ತರ: 1 9 8 4 7
ಪ್ರತಿ ದಿನ 10 ಅದೃಷ್ಟಶಾಲಿಗಳಿಗೆ ₹500 ಗಿಫ್ಟ್ ವೌಚರ್
*ಷರತ್ತುಗಳು ಅನ್ವಯ

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಉದ್ಯೋಗ ವಾಣಿ

RL JALAPPA HOSPITAL & RESEARCH CENTRE
SDUET Hospital Pharma, TAMAKA, KOLAR - 563101
Ph: 08152-243003, 243009 E-mail: office.hr@sduu.ac.in
Website: www.sduu.ac.in

No. SDUET/KLR/ADMIN/06/2021-22 Date: 09-06-2021

RECRUITMENT NOTICE

Applications are invited from eligible candidates in the prescribed format (available in SDUAHER website: www.sduu.ac.in) for the following position

Sl. No	Position	No. of Post(s)	Minimum Qualification
01	Pharmacist	09	D.Pharma/B.Pharma

Last date for receipt of applications is 30th June 2021

Sd/-
Secretary

ರಕ್ಷಣಾ ವಿದ್ಯುನ್ಮಾನ ಮತ್ತು ಅದಕ್ಕೂ ಮೀರಿದ



BHARAT ELECTRONICS
QUALITY, TECHNOLOGY, INNOVATION
ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್
(ರಕ್ಷಣಾ ಸಚಿವಾಲಯದಡಿಯ ಭಾರತ ಸರ್ಕಾರದ ಒಂದು ಉದ್ಯಮ)
(CIN: L32309KA1954GOI000787)
ನೋಂದಾಯಿತ ಕಛೇರಿ: ಹೊರವರ್ತುಲ ರಸ್ತೆ, ನಾಗವಾರ, ಬೆಂಗಳೂರು – 560 045

ಬೆಂಗಳೂರಿನ ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್, ಒಂದು ನವರತ್ನ ಹಾಗೂ ಭಾರತದ ಪ್ರಮುಖ ವೃತ್ತಿಪರ ಕಂಪನಿಗೆ ಗುತ್ತಿಗೆಯ ಆಧಾರದ ಮೇಲೆ ಈ ಕೆಳಕಂಡ ಸಿಬ್ಬಂದಿಗಳ ಆವಶ್ಯಕತೆ ಇದೆ.

ಹುದ್ದೆಯ ಹೆಸರು	ಹುದ್ದೆಯ ಸಂಖ್ಯೆ	ಕಾರ್ಯ ಸ್ಥಳ
ಶಿಕ್ಷಣಾ ಅಧಿಕಾರಿ (ಹಣಕಾಸು) - I	2	ನವದೆಹಲಿ
ಪರಿಯೋಜನೆ ಅಧಿಕಾರಿ (ಕಾನೂನು) - I	1	ಬೆಂಗಳೂರು

ಆಸಕ್ತ ಅಭ್ಯರ್ಥಿಗಳು ತಮ್ಮ ಆನ್ ಲೈನ್ ಅರ್ಜಿಗಳನ್ನು ದಿನಾಂಕ ೨೪-೦೬-೨೦೨೧ ರಂದು ಅಥವಾ ಮುಂಚಿತವಾಗಿ ಭರ್ತಿ ಮಾಡಬಹುದಾಗಿದೆ. ವಿಸ್ತೃತ ಜಾಹೀರಾತಿಗಾಗಿ ದಯವಿಟ್ಟು www.bel-india.in ನ್ನುನೋಡಿ.
ಬಿಇಎಲ್ ನಲ್ಲಿ ನೇಮಕಾತಿ ಕುರಿತು ಅಧಿಕೃತ ಮಾಹಿತಿಯನ್ನು, ದಯವಿಟ್ಟು ಅಧಿಕೃತ ಬಿಇಎಲ್ ವೆಬ್‌ಸೈಟ್ www.bel-india.in ನಲ್ಲಿ ಒದಗಿಸಲಾದ ಲಿಂಕ್‌ನ ಮೂಲಕ ಪಡೆಯತಕ್ಕದ್ದು.
'ಹರ್ ಎಕ್ ಕಾಮ್ ದೇಶ್ ಕೆ ನಾಮ್'

ಪ್ರಜಾವಾಣಿ ಉದ್ಯೋಗ ವಾಣಿ
ಉದ್ಯೋಗಾವಕಾಶದ ಜಾಹೀರಾತಿಗಾಗಿ ಸಂಪರ್ಕಿಸಿ:
Mob : 96069 12220

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ
ಸಕಲೇಶಪುರ

ಕೂಳೆ	700-800
ನಡುಗೋಲು	850-900
ರಾಶಿ	950-1000
ರಾಶಿ ಉತ್ತಮ	1000-1050
ಜರಡಿ	1150-1200
ಹೆರಕಿದ್ದು	1500-1600
ಹಸಿರು ಸಾಧಾರಣ	900-1000
ಹಸಿರು ಉತ್ತಮ	1100-1200
ಹಸಿರು ಅತಿ ಉತ್ತಮ	1400-1500
ಕಾಳು ಮೆಣಸು	350-400

ಅಡಿಕೆ
ಬಂಟ್ವಾಳ

ಕೋಕ	10000-22500
ಹೊಸತು	23500-40000
ಹಳತು	42500-50000

ಕಾರ್ಕಳ

ಹೊಸತು	36000-40000
ಹಳತು	46000-50000

ಕುಂದಾಪುರ

ಹೊಸಚಾಲಿ	35000-40000

ಪುತ್ತೂರು

ಹೊಸತು	28000-40000

ಯಲ್ಲಾಪುರ

ಬಿಳಿಗೋಟು	29260-30790
ಚಾಲಿ	33210-37210
ರಾಶಿ	39610-39610
ತಟ್ಟಿಬೆಟ್ಟೆ	34390-34390

ರಾಮನಗರ ರೇಷ್ಮೆ

ಮಿಶ್ರತಳಿ	272-392
ದ್ವಿತಳಿ	346-499

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	11100	---	10750	--- ಸೆಂಟ್ಸ್
ಎಸಿ	4675	---	4150	
ಆರ್‌ಪಿ	5250	---	5250	ಲಂಡನ್
ಆರ್‌ಸಿ	3125	---	3125	--- ಡಾಲರ್ಸ್

ಬ್ಯಾಂಕ್ ಖಾಸಗೀಕರಣ: ವಿಆರ್‌ಎಸ್ ಜಾರಿ?

ನವದೆಹಲಿ (ಪಿಟಿಐ): ಖಾಸಗಿಯವರಿಗೆ ಮಾರಾಟ ಆಗಲಿರುವ ಎರಡು ರಾಷ್ಟ್ರೀಕೃತ ಬ್ಯಾಂಕ್‌ಗಳು ತಮ್ಮ ನೌಕರರಿಗೆ ಸ್ವಯಂ ನಿವೃತ್ತಿ ಯೋಜನೆ (ವಿಆರ್‌ಎಸ್) ಜಾರಿಗೊಳಿಸುವ ಸಾಧ್ಯತೆ ಇದೆ.

'ಆಕರ್ಷಕವಾದ ವಿಆರ್‌ಎಸ್ ಯೋಜನೆ ಜಾರಿಗೆ ತಂದರೆ ಈ ಬ್ಯಾಂಕ್‌ಗಳಲ್ಲಿನ ನೌಕರರ ಸಂಖ್ಯೆ ಕಡಿಮೆ ಆಗುತ್ತದೆ, ಖಾಸಗಿಯವರಿಗೆ ಖರೀದಿಗೆ ಸರಿಹೊಂದುವಂತೆ ಆಗುತ್ತದೆ' ಎಂದು ಮೂಲಗಳು ಹೇಳಿವೆ. ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾ, ಇಂಡಿಯನ್ ಓವರ್‌ಸೀಸ್ ಬ್ಯಾಂಕ್, ಬ್ಯಾಂಕ್ ಆಫ್ ಮಹಾರಾಷ್ಟ್ರವನ್ನು ಖಾಸಗೀಕರಣಕ್ಕೆ ಪರಿಗಣಿಸುವ ಸಾಧ್ಯತೆ ಇದೆ.